ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು
ಸೋಮವಾರ, 16 ಮಾರ್ಚ್ 2026
ಸಂಪುಟ 33, ಸಂಚಿಕೆ 135, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital



ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ? | 0೫
ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್ | 0೫
ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ | 0೫

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಸಾಧ್ಯವಾದಷ್ಟು ನಾವು ರಾಕ್ಷಸರಾಗಬಾರದು. ಪಶುಗಳಾಗಬಾರದು. ಮನುಷ್ಯರೇ ಆಗಬೇಕು. ಅದು ಮಾನವ ಧರ್ಮದ ಮುಖ್ಯವಾದ ತತ್ವ.

▲ಶ್ರೀ ವಾಣಿ

ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ನೇರ ನೋಟ

• ದು.ಗು. ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

• **ಹೊಸದಿಲ್ಲಿ:** ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

• ಪುಟ ೫

ಕೌಡಿಯಾರ್ ಅರಮನೆಯಲ್ಲಿ ಅಪಾರ ಮೌಲ್ಯ ಚಿನ್ನ ಕಳವು

• **ತಿರುವನಂತಪುರಂ(ಕೇರಳ):** ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೆರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

• ಪುಟ ೫

ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!

• ಪುಟ ೫

ಚುನಾವಣೆ ಪ್ರಕಟದ ಕೆಲವೇ ಕ್ಷಣಗಳ ಮುನ್ನ ಡಿಎ ಹೆಚ್ಚಳ

• ಪುಟ ೫

ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

• ಪುಟ ೫

ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ

• ಪುಟ ೨

ಶಾಸಕರಿಗೆ 5 ಕೋಟಿ ರೂ. ಆಮಿಷ: ಡಿಕೆಶಿ

• ಪುಟ ೨

ಅನಿಲ ಪೂರೈಕೆ: ಪರ್ಯಾಯ ಮಾರ್ಗ ಕೋರಿ ಕೇಂದ್ರಕ್ಕೆ ಸಿಎಂ ಪತ್ರ

• ಪುಟ ೨

ಕೇರಳ, ತ.ನಾಡು, ಅಸ್ಸಾಂ, ಪ.ಬಂಗಾಳ, ಪುದುಚೇರಿ ಚುನಾವಣಾ ದಿನ ಪ್ರಕಟ | ಮೇ 4ರಂದು ಫಲಿತಾಂಶ

ಮತಯುದ್ಧಕ್ಕೆ ವೇದಿಕೆ

- ಏ.9: ಅಸ್ಸಾಂ, ಕೇರಳ, ಪುದುಚೇರಿ, ದಾವಣಗೆರೆ, ಬಾಗಲಕೋಟೆ
- ಏ.23: ತಮಿಳುನಾಡು, ಪಶ್ಚಿಮ ಬಂಗಾಳ
- ಏ.29: ಪಶ್ಚಿಮ ಬಂಗಾಳ (2ನೇ ಹಂತ)



• **ಹೊಸದಿಲ್ಲಿ:** ಬಹು ನಿರೀಕ್ಷಿತ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಭಾನುವಾರ ಪ್ರಕಟಿಸಿದೆ. ಜತೆಗೆ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಯ ದಿನಾಂಕವನ್ನೂ ಘೋಷಿಸಲಾಗಿದೆ.



ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏ.9ರಂದು ಒಂದೇ ದಿನ, ತಮಿಳುನಾಡಿನಲ್ಲಿ ಏ.23ರಂದು ಮತ್ತು ಪಶ್ಚಿಮ ಬಂಗಾಳದಲ್ಲಿ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, ಮೇ 4ರಂದು ಎಲ್ಲಾ ಚುನಾವಣೆಗಳ ಮತ ಎಣಿಕೆ ನಡೆಯಲಿದೆ.

ಇಲ್ಲಿನ ವಿಜ್ಞಾನ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಈ ಕುರಿತು ಅಧಿಕೃತ ಮಾಹಿತಿ ನೀಡಿದರು. ಅವರೊಂದಿಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂದು ಮತ್ತು ವಿವೇಕ್ ಜೋಶಿ ಉಪಸ್ಥಿತರಿದ್ದರು.

824 ವಿಧಾನಸಭಾ ಸ್ಥಾನಕ್ಕೆ ಚುನಾವಣೆ: 4 ರಾಜ್ಯ, ಒಂದು ಕೇಂದ್ರಾಡಳಿತ ಪ್ರದೇಶದ ಒಟ್ಟು 824 ವಿಧಾನ ಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಚುನಾ ವಣೆಯಲ್ಲಿ ಸುಮಾರು 17.4 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. 2.18 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳು ಸ್ಥಾಪಿಸಲಾಗಲಿದ್ದು, ಸುಮಾರು 25 ಲಕ್ಷ ಚುನಾವಣಾ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. ➡ಪುಟ ೯

ಏ.9ಕ್ಕೆ ದಾವಣಗೆರೆ, ಬಾಗಲಕೋಟೆ ಉಪಚುನಾವಣೆ

ಕರ್ನಾಟಕದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಕೂಡ ಉಪಚುನಾವಣೆ ಘೋಷಿಸಲಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರವು ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದು, ಬಾಗಲಕೋಟೆ ಕ್ಷೇತ್ರವು ಮಾಜಿ ಸಚಿವ ಎಚ್.ವೈ. ಮೇಟಿ ಅವರ ಅಗಲಿಕೆಯಿಂದ ಖಾಲಿಯಾಗಿದೆ. ಈ ಎರಡು ಕ್ಷೇತ್ರಗಳಿಗೂ ಏ.9ರಂದು ಮತದಾನ ನಡೆಯಲಿದ್ದು, ಇವುಗಳ ಫಲಿತಾಂಶವೂ ಮೇ 4ರಂದು ಪ್ರಕಟವಾಗಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದಾರೆ.

20 ದೇಶಗಳ ಚುನಾವಣಾ ವೀಕ್ಷಕರು

ನೀತಿಸಂಹಿತೆ ಜಾರಿ

• ಪುಟ ೯

ಮತದಾನ ವೇಳಾಪಟ್ಟಿ

- ಅಸ್ಸಾಂ, ಕೇರಳ ಮತ್ತು ಪುದುಚೇರಿ: ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಮತದಾನ
- ತಮಿಳುನಾಡು: ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಮತದಾನ

ಪಶ್ಚಿಮ ಬಂಗಾಳದಲ್ಲಿ 2 ಹಂತದ ಮತದಾನ

ಮೊದಲ ಹಂತ: ಏಪ್ರಿಲ್ 23
ಎರಡನೇ ಹಂತ: ಏಪ್ರಿಲ್ 29

ಈ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆದ ಮತದಾನದ ಫಲಿತಾಂಶ ಮೇ 4ರಂದು ಪ್ರಕಟವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ವಿಧಾನಸಭೆ	ಕ್ಷೇತ್ರಗಳು
ತಮಿಳುನಾಡು	234
ಪಶ್ಚಿಮ ಬಂಗಾಳ	294
ಕೇರಳ	140
ಅಸ್ಸಾಂ	126
ಪುದುಚೇರಿ	33

ದೇಶದಲ್ಲಿ 80ಕ್ಕೂ ಹೆಚ್ಚು ಸಂಭಾಗ: ಹೊಸಬಾಳೆ

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ



• **ಸಮಾಲ್ಖಾ(ಹರಿಯಾಣ):** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಸಂಘಟನಾ ಕಾರ್ಯ ವಿಸ್ತರಿಸಲು, ಸಮಾಜದ ಉದಾತ್ತ ಶಕ್ತಿಗಳನ್ನು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಜ್ಜುಗೊಳಿಸಲು ಮತ್ತು ಸಾಮಾಜಿಕ ಸಾಮರಸ್ಯ ಉತ್ತೇಜಿಸುವ ನಿರ್ಣಯದೊಂದಿಗೆ ಮುಕ್ತಾಯವಾಯಿತು.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ನಡೆಯಿತು. ಅಂತಿಮ ದಿನವಾದ ಭಾನುವಾರ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಶತಾಬ್ದಿ ವರ್ಷದ ತರುವಾಯ ಸಂಘದ ಭೌಗೋಳಿಕ ರಚನೆಯಲ್ಲಿ ಪ್ರಾಂತ ರಚನೆಯ ಬದಲು ಇನ್ನೂ ಚಿಕ್ಕ ಘಟಕವಾಗಿರುವ ಸಂಭಾಗ ರಚನೆಯಾಗಲಿದೆ. ದೇಶಾದ್ಯಂತ ಸಂಘಕಾರ್ಯ ವಿಸ್ತಾರವಾಗಿರುವುದರಿಂದ ಸಹಜವಾಗಿಯೇ ವಿಕೇಂದ್ರೀಕರಣದ ಅಗತ್ಯ ಗಮನದಲ್ಲಿರಿಸಿ, ಈ ಪರಿವರ್ತನೆ ಮಾಡಲಾಗಿದೆ. ಹೆಚ್ಚು ವಿಕೇಂದ್ರೀಕರಣಕ್ಕೆ ಗಮನ ನೀಡಲಾಗಿದೆ. ಅದರ ಅನುಷ್ಠಾನದ ನಂತರ ದೇಶದಲ್ಲಿ 46 ಪ್ರಾಂತಗಳ ಬದಲು 80 ಕ್ಕೂ ಹೆಚ್ಚು ಸಂಭಾಗಗಳು ಇರಲಿವೆ ಎಂದು ಅವರು ಹೇಳಿದರು.

ಯುದ್ಧ ಆದಷ್ಟು ಬೇಗ ಕೊನೆಯಾಗಬೇಕು: ಭಾರತೀಯ ಮೂಲದವರಾಗಿ ಭಾರತಕ್ಕೆ ಮಾತ್ರ ನಿಷ್ಠರಾಗಿರದೆ ನೀವು ನೆಲೆಸಿರುವ ದೇಶಗಳಲ್ಲಿನ ಕರ್ತವ್ಯಗಳನ್ನೂ ನೀವು ಪಾಲನೆ ಮಾಡಬೇಕು. ವಿಶ್ವಶಾಂತಿ ನಮ್ಮ ದೃಷ್ಟಿ. ಅನೇಕ ಕಾರಣಗಳಿಂದ ಯುದ್ಧಗಳು ನಡೆಯುತ್ತವೆ. ಆದಷ್ಟು ಬೇಗ ಅದು ಮುಕ್ತಾಯಗೊಂಡು ಅಲ್ಲಿನ ಜನಜೀವನ ಸುಖ ಶಾಂತಿಯಲ್ಲಿ ನೆಲೆಸಬೇಕು ಎನ್ನುವುದು ನಮ್ಮ ಅಪೇಕ್ಷೆ. ಈಗ ಆಗುತ್ತಿರುವ ಯುದ್ಧದ ಕುರಿತು ಸಂಘಕ್ಕೆ ಯಾವುದೇ ನಿಲುವಿಲ್ಲ, ಆದರೆ, ವಿಶ್ವದಲ್ಲಿ ಶಾಂತಿ ನೆಲೆಸಬೇಕು. ➡ಪುಟ ೯

ಭಾರತದ ಹಿತಕ್ಕಾಗಿ ಸರ್ಕಾರ ನಿಲ್ಲುತ್ತದೆ

ಭಾರತ ಸರ್ಕಾರ ಭಾರತದ ದೃಷ್ಟಿಯಿಂದ ಯಾವುದು ಹಿತವೋ ಅದನ್ನು ಮಾಡುವುದಕ್ಕಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತದೆ ಎಂಬ ವಿಶ್ವಾಸವಿದೆ. ಸರ್ಕಾರದಲ್ಲಿರುವ ಸಚಿವರು ವಿಶ್ವದ ದೇಶಗಳೊಂದಿಗೆ ಸಂಬಂಧ, ಸಂಪರ್ಕ, ವಾಣಿಜ್ಯ, ವ್ಯವಹಾರ, ಸುರಕ್ಷತೆಯ ಕುರಿತು ಮಾತುಕತೆ ನಡೆಸುವುದರ ಜೊತೆಗೆ ರಾಷ್ಟ್ರ ಮೊದಲು ಎಂಬ ಪ್ರಧಾನ ಆಸಕ್ತಿ ಆಧಾರಿತವಾಗಿ ಕೆಲಸ ಮಾಡುತ್ತಿದೆ ಎಂದು ದತ್ತಾತ್ರೇಯ ಹೊಸಬಾಳೆ ಹೇಳಿದರು.

> ಸಮಾಜದಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಕೊನೆಗೊಳಿಸಲು ಮತ್ತು ಯಾವುದೇ ಚುನಾವಣೆಯಲ್ಲಿ ಜಾತಿ ಆಧಾರಿತವಾಗಿ ಮತದಾರರ ಮನದಾನದ ಬಳಕೆ ನಿಲ್ಲಿಸಲು ಮಾಧ್ಯಮಗಳು ಸಹ ಮುಂದಾಗಬೇಕು.
>
> ■ ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

ಲೋಕಸಭಾ ಸ್ಪೀಕರ್ ಓಂ ಬಿರ್ಲಾಗೆ ಪ್ರಧಾನಿ ಮೋದಿ ಪತ್ರ

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

• **ಹೊಸದಿಲ್ಲಿ:** ಲೋಕಸಭಾ ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ರಾಜಕೀಯ ಹೊಣೆಗೇಡಿತನ. ಸ್ವಹಿತಾಸಕ್ತಿ ಇದರ ಹಿಂದಿದೆ. ವಂಶಪಾರಂಪರ್ಯ ಚಿಂತನೆಯಲ್ಲಿ ಮುಳುಗಿರುವ ಕೆಲವರು ಪ್ರಜಾತಾಂತ್ರಿಕ ಸಂಸ್ಥೆಗಳನ್ನು ತಮ್ಮ ಸೀಮಿತ ವರ್ತುಲದೊಳಗೆ ಸೀಮಿತಗೊಳಿಸಲು ಯತ್ನಿಸುತ್ತಿರುವುದು ಸರ್ವತ್ರ ಖಂಡನೀಯ ಎಂದು ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್‌ನ್ನು ಕಟುವಾಗಿ ತರಾಟೆಗೆತ್ತಿಕೊಂಡಿದ್ದಾರೆ.



ಸಭಾಪತಿ ಓಂ ಬಿರ್ಲಾ ಪದಚ್ಯುತಿಗಾಗಿ ಕಾಂಗ್ರೆಸ್ ನೇತೃತ್ವದ ವಿಪಕ್ಷ ಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲಗೊಂಡ ನಂತರದಲ್ಲಿ, ಬಿರ್ಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾಂಗ್ರೆಸ್ ನಡೆ ಟೀಕಿಸಿದ್ದಾರೆ. ಪ್ರಧಾನಿ ಪತ್ರಕ್ಕೆ ಕೃತಜ್ಞತೆ ವ್ಯಕ್ತಪಡಿಸಿರುವ ಬಿರ್ಲಾ, ಪ್ರಧಾನಿ ಮೋದಿ ಯಾವತ್ತೂ ಸಂಸದೀಯ ಪ್ರಜಾಸತ್ತೆಯ ನಿಯಮಗಳು, ನಿಯಮಾವಳಿಗಳು ಮತ್ತು ಪರಂಪರೆಯಲ್ಲಿ ಅಚಲ ನಂಬುಗೆ ಕಾಯ್ದುಕೊಂಡವರು ಎಂದು ಪ್ರಶಂಸಿಸಿದ್ದಾರೆ. ➡ಪುಟ ೯

ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಸಂಸದರು ಸದನದೊಳಗೆ ಬ್ಯಾನರ್, ಭಿತ್ತಿಪತ್ರ, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು ಮತ್ತು ಅಸಭ್ಯ ಭಾಷೆ ಬಳಸುವ ಬಗ್ಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಗಂಭೀರ ಆತಂಕ ವ್ಯಕ್ತಪಡಿಸಿ, ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ. ಅವರು ಸದನದಲ್ಲಿ ಶಿಸ್ತು ಮತ್ತು ನಡವಳಿಕೆಯನ್ನು ಕಾಪಾಡಲು ತಮ್ಮ ಪಕ್ಷದ ಸದಸ್ಯರಿಗೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ. ಲೋಕಸಭೆಗೆ ಸದಾ ಗೌರವಯುತ ಚರ್ಚೆ ಮತ್ತು ಸಂವಾದದ ಮಹತ್ವದ ಪರಂಪರೆ ಇದೆ. ➡ಪುಟ ೯

ಇರಾನ್ ದಾಳಿ ತಡೆದ ಗಲ್ಫ್ ರಾಷ್ಟ್ರಗಳು | 3 ಇಸ್ರೇಲಿಗರಿಗೆ ಗಾಯ

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

• **ಕೈರೋ:** ಮಧ್ಯಪ್ರಾಚ್ಯ ಯುದ್ಧ ಮೂರನೇ ವಾರ ಪ್ರವೇಶಿಸಿದ ಹಿನ್ನೆಲೆ ನೆರೆರಾಷ್ಟ್ರಗಳ ಮೇಲಿನ ದಾಳಿಯನ್ನು ಇರಾನ್ ಭಾನುವಾರ ವಿಸ್ತರಿಸಿದ್ದು, ಯುಎಇನಲ್ಲಿನ ಮೂರು ಬಂದರುಗಳನ್ನು ಖಾಲಿ ಮಾಡಲು ಕರೆ ನೀಡಿದೆ. ಇದೇ ಮೊದಲ ಬಾರಿಗೆ ಯುಎಇ ವಿರುದ್ಧ ಇರಾನ್ ದಾಳಿ ಬೆದರಿಕೆ ಹಾಕಿದೆ.

ಭಾನುವಾರ ಕ್ಷಿಪಣಿ ಮತ್ತು ಡ್ರೋನ್‌ಗಳಿಂದ ಇರಾನ್ ನಡೆಸಿದ ಹೊಸ ದಾಳಿಗಳನ್ನು ತಡೆಗಟ್ಟಿರುವುದಾಗಿ ಗಲ್ಫ್ ರಾಷ್ಟ್ರಗಳು ಹೇಳಿಕೊಂಡಿವೆ.

ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿ: ಭಾನುವಾರ ಇಸ್ರೇಲ್ ಮೇಲೆ ಇರಾನ್ ಮತ್ತಷ್ಟು ಕ್ಷಿಪಣಿ ದಾಳಿಗಳನ್ನು ನಡೆಸಿದ್ದು, ಇಸ್ರೇಲ್‌ನಲ್ಲಿ ಸೈರನ್ ಧ್ವನಿಗಳು ಕೇಳಿಬಂದಿವೆ. ಸೈರನ್ ಧ್ವನಿ ಕೇಳಿಬಂದಂತೆ ಜನರು ಆಶ್ರಯ ಕೇಂದ್ರಗಳಿಗೆ ಓಡಿದ್ದಾರೆ. ಕೆಲ ಕ್ಷಿಪಣಿಗಳು ಮಧ್ಯ ಇಸ್ರೇಲ್ ಮತ್ತು ಟೆಲ್ ಅವಿವ್ ಪ್ರದೇಶಗಳಿಗೆ ಹಾನಿಯನ್ನು ಉಂಟುಮಾಡಿವೆ. ➡ಪುಟ ೯



ಬಾಹ್ಯಾಕಾಶ ಕೇಂದ್ರದ ಮೇಲೆ ದಾಳಿ

ಇರಾನ್‌ನ ಪ್ರಮುಖ ಬಾಹ್ಯಾಕಾಶ ಸಂಶೋಧನಾ ಕೇಂದ್ರ ಮತ್ತು ವಾಯು ರಕ್ಷಣಾ ವ್ಯವಸ್ಥೆ ತಯಾರಿಕಾ ಕಾರ್ಖಾನೆಯ ಮೇಲೆ ದಾಳಿ ನಡೆಸಿರುವುದಾಗಿ ಶನಿವಾರ ತಡರಾತ್ರಿ ಇಸ್ರೇಲ್ ತಿಳಿಸಿದೆ. ಭಾನುವಾರವೂ ಇರಾನ್ ಮೇಲಿನ ದಾಳಿ ಮುಂದುವರಿಸಿರುವುದಾಗಿ ಇಸ್ರೇಲ್ ತಿಳಿಸಿದೆ. ಇದೇ ಸಮಯದಲ್ಲಿ ಬಹ್ರೈನ್, ಸೌದಿ ಅರೇಬಿಯಾ ಮತ್ತು ಯುಎಇ ತಮ್ಮ ನಾಗರಿಕರ ರಕ್ಷಣೆಗಾಗಿ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿವೆ.

ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

- ಕಂದಹಾರ್ ಮೇಲೆ ಪಾಕಿಸ್ತಾನದ ಹೊಸ ದಾಳಿ
- ಆಫ್ಘನ್ ರಕ್ಷಣಾ ಪಡೆ ಪ್ರತಿದಾಳಿಗೆ 14 ಪಾಕ್ ಸೈನಿಕರ ಸಾವು

• **ಕಾಬುಲ್:** ಅಫ್ಘಾನಿಸ್ತಾನದ ಸೇನಾ ಮೂಲಸೌಕರ್ಯ ಮತ್ತು ತಾಲಿಬಾನಿ ಅಡಗುದಾಣಗಳನ್ನು ಗುರಿಯಾಗಿಸಿ ಪಾಕಿಸ್ತಾನ ನಡೆಸಿದ ದಾಳಿಗೆ ತಾಲಿಬಾನ್ ಪ್ರತಿದಾಳಿ ನಡೆಸಿದ್ದು, 14 ಪಾಕ್ ಸೈನಿಕರು ಹತರಾಗಿದ್ದಾರೆ. ವಾರಾಂತ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಕದನ ವಿರಾಮಕ್ಕಾಗಿ ಚೀನಾ ಮತ್ತು ಟರ್ಕಿ ನಡೆಸಿದ ಮಧ್ಯಸ್ಥಿಕೆ ವ್ಯರ್ಥವಾಗಿದೆ. ತಾಲಿಬಾನಿಗಳ ಸರ್ವೋಚ್ಚ ನಾಯಕ ಹಿಬಾತುಲ್ಲಾ ಅಖಂಡ್‌ಜಾದಾ ಆಡಳಿತದ ಕಂದಹಾರ್ ನಗರದ ಮೇಲೆ ಪಾಕಿಸ್ತಾನ ದಾಳಿ ನಡೆಸಿರುವುದಾಗಿ ಭಾನುವಾರ ಹೇಳಿದೆ. ➡ಪುಟ ೯

ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

• **ಚಳ್ಳಕೆರೆ(ಚಿತ್ರದುರ್ಗ):** ಹೆಗ್ಗೆರೆ ಸಮೀಪ ಭಾನುವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ರಿಸರ್ವ್ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಎಸ್‌ಐಗಳ ಸ್ಥಿತಿ ಚಿಂತಾಜನಕವಾಗಿದೆ. ಮಂಜುನಾಥ್, ಅಂಬರೀಷ್, ಸಚಿನ್ ಮೃತಪಟ್ಟವರು. ಈಶ್ವರ್, ಮಹಾಂತೇಶ್ ಗಂಭೀರ ಗಾಯಗೊಂಡಿದ್ದು, ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳ್ಳಾರಿಯಲ್ಲಿ ನಡೆಯಲಿದ್ದ ವಿವಾಹದಲ್ಲಿ ಭಾಗಿಯಾಗಲು ತೆರಳುತ್ತಿದ್ದರು. ➡ಪುಟ ೯

ರಾಮ ಬಾಣ



ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹ | ಆಯ್ಕೆ ಸಮಿತಿಗೆ ಪತ್ರ

ವೈರಮುತ್ತು ಜ್ಞಾನಪೀಠ ಪ್ರಶಸ್ತಿ ಮರುಪರಿಶೀಲಿಸಿ

ಬೆಂಗಳೂರು: ವೈರಮುತ್ತು ಅವರಿಗೆ ಘೋಷಣೆಯಾಗಿರುವ ಜ್ಞಾನಪೀಠ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಆಗ್ರಹಿಸಿದೆ.

ಈ ಬಗ್ಗೆ ಜ್ಞಾನಪೀಠ ಪ್ರಶಸ್ತಿಯ ಆಯ್ಕೆ ಸಮಿತಿಗೆ ಪತ್ರ ಬರೆದ ಪರಿಷತ್‌ನ ಅಧ್ಯಕ್ಷ ಎಸ್.ಜಿ.ಕೋಟಿ, ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುನ್ನತವಾದ ಜ್ಞಾನಪೀಠ ಪ್ರಶಸ್ತಿಗೆ ಅದರದ್ದೇ ಆದ ಪರಂಪರೆ, ಘನತೆ ಮತ್ತು ಪಾವಿತ್ರ್ಯತೆ ಇದೆ. ಈ ಪ್ರಶಸ್ತಿಯು ಕೇವಲ ಒಬ್ಬ ವ್ಯಕ್ತಿಯ ಸಾಹಿತ್ಯಕ ಸಾಧನೆಯನ್ನು ಮಾತ್ರವಲ್ಲದೆ, ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ ಎಂದು ನಾವು ದೃಢವಾಗಿ ನಂಬಿದ್ದೇವೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಕವಿ ವೈರಮುತ್ತು ಅವರಿಗೆ ಈ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಘೋಷಿಸಿರುವುದು ಸಮಾಜದಲ್ಲಿ ತೀವ್ರ ಕಳವಳವನ್ನು ಉಂಟುಮಾಡಿದೆ ಹಾಗೂ ಅನೇಕರು ತಮ್ಮ ಪ್ರತಿಭಟನೆಯನ್ನು ವೈಯಕ್ತಿಕ ನೆಲೆಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ನಡೆದ ಮೀಟೂ ಚಳವಳಿಯ ಸಂದರ್ಭದಲ್ಲಿ ಅವರ ಮೇಲೆ ಕೇಳಿಬಂದಿರುವ ಗಂಭೀರ ಸ್ವರೂಪದ ಲೈಂಗಿಕ ಕಿರುಕುಳದ ಆರೋಪಗಳು ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿವೆ. ಕೇವಲ ಒಬ್ಬಿಬ್ಬರಲ್ಲ, ಬದಲಾಗಿ ಅನೇಕ ಮಹಿಳಾ ಕಲಾವಿದರು, ಗಾಯಕಿಯರು ಮತ್ತು ಬರೆಹಗಾರ್ತಿಯರು ಅವರ ವಿರುದ್ಧ ಅತ್ಯಂತ ನೋವಿನಿಂದ ತಮ್ಮ ಕಹಿ ಅನುಭವಗಳನ್ನು ಸಾರ್ವಜನಿಕ ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ.

> ಜ್ಞಾನಪೀಠ ಪ್ರಶಸ್ತಿ ಲೇಖಕರ ನೈತಿಕತೆ ಮತ್ತು ಉನ್ನತ ಸಾಮಾಜಿಕ ಮೌಲ್ಯಗಳನ್ನೂ ಪ್ರತಿನಿಧಿಸುತ್ತದೆ

ಇಂದಿಗೂ ಈ ಗಂಭೀರ ದೂರುಗಳ ಬಗ್ಗೆ ಸಮರ್ಪಕವಾದ ತನಿಖೆ ನಡೆದು, ಅವರ ಮೇಲಿನ ಕಳಂಕ ನಿವಾರಣೆಯಾಗಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದೇ ಹಿನ್ನೆಲೆಯಲ್ಲಿ, ಹಿಂದೆ ಕೇರಳದ ಒಎನ್‌ವಿ ಸಾಹಿತ್ಯ ಪುರಸ್ಕಾರವನ್ನು ಅವರಿಗೆ ನೀಡುವ ನಿರ್ಧಾರವನ್ನು ಸಾರ್ವಜನಿಕರ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರರ ತೀವ್ರ ವಿರೋಧದ ಕಾರಣದಿಂದಾಗಿ ಮರುಪರಿಶೀಲಿಸಲಾಯಿತು ಮತ್ತು ಅಂತಿಮವಾಗಿ ಆ ಪ್ರಶಸ್ತಿಯು ಹಿಂಪಡೆಯಲ್ಪಟ್ಟಿದೆ.

ಹಾಗೇ ಮಹಿಳೆಯರ ಘನತೆಗೆ ಕುಂದು ತಂದಿರುವ ಇಂತಹ ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಮತ್ತು ನೈತಿಕವಾಗಿ ಪ್ರಶ್ನೆಗೀಡಾಗಿರುವ ವ್ಯಕ್ತಿಗೆ ದೇಶದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯನ್ನು ನೀಡುವುದು, ಈ ಪುರಸ್ಕಾರದ ಘನತೆಗೆ ಚ್ಯುತಿ ತರಬಹುದು ಎಂಬುದು ನಮ್ಮ ಆತಂಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಜ್ಞಾನಪೀಠದಂತಹ ಗೌರವಾನ್ವಿತ ಪ್ರಶಸ್ತಿಯು ಯಾವುದೇ ರೀತಿಯ ವಿವಾದಗಳಿಗೆ ಮತ್ತು ಕಳಂಕಗಳಿಗೆ ಹೊರತಾಗಿರಬೇಕು ಎಂಬುದು ನಮ್ಮ ಕಳಕಳಿಯಾಗಿದೆ. ಮಹಿಳೆಯರ ಘನತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅತ್ಯಂತ ಸಹಾನುಭೂತಿಯಿಂದ ಮತ್ತು ಗಂಭೀರವಾಗಿ ಪರಿಗಣಿಸಿ, ವೈರಮುತ್ತು ಅವರಿಗೆ ಘೋಷಿಸಿರುವ ಪ್ರಶಸ್ತಿಯನ್ನು ಮರುಪರಿಶೀಲಿಸುವಂತೆ ಪತ್ರದಲ್ಲಿ ವಿನಂತಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಜಾತಿ, ಮತ, ಪಂಥಗಳು ಬಿಡಿ ಬಿಡಿ ಹೂವುಗಳು ಇದ್ದಂತೆ.ಇವುಗಳನ್ನು ಸಾಮರಸ್ಯ ಎಂಬ ದಾರದಲ್ಲಿ ಪೋಣಿಸುವುದೇ ಹಿಂದುತ್ವ
– ರಘುನಂದನ

–ಜಾತಿ, ಮತ, ಪಂಥಗಳನ್ನು ಅಳಿಸಿ ಹಿಂದುತ್ವವನ್ನು ದೂಷಿಸಿ ಹೊಸ ಪಂಥವನ್ನು ನಿರ್ಮಿಸಿ ಧರ್ಮವೆಂಬ ಆಕರ್ಷಕ ಬೋರ್ಡ್‌ನ್ನು ಹಾಕಿಕೊಂಡು ಮಾಡಬಾರದ್ದನ್ನು ಮಾಡುವುದು ಮೂಲಭೂತವಾದ!

ದಿನ ಭವಿಷ್ಯ

ಮೇಷ ಗ್ರಹಗತಿ ಪೂರಕ. ವೃತ್ತಿಯಲ್ಲಿ ನಿಮ್ಮ ಸಾಮರ್ಥ್ಯ ತೋರುವಿರಿ. ವಿವಾಹಕಾಂಕ್ಷಿಗಳಿಗೆ ಸಂಗಾತಿ ಲಭ್ಯ. ಹಣದ ಸಮಸ್ಯೆ ಪರಿಹಾರ.

ವೃಷಭ ನಿಮ್ಮ ಕೆಲಸ ಸಾಧಿಸಲು ಹೆಚ್ಚಿನ ಪ್ರಯತ್ನ ಬೇಕು. ಆರ್ಥಿಕ ಉನ್ನತಿಯ ದಾರಿ ತೋರಲಿದೆ. ಪ್ರೀತಿಯಲ್ಲಿ ಹಿನ್ನಡೆ ಉಂಟಾದೀತು.

ಮಿಥುನ ಇಂದು ದುಡುಕು ಬಿಟ್ಟು ತಾಳ್ಮೆಯಿಂದ ವ್ಯವಹರಿಸಿ. ಕಾರ್ಯ ಸುಲಲಿತ. ಮಹತ್ವದ ನಿರ್ಣಯ ಇಂದು ತಾಳಬೇಡಿ. ಸ್ವಲ್ಪ ಕಾಯಿರಿ.

ಕಟಕ ವೃತ್ತಿಯಲ್ಲಿ ಯಶ. ಎಲ್ಲರು ಮೆಚ್ಚುವ ನಿರ್ವಹಣೆ. ಕುಟುಂಬದ ಹಿತಾಸಕ್ತಿಗೆ ಹೆಚ್ಚು ಗಮನ ಕೊಡಿ. ತುಸು ಬೇಸರದ ಭಾವ ಆವರಿಸಲಿದೆ.

ಸಿಂಹ ಈ ದಿನ ಉತ್ತಮ ಫಲ ತರಲಿದೆ. ಮಹತ್ವದ ನಿರ್ಧಾರ ಫಲದಾಯಕ. ಏಕಾಂಗಿಗಳಿಗೆ ಪ್ರೀತಿಯಲ್ಲಿ ಯಶಸ್ಸು. ಉದ್ಯೋಗ ಅವಕಾಶ ಉಜ್ವಲ.

ಕನ್ಯಾ ವಿಶ್ವಾಸ ವೃದ್ಧಿಯ ದಿನ. ಕಠಿಣ ಕಾರ್ಯವೂ ಇಂದು ಸುಗಮವಾಗಿ ಸಾಗಲಿದೆ. ಹಣ ಗಳಿಕೆ. ಸಾಂಸಾರಿಕ ಬಿಕ್ಕಟ್ಟು ಪರಿಹಾರ ಕಾಣಲಿದೆ.

ತುಲಾ ಕೈಗೆ ಎಟುಕದ ಆಕಾಂಕ್ಷೆ ಬಿಡಿ. ನಿಮ್ಮ ಮಿತಿಯಲ್ಲೇ ವ್ಯವಹರಿಸಿ. ಎಲ್ಲರ ಜತೆ ಆತ್ಮೀಯವಾಗಿ ವರ್ತಿಸಿ. ಕೋಪತಾಪ ವಿರಸ ಸೃಷ್ಟಿಸಬಹುದು.

ವೃಶ್ಚಿಕ ಇಂದು ಕಠಿಣ ಪರಿಸ್ಥಿತಿ ಎದುರಿಸಿದರೂ ಆಪ್ತರಿಂದ ಬೆಂಬಲ. ಹಣ ಗಳಿಕೆ ಹೆಚ್ಚಳ. ಹಿರಿಯರಿಗೆ ಬೆನ್ನು ನೋವಿನಿಂದ ನಿರಾಳತೆ.

ಧನು ಅದೃಷ್ಟದ ದಿನ. ನೀವು ಬಯಸಿದ ಪ್ರಗತಿ ಸಾಧಿತ. ಮನೆಯಲ್ಲಿ ಹೆಚ್ಚು ಹೊಣೆಗಾರಿಕೆ. ದೈಹಿಕ ಬಸವಳಿಕೆ ಕಾಡಬಹುದು. ವಿಶ್ರಾಂತಿಗೆ ಗಮನಕೊಡಿ.

ಮಕರ ಕೌಟುಂಬಿಕ ಸಮ್ಮಿಲನ. ವ್ಯವಹಾರದಲ್ಲಿ ಯಶಸ್ಸು. ಇತರರ ಚುಚ್ಚುಮಾತಿಗೆ ತಲೆ ಕೆಡಿಸಿಕೊಳ್ಳದಿರಿ. ಆರ್ಥಿಕ ಒತ್ತಡ ಅಧಿಕ.

ಕುಂಭ ವೃತ್ತಿ ಸಂಬಂಧ ದೂರ ಪ್ರಯಾಣ ಸಾಧ್ಯತೆ. ಕಾರ್ಯ ಸಫಲ. ಸಾಂಸಾರಿಕ ಒತ್ತಡ ಹೆಚ್ಚು. ಧಾರ್ಮಿಕ ಚಟುವಟಿಕೆಯಿಂದ ಮನಸ್ಸಿಗೆ ನಿರಾಳತೆ.

ಮೀನ ಬಿಕ್ಕಟ್ಟು ಉಂಟಾದರೆ ಕ್ಷಿಪ್ರವಾಗಿ ಕಾರ್ಯಾಚರಿಸಿ. ಗುರಿ ಸಾಧನೆ ನಿಮಗೆ ಕಷ್ಟವಲ್ಲ. ಆದರೆ ಹಲವರ ವಿರೋಧ ಕಟ್ಟಿಕೊಳ್ಳುವಿರಿ. ತುಸು ಆರ್ಥಿಕ ನಷ್ಟ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 5,0,4,1

ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಿಸಿದ ಆಯೋಗ

ಏಪ್ರಿಲ್ 9ಕ್ಕೆ ಮತದಾನ, ಮೇ 4 ಫಲಿತಾಂಶ



ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪ ಚುನಾವಣೆಗೆ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗವು ಪ್ರಕಟಿಸಿದೆ. ಈ ಜಿಲ್ಲೆಗಳಲ್ಲಿ ಭಾನುವಾರದಿಂದಲೇ ಮಾದರಿ ನೀತಿ ಸಂಹಿತೆಯ ಜಾರಿಗೆ ಬಂದಿದೆ.

ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಎರಡು ಕ್ಷೇತ್ರಗಳಲ್ಲಿ ಸೋಮವಾರ ಅಧಿಸೂಚನೆ ಪ್ರಕಟಣೆಗೊಳ್ಳಲಿದೆ. ಮಾ.23 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಏ.9ರಂದು ಮತದಾನ ನಡೆಯಲಿದ್ದು, ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಟ್ಟು 2,31,683 ಮತದಾರರಿದ್ದಾರೆ. ಇವರಲ್ಲಿ 1,13,654 ಪುರುಷ ಹಾಗೂ 1,17,986 ಮಹಿಳಾ ಮತದಾರರಿದ್ದಾರೆ.ಯುವ ಮತದಾರರು 2,774 ಇದ್ದು, ಇತರರು 43 ಹಾಗೂ 44 ಮಂದಿ ನೂರು ವರ್ಷ ದಾಟಿದ ಹಿರಿಯರಿದ್ದಾರೆ.

ಬಾಗಲಕೋಟೆ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರಿದ್ದಾರೆ. ಇವರಲ್ಲಿ 1,26,761 ಪುರುಷ ಹಾಗೂ 1,32,476 ಮಹಿಳೆಯರಿದ್ದಾರೆ. ಯುವ ಮತದಾರರು 4,188, ಇತರರು 23 ಹಾಗೂ 38 ಮಂದಿ ನೂರು ವರ್ಷ ದಾಟಿದ ಹಿರಿಯ ಮತದಾರರಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ಒಟ್ಟು 5,151 ವಿಶಿಷ್ಟಚೇತನ ಮತದಾರರನ್ನು ಗುರುತಿಸಲಾಗಿದೆ.

603 ಮತದಾನ ಕೇಂದ್ರಗಳು: ಬಾಗಲಕೋಟೆಯಲ್ಲಿ 319 ಮತ್ತು ದಾವಣಗೆರೆ ದಕ್ಷಿಣದಲ್ಲಿ 284 ಸೇರಿದಂತೆ ಒಟ್ಟು 603 ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಎಲ್ಲಾ ಕೇಂದ್ರಗಳಲ್ಲಿ ಎಲೆಕ್ಟ್ರಾನಿಕ್ ಮತಯಂತ್ರ (ಇವಿಎಂ) ಮತ್ತು ವಿವಿ ಪ್ಯಾಟ್ ಬಳಸಲಾಗುವುದು. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ (ಸುಮಾರು ಶೇ.160 ರಿಂದ 200 ರಷ್ಟು) ಯಂತ್ರಗಳನ್ನು ಸಿದ್ಧವಾಗಿಟ್ಟುಕೊಳ್ಳಲಾಗಿದೆ ಆಯೋಗ ತಿಳಿಸಿದೆ.

ಉಭಯ ಪಕ್ಷಗಳಲ್ಲಿ ಹೆಚ್ಚಿದ ಟಿಕೆಟ್ ಕುತೂಹಲ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆಗೆ ಚುನಾವಣಾ ಆಯೋಗ ಮುಹೂರ್ತ ನಿಗದಿ ಮಾಡಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಯಾರಿಗೆ ಸಿಗುತ್ತದೆ ಎಂಬುದು ಮಾತ್ರ ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಪಕ್ಷದ ದಿ.ಎಚ್.ವೈ.ಮೇಟಿಯವರ ನಿಧನದ ನಂತರ ಅವರ ಸ್ಥಾನಕ್ಕೆ ಈಗ ಉಪಚುನಾವಣೆ ನಡೆಯಲಿದ್ದು ಬಾಗಲಕೋಟೆ ಮತಕ್ಷೇತ್ರದಲ್ಲಿ ಎಚ್.ವೈ.ಮೇಟಿಯವರ ಕುಟುಂಬಕ್ಕೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಾಗಿದ್ದರೆ ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠವರಿಗೆ ಬಿಜೆಪಿಯಿಂದ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚಿದೆ. ಇನ್ನೂ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಅವರು ಕೂಡ ಆಕಾಂಕ್ಷಿಯಾಗಿದ್ದು ಪಕ್ಷದ ಹೈಕಮಾಂಡ್ ಕೈಗೊಳ್ಳುವ ನಿರ್ಧಾರಕ್ಕೆ ಎಲ್ಲ ನಾಯಕರು ಬದ್ಧರಾಗಿದ್ದಾರೆ.

ಸಿಎಂ ಬಂದರೂ ಘೋಷಣೆಯಾಗದ ಟಿಕೆಟ್: ನವನಗರದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಂದ ಸಂದರ್ಭದಲ್ಲಿ ವೇದಿಕೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿಯೂ ಕೂಡ ಯಾರಿಗೆ ಟಿಕೆಟ್ ಕೊಡುತ್ತೇವೆ ಎಂಬುದು ಹೇಳಲಿಲ್ಲ. ಇನ್ನೂ ಡಿ.ಕೆ.ಶಿವಕುಮಾರ ಮೇಟಿಯವರು ಎಷ್ಟು ಮತಗಳ ಅಂತರದಿಂದ ಗೆದ್ದಿದ್ದರೂ ಡಬಲ್ ಅಂತರದಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕು ಎಂದು ಹೇಳಿದನ್ನು ಬಿಟ್ಟರೆ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದು ಮಾತ್ರ ಸುಳಿವು ನೀಡಲಿಲ್ಲ.

ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆ ಹೊರಡಿಸಿ ಏ.9ಕ್ಕೆ ಮತದಾನ ನಡೆಯಲಿದ್ದು, ಮಾ.23ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ ಪ್ರಕಟ ಮಾಡಿದ್ದರಿಂದ ಆಕಾಂಕ್ಷಿಗಳಲ್ಲಿ ಮಾತ್ರ ಕುತೂಹಲ ಮೂಡಿಸಿದೆ. ಚುನಾವಣಾ ಅಭ್ಯರ್ಥಿಗಳಿಗೆ ಸದ್ಯಕ್ಕೆ ಸಮಯಾವಕಾಶ ಕಡಿಮೆ ಇದ್ದಿದ್ದರಿಂದ ಎಷ್ಟು ಬೇಗ ಟಿಕೆಟ್ ಘೋಷಣೆ ಮಾಡುತ್ತಾರೆ, ಅಷ್ಟು ಒಳ್ಳೆಯದಾಗಲಿದೆ ಎಂಬುದು ಆಕಾಂಕ್ಷಿಗಳ ಮನದಲ್ಲಿ ಮೂಡಿದೆ.

ಬಾಗಲಕೋಟೆ ಮತಕ್ಷೇತ್ರದಲ್ಲಿ 143 ನಗರ, 176 ಗ್ರಾಮೀಣ ಪ್ರದೇಶದಲ್ಲಿ ಬೂತ್‌ಗಳಿದ್ದು 2,59,260 ಮತದಾರರು ಇದ್ದಾರೆ. ಈ ಬಾರಿ ನಡೆಯುವ ವಿಧಾನಸಭೆಯ ಉಪಚುನಾವಣೆಯ ಕಾವು ಮಾತ್ರ ಬಾಗಲಕೋಟೆಯಲ್ಲಿ ಹೆಚ್ಚಾಗಿದೆ ಆದರೆ ಅಭ್ಯರ್ಥಿಗಳ ಎರಡೂ ಪಕ್ಷದಲ್ಲಿ ಘೋಷಣೆ ಮಾತ್ರ ಬಾಕಿ ಉಳಿದಿದೆ.

ಪಕ್ಷ, ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ

ದಾವಣಗೆರೆ: ಸಾಕಷ್ಟು ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಮಹೂರ್ತ ಫಿಕ್ಸ್ ಆಗಿದ್ದು, ಮಿನಿ ದಂಗಲ್ ದಿನಾಂಕ ಘೋಷಣೆಯಾಗಿರುವುದು ರಾಜಕೀಯ ಪಕ್ಷ ಹಾಗೂ ಟಿಕೆಟ್ ಆಕಾಂಕ್ಷಿಗಳಲ್ಲಿ ಸಂಚಲನ ಮೂಡಿಸಿದೆ.

ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಪ್ರತ್ಯೇಕಗೊಂಡು ಅಸ್ತಿತ್ವಕ್ಕೆ ಬಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರು ಸೇರಿದಂತೆ ಅಹಿಂದ ಮತದಾರರ ಸಂಖ್ಯೆ ನಿರ್ಣಾಯಕವಾಗಿದೆ. ಕ್ಷೇತ್ರದಲ್ಲಿ ನಿರಂತರವಾಗಿ ಕಾಂಗ್ರೆಸ್ ಅಧಿಪತ್ಯ ಸಾಧಿಸುತ್ತಿದ್ದರೂ ಬಿಜೆಪಿ ಕೂಡ ವಿರೋಚಿತ ಸ್ಪರ್ಧೆ ನೀಡುತ್ತಾ ಗೆಲುವಿಗಾಗಿ ಕಸರತ್ತು ಮಾಡುತ್ತಲೇ ಬಂದಿದೆ. ಹೀಗಾಗಿ ಪ್ರಸ್ತುತ ಉಪಚುನಾವಣೆಯು ಉಭಯ ಪಕ್ಷಗಳ ಪ್ರತಿಷ್ಠೆಯ ಕಣವಾಗಿದೆ. ಕ್ಷೇತ್ರದಲ್ಲಿ ಪಾರುಪತ್ಯ ಮುಂದುವರೆಸಲು ಕಾಂಗ್ರೆಸ್ ಹವಣಿಸುತ್ತಿದ್ದರೆ ಈ ಬಾರಿ ಶತಾಯಗತಾಯ ಗೆಲುವು ಸಾಧಿಸಲೇಬೇಕೆಂಬ ಇರಾದೆ ಬಿಜೆಪಿ ಪಕ್ಷದ್ದಾಗಿದೆ. ಕ್ಷೇತ್ರದ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ನೇರ ಹಣಾಹಣಿ ನಡೆದಿದೆ. ಈ ಬಾರಿ ಕೂಡ ಅದೇ ರೀತಿಯ ಜಿದ್ದಾಜಿದ್ದಿಯ ಹೋರಾಟ ಜರುಗುವ ಎಲ್ಲ ಲಕ್ಷಣಗಳು ಗೋಚರಿಸುತ್ತಿವೆ.



ಉಭಯ ಪಕ್ಷಗಳಲ್ಲೂ ಅಧಿಕೃತ ಅಭ್ಯರ್ಥಿ ಹೆಸರು ಅಂತಿಮವಾಗಿಲ್ಲ. ಆದರೆ ಎರಡೂ ಪಕ್ಷಗಳಲ್ಲಿ ತಲಾ ಅರ್ಧ ಡಜನ್ ಆಕಾಂಕ್ಷಿಗಳು ಮಿನಿ ಸಮರದಲ್ಲಿ ಪಕ್ಷದ ಟಿಕೆಟ್ ಗಿಟ್ಟಿಸಲು ತಮ್ಮದೇ ಪ್ರಯತ್ನದಲ್ಲಿ ತೊಡಗಿದ್ದಾರೆ. ಚುನಾವಣೆ ದಿನಾಂಕ ಘೋಷಣೆವರೆಗೆ ಕಾದು ನೋಡುವ ತಂತ್ರ ಅನುಸರಿಸಿಕೊಂಡು ಬಂದಿದ್ದ ಪಕ್ಷದ ವರಿಷ್ಠ ನಾಯಕರು ಕೂಡ ಇದೀಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಡ್ಯಾಮೇಜ್ ಕಂಟ್ರೋಲ್ ಮಾಡುವ ಜೊತೆಗೆ ಪಕ್ಷದ ಗೆಲುವಿಗಾಗಿ ಗಟ್ಟಿ ನಿರ್ಧಾರ ಕೈಗೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದಾರೆ.

ಮತಯುದ್ಧಕ್ಕೆ ವೇದಿಕೆ

ಪುಟ ೧➡ **ಶೇ.100 ವೆಬ್‌ಕಾಸ್ಟಿಂಗ್ ವ್ಯವಸ್ಥೆ:** ಚುನಾವಣೆಯಲ್ಲಿ ಪಾರದರ್ಶಕತೆ ಹಾಗೂ ಭದ್ರತೆಯನ್ನು ಹೆಚ್ಚಿಸಲು ಚುನಾವಣಾ ಆಯೋಗ ಹಲವು ಕ್ರಮಗಳನ್ನು ಕೈಗೊಂಡಿದೆ. ಎಲ್ಲಾ ಮತಗಟ್ಟೆಗಳಲ್ಲಿ ಮೊದಲ ಬಾರಿಗೆ ಶೇ.100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಇದರಿಂದ ಮತದಾನದ ಪ್ರಕ್ರಿಯೆಯನ್ನು ನೇರವಾಗಿ ಮೇಲ್ವಿಚಾರಣೆ ಮಾಡಬಹುದು. ಜತೆಗೆ ಮತದಾರರಿಗೆ ಕುಡಿಯುವ ನೀರು, ಶೌಚಾಲಯ, ವೃದ್ಧರು ಮತ್ತು ವಿಶಿಷ್ಟಚೇತನರಿಗೆ ರ್‍ಯಾಂಪ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ನೀತಿಸಂಹಿತೆ ಜಾರಿ

ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣದಿಂದಲೇ ಸಂಬಂಧಿಸಿದ ರಾಜ್ಯಗಳಲ್ಲಿ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಸರ್ಕಾರಗಳು ಯಾವುದೇ ಹೊಸ ಘೋಷಣೆಗಳು ಅಥವಾ ಯೋಜನೆಗಳನ್ನು ಪ್ರಕಟಿಸುವಲ್ಲಿ ಚುನಾವಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಚುನಾವಣೆಯ ಸಮಯದಲ್ಲಿ ಹಿಂಸಾಚಾರ, ಪ್ರಚೋದನೆ ಅಥವಾ ಅಕ್ರಮಗಳನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಚುನಾವಣಾ ಆಯೋಗ ಎಚ್ಚರಿಸಿದೆ. ಯಾವುದೇ ರೀತಿಯ ನಿಯಮ ಉಲ್ಲಂಘನೆ ಕಂಡುಬಂದರೆ ಕಾನೂನುಬದ್ಧವಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಸ್ಪಷ್ಟಪಡಿಸಿದರು.

20 ದೇಶಗಳ ಚುನಾವಣಾ ವೀಕ್ಷಕರು

ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಭಾರತದ ಚುನಾವಣಾ ವ್ಯವಸ್ಥೆ ಗಮನ ಸೆಳೆಯುತ್ತಿರುವ ಹಿನ್ನೆಲೆಯಲ್ಲಿ, ಸುಮಾರು 20 ದೇಶಗಳ ಚುನಾವಣಾ ವೀಕ್ಷಕರು ಈ ಪ್ರಕ್ರಿಯೆ ವೀಕ್ಷಿಸಲು ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಆಯೋಗ ತಿಳಿಸಿದೆ. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ಕ್ರಮವೆಂದು ಅಧಿಕಾರಿಗಳು ಹೇಳಿದ್ದಾರೆ. ಒಟ್ಟಾರೆ, ಐದು ವಿಧಾನಸಭಾ ಚುನಾವಣೆಗಳು ದೇಶದ ರಾಜಕೀಯ ಭವಿಷ್ಯಕ್ಕೆ ಮಹತ್ವದ್ದಾಗಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗೆ ಚುನಾವಣಾ ಆಯೋಗ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಗಲ್ಫ್‌ಗೆ ಇರಾನ್ ದಾಳಿ ವಿಸ್ತರಣೆ!

ಪುಟ ೧➡ ಇಸ್ರೇಲ್ ರಕ್ಷಣಾ ಸೇವೆ ಮಾಗೆನ್ ಡೇವಿಡ್ ಅಡೋಮ್ ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ರಸ್ತೆಯಲ್ಲಿ ದೊಡ್ಡ ಗುಂಡಿ ಮತ್ತು ಅಪಾರ್ಟ್‌ಮೆಂಟ್ ಕಟ್ಟಡದ ಮೇಲೆ ಭಾರೀ ಹಾನಿ ಆಗಿರುವುದು ಸ್ಪಷ್ಟವಾಗಿ ಕಾಣಿಸಿದೆ. ಟೆಲ್ ಅವಿವ್ ಮೇಲೆ ಇರಾನ್ ನಡೆಸಿದ ಹೊಸ ದಾಳಿಗೆ 23 ಸ್ಥಳಗಳಲ್ಲಿ ಹಾನಿಯಾಗಿವೆ. ಒಂದು ಕಡೆ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿದೆ.

ಇಸ್ರೇಲ್ ಸೇನೆಯ ಪ್ರಕಾರ, ಇರಾನ್ ಕ್ಲಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ನಡೆಸುತ್ತಿದೆ. ಇವು ಕೆಲವು ವಾಯು ರಕ್ಷಣಾ ವ್ಯವಸ್ಥೆಗಳನ್ನು ತಪ್ಪಿಸಿ ಹಲವು ಸ್ಥಳಗಳಲ್ಲಿ ಪರಿಣಾಮಕಾರಿ ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ.

ಯುಎಇಯಿಂದ ಅಮೆರಿಕ ದಾಳಿ: ಇರಾನ್ ಅಮೆರಿಕ ಸೇನೆ ಯುಎಇಯಿಂದಲೇ ಖಾರ್ಗ್ ಮತ್ತು ಅಬು ಮೂಸಾ ದ್ವೀಪಗಳ ಮೇಲೆ ದಾಳಿ ನಡೆಸಿದೆಯೆಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಆರೋಪಿಸಿದ್ದಾರೆ. ಯುಎಇ ಭೂಭಾಗ ಮತ್ತು ವಾಯುಪ್ರದೇಶವನ್ನು ಬಳಸಿಕೊಂಡು ಅಮೆರಿಕ ದಾಳಿ ನಡೆಸಿದೆಯೆಂಬ ಇರಾನ್ ಆರೋಪವನ್ನು ಯುಎಇ ತಳ್ಳಿಹಾಕಿದ್ದು, ಅಮೆರಿಕ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆರೆಸ್ಸೆಸ್ ಶತಾಬ್ದಿ ವರ್ಷ ಬಳಿಕ ಸಂಭಾಗ ರಚನೆ

ಪುಟ ೧➡ ಭಾರತದ ಸಮಾಜ ಈ ದೃಷ್ಟಿ ಮತ್ತು ಪ್ರಯತ್ನದಲ್ಲಿ ಇರಬೇಕು. ಸಂಘವು ಜಗತ್ತಿನಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಬೆಂಬಲಿಗ ಎಂದು ಅಭಿಪ್ರಾಯಪಟ್ಟರು.

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ 71 ದೇಶಗಳ ಪ್ರತಿನಿಧಿಗಳಿಗೆ, ನೀವು ಯಾವ ದೇಶಗಳಲ್ಲಿ ಇದ್ದೀರಿ, ಅಲ್ಲಿನ ಆಹಾರವನ್ನು ಸೇವಿಸುತ್ತೀರಿ. ಆದ್ದರಿಂದ ಆ ದೇಶವನ್ನು ಸಮರ್ಥಗೊಳಿಸುವುದೂ ನಿಮ್ಮ ಕರ್ತವ್ಯವಾಗಿದೆ ಎಂದು ನಾವು ತಿಳಿಸಿದೆವು. ಇದು ವಿಶ್ವ ಕುಟುಂಬವೆಂಬ ಹಿಂದುತ್ವದ ದೃಷ್ಟಿಯಾಗಿದೆ ಎಂದರು.

ಪಾಕ್ ವಿರುದ್ಧ ಆಫ್ಘನ್ ಪ್ರತಿದಾಳಿ

ಪುಟ ೧➡ ಕಂದಹಾರ್‌ನಲ್ಲಿ ಸೇನಾ ಮೂಲಸೌಕರ್ಯಗಳನ್ನು ಮತ್ತು ಸೇನಾ ಸಾಮಗ್ರಿಗಳ ಸಂಗ್ರಹಾಗಾರಗಳನ್ನು ನಾಶ ಮಾಡಿರುವುದಾಗಿ ಪಾಕ್ ಹೇಳಿಕೊಂಡಿದೆ.

ಪಾಕಿಸ್ತಾನ ನಡೆಸಿದ ದಾಳಿಗೆ ಪ್ರತಿಯಾಗಿ ಡುರಾಂಡ್ ರೇಖೆ ಸಮೀಪ ಪಾಕ್ ಸೇನೆಯ ಮೇಲೆ ಪ್ರತಿದಾಳಿ ನಡೆಸಿರುವುದಾಗಿ ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ (ಎಂಒಡಿ) ಹೇಳಿದೆ. ಕುನಾರ್ ಮತ್ತು ನಂಗರ್‌ಹಾರ್ ಪ್ರದೇಶಗಳಲ್ಲಿ ಆಫ್ಘನ್ ಸೇನಾ ಕಾರ್ಯಾಚರಣೆ ನಡೆಸಿದ್ದು, ಪಾಕ್ ದಾಳಿಗೆ ತಕ್ಕ ಪ್ರತ್ಯುತ್ತರ ನೀಡಿರುವುದಾಗಿ ಎಂಒಡಿ ಹೇಳಿದೆ. ಕುನಾರ್ ಮತ್ತು ನಂಗರ್ ಹಾರ್ ಪ್ರದೇಶದಲ್ಲಿನ ಡುರಾಂಡ್ ರೇಖೆ ಬಳಿ ಆಫ್ಘನ್ ರಕ್ಷಣಾಪಡೆಗಳು ನಡೆಸಿದ ಕಾರ್ಯಾಚರಣೆ ವೇಳೆ 14 ಪಾಕಿಸ್ತಾನಿ ಸೈನಿಕರನ್ನು ಹೊಡೆದುರುಳಿಸಿದ್ದೇವೆ. ಇನ್ನೂ 11 ಪಾಕ್ ಸೈನಿಕರು ಗಾಯಗೊಂಡಿದ್ದಾರೆ ಎಂದು ಆಫ್ಘನ್ ರಕ್ಷಣಾ ಸಚಿವಾಲಯ ಹೇಳಿದೆ.

ಪಾಕ್ ಮೇಲೆ ಆಫ್ಘನ್ ಡ್ರೋನ್ ದಾಳಿ?

ತಾಲಿಬಾನ್ ಸರ್ಕಾರ ಅಂತಾರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿ ತಮ್ಮ ನಾಗರಿಕರನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆಸಿದೆಯೆಂದು ಪಾಕಿಸ್ತಾನ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಆರೋಪಿಸಿದ್ದಾರೆ. ಕೆಲವೇ ಗಂಟೆಗಳಲ್ಲಿ ಪಾಕ್ ಆಫ್ಘನ್ ಡ್ರೋನ್ ಸಂಗ್ರಹಾಗಾರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದು ವರದಿಯಾಗಿದೆ.

ಅವಿಶ್ವಾಸದ ಹಿಂದೆ ಸ್ವಹಿತಾಸಕ್ತಿ

ಪುಟ ೧➡ **ಪ್ರಭಾವಿಯಾಗಿತ್ತು ಹೇಳಿಕೆ:** ಲೋಕಸಭೆಯಲ್ಲಿ ತಮ್ಮ ವಿರುದ್ಧ ವಿಪಕ್ಷಕೂಟ ಮಂಡಿಸಿದ್ದ ಅವಿಶ್ವಾಸ ನಿರ್ಣಯ ವಿಫಲವಾಗಿದೆ. ಈ ರಾಜಕೀಯ ದುಷ್ಕಾರ್ಯವನ್ನು ನಿರ್ಣಾಯಕವಾಗಿ ತಿರಸ್ಕರಿಸಿದ ಸದನದ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸುತ್ತೇನೆ. ನಿರ್ಣಯ ವಿಫಲಗೊಂಡ ಬೆನ್ನಲ್ಲೇ ಸದನವನ್ನುದ್ದೇಶಿಸಿ ತಾವು ನೀಡಿದ ಹೇಳಿಕೆಯನ್ನು ನಾನು ಗಮನವಿಟ್ಟು ಆಲಿಸಿದ್ದೇನೆ. ಸಂಸದೀಯ ಇತಿಹಾಸ, ಸಭಾಪತಿಯಾಗಿ ತಮ್ಮ ಕರ್ತವ್ಯಗಳು ಮತ್ತು ನಿಯಮಗಳ ಸರ್ವೋಚ್ಚತೆಯನ್ನು ತಾವು ಅತ್ಯಂತ ಸಮತೋಲಿತವಾಗಿ, ತಾಳ್ಮೆಯಿಂದ ಹಾಗೂ ಸ್ಪಷ್ಟವಾಗಿ ಉಲ್ಲೇಖಿಸಿದ್ದು, ವಿವರಿಸಿದ್ದು ನಿಜಕ್ಕೂ ಪ್ರಭಾವಿಯಾಗಿತ್ತು. ಇದಕ್ಕಾಗಿ ತಮಗೆ ನನ್ನ ತುಂಬು ಪ್ರಶಂಸೆಗಳು. ನಿಮ್ಮ ಹೇಳಿಕೆ ಆ ನಿರ್ದಿಷ್ಟ ಕ್ಷಣಗಳಿಗೆ ಪ್ರತಿಕ್ರಿಯೆಯಷ್ಟೇ ಅಲ್ಲ, ಭಾರತೀಯ ಸಂಸದೀಯ ಪರಂಪರೆಗಳು ಮತ್ತು ಪ್ರಜಾತಾಂತ್ರಿಕ ಮರ್ಯಾದೆಯನ್ನು ಅತ್ಯಂತ ಗಾಢವಾಗಿ ಮತ್ತು ತುಲನಾತ್ಮಕವಾಗಿ ಎತ್ತಿಹಿಡಿದಿದೆ.

ಮಿಲಿಯಂತರ ಜನರ ಭರವಸೆಗಳ ಪ್ರತಿಫಲನ: ಸಾಂವಿಧಾನಿಕ ಸಂಸ್ಥೆಗಳು ಭಾರತೀಯ ಪ್ರಜಾಸತ್ತೆಯ ಮಹಾನ್ ಬಲವಾಗಿದೆ. ಸಾಂವಿಧಾನಿಕ ಸಂಸ್ಥೆಗಳ ಪೈಕಿ ಸಂಸತ್ತು ಪರಮೋಚ್ಚ ವೇದಿಕೆಯಾಗಿದೆ. ಸದನದಲ್ಲಿ ಎತ್ತುವ ಪ್ರತಿ ಧ್ವನಿಯೂ ದೇಶಾದ್ಯಂತದ ಮಿಲಿಯಂತರ ಜನರ ಆಶೋತ್ತರ, ಭರವಸೆಗಳ ಪ್ರತಿಫಲನವಾಗಿದೆ. ಈ ನಿಟ್ಟಿನಲ್ಲಿ ಲೋಕಸಭಾ ಸಭಾಪತಿಗಳ ಹೊಣೆಗಾರಿಕೆ ಕಲಾಪಗಳನ್ನು ನಿರ್ವಹಿಸುವುದಷ್ಟೇ ಅಲ್ಲ, ಇದನ್ನು ಮೀರಿ ಸಭಾಪತಿಗಳು ಪ್ರಜಾತಾಂತ್ರಿಕ ಪರಂಪರೆಗಳ, ಸಂಸದೀಯ ನಿಯಮಗಳು ಮತ್ತು ಸಾಂಸ್ಥಿಕ ಘನತೆಯ ಕಾವಲುಗಾರ ಕೂಡ. ಈ ಸದನದಲ್ಲಿ ಯಾರೂ ನಿಯಮಗಳಿಗೆ ಅತೀತರಲ್ಲ ಎಂಬ ನಿಮ್ಮ ಸುಸ್ಪಷ್ಟ ಹೇಳಿಕೆ, ಪ್ರಜಾಸತ್ತೆಯ ಮೂಲಭೂತ ಸ್ಫೂರ್ತಿಯನ್ನು ಮರುದೃಢೀಕರಿಸಿದ ಸಂದೇಶವನ್ನು ಸಾರಿದೆ ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಭಿನ್ನಾಭಿಪ್ರಾಯ, ಅಗೌರವ ಬೇರೆ ಬೇರೆ: ಪ್ರಜಾಸತ್ತೆಯಲ್ಲಿ ಭಿನ್ನಾಭಿಪ್ರಾಯಗಳು ಸಹಜ. ವೈವಿಧ್ಯಮಯ ಚಿಂತನೆಗಳು ಪ್ರಜಾಸತ್ತೆಗೆ ಹೊಸ ಚೈತನ್ಯ ನೀಡುವುದು. ಭಿನ್ನಾಭಿಪ್ರಾಯಕ್ಕೂ, ಅಗೌರವಕ್ಕೂ ತುಂಬು ವ್ಯತ್ಯಾಸವಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಂಸದೀಯ ವ್ಯವಸ್ಥೆಗೇ ಅಗೌರವವಾಗಿ ಮಾರ್ಪಾಡಾಗುವುದು, ಪ್ರಜಾಸತ್ತೆಯಲ್ಲಿ ತುಂಬು ಶ್ರದ್ಧೆ ಹೊಂದಿರುವವರ ಪಾಲಿಗೆ ಕಳವಳಕಾರಿಯಾಗುವುದು ಸಹಜ. ಇಂತಹ ಕ್ಷಣಗಳು ಸಭಾಪತಿ ಪೀಠದಲ್ಲಿರುವವರ ಪಾಲಿಗೆ ಸತ್ವಪರೀಕ್ಷೆಯನ್ನೊಡುತ್ತವೆ. ಅತ್ಯಂತ ಸಂಯಮ, ಶಾಂತತೆ ಹಾಗೂ ನಿಷ್ಪಕ್ಷಪಾತಿಯಾಗಿ ಈ ಸನ್ನಿವೇಶಗಳ ತಾವು ನಿಭಾಯಿಸಿದ ರೀತಿ ಅತ್ಯಂತ ಪ್ರಶಂಸಾರ್ಹ. ತಮ್ಮ ವಿರುದ್ಧ ವೈಯಕ್ತಿಕ ಹಿತಾಸಕ್ತಿ ಮತ್ತು ದುರಹಂಕಾರದಿಂದ ಅವಿಶ್ವಾಸ ನಿರ್ಣಯ ಮಂಡಿಸಲಾಗಿದೆ ಎಂಬುದು ಪ್ರಜಾತಾಂತ್ರಿಕ ಸಿದ್ಧಾಂತಗಳನ್ನು ಗೌರವಿಸುವ ಈ ದೇಶದ ಪ್ರತಿ ಪ್ರಜೆಗೂ ಸ್ಪಷ್ಟ ವೇದ್ಯವಾಗಿದೆ ಮತ್ತು ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಬ್ಬರಿಗೂ ಈ ವಿದ್ಯಮಾನಗಳಿಂದ ತೀರಾ ನೋವಾಗಿದೆ ಎಂದು ಪ್ರಧಾನಿ ಮೋದಿ ಪತ್ರದಲ್ಲಿ ತಿಳಿಸಿದ್ದಾರೆ.

ಸಂಸದರ ಅಸಭ್ಯ ಭಾಷೆ ಬಗ್ಗೆ ಸ್ಪೀಕರ್ ಆತಂಕ

ಪುಟ ೧➡ ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಸಂಸದರು ಸದನದೊಳಗೆ ಹಾಗೂ ಸಂಸತ್ ಆವರಣದಲ್ಲಿ ತೋರಿಸುತ್ತಿರುವ ವರ್ತನೆಯಿಂದ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಬ್ಯಾನರ್, ಪ್ಲೆಕಾರ್ಡ್, ಪೋಸ್ಟರ್‌ಗಳನ್ನು ಪ್ರದರ್ಶಿಸುವುದು, ಅಸಭ್ಯ ಭಾಷೆ ಬಳಸುವುದು ಹಾಗೂ ತೋರಿಸುವ ವರ್ತನೆ ಎಲ್ಲರಿಗೂ ಚಿಂತೆಯ ವಿಷಯವಾಗಿದೆ ಎಂದು ಅವರು ಹೇಳಿದ್ದಾರೆ. ಸಂಸತ್ತು ದೇಶದ 140 ಕೋಟಿ ಜನರ ಆಶೆಗಳು ಮತ್ತು ಕನಸುಗಳನ್ನು ಪ್ರತಿನಿಧಿಸುವ ಪರಮ ಪ್ರಜಾಪ್ರಭುತ್ವ ಸಂಸ್ಥೆಯಾಗಿದ್ದು, ಇಲ್ಲಿ ವ್ಯಕ್ತವಾಗುವ ಪ್ರತಿ ಧ್ವನಿಯೂ ಜನರ ನಿರೀಕ್ಷೆಗಳನ್ನು ಪ್ರತಿಬಿಂಬಿಸುತ್ತದೆ ಎಂದು ಬಿರ್ಲಾ ಹೇಳಿದ್ದಾರೆ. ಆದ್ದರಿಂದ ಎಲ್ಲ ಪಕ್ಷಗಳ ನಾಯಕರು ತಮ್ಮ ಸದಸ್ಯರಲ್ಲಿ ಶಿಸ್ತು ಮತ್ತು ನೈತಿಕತೆ ಕಾಪಾಡುವಂತೆ ವಿಶೇಷ ಗಮನ ಕೊಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಅಪಘಾತದಲ್ಲಿ ಮೂವರು ಪಿಎಸ್‌ಐ ಸಾವು

ಪುಟ ೧➡ ಒಟ್ಟು ಐವರು ಪೊಲೀಸ್ ಅಧಿಕಾರಿಗಳು ಬೆಂಗಳೂರಿನಿಂದ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಬೆಳಗ್ಗೆ 7 ಗಂಟೆ ಸುಮಾರಿಗೆ ಹೆಗ್ಗೆರೆ ಸಮೀಪದ ಪ್ರಕಾಶ್ ಸ್ಪಾಂಜ್ ಐರನ್ ಕಂಪನಿ ಬಳಿ ಬರುತ್ತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಡಿಕ್ಕಿಯ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅಪಘಾತದ ಪರಿಣಾಮ ಎಷ್ಟು ತೀವ್ರವಾಗಿತ್ತೆಂದರೆ ಕಾರು ಸುಮಾರು 300 ಮೀಟರಗಳಷ್ಟು ಮುಂದಕ್ಕೆ ಎಳೆದೊಯ್ಯಲ್ಪಟ್ಟಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತ ಸಿಬ್ಬಂದಿಗೆ ಐಜಿ ಸಲೀಂ ಸಂತಾಪ

ಬೆಂಗಳೂರು: ಚಿತ್ರದುರ್ಗದ ಚಳ್ಳಕೆರೆ ತಾಲೂಕಿನ ಹೆಗ್ಗೆರೆ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಸ್ಥಳದಲ್ಲಿ ಸಾವನ್ನಪ್ಪಿದ್ದ ಮೂವರು ರಿಸರ್ವ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಸಂತಾಪ ಸೂಚಿಸಿದ್ದಾರೆ. ಮಂಜುನಾಥ್ ದಾರಿಮಣಿ, ಅಮರೇಶ್ ಬಿ. ಮತ್ತು ಸಚಿನ್ ವಿ. ರಿಸರ್ವ್ ಪೊಲೀಸ್ ಇಲಾಖೆಯಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದರು.

ಮರಕ್ಕೆ ಬಸ್ ಡಿಕ್ಕಿ: 11 ಜನರಿಗೆ ಗಂಭೀರ ಗಾಯ

ಬೆಳಗಾವಿ: ಖಾನಾಪುರ ತಾಲೂಕಿನ ನಂದಗಡದ ಸರ್ಕಾರಿ ಆಸ್ಪತ್ರೆ ಬಳಿ ಎದುರುಗಡೆ ಕಾರೊಂದು ವೇಗವಾಗಿ ಬಂದಾಗ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಹನ್ನೊಂದು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಗಾಯಾಳುಗಳನ್ನು ತಕ್ಷಣವೇ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್‌ನಲ್ಲಿ ತೆರಳುತ್ತಿದ್ದ ಪ್ರಯಾಣಿಕರು, ನಂದಗಡದ ಸರ್ಕಾರಿ ಆಸ್ಪತ್ರೆ ಎದುರುಗಡೆ ಬರುತ್ತಿದ್ದಾಗ, ಏಕಾಏಕಿ ರಸ್ತೆಗೆ ಅಡ್ಡ ಬಂದ ಕಾರನ್ನು ತಪ್ಪಿಸಲು ಯತ್ನಿಸಿದ ಬಸ್ ಚಾಲಕನ ನಿಯಂತ್ರಣ ತಪ್ಪಿ, ಬಸ್ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದಿರುವುದರಿಂದ ಬಸ್‌ನಲ್ಲಿದ್ದ ಪ್ರಯಾಣಿಕರಿಗೆ ಗಾಯಗಳಾಗಿವೆ. ಅಪಘಾತದಲ್ಲಿ ಗಾಯಗೊಂಡವರು, ಜ್ಯೋತಿ ತಹಶೀಲ್ದಾರ(20), ಶ್ರೇಯಸ್ ಮಾದಾರ(17), ಮೆಹಬೂಬಿ ಸನದಿ(60), ಅಣ್ಣಪೂರ್ಣ ಹುಡೇದಾರ್(36), ಸುನೀತಾ ಕಡಬಿ(27), ಮಂಜುಳಾ ಹುಡೇದಾರ್(28), ಪವಿತ್ರಾ ಹುಡೇದಾರ್(28), ಶಿವಾನಿ ಅಂಬೇವಾಡ್ಕರ್(37) ಮತ್ತು ಶೀಲಾ ಮಿಟಗಾರ (35) ಎಂದು ಗುರುತಿಸಲಾಗಿದೆ.

ಹರ್ಯಾಣ ಸಮಾಲ್ಖಾದ ಮಾಧವ ಸೃಷ್ಟಿ ಆವರಣದಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನ

ರಾಷ್ಟ್ರೀಯ ಚಿಂತನೆಯ ವಿಸ್ತರಣೆಗೆ ವೇಗ



◆ **ಸಮಾಲ್ಖಾ (ಹರ್ಯಾಣ):** ಕಳೆದ ವರ್ಷದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಸಂಘ)(ಆರ್‌ಎಸ್‌ಎಸ್)ದ ಕೆಲಸ ಗಮನಾರ್ಹವಾಗಿ ವಿಸ್ತರಿಸಿದೆ. ಸಂಘದ ವಿಸ್ತರಣೆ ಎಂದರೆ ರಾಷ್ಟ್ರೀಯ ಚಿಂತನೆಯ ವಿಸ್ತರಣೆ ಎಂದು ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಹರಿಯಾಣದ ಸಮಾಲ್ಖಾದಲ್ಲಿರುವ ಮಾಧವ ಸೃಷ್ಟಿ ಆವರಣದಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ಆರ್‌ಎಸ್‌ಎಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಸಂಪನ್ನಗೊಂಡಿತು. ಅಂತಿಮ ದಿನವಾದ ಭಾನುವಾರ ಹೊಸಬಾಳೆ ಅವರು ಸುದ್ದಿಗೋಷ್ಠಿ ನಡೆಸಿದರು.

ಹರಿಯಾಣದ ಸಮಾಲ್ಖಾದ ಈ ಪರಿಸರದಲ್ಲಿ ಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭಾ ಎರಡನೇ ಬಾರಿಗೆ ನಡೆಯುತ್ತಿದೆ. ದೇಶದಾದ್ಯಂತ 46 ಪ್ರಾಂತಗಳಿಂದ ಒಟ್ಟು 1487 ಅಪೇಕ್ಷಿತರಿದ್ದರು. ಸಂಘದ ಕಾರ್ಯವಿಸ್ತಾರ ಮತ್ತು ಈ ವರ್ಷ ವಿಶೇಷವಾಗಿ ಸಂಘದ ಶತಾಬ್ದಿಯ ನಿಮಿತ್ತ ನಡೆದ ಕಾರ್ಯಕ್ರಮಗಳ ಕುರಿತು ವಿಚಾರ ವಿನಿಮಯ ನಡೆಯಿತು. ಸಂಘಟನಾತ್ಮವಾಗಿ ಎರಡು ವಿಷಯಗಳು ಮತ್ತು ಸಮಾಜದ ಕುರಿತಾದ 3 ವಿಷಯಗಳನ್ನು ಇಲ್ಲಿ ಚರ್ಚಿಸಲಾಯಿತು ಎಂದರು.

ಈಗ ಪ್ರಸ್ತುತ ದೇಶದಲ್ಲಿ 88,949 ಶಾಖೆಗಳಿವೆ. ಸಂಘದ ಶಾಖೆ ಎಲ್ಲಿರುವುದೋ ಅಲ್ಲಿಗೆ ಬರುವ ಸ್ವಯಂಸೇವಕ ದೇಶವನ್ನು ಏಕಾತ್ಮ ದೃಷ್ಟಿಯಿಂದ ನೋಡುತ್ತಾನೆ. ಜಾತಿ ಸಮುದಾಯಗಳ ಕುರಿತು ಮಾತ್ರ ಯೋಚಿಸದೇ ಸಂಪೂರ್ಣ ಸಮಾಜದ ಕುರಿತು ಯೋಚಿಸುವುದು ಅವನ ದೃಷ್ಟಿಯಾಗುತ್ತದೆ. ಸಮಾಜಕ್ಕೆ ನಾನು ಏನಾದರೂ ನೀಡಬೇಕೆಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಹಾಗಾಗಿ, ಸಂಘಟನಾತ್ಮಕವಾಗಿ ಒಂದೊಂದು ಶಾಖೆ ಹೆಚ್ಚಾದರೂ ಕೇವಲ ಸಂಘದ ಶಾಖೆಯ ಸಂಖ್ಯೆ ಹೆಚ್ಚಾದಂತಲ್ಲ; ಬದಲಾಗಿ ದೇಶದ ಕುರಿತು ಯೋಚಿಸುವವರ ಸಂಖ್ಯೆ ಹೆಚ್ಚಾಗಿದೆ ಎಂದರ್ಥ. ಕೇವಲ ಕಾರ್ಯದ ವಿಸ್ತಾರವಾದರೆ ಸಾಲದು, ಬದಲಾಗಿ ಕಾರ್ಯಕರ್ತರ ಗುಣಾತ್ಮಕ ವಿಕಾಸವೂ ಆಗಬೇಕೆಂಬುದು ನಮ್ಮ ಗುರಿ. ವಸತಿಗಳಲ್ಲಿ ಇಂತಹ ಕಾರ್ಯಕರ್ತರ ನಿರ್ಮಾಣವಾಗಬೇಕು ಎನ್ನುವುದು ಕಳೆದ 100 ವರ್ಷಗಳ ನಮ್ಮ ಪ್ರಯತ್ನವಾಗಿದೆ ಎಂದು ವಿವರಿಸಿದರು.

ಸಮಾಜದಲ್ಲಿ ಆಗಬೇಕಿದೆ ಬದಲಾವಣೆ

ಸಮಾಜದ ದೃಷ್ಟಿಯಿಂದ ಸಮಾಜದ ಎದುರು ಪಂಚಪರಿವರ್ತನೆ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ)ಯನ್ನು ಇಟ್ಟಿದ್ದೆವು. ಭಾರತದ ಇತಿಹಾಸ, ಸಂಸ್ಕೃತಿ, ಜನಜೀವನ, ಜ್ಞಾನ ಪರಂಪರೆಯ ಕುರಿತು ಸರಿಯಾದ ವಿಮರ್ಶೆ (ಕಥನ) ದೇಶ ಮತ್ತು ಜಗತ್ತಿನಲ್ಲಿ ಆಗಬೇಕು. ಈ ದೃಷ್ಟಿಯಿಂದ ದೇಶದ ಯೋಚನೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಪಠ್ಯಪುಸ್ತಕಗಳಲ್ಲಿ, ಅಂಕಣಗಳು ಮತ್ತು ಮಾಧ್ಯಮಗಳಲ್ಲಿ ಸರಿಯಾದ ವಿಚಾರ ಬರಬೇಕು. ನಮ್ಮ ದೇಶದಲ್ಲಿ ಆಂಗ್ಲರ ಆಡಳಿತದ ಸಂದರ್ಭದಲ್ಲಿ ಮತ್ತು ಅದರ ನಂತರವೂ ಕೆಲವು ಸಮಯ ನಮ್ಮ ಮಾನಸಿಕತೆ, ವಸಾಹತೀಕರಣಕ್ಕೆ ಒಳಗಾಯಿತು. ಹಾಗಾಗಿ, ಮಾನಸಿಕತೆಯ ನಿರ್ವಸಾಹತೀಕರಣ ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ದೇಶಕ್ಕಾಗಿ ಸಜ್ಜನಶಕ್ತಿ ಒಂದಾಗಬೇಕು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಮಾತ್ರ ದೇಶಭಕ್ತರು ಎಂದು ನಾವು ಎಂದೂ ಹೇಳುವುದಿಲ್ಲ. ದೇಶದಲ್ಲಿ, ಸಮಾಜದಲ್ಲಿ ದೇಶ ಮತ್ತು ಸಮಾಜಕ್ಕಾಗಿ ಕಾರ್ಯ ಮಾಡುವುದಕ್ಕಾಗಿ ತಮ್ಮ ಸಮಯ, ಬುದ್ಧಿ, ಧನ, ಪ್ರತಿಭೆಯನ್ನು ಉಪಯೋಗಿಸಿ ಒಟ್ಟಿಗೆ ಕೆಲಸ ಮಾಡಲು ಬಯಸುವವರು ಬಹಳಷ್ಟು ಜನರಿದ್ದಾರೆ. ಅಂತಹ ಸಜ್ಜನಶಕ್ತಿಯ ಸಹಯೋಗದೊಂದಿಗೆ ದೇಶದ ಸರಿಯಾದ ಕಥನವನ್ನು ಪ್ರಸ್ತುತಪಡಿಸಲು, ಪಂಚಪರಿವರ್ತನೆಯನ್ನು ಅನುಷ್ಠಾನಗೊಳಿಸಲು, ದೇಶದ ದೃಷ್ಟಿಯಿಂದ ಸಜ್ಜನಶಕ್ತಿ ಒಂದಾಗಬೇಕಿದೆ. ಈ ದೃಷ್ಟಿಯಿಂದ ಶತಾಬ್ದಿ ವರ್ಷದಲ್ಲಿ ಪ್ರಮುಖ ನಾಗರಿಕ ಗೋಷ್ಠಿ, ಹಿಂದು ಸಮ್ಮೇಳನದಂತಹ ಕಾರ್ಯಕ್ರಮದಲ್ಲಿ ಗ್ರಾಮ ಮತ್ತು ನಗರ ಮಟ್ಟದಲ್ಲಿ ಎಲ್ಲರೂ ಜೊತೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಅನೇಕ ಮಂದಿ ಸಾಧು ಸಂತರು ತಮ್ಮ ಬೆಂಬಲವನ್ನು ಈ ಕಾರ್ಯಕ್ಕೆ ಸೂಚಿಸಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಸಂಘದ ಪದಾಧಿಕಾರಿಗಳು, ಮಾತೃಶಕ್ತಿಯೂ ಈ ಕಾರ್ಯಕ್ರಮಗಳಲ್ಲಿ ಮಾರ್ಗದರ್ಶನ ಮಾಡಿದ್ದಾರೆ ಎಂದರು. ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಸುದ್ದಿಗೋಷ್ಠಿಯಲ್ಲಿದ್ದರು.

75 ಶಿಕ್ಷಾ ವರ್ಗಗಳು

ಮುಂಬರುವ ವರ್ಷಕ್ಕೆ ಸಂಘದ ನಿಯಮಿತ ಶಿಕ್ಷಾ ವರ್ಗಗಳ ಬಗ್ಗೆ ಮಾಹಿತಿ ನೀಡಲಾಯಿತು. ಮುಂಬರುವ ದಿನಗಳಲ್ಲಿ 63 ಕಡೆಗಳಲ್ಲಿ ಸಂಘ ಶಿಕ್ಷಾ ವರ್ಗಗಳು ನಡೆಯಲಿವೆ. ಕ್ಷೇತ್ರೀಯ ಮಟ್ಟದಲ್ಲಿ 11 ಕಡೆಗಳಲ್ಲಿ ಕಾರ್ಯಕರ್ತರ ವಿಕಾಸ ವರ್ಗ-1 ಮತ್ತು ನಾಗ್ಪುರದಲ್ಲಿ ಕಾರ್ಯಕರ್ತರ ವಿಕಾಸ ವರ್ಗ-2 ವರ್ಗ ನಡೆಯಲಿದೆ. ಕೆಲವು ವರ್ಗಗಳು 15 ದಿನಗಳದ್ದಾದರೆ, ಇನ್ನೂ ಕೆಲವು 21 ದಿನಗಳದ್ದಾಗಿವೆ. ಇವು ಏಪ್ರಿಲ್‌ನಿಂದ ಜೂನ್‌ವರೆಗೆ ಜರುಗಲಿವೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

> ಭಾರತೀಯತೆ ಎಂದರೇನು? ಹಿಂದುತ್ವ ಎಂದರೇನು? ಅದು ಕೇವಲ ಸಿದ್ಧಾಂತ ಅಥವಾ ಆಧ್ಯಾತ್ಮಿಕ ವಿಚಾರವಲ್ಲ, ಅದು ಜೀವನ ಶೈಲಿಯಾಗಿದೆ ಎಂದು ವಿವೇಕಾನಂದರು, ದಯಾನಂದ ಸರಸ್ವತಿ ಸೇರಿದಂತೆ ಅನೇಕರು ತಿಳಿಸಿದ್ದಾರೆ. ನಾವು ಅವರನ್ನು ಸ್ಮರಿಸುತ್ತೇವೆ. ಭಾರತೀಯ ಕಥನ ವಿಶ್ವಕ್ಕೆ ಅವಶ್ಯವಾದ ಒಂದು ಚಿಂತನೆ ಎಂಬುದನ್ನು ತಿಳಿಸಬೇಕಿದೆ.
>
> ■ **ದತ್ತಾತ್ರೇಯ ಹೊಸಬಾಳೆ,**
> ಆರ್‌ಎಸ್‌ಎಸ್
> ಸರಕಾರ್ಯವಾಹ



ಮುಂದುವರಿಯುತ್ತದೆ ಶತಾಬ್ದಿ ವರ್ಷ ಕಾರ್ಯಕ್ರಮ

ಶತಾಬ್ದಿ ವರ್ಷ 2026ರ ವಿಜಯದಶಮಿಯವರೆಗೆ ಮುಂದುವರಿಯುತ್ತದೆ. ಇನ್ನೂ ಅನೇಕ ಪ್ರಾಂತಗಳಲ್ಲಿ ಯುವಕರ ಕಾರ್ಯಕ್ರಮ ನಡೆಯಬೇಕಿದೆ. ಆದ್ದರಿಂದ ಯುವಕರ ಕೇಂದ್ರಿತವಾದ ಕಾರ್ಯಕ್ರಮಗಳು, ಪ್ರಾಂತಗಳ ಸಂವಾದ, ಯುವ ಪ್ರತಿಭೆಗಳ ಗುರುತಿಸುವಿಕೆ, ವಿವಿಧ ಚಟುವಟಿಕೆಗಳು, ಪಂಚಪರಿವರ್ತನೆಯ ವಿಷಯಗಳನ್ನು ಪ್ರಯೋಗಿಸಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸಂಘಟನಾತ್ಮಕ ದೃಷ್ಟಿಯಿಂದಲೂ ಯುವಕರನ್ನು ಒಗ್ಗೂಡಿಸುವಂತಹ ಪ್ರಯತ್ನಗಳು ನಡೆದಿವೆ ಎಂದು ಹೊಸಬಾಳೆ ಹೇಳಿದರು.

ಪರಿಸರಸ್ನೇಹಿ ಮನೆಗೆ ಒತ್ತು

ಸಂಘದ ದೃಷ್ಟಿಯಿಂದ ಸ್ವಯಂಸೇವಕರು ಗೋಸೇವಾ, ಗ್ರಾಮವಿಕಾಸದಂತಹ ಕಾರ್ಯಗಳನ್ನು ಮಾಡುತ್ತಿದ್ದಾರೆ. ಗ್ರಾಮಗಳಲ್ಲಿ ಗೋಸೇವಾ ಕಾರ್ಯ ಮಾಡಬಹುದು. ಆದರೆ, ನಗರಗಳಲ್ಲಿ ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ - ಪರಿಸರಸ್ನೇಹಿ ಮನೆ ನಿರ್ಮಿಸುವುದು. ನಗರಗಳಲ್ಲಿ ವಾಸವಿರುವವರು ತಮ್ಮ ಮನೆಗಳ ತಾರಸಿಯಲ್ಲಿ ಚಿಕ್ಕ ತೋಟ ಮಾಡಿ ಅದಕ್ಕೆ ಗೋ ಮೂತ್ರ, ಸಗಣಿ ಉಪಯೋಗಿಸಿ ಗೋಸೇವಾ ಕಾರ್ಯಕ್ಕೆ ಕೈ ಜೋಡಿಸಬಹುದು. ಅದೇ ರೀತಿ, ನಾಗರಿಕರು ಪರಿಸರಸ್ನೇಹಿ ಮನೆಗಳನ್ನು ನಿರ್ಮಿಸಲು ಪ್ರತಿಜ್ಞೆ ಮಾಡಬಹುದು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬಹುದು, ನೀರನ್ನು ಸಂರಕ್ಷಿಸಬಹುದಾಗಿದೆ. ದೇಶಾದ್ಯಂತ ಅನೇಕರು ಇದನ್ನು ಅನುಸರಿಸುತ್ತಿದ್ದಾರೆ.

- ಅಂಡಮಾನ್‌ನ ಒಂಬತ್ತು ಪ್ರಮುಖ ದ್ವೀಪಗಳಿಂದ 13,000ಕ್ಕೂ ಹೆಚ್ಚು ಜನರು ಸರಸಂಘಚಾಲಕರ ಸಮ್ಮುಖದಲ್ಲಿ ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಹಿಂದು ಸಮಾವೇಶದಲ್ಲಿ ಭಾಗಿ
- ಅರುಣಾಚಲ ಪ್ರದೇಶದಂತಹ ಕಡಿಮೆ ಜನಸಂಖ್ಯಾ ಸಾಂದ್ರತೆ ಹೊಂದಿರುವ ರಾಜ್ಯದಲ್ಲಿ 37,000ಕ್ಕೂ ಹೆಚ್ಚು ಜನರು 21 ಸ್ವಧರ್ಮ ಸಮಾವೇಶಗಳಲ್ಲಿ ಭಾಗಿ
- ತೇಗಬಹದ್ದೂರ್ ಅವರ 350ನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ದೇಶಾದ್ಯಂತ 2,134 ಕಾರ್ಯಕ್ರಮಗಳ ಆಯೋಜನೆ, 7 ಲಕ್ಷ ಜನರು ಭಾಗಿ
- ವಂದೇ ಮಾತರಂನ 150ನೇ ವರ್ಷದ ಕಾರ್ಯಕ್ರಮಗಳು ದೇಶಾದ್ಯಂತ ಉತ್ಸಾಹದಿಂದ ಜರುಗಿದವು
- ಈ ವರ್ಷ ಸಂತ ಶಿರೋಮಣಿ ರವಿದಾಸ ಅವರ 650ನೇ ಜಯಂತಿಯನ್ನು ಸ್ಮರಿಸಲು ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ

ಕಿರುಸುದ್ದಿ

ಲಕ್ಷಾಂತರ ಹಣ ಲೂಟಿ ಮಾಡಿದವರ ಬಂಧನ

◆ **ಚಿತ್ರದುರ್ಗ:** ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಹೆಸರನ್ನು ಬಳಸಿಕೊಂಡು ನಗರಾಭಿವೃದ್ಧಿ ಕೋಶದ ಸಿಬ್ಬಂದಿ ಲಕ್ಷ ಲಕ್ಷ ಹಣ ದೋಚಿರುವ ಘಟನೆ ಚಿತ್ರದುರ್ಗದಲ್ಲಿ ಬೆಳಕಿಗೆ ಬಂದಿದೆ. ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಅವರ ಡಿಜಿಟಲ್ ಸಹಿಯನ್ನು ಬಳಸಿಕೊಂಡು ನಕಲಿ ದಾಖಲೆ ಸೃಷ್ಟಿಸಿ ಹಣ ದೋಚಲಾಗಿದೆ. ಈ ಸಂಬಂಧ ಚಿತ್ರದುರ್ಗ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶದ ಸಿಟಿ ಲೆವೆಲ್ ಟೆಕ್ನಿಕಲ್ ಸೆಲ್ ಸಿಬ್ಬಂದಿಯ ವೇತನದ ಹೆಸರಿನಲ್ಲಿ ಸುಮಾರು 15 ಲಕ್ಷ ರೂಪಾಯಿ ಮೌಲ್ಯದ ನಕಲಿ ಬಿಲ್ ಸಲ್ಲಿಸಿರುವುದು ತಿಳಿದುಬಂದಿದೆ. ಖಜಾನೆ ಇಲಾಖೆಯು ಡಿಜಿಟಲ್ ಸಹಿ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆ ಈ ಅಕ್ರಮ ಬೆಳಕಿಗೆ ಬಂದಿದೆ. ನಗರಾಭಿವೃದ್ಧಿ ಕೋಶದ ನಿರ್ದೇಶಕಿ ರೇಷ್ಮಾ ಹಾನಗಲ್ ನೀಡಿದ ದೂರಿನ ಆಧಾರದ ಮೇಲೆ ಹೊರಗುತ್ತಿಗೆ ನೌಕರರಾದ ಸೈಯದ್ ಸಾದಿಕ್, ವಿನಯ್ ಶರ್ಮಾ, ವಿಜಯ್ ಕುಮಾರ್, ಬಸವರಾಜ್, ಮೆಹಬೂಬ್ ಭಾಷಾ ಹಾಗೂ ವಿಎಂಎಚ್ ಎಂಟರ್‌ಪ್ರೈಸಸ್‌ನ ವೆಂಕಟೇಶ್ ವಿರುದ್ಧ ಪ್ರಕರಣ ದಾಖಲಾಗಿದೆ. ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಪ್ರಮುಖ ಆರೋಪಿ ಸೈಯದ್ ಸಾದಿಕ್ ಪರಾರಿಯಾಗಿದ್ದಾನೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿ ಅವರ ಸಹಿ ಸರ್ಟಿಫಿಕೇಟ್ ಕೀ ಕಳವು ಮಾಡಿ ದುರುಪಯೋಗ ಪಡಿಸಿಕೊಂಡಿರುವ ಆರೋಪವೂ ಇವರ ಮೇಲಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ.

ಡಿಸಿ, ಎಡಿಸಿ ಅವರ ಡಿಜಿಟಲ್ ಸಹಿ ದುರ್ಬಳಕೆ

ಇಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಸ್ಥಳೀಯ ನಾಗರಿಕರು

ಶಾಸಕರಿಗೆ ₹5 ಕೋಟಿ ಆಮಿಷ

ಪೊಲೀಸರಿಂದ ವಿಚಾರಣೆ

ರೆಸಾರ್ಟ್‌ನಲ್ಲಿದ್ದ ಎಲ್ಲಾ ಶಾಸಕರನ್ನು ಬೆಂಗಳೂರಿನ ಖರ್ಗೆ ಮನೆಗೆ ಶಿಫ್ಟ್ ಮಾಡಲಾಗಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಪೊಲೀಸ್ ಎಸ್ಕಾರ್ಟ್ ಭದ್ರತೆಯಲ್ಲಿ ಬಸ್ ಮೂಲಕ 8 ಮಂದಿ ಶಾಸಕರು ಬೆಂಗಳೂರಿನ ಸದಾಶಿವನಗರದ ಖರ್ಗೆ ಮನೆಗೆ ಸ್ಥಳಾಂತರ ಮಾಡಲಾಗಿದೆ. ಇತ್ತ ರೆಸಾರ್ಟ್‌ಗೆ ಎಸ್‌ಪಿ ಶ್ರೀನಿವಾಸ್‌ಗೌಡ ಭೇಟಿ ನೀಡಿ ಪೊಲೀಸರ ವಶದಲ್ಲಿರುವ ಇಬ್ಬರು ವ್ಯಕ್ತಿಗಳನ್ನು ವಿಚಾರಣೆ ನಡೆಸಿದ್ದಾರೆ.



◆ **ರಾಮನಗರ:** ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಒಡಿಶಾ ಕೈ ಶಾಸಕರ ಖರೀದಿಗೆ ಬಂದಿದ್ದ ಇಬ್ಬರು ಒಡಿಶಾ ವ್ಯಕ್ತಿಗಳು ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ. ಶಾಸಕರಿಗೆ 5 ಕೋಟಿ ರೂ. ಆಫರ್ ನೀಡಿದ್ದ ವ್ಯಕ್ತಿಗಳನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಹಿನ್ನೆಲೆಯಲ್ಲಿ ಮಾ.12ರಂದು ಒಡಿಶಾದಿಂದ ರಾಮನಗರದ ಬಿಡದಿ ವಂಡರ್ ಲಾ ರೆಸಾರ್ಟ್‌ಗೆ ಬಂದು ವಾಸ್ತವ್ಯ ಹೂಡಿದ್ದ ಕಾಂಗ್ರೆಸ್ ಶಾಸಕರಿಗೆ ಆಪರೇಷನ್ ಯತ್ನ ನಡೆದಿದೆ. ಭಾನುವಾರ ಬೆಳಗ್ಗೆ ಒಡಿಶಾದಿಂದ ಮೂವರು ವ್ಯಕ್ತಿಗಳು, ಸ್ಥಳೀಯ ಓರ್ವ ವ್ಯಕ್ತಿ ಜೊತೆ ಸೇರಿ ಶಾಸಕರ ಖರೀದಿಗೆ ಮುಂದಾಗಿದ್ದು, ಈ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರ ಕೈಗೆ ಸಿಕ್ಕಿಬಿದ್ದಿದ್ದಾರೆ.

ಬಿರೇಂದ್ರ ಪ್ರಸಾದ್, ಅಜಿತ್ ಕುಮಾರ್ ಸಾಹು ಎಂಬುವವರು ಸಿಕ್ಕಿಬಿದ್ದಿದ್ದು, ಸ್ಥಳಕ್ಕೆ ಬಿಡದಿ ಪೊಲೀಸರು ಆಗಮಿಸಿ, ಒಡಿಶಾ ವ್ಯಕ್ತಿಗಳ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಬಗ್ಗೆ ಒಡಿಶಾ ಕಾಂಗ್ರೆಸ್ ಎಂಪಿ ಸಪ್ತಗಿರಿ ಶಂಕರ್ ಉಲಾಖ ಮಾತನಾಡಿ, ನಾಲ್ವರು ವ್ಯಕ್ತಿಗಳು ರೆಸಾರ್ಟ್‌ಗೆ ಬಂದು ಶಾಸಕರ ಜತೆ ಮಾತನಾಡಲು ಯತ್ನಿಸಿದ್ದರು. ನಮ್ಮ ಶಾಸಕರಿಗೆ 5 ಕೋಟಿ ರೂ. ಹಣದ ಆಫರ್ ಮಾಡಿದ್ದಾರೆಂದು ದೂರಿದರು.

ದೂರು ದಾಖಲು

ಒಡಿಶಾ ಸಿಎಂ ಮೋಹನ್ ಚರಣ್ ಆಪ್ತ ಇಲ್ಲಿಗೆ ಬಂದು ಶಾಸಕರ ಖರೀದಿಗೆ ಯತ್ನಿಸಿದ್ದಾನೆ. ಆದರೆ ನಮ್ಮ ಯಾವ ಶಾಸಕರು ಆಮಿಷಕ್ಕೆ ಒಳಗಾಗಿಲ್ಲ. ಆಮಿಷ ತೋರಲು ಬಂದ ವ್ಯಕ್ತಿಗಳನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಿಡಿದು ಪೊಲೀಸರಿಗೆ ಕೊಟ್ಟಿದ್ದಾರೆ. ಅವರ ವಿರುದ್ಧ ನಾವು ಕೂಡಾ ಪೊಲೀಸರಿಗೆ ದೂರು ನೀಡಿದ್ದೇವೆ ಎಂದರು.



ಶಾಸಕರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ: ಡಿ.ಕೆ.ಶಿವಕುಮಾರ್

◆ **ಬೆಂಗಳೂರು:** ಬಿಡದಿಯಲ್ಲಿ ವಾಸ್ತವ್ಯ ಹೂಡಿರುವ ಒಡಿಶಾದ ನಮ್ಮ ಪಕ್ಷದ ನಾಲ್ವರು ಶಾಸಕರನ್ನು ಭೇಟಿ ಮಾಡಿ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡಮತ ದಾನಕ್ಕೆ ತಲಾ 5 ಕೋಟಿ ರೂ. ಹಣದ ಆಮಿಷ ಒಡ್ಡಿದ್ದಾರೆ. ಆದರೆ ನಮ್ಮ ಶಾಸಕ ರು ಕುದುರೆ ವ್ಯಾಪಾರಕ್ಕೆ ಸಿದ್ಧರಿಲ್ಲ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಮಿಷ ಒಡ್ಡಿದ ನಾಲ್ವರ ಪೈಕಿ ಇಬ್ಬರು ತಪ್ಪಿಸಿಕೊಂಡಿದ್ದು ಮತ್ತಿಬ್ಬರನ್ನು ಹಿಡಿಯ ಲಾಗಿದೆ. ಅವರು ಇದೇ ಕೆಲಸಕ್ಕೆ ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಆಮಿಷ ಒಡ್ಡಿದವರು ಖಾಲಿ ಚೆಕ್ ತಂದಿದ್ದಾರೆ. ಆ ಮೂಲಕ ಆಪರೇಷನ್ ಕಮಲ ಮಾಡಲಾಗುತ್ತಿದೆ. ಒಡಿಶಾದಿಂದ ಬಂದಿರುವ ನಾಲ್ಕು ಜನರು ಸ್ಥಳೀಯ ಬ್ಯಾಟರಾಯನಪುರ ನಿವಾಸಿ ಸುರೇಶ್ ಎಂಬಾತನ ಸಹಾಯ ಪಡೆದು ರೂಮ್ ಬುಕ್ ಮಾಡಿಸಿದ್ದಾರೆ. ನಂತರ ನಮ್ಮ ಶಾಸಕರಿಗೆ ಆಮಿಷ ಒಡ್ಡಿದಾಗ ನಮ್ಮ ಪಕ್ಷದ ಶಾಸಕರು ಈ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ ಎಂದರು.

ಒಡಿಶಾಗೆ ಪ್ರಯಾಣ

ಮಲ್ಲಿಕಾರ್ಜುನ ಖರ್ಗೆ ಭೇಟಿ ಬಗ್ಗೆ ಉತ್ತರಿಸಿದ ಅವರು, ಪಕ್ಷದ ಶಾಸಕರು ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡದೆ ಬಿಜೆಪಿ ಅಧ್ಯಕ್ಷರನ್ನು ಭೇಟಿ ಮಾಡಲು ಆಗುತ್ತದೆಯೇ? ನಮ್ಮ ಪಕ್ಷದ ಶಾಸಕರು ತಮ್ಮ ಆಸೆಯಂತೆ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದು, ಅವರ ಆಶೀರ್ವಾದ ಪಡೆದಿದ್ದಾರೆ. ಅವರೊಂದಿಗೆ ಫೋಟೋ ತೆಗೆಸಿಕೊಂಡಿದ್ದು, ಸೋಮವಾರ ಬೆಳಗ್ಗೆ ಅವರು ಒಡಿಶಾಗೆ ಪ್ರಯಾಣ ಬೆಳೆಸಲಿದ್ದಾರೆ ಎಂದರು.

> ನಾವು ಇಂತಹ ಪರಿಸ್ಥಿತಿ ಎದುರಿಸುತ್ತಲೇ ಇರುತ್ತೇವೆ. ನಾನು ಸದಾ ಮಂದ ಹಾಸದಲ್ಲೇ ಇರುತ್ತೇನೆ. ನಾನು ನನ್ನ ಆತ್ಮಸಾಕ್ಷಿಯನ್ನು ನಂಬಿದ್ದೇನೆ, ಯಾವ ಟ್ರಬಲ್ಲೂ ಇಲ್ಲ.
>
> ■ **ಡಿ.ಕೆ.ಶಿವಕುಮಾರ್,**
> ಉಪಮುಖ್ಯಮಂತ್ರಿ

ಅನಿಲ ಪೂರೈಕೆಗೆ ಪರ್ಯಾಯ ಮಾರ್ಗಕ್ಕೆ ಕೇಂದ್ರಕ್ಕೆ ಪತ್ರ: ಮುಖ್ಯಮಂತ್ರಿ

◆ **ಬೆಂಗಳೂರು:** ಎಲ್‌ಪಿಜಿ ಸಿಲಿಂಡರ್ ಅಭಾವವನ್ನು ನೀಗಿಸಲು ಹೊರದೇಶದಿಂದ ಅನಿಲ ಪೂರೈಕೆಯಂತಹ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಬಗ್ಗೆ ಭಾನುವಾರ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಎಲ್‌ಪಿಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು. ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಬಗ್ಗೆ ವಿಧಾನಮಂಡಲ ಅಧಿವೇಶನದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ. ಆಹಾರಕ್ಕಾಗಿ ಹೋಟೆಲ್‌ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ತವಾಗುತ್ತದೆ ಎಂದು ಹೇಳಿದರು. ರಾಜ್ಯದಲ್ಲಿ ಮಾತ್ರ ಎಲ್‌ಪಿಜಿ ಪೂರೈಕೆ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರ ಟೀಕೆಗೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು, ಎಲ್‌ಪಿಜಿ ಸಿಲಿಂಡರ್ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕ: ಶಾಸಕ

ರಾಷ್ಟ್ರಾದ್ಯಂತ ಅಭಿಯಾನ ಶ್ಲಾಘನೀಯ

◆ **ಬೆಂಗಳೂರು:** ಗೋವು ಸಂಸ್ಕೃತಿ ಭಾರತೀಯ ಸೇವಾ ಸಂಸ್ಕಾರದ ಪ್ರತೀಕವಾಗಿದ್ದು, ಈ ಸಂಸ್ಕೃತಿಯನ್ನು ಮುಂದುವರಿಸಲು ರಾಷ್ಟ್ರಾದ್ಯಂತ ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ ಎಂದು ಶಾಸಕ ಕೆ.ಗೋಪಾಲಯ್ಯ ಅಭಿಪ್ರಾಯಪಟ್ಟರು.

ಮಹಾಲಕ್ಷ್ಮಿಪುರದ ಸಾದರ ಸಮುದಾಯ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಭಾನುವಾರ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ನೇತೃತ್ವದಲ್ಲಿ ನಡೆದ ರಾಜ್ಯಮಟ್ಟದ ಗೋ-ಸಮ್ಮಾನ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ರಾಷ್ಟ್ರಾದ್ಯಂತಮಠಮಾನ್ಯಗಳಸ್ವಾಮೀಜಿಗಳನ್ನು ಒಂದೆಡೆ ಸೇರಿಸಿರುವುದು ಡಾ.ಆರೂಢಭಾರತಿ ಸ್ವಾಮೀಜಿ ಅವರ ಹೆಗ್ಗಳಿಕೆಯಾಗಿದೆ. ಗೋವುಗಳ ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಒಲವಿರುವ ಕುಟುಂಬಗಳು ಸಹ ಇಲ್ಲಿ ಸೇರಿರುವುದು ಸಂತಸವನ್ನು ಉಂಟುಮಾಡಿದೆ. ದೇಶಾದ್ಯಂತ ನಾಲ್ಕು ಹಂತಗಳಲ್ಲಿ ನಡೆಯುವ ಗೋಸಮ್ಮಾನ ಅಭಿಯಾನಕ್ಕೆ ಪೂರ್ವಭಾವಿಯಾಗಿ ಇಂದು



ರಾಜ್ಯಮಟ್ಟದ ಪ್ರಚಾರಕರ ಕಾರ್ಯಾಗಾರ ಏರ್ಪಡಿಸಲಾಗಿದೆ. ಇದರಲ್ಲಿ ರಾಜ್ಯ, ಹೊರರಾಜ್ಯದ ಅನೇಕ ಸಂತರು ರಾಜ್ಯದ ಪ್ರತಿ ತಾಲೂಕಿನ ಪ್ರಾತಿನಿಧಿಕ ಗೋ ಭಕ್ತರು, ಗೋ ಸಂರಕ್ಷಕರು ಭಾಗವಹಿಸಿರುವುದು ಸಂತಸ ತಂದಿದೆ ಎಂದರು.

ಗೋವು ರಾಷ್ಟ್ರಮಾತೆ ಎಂದು ಉದ್ಘೋಷಿಸಬೇಕು. ದೇಶಾದ್ಯಂತ ಒಂದೇ ಕಾನೂನಿನ ಅಡಿಯಲ್ಲಿ ಗೋ ಹತ್ಯೆ ನಿಷೇಧಿಸಬೇಕು. ಗೋಮಾಳವನ್ನು ಗೋವಿಗಾಗಿಯೇ ಉಳಿಸಬೇಕು ಎಂಬ ಮುಖ್ಯ ಬೇಡಿಕೆಗಳ ಕುರಿತು ಈ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯುತ್ತದೆ ಎಂದು ಮಾಹಿತಿ ನೀಡಿದರು.

ಈ ಅಭಿಯಾನದ ಮುಂದಿನ ಭಾಗವಾಗಿ ಮೊದಲ ಹಂತದಲ್ಲಿ ಏ.27 ರಂದು ದೇಶದ ಎಲ್ಲ 5,400 ತಹಸೀಲ್ದಾರರಿಗೆ ಈ ಕುರಿತು ಮನವಿ ಸಲ್ಲಿಸಲಾಗುವುದು. ಎರಡನೇ ಹಂತದಲ್ಲಿ ಜು.27ರಂದು ದೇಶದ ಎಲ್ಲ ಜಿಲ್ಲಾಧಿಕಾರಿಗಳಿಗೆ, ಮೂರನೇ ಹಂತದಲ್ಲಿ ಅ. 27ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಾಲ್ಕನೇ ಹಂತದಲ್ಲಿ 2027ರ ಫೆ. 27 ರಿಂದ ಅ.15 ರವರೆಗೆ ದಿಲ್ಲಿಯಲ್ಲಿ ಹೆಚ್ಚಿನ ಸಂಖ್ಯೆಯ ಸಂತರು ಹಾಗೂ ಗೋ ಭಕ್ತರು ಶಾಂತಿಯುತ ಧರಣಿ ನಡೆಸಲಿದ್ದಾರೆ. ಆಗಲೂ ಬೇಡಿಕೆ ಈಡೇರದಿದ್ದಲ್ಲಿ ಅಂತಿಮವಾಗಿ 2027ರ ಅ. 16ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಿದ್ಧಾರೂಢ ಮಠದ ಶ್ರೀ ಪ್ರಭುಲಿಂಗ ದೇವರು ಸ್ವಾಮೀಜಿ, ಮಾಜಿ ಶಾಸಕ ನೆ.ಲ.ನರೇಂದ್ರಬಾಬು ಸೇರಿದಂತೆ ಗೋ ಸಂರಕ್ಷಣಾ ಪ್ರತಿನಿಧಿಗಳು ಇದ್ದರು.

ಸರ್ಕಾರಕ್ಕೆ ಆರ್ಥಿಕ ಬಿಕ್ಕಟ್ಟು: ಅಶೋಕ

◆ **ಬೆಂಗಳೂರು:** ತುಘಲಕ್ ನೀತಿಗಳಿಂದಲೇ ದುರಾಡಳಿತಕ್ಕೆ ಹೆಸರಾಗಿ ರುವ ಕಾಂಗ್ರೆಸ್ ಸರ್ಕಾರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ. ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ದುಡ್ಡಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 51,000 ಅಥಿತಿ ಶಿಕ್ಷಕರು ಕಳೆದ 4 ತಿಂಗಳಿಂದ ಸಂಬಳ ವಿಲ್ಲದೆ ಪರದಾಡುತ್ತಿದ್ದಾರೆ. ಮಾರ್ಚ್ 15ರೊಳಗೆ ಸಂಬಳ ಪಾವತಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಲು ಹೊರಟಿದ್ದಾರೆ ಎಂದಿದ್ದಾರೆ. ಸ್ವ ಘೋಷಿತ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ದಿಕ್ಕೆಟ್ಟ ನೀತಿಗಳು ಸರ್ಕಾರಿ ನೌಕರರನ್ನು ಬೀದಿಗೆ ತಂದಿವೆ. ದಿವಾಳಿ ಸರ್ಕಾರ ತೊಲಗುವವರೆಗೂ ಕನ್ನಡಿಗರಿಗೆ ನೆಮ್ಮದಿ ಇಲ್ಲ ಎಂದು ಅಶೋಕ ದೂರಿದ್ದಾರೆ.

ನಾನು ಕೂಡ ಸಚಿವ ಸ್ಥಾನದ ಆಕಾಂಕ್ಷಿ: ಸಲೀಮ್ ಅಹ್ಮದ್

◆ **ವಿಜಯಪುರ:** ಮೇ, ಜೂನ್‌ನಲ್ಲಿ ಸಚಿವ ಸಂಪುಟ ವಿಸ್ತರಣೆಯಾಗಲಿದ್ದು, ನಾನು ಕೂಡ ಸಚಿವಸ್ಥಾನದ ಆಕಾಂಕ್ಷಿಯಾಗಿರುವೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಮ್ ಅಹ್ಮದ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ, ಜೂನನಲ್ಲಿ ಸಂಪುಟ ವಿಸ್ತರಣೆಯಗಲಿದ್ದು, ಶೇ.50ರಷ್ಟು ಹೊಸ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಚರ್ಚೆಯಾಗಿದೆ. ಹಾಲಿ ಇರುವ ಶೇ.50ರಷ್ಟು ಸಚಿವರು ತಮ್ಮ ಸ್ಥಾನವನ್ನು ತ್ಯಜಿಸಿದ ನಂತರ ಮುಂದಿನ ಚುನಾವಣೆಗೆ ಕೆಲಸ ಮಾಡ ಬೇಕು ಎನ್ನುವ ತೀರ್ಮಾನವಾಗಿದೆ ಎಂದರು. ಪಕ್ಷದಲ್ಲಿ ನಾಯಕತ್ವ ಗೊಂದಲ ಇಲ್ಲ, ತಾವು ಡಿ.ಕೆ.ಶಿವಕುಮಾರ ಹಾಲು, ಜೇನು ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದಾರೆ. ಹಾಗಾಗಿ ಯಾವುದೇ ಗೊಂದಲ ಬೇಡ ಎಂದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 2 ವರ್ಷ 9 ತಿಂಗಳು ಕಳೆದಿವೆ. ನಾವು ನುಡಿದಂತೆ ನಡೆದಿದ್ದೇವೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4 ಲಕ್ಷ ಕೋಟಿಗೂ ಅಧಿಕ ಮೊತ್ತದ ಬಜೆಟ್ ಮಂಡಿಸಿದ್ದು, ಎಲ್ಲ ಜನರನ್ನು, ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸಿದ್ದರಾಮಯ್ಯ ಅವರ 17ನೇ ಬಜೆಟ್ ಇದಾಗಿದ್ದು, ಜನಪ್ರಿಯ ಬಜೆಟ್ ಮೂಲಕ ಗ್ಯಾರಂಟಿ ಯೋಜನೆ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಕ್ರಮಗಳಿಗೂ ವೇಗ ನೀಡಿದ್ದಾರೆ ಎಂದರು. ಮೇನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹಾಗಾಗಿ ಆ ಚುನಾವಣೆಯಲ್ಲಿ ನಮ್ಮ ಸರ್ಕಾರದ ಜನಪರ ಯೋಜನೆಗಳು, ಸರ್ಕಾರದ ಸಾಧನೆಗಳು ನಮ್ಮ ಕೈ ಹಿಡಿಯಲಿವೆ ಎಂದರು. ಎಸ್ಸಿ, ಎಸ್ಟಿ ಹಣವನ್ನು ದುರ್ಬಳಕೆ ಮಾಡಿಲ್ಲ ಎಂದರು.

ಕಿರುಸುದ್ದಿ

ಪಟ್ಟಲದಮ್ಮನ ರಥೋತ್ಸವ



ಚಾಮರಾಜನಗರ: ತಾಲೂಕಿನ ಉಡಿಗಾಲದಲ್ಲಿ ಶ್ರೀ ಪಟ್ಟಲದಮ್ಮ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಗ್ರಾಮ ಮಾರಿಗುಡಿ ಮುಂಭಾಗದಲ್ಲಿ ಚಾಲನೆಗೊಂಡು ರಥ ಬೀದಿಯ ಮೂಲಕ ಪಟ್ಟಲದಮ್ಮ ದೇವಸ್ಥಾನದ ಪ್ರದಕ್ಷಿಣೆ ಹಾಕಿ ಸ್ವಸ್ಥಾನ ತಲುಪಿತು. ಇದಕ್ಕೂ ಮುನ್ನಾ ಉತ್ಸವಮೂರ್ತಿಯನ್ನು ಸತ್ತಿಗೆ,ಸೂರಿಪಾನಿ, ನಾನಾ ಜಾನಪದ ಕಲಾತಂಡಗಳೊಂದಿಗೆ ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಾಯಂಕಾಲ 5 ಗಂಟೆಗೆ ಉತ್ಸವ ಮೂರ್ತಿವನ್ನು ರಥಕ್ಕೆ ಕೂರಿಸಲಾಗುತ್ತದೆ. ಸಹಸ್ರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು. ಕೆಲ ಭಕ್ತರು ರಥೋತ್ಸವಕ್ಕೆ ವೀಳ್ಯದೆಲೆ, ಬಾಳೆಹಣ್ಣನ್ನು ರಥಕ್ಕೆ ಎಸೆದು ಭಕ್ತಭಾವ ಮೆರೆದರು. ಮುಂಜಾನೆ ಅದ್ದೂರಿ ಕೊಂಡೋತ್ಸವ ನಡೆಯಿತು. 7 ಗಂಟೆಯ ನಂತರ ಪಟ್ಟಲದಮ್ಮನ ವಿಗ್ರಹ ವನ್ನು ಕುದುರೆ ವಾಹನದಲ್ಲಿ ಕುರಿಸಿ ಉತ್ಸವ ನಡೆಸಲಾಯಿತು. ರಥೋತ್ಸವದಲ್ಲಿ ಭಕ್ತರು, ನಂಟರು, ಗ್ರಾಮದ ಎಲ್ಲ ಕೋಮಿನ ಯಜಮಾನರು, ಗ್ರಾಮಸ್ಥರ ಭಾಗವಹಿಸಿದ್ದರು.

ವಿದ್ಯುತ್ ಪ್ರವಹಿಸಿ ಯುವಕ ಸಾವು

ಮೈಸೂರು: ಹೊಸಮನೆಯ ಗೋಡೆಗೆ ಕ್ಯೂರಿಂಗ್ ಮಾಡುವ ವೇಳೆ ವಿದ್ಯುತ್ ಪ್ರವಹಿಸಿ ಯುವಕನೊಬ್ಬ ಮೃತಪಟ್ಟ ಘಟನೆ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಮುದ್ದಳ್ಳಿಯಲ್ಲಿ ನಡೆದಿದೆ. ಮುದ್ದಹಳ್ಳಿಯ ನಿವಾಸಿ ಚಿನ್ನು ಸಾವಿಗೀಡಾದ ಯುವಕ. ಈತ ಹೊಸದಾಗಿ ನಿರ್ಮಿಸುತ್ತಿರುವ ಮನೆಯ ಗೋಡೆಗೆ ನೀರು ಚಿಮುಕಿಸಲು (ಕ್ಯೂರಿಂಗ್) ಹೋಗಿದ್ದುಮ ಈ ವೇಳೆ ವಿದ್ಯುತ್ ವೈರ್ ನೆಲದಲ್ಲಿ ಬಿದ್ದಿತ್ತು. ಅದು ಗಮನಿಸದೆ ಚಿನ್ನು ನೀರು ಹರಿಸಿದ್ದಾನೆ. ಆ ನೀರು ವಿದ್ಯುತ್ ವೈರ್ ಬಿದ್ದಿದ್ದ ಜಾಗಕ್ಕೆ ಹರಿದಿದೆ. ಆ ಮೂಲಕ ವಿದ್ಯುತ್ ಪ್ರವಹಿಸಿ ಆತ ಸ್ಥಳದಲ್ಲೇ ಅಸುನೀಗಿದ್ದಾನೆ. ಪೊಲೀಸ್ ಠಾಣೆಗಾಗಲಿ ಅಥವಾ ವಿದ್ಯುತ್ ಇಲಾಖೆಗಾಗಲಿ ವಿಷಯ ತಿಳಿಸದೆ ತರಾತುರಿಯಲ್ಲಿ ಶವ ಸಂಸ್ಕಾರ ನಡೆಸಲಾಗಿದೆ. ಇದು ಗ್ರಾಮದ ಜನತೆಯ ಅನುಮಾನಕ್ಕೆ ಕಾರಣವಾಗಿದೆ.

ನೀರಾವರಿ ಯೋಜನೆಗಳಿಗೆ 350 ಕೋಟಿ ಪ್ರಸ್ತಾವನೆ

ಯಳಂದೂರು: ಕೊಳ್ಳೇಗಾಲ ಕ್ಷೇತ್ರಕ್ಕೆ ಒಳ ಪಡುವ ಸುವರ್ಣವತಿ ಹೊಳೆ ಹಾಗೂ ಕೆರೆಗಳ ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ 350 ಕೋಟಿ ರೂಗಳನ್ನು ಪ್ರಸ್ತಾವನೆ ಸಲ್ಲಿಸಿದ್ದೇನೆ ಎಂದು ಶಾಸಕ ಎ ಆರ್. ಕೃಷ್ಣಮೂರ್ತಿ ತಿಳಿಸಿದರು.

ಅವರು ತಾಲೂಕಿನ ಮದ್ದೂರು ಗ್ರಾಮದಲ್ಲಿ ಸುವರ್ಣವತಿ ನದಿಗೆ ಸೇತುವೆ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ ನಂತರ ಮಾತಾನಾಡಿ ಈಗಾಗಲೆ ಕಣ್ಣೇಗಾಲ ಪೀಕಪ್ ಮುಖಾಂತರ ಸುವರ್ಣವತಿ ನದಿ ವಿಸ್ತರಿಸಿ ಅಭಿವೃದ್ಧಿ ಪಡಿಸಲು 70 ಕೋಟಿ ಹಣ ಬಿಡುಗಡೆಹಾಗಿದ್ದು ಕಾಮಗಾರಿ ಪ್ರಾರಂಭವಾಗಿದೆ, ಕ್ಷೇತ್ರದಲ್ಲಿ ಪಥಮ ಹಂತದಲ್ಲಿ ಆರು ಕೆರೆಗಳಾದ ಯರಿಯೂರು, ಮದ್ದೂರು ಅಗರ, ಹೊನ್ನೂರು, ಕೆಸ್ತೂರು, ತೇರಂಬಳ್ಳಿ ಕರೆಗಳ ಅಭಿವೃದ್ಧಿ ಪಡಿಸಲಾಗುವದು ನಂತರ ದಿವಾನ್ ಪೂರ್ಣಯ್ಯನವರು ನಿರ್ಮಿಸಿದ ಉಳಿದ ಕೆರಗಳ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. ನಾನು ಚುನಾವಣಾ ರಾಜಕಾರಣದಲ್ಲಿ ಒಂದು ಓಟಿನಿಂದ ಸೋತು 19 ವರ್ಗಗಳ ಕಾಲ ರಾಜಕೀಯ ವನವಾಸವನ್ನು ಕೊಳ್ಳೇಗಾಲ ಕ್ಷೇತ್ರದ ಜನತೆ ಗಮನಿಸಿ ನನ್ನನ್ನು 2023ರ ಚುನಾವಣೆಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಮತಕೊಟ್ಟು ಗೆಲ್ಲಿಸಿದ್ದಾರೆ ಹಾಗಾಗಿ ನಾನು ನಿಮ್ಮ ಜನಸೇವಕ ಎಂದರು. ಮುದ್ರಣ ಮಾಧ್ಯಮದಲ್ಲಿ ಶವ ಸಂಸ್ಕಾರ ಮಾಡಲು ನದಿ ನೀರಿನೊಳಗೆ ಹರಸಾಹಸ ಪಟ್ಟು ಶವ ಹೊತ್ತೊಯ್ಯುತ್ತಿರುವ ಸುದ್ದಿಯನ್ನು ನೋಡಿ ನಮ್ಮ ಸರ್ಕಾರದಿಂದ ಈ ಸೇತುವೆ ನಿರ್ಮಾಣಕ್ಕೆ ನಾಲ್ಕು ಕೋಟಿ ವ್ಯಚ್ಚದಲ್ಲಿ ಸೇತುವೆ ಕಾಮಗಾರಿಯು ಪ್ರಾರಂಭವಾಗುತ್ತಿದೆ ಎಂದರು. ಸುಮಾರು 70 ಕೋಟಿ ವ್ಯಚ್ಚದಲ್ಲಿ ಕೆರೆಗಳ ನೀರು ತುಂಬಿಸುವ ಯೋಜನೆಗಳಿಗೆ ಸದ್ಯದಲ್ಲೆ ಭೂಮಿ ಪೂಜೆ ನೆರವೇರಿಸಲಾಗುವುದು. ಸುಮಾರು 13 ಕೆರೆಗಳಿಗೆ ಗೌಡಹಳ್ಳಿ ಮತ್ತು ಕೃ?ಣ್ಣಯ್ಯನಕಟ್ಟೆಗೆ ಏತ ನೀರಾವರಿ ಹಾಗೂ ಕೆರೆ ತುಂಬಿಸುವ ಯೋಜನೆಗಳಿಗೆ ಈಗಾಗಲೇ ನಾನು ಮನವಿ ಸಲ್ಲಿಸಿದ್ದೇನೆ ಎಂದರು.

14ರಿಂದ 15 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳಿಗೆ ಲಸಿಕೆ ಕಡ್ಡಾಯ: ಜಿಲ್ಲಾಧಿಕಾರಿ ಡಾ. ಕುಮಾರ

ಗರ್ಭಕಂಠ ಕ್ಯಾನ್ಸರ್ ತಡೆಗೆ ಜಾಗೃತಿ ಜಾಥಾ

ಮಂಡ್ಯ: 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ದೃಷ್ಟಿಯಿಂದಲಸಿಕೆ ರಕ್ಷಣಾತ್ಮಕ ಲಸಿಕೆಯಾಗಿದ್ದು, 14 ರಿಂದ 15 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳು ಕಡ್ಡಾಯವಾಗಿ ಲಸಿಕೆಯನ್ನು ಪಡೆಯುವಂತೆ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಇಂದು ಜಿಲ್ಲಾ ಕಛೇರಿ ಸಭಾಂಗಣದಲ್ಲಿ ನಡೆದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಪ್ರಗತಿ ಹಾಗೂ ದಡಾರ ರುಬೆಲ್ಲಾ ನಿರ್ಮೂಲನಾ ಕಾರ್ಯಕ್ರಮ ಕುರಿತು ಹಾಗೂ ಹೆಚ್.ಪಿ. ವಿ.ಲಸಿಕಾ ಅಭಿಯಾನದ ಅನುಷ್ಠಾನ ಮತ್ತು ಕಾರ್ಯಕ್ರಮ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಮುಂದಿನ ಒಂದು ತಿಂಗಳವರೆಗೆ 14ರಿಂದ 15 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳನ್ನು ಗುರುತಿಸಿ ಲಸಿಕೆ ಪಡೆಯುವಂತೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಮಕ್ಕಳಲ್ಲಿ ತಪ್ಪು ಗ್ರಹಿಕೆ ಮತ್ತು ಗೊಂದಲವನ್ನು ಹೋಗಲಾಡಿಸುವ ದೃಷ್ಟಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ



ಲಸಿಕೆ ಪ್ರಯೋಜನದ ತಿಳುವಳಿಕೆ ಜಾಗೃತಿಯನ್ನು ಮೂಡಿಸಬೇಕು ಎಂದು ಹೇಳಿದರು. ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ತಿಳುವಳಿಕೆ ಜಾಗೃತಿ ಕಾರ್ಯಕ್ರಮವನ್ನು ಮಾಡಬೇಕು ಹಾಗೂ ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮ ವಿರುವುದಿಲ್ಲ, ಹೆಚ್.ಪಿ. ವಿ. ಲಸಿಕೆ ಸುರಕ್ಷಿತ ಲಸಿಕೆಯಾಗಿದೆ.ದೇಹದಲ್ಲಿ ರೋಗನಿರೋಧಕಶಕ್ತಿ ಹೆಚ್ಚಾಗುತ್ತದೆ ಎಂಬ ಮಹತ್ವದ ಮಾಹಿತಿಯನ್ನು ತಿಳಿಸಬೇಕು ಎಂದು ಹೇಳಿದರು. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ ಆರೋಗ್ಯ ಕೇಂದ್ರಗಳು, ಸರ್ಕಾರಿ ಆಸ್ಪತ್ರೆಗಳು ಹೆಚ್.ಪಿ.ವಿ ಲಸಿಕೆಯನ್ನು ನೀಡುವುದರಿಂದ ಮುಂದಿನ ಎರಡು ತಿಂಗಳ ಅಭಿನಯದಲ್ಲಿ ಹೆಣ್ಣು ಮಕ್ಕಳ ಆರೋಗ್ಯ ದೃಷ್ಟಿಯಿಂದ ಕಡ್ಡಾಯವಾಗಿ ಲಸಿಕೆಯನ್ನು ಉಚಿತವಾಗಿ ನೀಡುವುದಕ್ಕೆ ಕ್ರಮವಹಿಸಬೇಕು. ಹಾಗೂ ಈ ಅಭಿಯಾನಕ್ಕೆ ಶಿಕ್ಷಣ ಇಲಾಖೆಯ ಸಹಕರಿಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಕೆ ಮೋಹನ್, ಖಅಉೂ ಅಧಿಕಾರಿ ಡಾ. ಕೆ. ಪಿ. ಅಶ್ವಥ್, ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ. ಎಂ. ಎನ್. ಆಶಾಲತಾ, ಕುಷ್ಟರೋಗ ನಿರ್ಮೂಲನಾಧಿಕಾರಿ ಡಾ. ಸೋಮಶೇಖರ್, ಟಿ. ಹೆಚ್. ಓ ಡಾ. ಜವರೇಗೌಡ, ಕುಟುಂಬ ಕಲ್ಯಾಣ ಅಧಿಕಾರಿಗಳು ಡಾ. ಬೆಟ್ಟಸ್ವಾಮಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎನ್. ಜಿ.ವೇಣುಗೋಪಾಲ್ ಉಪಸ್ಥಿತರಿದ್ದರು.

ಏರಿ ಬಿರುಕು: ರೈತರಲ್ಲಿ ಆತಂಕ



ಪಾಂಡವಪುರ: 250 ವರ್ಷಗಳ ಐತಿಹಾಸಿಕ ಹಿರೋಡೆಕೆರೆ ಏರಿ ಬಿರುಕು ಬಿಟ್ಟಿದ್ದು, ಕೆರೆ ಅಚ್ಚುಕಟ್ಟು ವ್ಯಾಪ್ತಿಯ ರೈತರಲ್ಲಿ ಆತಂಕ ಮನೆ ಮಾಡಿದೆ.

ಕೆರೆ ಏರಿ ಮೇಲೆ ಬೆಳೆದಿದ್ದ ಗಿಡ-ಗಂಟಿಗಳನ್ನು ತೆರವುಗೊಳಿಸದೆ ಕಾವೇರಿ ನೀರಾವರಿ ನಿಗಮದ ವಿ.ಸಿ.ನಂ 6 ಉಪವಿಭಾಗದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದ ಪರಿಣಾಮವಾಗಿ ಕೆರೆ ಏರಿ ಬಿರುಕು ಬಿಡಲು ಪ್ರಮುಖ ಕಾರಣ ಎಂಬುದಾಗಿ ಹಿರೋಡೆಕೆರೆ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷ ದೊಡ್ಡೇಗೌಡ, ಮಾಜಿ ಅಧ್ಯಕ್ಷರಾದ ಆರ್.ಚನ್ನಕೇಶವ ಹಾಗೂ ಎಚ್.ಕೆ.ಜನಾರ್ಧನ್ ಇತರರು ಆರೋಪಿಸಿದರು. ಹಿರೋಡೆಕೆರೆಯು ಐತಿಹಾಸಿಕ ಕೆರೆಯಾಗಿದ್ದು, ಕಳೆದ 250 ವರ್ಷಗಳ ಹಿಂದೆ ಮಹಿಳೆಯೊಬ್ಬರು ಈ ಕೆರೆ ನಿರ್ಮಿಸಿದರು ಎಂಬ ಮಾಹಿತಿ ಇದೆ. ಈ ಕೆರೆ ಅಚ್ಚುಕಟ್ಟಿನಲ್ಲಿ ನೂರಾರು ಎಕರೆಗೆ ನೀರಾವರಿ ಸೌಲಭ್ಯವಿದ್ದು, ರೈತರು ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಇದೀಗ ಕೆರೆ ಏರಿಯಲ್ಲಿ ಬಿರುಕು ಕಾಣಿಸಿಕೊಂಡು ಮೋಳೆ ಹರಿಯುತ್ತಿರುವ ಪರಿಣಾಮ ಕೆರೆ ಒಡೆಯುವ ಆತಂಕದಲ್ಲಿ ಈ ಭಾಗದ ರೈತರದ್ದಾಗಿದೆ ಎಂದರು. ಅಧಿಕಾರಿಗಳು ಈ ಕೂಡಲೇ ಎಚ್ಚೆತ್ತು ಕೆರೆ ಏರಿ ಬಿರುಕು ಬಿದ್ದು ಮೋಳೆ ಹರಿಯುತ್ತಿರುವುದನ್ನು ದುರಸ್ತಿಪಡಿಸಬೇಕು. ಜತೆಗೆ ಈ ಐತಿಹಾಸಿಕ ಕೆರೆಯನ್ನು ಸಂರಕ್ಷಣೆ ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ತಾಲೂಕಿನ ಅಭಿವೃದ್ಧಿಗೆ ಬದ್ಧ: ಶಾಸಕ



ಕೆ.ಆರ್.ನಗರ: ಹಲವು ದಶಕಗಳಿಂದ ಅಭಿವೃದ್ಧಿ ಕಾಣದಂತಹ ಗ್ರಾಮಗಳಿಗೆ ಅನುದಾನ ಹಾಕಲಾಗಿದ್ದು ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ತಾಲೂಕಿನ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ತಾಲ್ಲೂಕಿನ ಮಾರ್ಚಹಳ್ಳಿ ಗ್ರಾಮದಲ್ಲಿ ಗ್ರಾಮ ದೇವತೆಗಳ 4 ದೇವಾಲಯಗಳ ಜೀರ್ಣೋದ್ದಾರಕ್ಕೆ ಮತ್ತು ಸಿ.ಸಿ.ರಸ್ತೆ, ಬಾಕ್ಸ್ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೇರವೆರಿಸಿ ಮಾತನಾಡಿದ ಅವರು ಇಂತಹ ಹಲವು ಗ್ರಾಮಗಳಿಗೆ ಅಗತ್ಯ ಅನುದಾನ ಹಂಚಿಕೆ ಮಾಡಿ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂದರು. ಮಾರ್ಚಹಳ್ಳಿ ಗ್ರಾಮದಲ್ಲಿ ಸುಮಾರು 750 ಮತದಾರರಿದ್ದು ಮತದಾನದ ಮಾಡಲು ಪಕ್ಕದ ಗ್ರಾಮಕ್ಕೆ ಹೋಗುವುದನ್ನು ತಪ್ಪಿಸಿ, ಗ್ರಾಮದಲ್ಲಿಯೇ ಮತಗಟ್ಟೆ ಕೇಂದ್ರ ತೆರೆಯಬೇಕೆಂದು ಗ್ರಾಮಸ್ಥರು ಬೇಡಿಕೆ ಸಲ್ಲಿಸಿದ್ದು ಮುಂಬರುವ ಚುನಾವಣೆಯಲ್ಲಿ ಗ್ರಾಮದಲ್ಲಿಯೇ ಮತಗಟ್ಟೆ ಕೇಂದ್ರ ತೆರೆಯುಲು ಕ್ರಮವಹಿಸುವುದಾಗಿ ಭರವಸೆ ನೀಡಿದರು. ಪಡಿತದಾರರು ಆಹಾರ ಪದಾರ್ಥಗಳನ್ನು ಪಡೆಯಲು ಪಕ್ಕದ ವಡ್ಡರಹಳ್ಳಿ ಗ್ರಾಮಕ್ಕೆ ತೆರಳುತ್ತಿರುವುದು ನನ್ನ ಗಮನಕ್ಕೆ ಬಂದಿದ್ದು ಕೂಡಲೇ ಗ್ರಾಮದಲ್ಲಿ ಪಡಿತರ ವಿತರಣೆ ಉಪ ಕೇಂದ್ರ ತೆರೆದಿದ್ದು ಪಡಿತರಚೀಟಿದಾರರಿಗೆ ಆಹಾರ ವಿತರಣೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು. ಗ್ರಾಮಸ್ಥರು ಜಮೀನಿಗೆ ತೆರಳಲು ಬೇಕಾಗಿರುವ ರಸ್ತೆ ಅಭಿವೃದ್ಧಿ ಪಡಿಸುವುದರ ಜೊತೆಗೆ ಹೊಸ ಬಡಾವಣೆಯನ್ನು ಕಂದಾಯ ಗ್ರಾಮ ಎಂದು ಘೋಷಿಸಿ ಹಕ್ಕು ಪತ್ರ ವಿತರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದ ಶಾಸಕ ಡಿ.ರವಿಶಂಕರ್ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು ಹೈನುಗಾರಿಕೆ ಮಾಡುವ ಸಲುವಾಗಿ ಹಸು ಖರೀದಿ ಮಾಡಲು ಎಂಸಿಡಿಸಿಸಿ ಬ್ಯಾಂಕ್‌ವತಿಯಿಂದ ಸಾಲ ಕೊಡಿಸಲು ಪ್ರಯತ್ನ ಮಾಡುವುದಾಗಿ ಹೇಳಿದರು. ಜಿ.ಪಂ. ಮಾಜಿ ಸದಸ್ಯ ಮಾರ್ಚಹಳ್ಳಿ ಶಿವರಾಂ ಮಾತನಾಡಿ ಗ್ರಾಮಕ್ಕೆ ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳನ್ನು ತಿಳಿಸಿ ಅನುದಾನ ನೀಡುವಂತೆ ಶಾಸಕರಿಗೆ ಮನವಿ ಮಾಡಿದರು. ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ವಿಜಯಕುಮಾರ್, ರಮೇಶ್, ತಾ.ಪಂ.ಮಾಜಿ ಸದಸ್ಯ ನಾಗೇಗೌಡ, ಕಾಂಗ್ರೆಸ್ ಮುಖಂಡ ಬಿ.ಎಂ.ಗಿರೀಶ್, ಲೋಕೇಶ್, ರಾಜಶೇಖರ್, ಪಾರ್ವತಮ್ಮ, ಸಿದ್ದೇಗೌಡ, ಚಂದನ್, ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಮಹದೇವ್, ವಕ್ತಾರ ಸೈಯದ್ ಜಾಬೀರ್ ಮತ್ತೀತ್ತರರು ಹಾಜರಿದ್ದರು.

ಕ್ರೀಡಾ ಬಳಗದ ಕಾರ್ಯದರ್ಶಿ ಬಿ.ಎಸ್.ಬೋರೇಗೌಡ ಸಲಹೆ

ಆರೋಗ್ಯ ರಕ್ಷಣೆಗೆ ಒತ್ತು ನೀಡಿ



ಮದ್ದೂರು: ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲೆಂಬ ನಿಟ್ಟಿನಲ್ಲಿ ಹಲವಾರು ಸಂಘ ಸಂಸ್ಥೆಗಳ ಸಹಯೋಗದೊಡನೆ ಉಚಿತ ಆರೋಗ್ಯ ತಪಾಸಣೆ ಹಾಗೂ ಇನ್ನಿತರ ಸಮಾಜಮುಖಿ ಸೇವಾ ಕಾರ್ಯಗಳನ್ನು ಕೈಗೊಂಡಿರುವುದು ಪ್ರಶಂಸನೀಯವೆಂದು ಮದ್ದೂರು ಕ್ರೀಡಾ ಬಳಗದ ಕಾರ್ಯದರ್ಶಿ ಬಿ.ಎಸ್.ಬೋರೇಗೌಡ ತಿಳಿಸಿದರು.

ತಾಲೂಕಿನ ಬೆಸಗರಹಳ್ಳಿ ಮಾನಸ ಸಂಸ್ಥೆಯ ಆವರಣದಲ್ಲಿ ಮದ್ದೂರು ಲಯನ್ಸ್, ಕದಂಬ ಲಯನ್ಸ್ ಸಂಸ್ಥೆ, ಮದ್ದೂರು ಕ್ರೀಡಾ ಬಳಗ, ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾನಿಲಯ, ಒಕ್ಕಲಿಗರ ಸಂಘ ಮತ್ತು ದಂತ ವೈದ್ಯಕೀಯ ಮಹಾವಿದ್ಯಾನಿಲಯದ ಸಂಯುಕ್ತಾಶ್ರಯದಲ್ಲಿ ಕ್ರೀಡಾ ಬಳಗದ ಅಧ್ಯಕ್ಷ ವಿ.ಕೆ.ಜಗದೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ, ದಂತ ತಪಾಸಣೆ ಮತ್ತು ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಜನರು ಆರೋಗ್ಯದ ಬಗ್ಗೆ ನಿರ್ಲಕ್ಷ ಹೊಂದಿರುವ ಪರಿಣಾಮವಾಗಿ ಹಲವಾರು ರೋಗ ರುಜಿನಗಳಿಗೆ ಒಳಗಾಗುತ್ತಿರುವ ಪ್ರಕರಣಗಳು ಕಂಡು ಬರುತ್ತಿದ್ದು ಸೂಕ್ತ ಸಮಯದಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡದುಕೊಂಡರೆ ಪ್ರಾಥಮಿಕ ಹಂತದಲ್ಲೇ ರೋಗವನ್ನು ನಿರ್ಮೂಲನೆ ಮಾಡಬಹುದಾಗಿದ್ದು ಇದಕ್ಕೆ ಪೂರಕವಾಗಲೆಂಬ ಉದ್ದೇಶದಿಂದ ಶಿಬಿರಗಳನ್ನು ಆಯೋಜಿಸುತ್ತಿದ್ದು ಇದರ ಸದುಪಯೋಗಕ್ಕೆ ಮುಂದಾಗಬೇಕೆಂದು ತಿಳಿಸಿದರು. ಮದ್ದೂರು ಕ್ರೀಡಾ ಬಳದ ಅಧ್ಯಕ್ಷ ವಿ.ಕೆ.ಜಗದೀಶ್ ಮಾತನಾಡಿ ಹಲವಾರು ಸಂಘ ಸಂಸ್ಥೆಗಳು ಜಿಲ್ಲೆ ಸೇರಿದಂತೆ ತಾಲೂಕಿನಾದ್ಯಂತ ಹಲವಾರು ಸಮಾಜಮುಖಿ ಸೇವಾ ಕಾರ್ಯಗಳನ್ನು ಕೈಗೊಂಡು ಸಮಾಜದ ಅಭ್ಯುದ್ಯಯಕ್ಕೆ ನಿರಂತರವಾಗಿ ಶ್ರಮಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಬೆಸಗರಹಳ್ಳಿ ಜಿ.ಪಂ. ವ್ಯಾಪ್ತಿಯ ಹಲವು ಗ್ರಾಮಗಳ ಸಾರ್ವಜನಿಕರು, ಮಕ್ಕಳು ಶಿಬಿರದಲ್ಲಿಪಾಲ್ಗೊಂಡು ಮೂಳೆ, ಚರ್ಮರೋಗ, ಸ್ತ್ರೀರೋಗ, ರಕ್ತಪರೀಕ್ಷೆ, ನೇತ್ರ ತಪಾಸಣೆ, ಕಿವಿ, ಮೂಗು, ಗಂಟಲು, ಹೃದಯ ಸಮಸ್ಯೆ ಇನ್ನಿತರ ಹಲವಾರು ರೋಗಗಳಿಗೆ ಸಂಬಂಧಿಸಿದಂತೆ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆದಿದ್ದಾರೆಂದು ತಿಳಿಸಿದರು. ಸುಮಾರು 400ಕ್ಕೂ ಅಧಿಕ ಮಂದಿ ಶಿಬಿರಾರ್ಥಿಗಳು ತಪಾಸಣೆಗೊಳಗಾಗಿ ಅಗತ್ಯ ಚಿಕಿತ್ಸೆ ಹಾಗೂ ಮಾಹಿತಿಯನ್ನು ಪಡೆದುಕೊಂಡಿದ್ದು ಇದರಿಂದಾಗಿ ಸಮಯ ಹಾಗೂ ಹಣ ಉಳಿತಾಯವಾಗುವ ಜತೆಗೆ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಅಧಿಕ ಹಣ ವೆಚ್ಚ ಉಳಿತಾಯದ ಜತೆಗೆ ದಿನನಿತ್ಯ ಅಲೆದಾಡುವುದು ತಪ್ಪಿದಂತಾಗಿದೆ ಎಂದರು.

ರಕ್ತದಾನ ಶಿಬಿರ: ಆರೋಗ್ಯ ತಪಾಸಣೆಯಲ್ಲಿ ನಡೆದ ರಕ್ತದಾನ ಶಿಬಿರದ ವೇಳೆ ಸುಮಾರು 60ಕ್ಕೂ ಹೆಚ್ಚು ಮಂದಿ ಯುವಕರು, ಯುವತಿಯರು ಹಾಗೂ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು. ಈ ವೇಳೆ ಮದ್ದೂರು ಲಯನ್ಸ್ ಕ್ಲಬ್ ಅಧ್ಯಕ್ಷ ರಾಮಕೃಷ್ಣೇಗೌಡ, ಕದಂಬ ಲಯನ್ಸ್ ಅಧ್ಯಕ್ಷ ಕೆ.ಶಿವಕುಮಾರ್, ಕಾರ್ಯದರ್ಶಿ ಎಚ್.ಪಿ.ನಾಗರಾಜು, ವಲಯ ಅಧ್ಯಕ್ಷ ಟಿ.ಆರ್.ಕೆಂಗಲ್‌ಗೌಡ, ನಾಗೇಶ್, ಸನತ್‌ಕುಮಾರ್, ಪುಟ್ಟಸ್ವಾಮಿ ಇದ್ದರು.

ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಅಸಮಾಧಾನ

ಜಾತಿ ಆಧಾರದಲ್ಲಿ ರಾಜಕೀಯ ಸಲ್ಲದು



ಮಳವಳ್ಳಿ: ಸಂವಿಧಾನ ಜಾರಿಯಾಗಿ 77 ವರ್ಷವಾದರೂ ಕೂಡ ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಆಡಳಿತ ನಡೆಸಿದ ಸರ್ಕಾರಗಳು ವಿಫಲಗೊಂಡಿದೆ ಎಂದು ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ ಕೃಷ್ಣಮೂರ್ತಿ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದ ಮುಂಭಾಗ ಬಹುಜನ ಸಮಾಜ ಪಾರ್ಟಿ ವತಿಯಿಂದ ನಡೆದ ಮಾನ್ಯವರ್ ದಾದಾ ಸಾಹೇಬ್ ಕಾನ್ಸಿರಾಂ ರವರ 92ನೇ ಜನ್ಮ ದಿನಚರಣೆ ಹಾಗೂ ಬಹುಜನ್ ದಿವಸ್ ಮೈಸೂರು ವಲಯ ಮಟ್ಟದ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಧರ್ಮ ಹಾಗೂ ಜಾತಿ ಆಧಾರದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಜನರ ಹಿತ ಕಾಯುವಲ್ಲಿ ನಿರ್ಲಕ್ಷ್ಯವಹಿಸುತ್ತಿವೆ ಎಂದು ಕಿಡಿಕಾರಿದರು. ಹಿಂದುಳಿದ ಸಮು ದಾಯದ ಜನರನ್ನು ಒಂದೂಗೂಡಿಸಿ ರಾಜಕೀಯ ಪ್ರಜ್ಞೆ ನೀಡಿದ ಕಾನ್ಸಿರಾಂ ಅವರು ರಾಜಕೀಯದಲ್ಲಿಯೇ ಮಾದರಿ ಎನಿಸಿದ್ದಾರೆ. ಡಾ.ಅಂಬೇಡ್ಕರ್ ನಂತರ ಈ ದೇಶದಲ್ಲಿ ಶೋಷಿತರನ್ನು ಜಾಗೃತಿ ಮೂಡಿಸುವ ಮೂಲಕ ಅವರಿಗೆ ರಾಜಾಕೀಯ ಅಧಿಕಾರವನ್ನು ದೊರಕಿಸಿಕೊಂಡು ಮಹಾನ್ ವ್ಯಕ್ತಿ ಯಾರಾದರೂ ಇದ್ದರೆ ಅವರು ದಾದಾ ಸಾಹೇಬ್ ಕಾನ್ಸಿರಾಂ ಜೀ, ಉತ್ತರ ಪ್ರದೇಶದಂತಹ ದೊಡ್ಡ ರಾಜ್ಯದಲ್ಲಿ ಬಿಎಸ್ಪಿ ಪಕ್ಷವನ್ನು ಕಟ್ಟಿ ಸ್ವತಂತ್ರವಾಗಿ ಅಧಿಕಾರಕ್ಕೆ ತಂದು ಅಕ್ಕ ಮಾಯವಾತಿಯನ್ನು ನಾಲ್ಕು ಬಾರಿ ಮುಖ್ಯಮಂತ್ರಿಯನ್ನಾಗಿ ಮಾಡಿ ತೋರಿಸಿದ್ದಾರೆ. ಅಂತಹ ಬಹುಜನ ಸಮಾಜ ಪಕ್ಷವನ್ನು ನಾವೆಲ್ಲರೂ ಒಗ್ಗೂಡಿ ರಾಜ್ಯದಲ್ಲಿ ಕಟ್ಟುವ ಮೂಲಕ ರಾಜ್ಯಾಧಿಕಾರ ಪಡೆಯೋಣ ಎಂದರು. ಪರಿಶಿಷ್ಟ ಜಾತಿಯ ಒಂದು ಪಂಗಡ ಒಳ ಮೀಸಲಾತಿಗಾಗಿ 35 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದೆ. ಒಳಮೀಸಲಾತಿ ಕಲ್ಪಿಸುವ ವಿಚಾರವಾಗಿ ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು, ಮತ್ತೆ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಳಮೀಸಲಾತಿ ಜಾರಿ ಮಾಡಿ ಅವೈಜ್ಞಾನಿಕ ರೋಸ್ಟರ್ ಬಿಂದುವನ್ನು ಅಳವಡಿಸಿ ಪರಿಶಿಷ್ಟ ಜಾತಿಗಳನ್ನು ಬೀದಿಯಲ್ಲಿ ನಿಲ್ಲಿಸಿತು. ಎಸ್ಸಿ ಎಸ್ಟಿಗಳ 53000 ಕೋಟಿ ಹಣ ಬೇರೆ ಯೋಜನೆಗೆ ದುರ್ಬಳಕೆಯಾದರೂ ಕೂಡ ಮೀಸಲಾತಿಯಿಂದ ಗೆದ್ದ ಶಾಸಕರು ಪ್ರಶ್ನೆ ಮಾಡದಿರುವುದು ವಿಷಾಧನೀಯ ಎಂದರು. ದೇಶ ಭಕ್ತಿ ಎಂದು ಹೇಳುವ ಬಿಜೆಪಿ ನೇತೃತ್ವದ ಕೇಂದ್ರಸರ್ಕಾರ ಅಮೇರಿಕಾದ ತಾಳಕ್ಕೆ ಕುಣಿಯುತ್ತಿದೆ. ನರೇಂದ್ರಮೋದಿ ದೇಶವವನ್ನು ಗುಲಾಮಗಿರಿಗೆ ತಲುತ್ತದೆ. ಬಿಎಸ್‌ಪಿ ಪಕ್ಷದಲ್ಲಿ ಎಲ್ಲಾ ಸಮುದಾಯದ ಜನರು ಬಾಗಿಯಾಗಲಿದ್ದು, ಮನುವಾದಿಗಳು ಸುಳ್ಳುಗಳಿಗೆ ಕಿವಿಕೊಡಬಾರದೆಂದು ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನಾ ಡಾ. ಬಿ.ಆರ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಥ ನಡೆಸಿ ಘೋಷಣೆಗಳನ್ನು ಕೂಗಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಅಧ್ಯಕ್ಷ ನಂಜುಂಡಸ್ವಾಮಿ ವಹಿಸಿ ಮಾತನಾಡಿದರು.

ವೇದಿಕೆಯಲ್ಲಿ ಉಸ್ತುವಾರಿ ಗಂಗಾಧರ್ ಬಹುಜನ್, ರಾಜ್ಯ ಉಪಾಧ್ಯಕ್ಷ ಜಾಕೀರ್ ಹುಸೇನ್, ಮಂಡ್ಯ ಜಿಲ್ಲಾಧ್ಯಕ್ಷ ಎಸ್. ಶಿವಶಂಕರ್, ಉಸ್ತುವಾರಿ ಹೆಚ್.ಎನ್.ವೀರಭದ್ರಯ್ಯ, ತಾಲ್ಲೂಕು ಅಧ್ಯಕ್ಷ ವಿ. ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಹೆಚ್.ಎಂ. ಸುಧಾಕರ್ ಮುಖಂಡರಾದ ಉಮೇಶ್ ಮೌರ್ಯ, ಎನ್. ದೇವರಾಜು, ದೌಲದ್ ಪಾಷಾ, ಲೋಕೇಶ್ ಗೌಡ, ಬಿ.ಡಿ. ರಾಜೇಂದ್ರ ಇದ್ದರು.

ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ರಾಮ ಸುಬ್ರಮಣಿಯನ್ ಹೇಳಿಕೆ

ನೊಂದ ಬಡ ಜನರಿಗೆ ನ್ಯಾಯ ಸಿಗಲಿ



ಮೈಸೂರು: ನೊಂದವರಿಗೆ ಬಡವರಿಗೆ ನ್ಯಾಯ ಒದಗಿಸುವುದು ವಕೀಲ ವೃತ್ತಿಯ ಧರ್ಮ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಮೂರ್ತಿ ರಾಮ ಸುಬ್ರಮಣಿಯನ್ ತಿಳಿಸಿದರು.

ಭಾನುವಾರ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ಹುಬ್ಬಳ್ಳಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಣ ನಿಮಗೆ ಹೆಚ್ಚಿನ ತೃಪ್ತಿ ನೀಡುವುದಿಲ್ಲ, ನಿಮ್ಮ ಕ್ಲೈಂಟ್ ನಿಮ್ಮಿಂದ ನ್ಯಾಯವನ್ನು ಪಡೆದೆ ಎಂದು ಮುಖದಲ್ಲಿ ನಗುವನ್ನು ಹೊಂದಿದರೆ ಅದು ನಿಮಗೆ ಆತ್ಮ ತೃಪ್ತಿಯನ್ನು ನೀಡುತ್ತದೆ. ಇಂಗ್ಲೆಂಡ್ ನ 1930 ರ ಕಾಯ್ದೆ ಸಾರ್ವಜನಿಕರಿಗೆ ಉಚಿತ ಕಾನೂನಿನ ಅವಕಾಶವನ್ನು ಕಲ್ಪಿಸಿತು. ಭಾರತದಲ್ಲಿ 1987 ರಲ್ಲಿ ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಉಚಿತ ಕಾನೂನು ಸೇವೆಗಳನ್ನು ನೀಡಲಾಗುತ್ತಿದೆ. ಬಡವರು ನೊಂದವರಿಗೆ ಉಚಿತ ಕಾನೂನಿನ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀ ಶರಾದ ಅನುಶಿವರಾಮನ್ ಮಾತನಾಡಿ, ಈ ಕಾರ್ಯಗಾರವು ಮುಂದಿನ ವಕೀಲರು ಆಗಲು ಹೊರಟಿರುವ ನಿಮಗೆ ಅತ್ಯಮೂಲ್ಯವಾಗಿದೆ. ಲೀಗಲ್ ಎಡ್ ಕ್ಯಾಂಪ್ ಕ್ಲಿನಿಕ್ ಗಳನ್ನು ಹೇಗೆ ಆರೆಂಜ್ ಮಾಡಬೇಕು ಎಂಬುದರ ಬಗ್ಗೆ ಅರಿವು ಮೂಡಿಸುವುದಾಗಿದೆ. ಮೈಸೂರು ವ್ಯಾಪ್ತಿಯ 13 ಕಾನೂನು ಕಾಲೇಜುಗಳ ಸಹಯೋಗದಿಂದ 29 ಹಳ್ಳಿಗಳಲ್ಲಿ ಲೀಗಲ್ ಎಡ್ ಕ್ಯಾಪ್ ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಕೆ ಕೆ ಅಮರ್ ನಾಥ್, ಹೈಕೋರ್ಟ್ ವಕೀಲ ಶ್ರೀಧರ್ ಪ್ರಭು ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರಿನ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್‌ಸ್ವಾಮೀಜಿ ಹೇಳಿಕೆ

ಕೈಗೆ ಶಕ್ತಿ ತುಂಬಿದ್ದೇ ಬಲಗೈ ಸಮುದಾಯ



ಚಾಮರಾಜನಗರ: ರಾಜ್ಯ ಸರ್ಕಾರ ಒಳ ಮೀಸಲಾತಿ ನೀಡುವಲ್ಲಿ ಬಲಗೈ ಸಮುದಾಯವನ್ನು ತಾತ್ಸಾರ ಮಾಡಿದ ಮಾರನೇ ದಿನವೇ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಪತನಗೊಳ್ಳಲಿದೆ ಎಂದು ಮೈಸೂರಿನ ಉರಿಲಿಂಗಿಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್‌ಸ್ವಾಮೀಜಿ ಎಚ್ಚರಿಕೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಿದ್ದೇ ಬಲಗೈ ಸಮುದಾಯ ಎಂಬುದನ್ನು ಅವರು ಮರೆತಿಲ್ಲ, ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ 257 ಮತಗಳ ಅಂತರದಲ್ಲಿ ಗೆಲ್ಲಲು ಬಲಗೈ ಸಮುದಾಯ ಕಾರಣ. ಇಲ್ಲದಿದ್ದರೆ ರಾಜಕೀಯ ಭವಿಷ್ಯವೇ ಮಾಸಿ ಹೋಗುತ್ತಿತ್ತು. ಅಂದು ಶ್ರೀನಿವಾಸಪ್ರಸಾದ್ ನಾಯಕತ್ವದಲ್ಲಿ ನಡೆದ ಚುನಾವಣೆಯನ್ನು ನೆನಪು ಮಾಡಿಕೊಳ್ಳಬೇಕು. ಈಗಾಗಲೇ ಸಿದ್ದರಾಮಯ್ಯ ಪೆನ್ನು ಸ್ವಲ್ಪ ಹಿಂದೆ ಸರಿಸಿದೆ. ಮಾ. 25 ರಂದು ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ನಮ್ಮ ಬಲಗೈ ಸಮುದಾಯದ ಶಕ್ತಿ ಪ್ರದರ್ಶನವು ಮತ್ತೊಂದು ಎಚ್ಚರಿಕೆ ಗಂಟೆಯಾಗಬೇಕು ಎಂದು ತಿಳಿಸಿದರು. ಅಲ್ಲದೇ ವಿಶೇಷ ಸಂಪುಟ ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಅವರ ನೇತೃತ್ವದ ಸಚಿವರು ತೆಗೆದುಕೊಳ್ಳುವ ತೀರ್ಮಾನದಲ್ಲಿ ನಿಮ್ಮ ಸರ್ಕಾರ ಉಳಿಯಲಿದೆ ಎಂದು ಈಗಾಗಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹೇಳಿದ್ದೇನೆ. ಇಷ್ಟಾಗಿಯು ಒಳ ಮೀಸಲಾತಿ ವಿಚಾರದಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ, ಮೀಸಲಾತಿ ವಿಚಾರದಲ್ಲಿ ಬಲಗೈ ಮತ್ತು ಎಡಗೈ ಭಿನ್ನಾ ಮಾಡಿ, ನಮ್ಮಲ್ಲಿಯೇ ವೈಮನಸ್ಸು ಉಂಟು ಮಾಡುವ ಕುತಂತ್ರ ನಡೆದಿದೆ. ಇದನ್ನು ಭೇದಿಸುವ ಶಕ್ತಿ ನಮ್ಮಲ್ಲಿದೆ. ನಾವು ಅಂಬೇಡ್ಕರ್ ಬುದ್ದನ ಅನುಯಾಯಿಗಳು. ಹೀಗಾಗಿ ನಮ್ಮ ಹೋರಾಟ ನಿರಂತರವಾಗಿರಲಿ ಎಂದರು.

ಕಾರ್ಯಕ್ರಮದಲ್ಲಿ ಜಿ.ಪಂ.ಮಾಜಿ ಅಧ್ಯಕ್ಷ ಅಯ್ಯನಪುರ ಶಿವಕುಮಾರ್, ತಾ.ಪಂ.ಮಾಜಿ ಅಧ್ಯಕ್ಷ ಆರ್.ಮಹದೇವಯ್ಯ, ಯುವ ಮುಖಂಡ ನಲ್ಲೂರುಮಹದೇವಸ್ವಾಮಿ, ಚಾಮುಲ್ ನಿರ್ದೇಶಕ ರೇವಣ್ಣ, ವಕೀಲ ಪಸನ್ನಕುಮಾರ್, ಗಡಿ ಯಜಮಾನರಾದ ರವಿಕುಮಾರ್, ವೀರಣ್ಣ, ರಂಗಸ್ವಾಮಿ, ನಾಗರಾಜು, ಕಟ್ಟೆ ಯಜಮಾನರಾದ ಪಾಪಣ್ಣ, ಸೋಮಣ್ಣ, ಸಿದ್ದಯ್ಯ, ಕೆ.ರಂಗಸ್ವಾಮಿ, ಪುಟ್ಟಸ್ವಾಮಿ, ಚೆನ್ನಂಜಯ್ಯ, ಮಹದೇವಯ್ಯ, ಮುಖಂಡರು ಭಾಗವಹಿಸಿದ್ದರು.

ಇರಾನ್ ನಗರಗಳ ಮೇಲೆ ಬಿ-52 ಬಾಂಬರ್ಸ್ ದಾಳಿ!

- ಪ್ರಮುಖ ನಗರಗಳ ಮೇಲೆ ಭಾನುವಾರ ಮುಂಜಾನೆ ಅಮೆರಿಕ ಹೊಸ ದಾಳಿ
- ಇರಾನ್‌ನ ಶಿರಾಜ್‌ನಲ್ಲಿ 20 ನಿಮಿಷದೊಳಗೆ 20 ಬಾಂಬ್ ಸ್ಫೋಟ
- ಇಸ್ರೇಲ್ ದಾಳಿಗೆ ಇಸ್ಫಹಾನ್ ನಗರದಲ್ಲಿ ಆವರಿಸಿದ ದಟ್ಟ ಹೊಗೆ
- ಮುಂದುವರಿದ ಆಪರೇಷನ್ ಎಪಿಕ್ ಫ್ಯೂರಿ
- ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳ ಬಳಕೆ



ಟೆಹ್ರಾನ್: ಆಪರೇಷನ್ ಎಪಿಕ್ ಫ್ಯೂರಿ ಮುಂದುವರಿದ ಭಾಗವಾಗಿ ಬಿ-52 ಬಾಂಬರ್ಸ್ ಯುದ್ಧ ವಿಮಾನಗಳನ್ನು ಬಳಸಿಕೊಂಡು ಇರಾನ್ ಪ್ರಮುಖ ನಗರಗಳ ಮೇಲೆ ಅಮೆರಿಕ ಹೊಸ ದಾಳಿ ನಡೆಸಿದೆ. ಶನಿವಾರ ತಡರಾತ್ರಿ ಮತ್ತು ಭಾನುವಾರ ಮುಂಜಾನೆ ಇರಾನ್ ಪ್ರಮುಖ ನಗರಗಳಲ್ಲಿ ಸ್ಫೋಟಗಳು ಸಂಭವಿಸಿವೆ ಎಂದು ಇರಾನ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ. ಭಾನುವಾರ ಬೆಳಗಿನ ಜಾವ ದಕ್ಷಿಣ ಟೆಹ್ರಾನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ನಡೆದಿವೆಯೆಂದು ವಿಡಿಯೋ ಒಂದನ್ನು ಹಂಚಿಕೊಂಡಿದೆ. ಟೆಹ್ರಾನ್‌ನ ಹಲವು ಪ್ರದೇಶಗಳ ಮೇಲೆ ಬಿ-52 ಬಾಂಬರ್‌ಗಳು ದಾಳಿ ನಡೆಸಿವೆ ಎನ್ನಲಾಗಿದೆ. ಭಾನುವಾರ ಮುಂಜಾನೆ ಶಿರಾಜ್ ಪ್ರದೇಶದಲ್ಲಿ ಕೇವಲ 20 ನಿಮಿಷದೊಳಗೆ 20 ಬಾಂಬ್ ಸ್ಫೋಟಗಳು ನಡೆದಿರುವುದಾಗಿ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಶಿರಾಜ್ ವಿಮಾನ ನಿಲ್ದಾಣದ ಸಮೀಪ ಬಾಂಬ್ ಸ್ಫೋಟಗಳು ನಡೆದಿರುವುದನ್ನು ಕೆಲವು ಪ್ರತ್ಯಕ್ಷದರ್ಶಿಗಳು ದೃಢೀಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಸಮೀಪ ಹಾರ್ಮುಜ್ಗನ್‌ನ ಜಾಸ್ಕ್ ಬಂದರಿನಿಂದ ಹೊಗೆ ಬರುವ ದೃಶ್ಯವನ್ನು ವಿಡಿಯೋದಲ್ಲಿ ಕಾಣಬಹುದು. ಇರಾನ್ ಅಣ್ವಸ್ತ್ರಾಗಾರಗಳಿರುವ ಇಸ್ಫಹಾನ್ ನಗರದಲ್ಲಿ ದಟ್ಟ ಹೊಗೆ ಆವರಿಸಿದ ದೃಶ್ಯಗಳನ್ನು ಇಸ್ರೇಲಿ ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ವಾಯುಪಡೆಯ ಬಿ-52 ಸ್ಟ್ರಾಟೋಫೋರ್ಟ್ರೆಸ್ ಯುದ್ಧ ವಿಮಾನಗಳು ತಡರಾತ್ರಿ ಟೇಕ್‌ಆಫ್ ಆಗಿವೆ. ಊಹೆಗೂ ಮೀರಿದ, ಚುರುಕಾದ ಮತ್ತು ನಿರ್ಣಾಯಕ ದಾಳಿಗಳು ಮುಂದುವರಿಯಲಿವೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಎಕ್ಸ್‌ನಲ್ಲಿ ವಿಡಿಯೋ ಹಂಚಿಕೊಂಡಿದೆ.

ಹಾರ್ಮುಜ್‌ಗೆ ಯುದ್ಧ ನೌಕೆ ಕಳುಹಿಸಿ: ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಮತ್ತು ಅದರ ಮೂಲಕ ತೈಲ ಹಡಗುಗಳ ಸುರಕ್ಷಿತ ಸಂಚಾರ ಖಚಿತಪಡಿಸಲು ಯುದ್ಧನೌಕೆಗಳನ್ನು ಹಾರ್ಮುಜ್‌ಗೆ ಕಳುಹಿಸಿಕೊಡಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ, ಫ್ರಾನ್ಸ್, ಜಪಾನ್, ದಕ್ಷಿಣ ಕೊರಿಯಾ, ಬ್ರಿಟನ್ ಸೇರಿ ಹಲವು ರಾಷ್ಟ್ರಗಳಿಗೆ ಕರೆ ನೀಡಿದ್ದಾರೆ. ಈ ರಾಷ್ಟ್ರಗಳು ಅಮೆರಿಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಈ ಜಲಸಂಧಿ ದಾಟುವ ತೈಲ ಮತ್ತು ಅನಿಲ ಹಡಗುಗಳ ಮೇಲೆ ಅವಲಂಬಿತವಾಗಿವೆ.



ಯುದ್ಧದ ಹಾನಿ ತೀವ್ರತೆ ಹೆಚ್ಚಳ

ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ಪ್ರಕಾರ, ಇರಾನ್‌ನಲ್ಲಿ ಈಗಾಗಲೇ 1,300ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇರಾನ್ ಆರೋಗ್ಯ ಸಚಿವಾಲಯದ ನೀಡಿದ ಮಾಹಿತಿ ಪ್ರಕಾರ, ಸಾವಿಗೀಡಾದವರಲ್ಲಿ 223 ಮಹಿಳೆಯರು ಮತ್ತು 202 ಮಕ್ಕಳು ಸೇರಿದ್ದಾರೆ. ಇಸ್ರೇಲ್‌ನಲ್ಲಿ ಇರಾನ್ ದಾಳಿಗೆ 12 ಮಂದಿ ಸಾವನ್ನಪ್ಪಿದ್ದು, ಭಾನುವಾರ ಮೂವರು ಗಾಯಗೊಂಡಿದ್ದಾರೆ. ಯುದ್ಧ ಆರಂಭವಾದ ಬಳಿಕ ಅಮೆರಿಕ ಸೇನೆಯ ಕನಿಷ್ಠ 13 ಯೋಧರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ ಕನಿಷ್ಠ 820 ಮಂದಿ ಸಾವನ್ನಪ್ಪಿದ್ದು, 8.5 ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ಹೇಳಿದೆ.

ಇರಾನ್‌ಗೆ ರಷ್ಯಾ ಡ್ರೋನ್ ಪೂರೈಕೆ: ಝೆಲೆನ್ಸ್ಕಿ

ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುವುದಕ್ಕಾಗಿ ರಷ್ಯಾ ನಿರ್ಮಿತ ಶಾಹಿದ್ ಡ್ರೋನ್‌ಗಳನ್ನು ಇರಾನ್ ಬಳಸಿಕೊಂಡಿದೆ. ಇರಾನ್‌ಗೆ ರಷ್ಯಾ ತನ್ನ ಶಾಹಿದ್ ಡ್ರೋನ್‌ಗಳನ್ನು ಪೂರೈಕೆ ಮಾಡುತ್ತಿದೆ. ಇದು ಶೇ.100ರಷ್ಟು ಸತ್ಯ ಎಂದು ಉಕ್ರೇನ್ ಅಧ್ಯಕ್ಷ ವೊಲಾಡಿಮಿರ್ ಝೆಲೆನ್ಸ್ಕಿ ಆರೋಪಿಸಿದ್ದಾರೆ. ಶಾಹಿದ್-136 ಡ್ರೋನ್‌ಗಳು ಮೂಲತಃ ಇರಾನ್ ನಿರ್ಮಿಸುವ ಅಗ್ಗದ ಡ್ರೋನ್‌ಗಳಾಗಿದ್ದು, ರಷ್ಯಾದೊಂದಿಗೆ ಜಂಟಿ ಉತ್ಪಾದನೆ ಮಾಡಲಾಗುತ್ತಿದೆ. ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ನಡೆಸಲು ಇರಾನ್‌ಗೆ ಡ್ರೋನ್‌ಗಳನ್ನು ರಷ್ಯಾ ಪೂರೈಕೆ ಮಾಡುತ್ತಿರುವುದಾಗಿ ಝೆಲೆನ್ಸ್ಕಿ ಆರೋಪಿಸಿದ್ದಾರೆ. ರಷ್ಯಾ ಡ್ರೋನ್ ಪೂರೈಕೆ ಮೂಲಕ ಇರಾನ್ ಆಡಳಿತಕ್ಕೆ ತನ್ನ ಬೆಂಬಲ ನೀಡಿದ್ದು, ಮುಂದಿನ ದಿನಗಳಲ್ಲಿ ಕ್ಷಿಪಣಿ ಪೂರೈಕೆ ಮಾಡಬಹುದು ಮತ್ತು ವಾಯು ರಕ್ಷಣಾ ವ್ಯವಸ್ಥೆ ನೀಡಿ ಬೆಂಬಲಿಸಬಹುದು.

ಅಗ್ಗದ ಡ್ರೋನ್: ಶಾಹಿದ್ ಡ್ರೋನ್‌ಗಳ ನಿರ್ಮಾಣ ವೆಚ್ಚ 20,000ದಿಂದ 50,000 ಡಾಲರ್ ವೆಚ್ಚ ತಗಲುತ್ತದೆ. ಇದು ಸಾಂಪ್ರದಾಯಿಕ ಕ್ಷಿಪಣಿ ನಿರ್ಮಾಣದ ಮುಂದೆ ಬಹಳ ಅಗ್ಗವಾಗಿದೆ. ಈ ಅಗ್ಗದ ಡ್ರೋನ್‌ಗಳು ಪರಿಣಾಮಕಾರಿ ದಾಳಿಯನ್ನು ನಡೆಸಬಲ್ಲವು. ಇವುಗಳನ್ನು ಹೊಡೆದುರುಳಿಸಲು ಶತ್ರುಗಳು ದುಬಾರಿ ವಾಯು ರಕ್ಷಣಾ ಕ್ಷಿಪಣಿಗಳನ್ನೇ ಬಳಸಬೇಕಾಗುತ್ತದೆ. ಇದರಿಂದಾಗಿ ಇವುಗಳ ದಾಳಿ ವೇಳೆ ಧ್ವಂಸವಾದರೂ ನಷ್ಟ ಎನಿಸಿಕೊಳ್ಳುವುದಿಲ್ಲ.

ಭಾರತದತ್ತ ಮತ್ತೊಂದು ಕಚ್ಚಾ ತೈಲ ಟ್ಯಾಂಕರ್

ಹೊಸದಿಲ್ಲಿ: ಯುಎಇಯ ಫುಜೈರಾ ತೈಲ ಟರ್ಮಿನಲ್ ಮೇಲೆ ದಾಳಿ ನಡೆದಿದ್ದರೂ ಭಾರತೀಯ ಧ್ವಜದ ಜಾಗ್ ಲಾಡ್ಕಿ ಕಚ್ಚಾ ತೈಲ ಟ್ಯಾಂಕರ್ ಸುರಕ್ಷಿತವಾಗಿ ಫುಜೈರಾದಿಂದ ಭಾರತದತ್ತ ಹೊರಟಿದೆ. ಸುಮಾರು 80,800 ಟನ್ ಮರ್ಬನ್ ಕಚ್ಚಾ ತೈಲವನ್ನು ಹೊತ್ತ ಈ ನೌಕೆ ಭಾನುವಾರ ಬೆಳಗ್ಗೆ 10.30ಕ್ಕೆ ಫುಜೈರಾ ಬಂದರಿನಿಂದ ಹೊರಟಿದ್ದು, ನೌಕೆಯಲ್ಲಿದ್ದ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಯುದ್ಧ ವಲಯದಿಂದ ಸುರಕ್ಷಿತವಾಗಿ ಹೊರಬಂದ ನಾಲ್ಕನೇ ಭಾರತೀಯ ಧ್ವಜದ ನೌಕೆ ಇದಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆ ಅಡಚಣೆ ಉಂಟಾಗಿರುವ ಹಿನ್ನೆಲೆಯಲ್ಲಿ ಈ ಸಾಗಣೆ ಭಾರತಕ್ಕೆ ಮಹತ್ವದ್ದಾಗಿದೆ. ಇದಕ್ಕೂ ಮೊದಲು ಭಾರತೀಯ ಧ್ವಜದ ಶಿವಾಲಿಕ್ ಮತ್ತು ನಂದಾದೇವಿ ಎಂಬ ಎರಡು ಎಲ್‌ಪಿಜಿ ನೌಕೆಗಳು ಒಟ್ಟು 92,712 ಟನ್ ಎಲ್‌ಪಿಜಿ ಹೊತ್ತು ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಶಿವಾಲಿಕ್ ಸೋಮವಾರ ಗುಜರಾತ್‌ನ ಮುಂದ್ರಾ ಬಂದರಿಗೆ, ನಂದಾದೇವಿ ಮಂಗಳವಾರ ಕಂಡ್ಲಾ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಪರ್ಷಿಯನ್ ಕೊಲ್ಲಿಯ ಪಶ್ಚಿಮ ಭಾಗದಲ್ಲಿ ಪ್ರಸ್ತುತ 22 ಭಾರತೀಯ ಧ್ವಜದ ನೌಕೆಗಳು ಹಾಗೂ 611 ಭಾರತೀಯ ನಾವಿಕರು ಕಾರ್ಯನಿರ್ವಹಿಸುತ್ತಿದ್ದು, ಅವರ ಸುರಕ್ಷತೆಯನ್ನು ಸರ್ಕಾರ ನಿಗಾದಲ್ಲಿಟ್ಟಿದೆ. ಇದುವರೆಗೆ ಗಲ್ಫ್ ಪ್ರದೇಶದಿಂದ 276 ಭಾರತೀಯ ನಾವಿಕರನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಹಿದ್-136 ವಿಶೇಷತೆಗಳು

- ಗರಿಷ್ಠ ಟೇಕ್‌ಆಫ್ ಭಾರ: 200 ಕೆ.ಜಿ.
- ದೂರವ್ಯಾಪ್ತಿ : 2,000 ಕಿ.ಮೀ.
- ಡ್ರೋನ್ ವಿಧ: ಆತ್ಮಾಹುತಿ ಡ್ರೋನ್
- ನಿಯೋಜನೆ: ಯೆಮೆನ್, ಹಿಜ್ಬೊಲ್ಲಾ
- ಅಭಿವೃದ್ಧಿಪಡಿಸಿದ ವರ್ಷ: 2021

ಶಾಹಿದ್-131 ವಿಶೇಷತೆಗಳು

- ಗರಿಷ್ಠಟೇಕ್‌ಆಫ್ ಭಾರ: 135 ಕೆ.ಜಿ.
- ದೂರವ್ಯಾಪ್ತಿ: 900 ಕಿ.ಮೀ.
- ಡ್ರೋನ್ ವಿಧ: ಆತ್ಮಾಹುತಿ ಡ್ರೋನ್
- ನಿಯೋಜನೆ: ರಷ್ಯಾ, ಇರಾಕ್‌ನ ಕತೈಬ್ ಹಿಜ್ಬೊಲ್ಲಾ
- ಅಭಿವೃದ್ಧಿಪಡಿಸಿದ ವರ್ಷ: 2021

ಅಮೆರಿಕ ದಾಳಿ ತೀವ್ರ

ಪೆಂಟಗನ್ ಮಾಹಿತಿ ಪ್ರಕಾರ, ಇರಾನ್‌ನ 15,000 ಕ್ಕೂ ಹೆಚ್ಚು ಗುರಿಗಳ ಮೇಲೆ ದಾಳಿ ಮಾಡಲಾಗಿದ್ದು, ಇದುವರೆಗೆ 2,000 ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಈ ನಡುವೆ ಅಮೆರಿಕ, ಯುಎಸ್‌ಎಸ್ ಟ್ರಿಪೋಲಿ ಯುದ್ಧನೌಕೆ ಮತ್ತು 2,500 ನೌಕಾಪಡೆ ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಇರಾನ್ ಭಯೋತ್ಪಾದನೆಯನ್ನು ತೀವ್ರವಾಗಿ ವಿರೋಧಿಸುತ್ತದೆ ಮತ್ತು ಅಮೆರಿಕದ ಸಾಮಾನ್ಯ ಜನರೊಂದಿಗೆ ನಮಗೆ ಯಾವುದೇ ಯುದ್ಧವಿಲ್ಲ ಎಂದು ಲಾರಿಜಾನಿ ಒತ್ತಿ ಹೇಳಿದ್ದಾರೆ.

6,000 ಇರಾನ್ ಸೈನಿಕರ ಸಾವು: ಐಡಿಎಫ್

ಐಡಿಎಫ್ ಗುಪ್ತಚರ ಮಾಹಿತಿಗಳ ಪ್ರಕಾರ, ಇಸ್ರೇಲ್ ಸೇನೆ ಆಪರೇಷನ್ ರಾರಿಂಗ್ ಲಯನ್ ಆರಂಭಿಸಿದಾಗಿನಿಂದ ಸುಮಾರು 6,000ಕ್ಕೂ ಅಧಿಕ ಇರಾನ್ ಸೈನಿಕರನ್ನು ಹೊಡೆದುರುಳಿಸಲಾಗಿದ್ದು, 15,000ಕ್ಕೂ ಅಧಿಕ ಇರಾನ್ ಸೈನಿಕರು ಗಾಯಗೊಂಡಿದ್ದಾರೆ.

20 ಗೂಢಚಾರಿಗಳ ಸೆರೆ ಹಿಡಿದ ಇರಾನ್

ಇರಾನ್‌ನೊಳಗಿದ್ದು ಇಸ್ರೇಲ್‌ಗೆ ರಹಸ್ಯ, ಗುಪ್ತಚರ ಮಾಹಿತಿಗಳನ್ನು ನೀಡುತ್ತಿದ್ದ 20 ಗೂಡಚಾರಿಗಳನ್ನು ಇರಾನ್ ಬಂಧಿಸಿದೆ. ಇರಾನ್ ಸೇನೆ ಮತ್ತು ಅದರ ಸೇನಾ ಮೂಲಸೌಕರ್ಯಗಳಿರುವ ಸ್ಥಳಗಳ ನಿಖರ ಮಾಹಿತಿಯನ್ನು ಇಸ್ರೇಲ್ ಸೇನೆಗೆ ಕಳುಹಿಸುತ್ತಿದ್ದರೆಂಬ ಆರೋಪದಲ್ಲಿ 20 ವ್ಯಕ್ತಿಗಳನ್ನು ಇರಾನ್ ಸೆರೆಹಿಡಿದಿದೆ.

ಇರಾನ್ ಮೇಲೆ 9/11 ಮಾದರಿ ದಾಳಿ ಪಿತೂರಿ!

ಟೆಹ್ರಾನ್: ಇರಾನ್ ಮೇಲೆ ಬೃಹತ್ ಭಯೋತ್ಪಾದನಾ ದಾಳಿಯ ಹಣೆಪಟ್ಟಿ ಕಟ್ಟಲು ಎಪ್‌ಸ್ಟೀನ್ ನೆಟ್‌ವರ್ಕ್‌ನಿಂದ 9/11 ಮಾದರಿಯ ದಾಳಿಯ ಪಿತೂರಿ ನಡೆಯುತ್ತಿದೆ ಎಂದು ಇರಾನ್‌ನ ಭದ್ರತಾ ಕಾರ್ಯದರ್ಶಿ ಅಲಿ ಲಾರಿಜಾನಿ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಈ ಆರೋಪವನ್ನು ಎಕ್ಸ್ ಮೂಲಕ ಹಂಚಿಕೊಂಡಿರುವ ಲಾರಿಜಾನಿ, ಟೆಹ್ರಾನ್ ಅನ್ನು ಸಿಲುಕಿಸಲು ಯೋಜಿತ ಘಟನೆಯೊಂದನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಕಳೆದ ತಿಂಗಳು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಬಲಿಯಾದ ನಂತರ ಈ ಪ್ರದೇಶದಲ್ಲಿ ಯುದ್ಧದ ಭೀತಿ ಹೆಚ್ಚಾಗಿರುವಾಗಲೇ ಈ ಆರೋಪಗಳು ಕೇಳಿಬಂದಿವೆ. ಇದಕ್ಕೆ ಪ್ರತಿಯಾಗಿ ಇರಾನ್ ಪಡೆಗಳು ಇಸ್ರೇಲ್ ಮತ್ತು ಗಲ್ಫ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸಿವೆ.

ಕಿರುಸುದ್ದಿ

ಗಡಿ ನುಸುಳಲು ಯತ್ನ: ಪಾಕಿಸ್ತಾನಿ ಉಗ್ರ ಹತ

ಶ್ರೀನಗರ: ಕಾಶ್ಮೀರ ಕಣಿವೆಯ ಬಾರಾಮುಲ್ಲಾ ಜಿಲ್ಲೆಯ ಉರಿಯ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಒಳನುಸುಳುತ್ತಿದ್ದ ಪಾಕಿಸ್ತಾನಿ ಭಯೋತ್ಪಾದಕನೊಬ್ಬನನ್ನು ಸದೆಬಡಿಯಲಾಗಿದೆ. ಹತ್ಯೆಗೀಡಾದ ಭಯೋತ್ಪಾದಕನಿಂದ ಎಕೆ 47 ರೈಫಲ್, ಪಿಸ್ತೂಲುಗಳು ಮತ್ತು ದೊಡ್ಡ ಪ್ರಮಾಣದ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಭಾನುವಾರ ಹೇಳಿದೆ. ಈ ಕುರಿತು ಸೇನೆಯು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನದ ಕುರಿತು ಜಮ್ಮು ಮತ್ತು ಕಾಶ್ಮೀರ ಪೊಲೀಸರು ನೀಡಿದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಜಂಟಿ ಕಾರ್ಯಾಚರಣೆ ಪ್ರಾರಂಭಿಸಲಾಯಿತು. ಈ ವೇಳೆ ಭಯೋತ್ಪಾದಕರು ಮನಬಂದಂತೆ ಗುಂಡು ಹಾರಿಸಿದರು. ಎನ್‌ಕೌಂಟರ್‌ನಲ್ಲಿ ಒಬ್ಬ ಪಾಕ್ ಭಯೋತ್ಪಾದಕನನ್ನು ಕೊಲ್ಲಲಾಗಿದೆ ಎಂದು ತಿಳಿಸಲಾಗಿದೆ.

ಸುಂಟರಗಾಳಿಗೆ ಓರ್ವನ ಸಾವು, 70 ಮನೆ ಧ್ವಂಸ

ಭುವನೇಶ್ವರ: ಒಡಿಶಾದಲ್ಲಿ ಸಂಭವಿಸಿದ ಸುಂಟರಗಾಳಿ ಭಾರಿ ಅನಾಹುತ ಸೃಷ್ಟಿಸಿದ್ದು, ಸುಂಟರಗಾಳಿ ರುದ್ರನರ್ತನಕ್ಕೆ ಓರ್ವ ಮೃತಪಟ್ಟಿದ್ದರೆ, 70 ಮನೆಗಳು ಧ್ವಂಸಗೊಂಡಿವೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಭಾನುವಾರ ಒಡಿಶಾದ ಮಯೂರ್ಭಂಜ್ ಜಿಲ್ಲೆಯಲ್ಲಿ ಬೀಸಿದ ಪ್ರಬಲವಾದ ನಾರ್ವೆಸ್ಟರ್ ಸುಂಟರಗಾಳಿಯು ವ್ಯಾಪಕ ನಷ್ಟವನ್ನುಂಟುಮಾಡಿದ್ದು, ಸುಮಾರು 70 ಮನೆಗಳಿಗೆ ಹಾನಿಯಾಗಿದೆ. ಅಂತೆಯೇ ಹಲವಾರು ಜನರು ಗಾಯಗೊಂಡಿದ್ದಾರೆ. ಆರಂಭಿಕ ವರದಿಗಳ ಪ್ರಕಾರ, ಕರಂಜಿಯಾದ ಕಿಯಾ ಗ್ರಾಮವು ಹೆಚ್ಚು ಹಾನಿಗೊಳಗಾದ ಪ್ರದೇಶವಾಗಿದ್ದು, ಅಲ್ಲಿ ಬಲವಾದ ಗಾಳಿಯು ನಿವಾಸಿಗಳಲ್ಲಿ ಭೀತಿಯನ್ನುಂಟುಮಾಡಿತು. ಸುಂಟರಗಾಳಿ ರಭಸಕ್ಕೆ ಹಲವಾರು ಮಣ್ಣು ಮತ್ತು ಹುಲ್ಲಿನ ಮನೆಗಳ ಛಾವಣಿಗಳು ಕಿತ್ತುಕೊಂಡು ಹೋಗಿವೆ.

ನಕಲಿ ದರೋಡೆ ಸಂಚು: 11 ಭಾರತೀಯರ ಸೆರೆ

ಬಾಸ್ಟನ್: ಅಮೆರಿಕದ ಯು ವೀಸಾ ಪಡೆಯುವ ಉದ್ದೇಶದಿಂದ ನಕಲಿ ಸಶಸ್ತ್ರ ದರೋಡೆಗಳನ್ನು ನಡೆಸಿದ ಆರೋಪದ ಮೇಲೆ 11 ಭಾರತೀಯ ಪ್ರಜೆಗಳನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಈ ವಿಶೇಷ ವೀಸಾವನ್ನು ಗಂಭೀರ ಅಪರಾಧಗಳಿಗೆ ಬಲಿಯಾದ ಮತ್ತು ತನಿಖೆಗೆ ಸಹಕರಿಸುವ ಸಂತ್ರಸ್ತರಿಗೆ ಮಾತ್ರ ನೀಡಲಾಗುತ್ತದೆ. ಈ ಗುಂಪು ವಿವಿಧ ರಾಜ್ಯಗಳ ಮಧ್ಯದ ಅಂಗಡಿ ಮತ್ತು ಉಪಹಾರ ಗೃಹಗಳಲ್ಲಿ ಕನಿಷ್ಠ ಆರು ನಕಲಿ ದರೋಡೆಗಳನ್ನು ಯೋಜಿಸಿತ್ತು ಎಂದು ಫೆಡರಲ್ ತನಿಖಾಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ಇದು ನೈಜ ದರೋಡೆಯಂತೆ ಕಾಣಲು ನಕಲಿ ಪಿಸ್ತೂಲುಗಳನ್ನು ಬಳಸಲಾಗುತ್ತಿತ್ತು.

ಏಪ್ರಿಲ್‌ನಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ದರ ಏರಿಕೆ

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ(ಎನ್‌ಎಚ್‌ಎಐ) ಇತ್ತೀಚಿನ ಪ್ರಕಟಣೆಯಂತೆ ಏ.1ರಿಂದ ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್ ಬೆಲೆಯಲ್ಲಿ ಅಲ್ಪ ಏರಿಕೆ ಮಾಡಲಾಗುತ್ತದೆ. ಹಣದುಬ್ಬರಕ್ಕೆ ಅನುಗುಣವಾಗಿ ಶುಲ್ಕವನ್ನು 3,000 ರೂ. ನಿಂದ 3,075 ರೂ.ಗೆ (ಶೇ. 2.5 ರಷ್ಟು) ಹೆಚ್ಚಿಸಲು ನಿರ್ಧರಿಸಲಾಗಿದೆ.

ಪರಿಷ್ಕೃತ ಪಾಸ್ ನಿಯಮಗಳು: ಫಾಸ್ಟ್‌ಟ್ಯಾಗ್ ವಾರ್ಷಿಕ ಪಾಸ್, ಕಾರುಗಳು, ಜೀಪುಗಳು ಮತ್ತು ವ್ಯಾನ್‌ಗಳಂತಹ ಖಾಸಗಿ ವಾಹನಗಳಿಗೆ ಲಭ್ಯವಿದೆ. ಪ್ರತಿ ಬಾರಿಯೂ ಟೋಲ್ ಶುಲ್ಕ ಪಾವತಿಸುವ ಬದಲು, ಬಳಕೆದಾರರು ವಾರ್ಷಿಕ ಪಾಸ್ ಅನ್ನು ಖರೀದಿಸಬಹುದು. ಪ್ರಸ್ತುತ, ಈ ಪಾಸ್, ವರ್ಷಕ್ಕೆ 200 ಟೋಲ್ ದಾಟಲು ಅಥವಾ ಒಂದು ವರ್ಷದ ಅವಧಿಗೆ ಅವಕಾಶ ನೀಡುತ್ತದೆ. ಪ್ರಸ್ತುತ 50 ಲಕ್ಷಕ್ಕೂ ಹೆಚ್ಚು ಬಳಕೆದಾರರು ಈ ವ್ಯವಸ್ಥೆಯನ್ನು ಬಳಸುತ್ತಿದ್ದು, ಇದು ಒಟ್ಟು ಕಾರು ಟೋಲ್ ವಹಿವಾಟಿನ ಶೇ.28ರಷ್ಟಿದೆ. ಬೆಲೆ ಏರಿಕೆಯ ಹೊರತಾಗಿಯೂ, ನಿರಂತರ ಪ್ರಯಾಣಿಸುವವರಿಗೆ ಇದು ಉಳಿತಾಯದ ಆಯ್ಕೆಯಾಗಿ ಮುಂದುವರಿಯಲಿದೆ.



ನಗದು ರಹಿತ ಪಾವತಿ ಕಡ್ಡಾಯ: ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ನಗದು ರಹಿತ ಪಾವತಿಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ಫಾಸ್ಟ್ಯಾಗ್ ಇಲ್ಲದ ವಾಹನಗಳಿಗೆ ಯುಪಿಐ ಮೂಲಕ ಶೇ.25ರಷ್ಟು ಹೆಚ್ಚುವರಿ ಶುಲ್ಕ ಅಥವಾ ನಗದು ರೂಪದಲ್ಲಿ ದುಪ್ಪಟ್ಟು ದಂಡ ವಿಧಿಸಲಾಗುತ್ತದೆ. ಅಲ್ಲದೆ, ಹೊಸ ನೋಂದಣಿಗಳನ್ನು ನೇರವಾಗಿ ವಾಹನ್ ಡೇಟಾಬೇಸ್ ಮೂಲಕ ಪರಿಶೀಲಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಚುನಾವಣೆ ಘೋಷಣೆಗೆ ಮುನ್ನ ಡಿಎ, ಅರ್ಚಕರ ಭತ್ಯೆ ಹೆಚ್ಚಳ

ಕೋಲ್ಕತ್ತಾ: ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲವೇ ಕ್ಷಣಗಳ ಮೊದಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತುಟ್ಟಿಭತ್ಯೆ (ಡಿಎ) ಹೆಚ್ಚಳಕ್ಕೆ ಅಧಿಸೂಚನೆ ಹೊರಡಿಸಿದ್ದಾರೆ. ಮಾರ್ಚ್ 2026ರಿಂದ ರಾಜ್ಯ ಸರ್ಕಾರಿ ನೌಕರರು ರೋಪಾ 2009 ಡಿಎ ಬಾಕಿಯನ್ನು ಪಡೆಯಲಿದ್ದಾರೆ ಎಂದು ಮಮತಾ ಬ್ಯಾನರ್ಜಿ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ಈ ಬೆಳವಣಿಗೆ, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಸುದೀರ್ಘ ಕಾನೂನು ಹೋರಾಟದ ನಂತರ ಬಂದಿದೆ. ಮೇ 2022 ರಲ್ಲಿ ಕಲ್ಕತ್ತಾ ಹೈಕೋರ್ಟ್ ಕೇಂದ್ರ ಸರ್ಕಾರಿ ನೌಕರರ ಸಮಾನವಾಗಿ ಡಿಎ ನೀಡುವಂತೆ ಆದೇಶಿಸಿತ್ತು. ಸುಪ್ರೀಂ ಕೋರ್ಟ್ ಬಾಕಿ ಮೊತ್ತದ ಶೇ.25ರಷ್ಟು ಪಾವತಿಸಲು ಸೂಚಿಸಿದ್ದರೂ, ರಾಜ್ಯ ಸರ್ಕಾರವು ಹಣಕಾಸಿನ ಬಿಕ್ಕಟ್ಟನ್ನು ಉಲ್ಲೇಖಿಸಿ ಕಾಲಾವಕಾಶ ಕೋರಿತ್ತು. ವೇಳಾಪಟ್ಟಿಯ ಅಧಿಕೃತ ಘೋಷಣೆಗೆ ಮೊದಲು ರಾಜ್ಯ ಸರ್ಕಾರಗಳು ತೆಗೆದುಕೊಂಡ ನಿರ್ಧಾರಗಳು, ಇತ್ತೀಚಿನ ಗೌರವಧನ ಹೆಚ್ಚಳ ಮತ್ತು ಡಿಎ ಸೌಲಭ್ಯಗಳು ಸೇರಿದಂತೆ ಎಲ್ಲವೂ ಸಿಂಧುವಾದ ಕ್ರಮಗಳೆಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಅರ್ಚಕರು, ಮೌಲ್ವಿಗಳ ಭತ್ಯೆ ಹೆಚ್ಚಳ: ಇದೇ ವೇಳೆ ಪಶ್ಚಿಮ ಬಂಗಾಳ ಸರ್ಕಾರ ಅರ್ಚಕರು ಮತ್ತು ಮೌಲ್ವಿಗಳಿಗೆ ನೀಡಲಾಗುವ ಗೌರವಧನದಲ್ಲಿ 500 ಹೆಚ್ಚಳ ಮಾಡಿದ್ದು ಒಟ್ಟಾರೆ ಮಾಸಿಕ 2,000 ರೂ. ಮಾಡಿದೆ. ನಮ್ಮ ಸಮುದಾಯಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಜೀವನವನ್ನು ಉಳಿಸಿಕೊಳ್ಳುವ ಸೇವೆ ಸಲ್ಲಿಸುವ ನಮ್ಮ ಪುರೋಹಿತರು ಮತ್ತು ಮೌಲ್ವಿಗಳ ಮಾಸಿಕ ಗೌರವಧನದಲ್ಲಿ 500 ರೂ. ಹೆಚ್ಚಳ ಘೋಷಿಸಲು ಸಂತೋಷವಾಗಿದೆ ಎಂದು ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಕೌಡಿಯಾರ್ ಅರಮನೆ: ಅಪಾರ ಮೌಲ್ಯ ಚಿನ್ನ ಕಳವು

ತಿರುವನಂತಪುರಂ(ಕೇರಳ): ಕೌಡಿಯಾರ್ ಅರಮನೆಯಲ್ಲಿ ಸುಮಾರು 2 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು ಹಾಗೂ ಅಮೂಲ್ಯ ಪ್ರಾಚೀನ ವಸ್ತುಗಳು ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ತಿರುವಾಂಕೂರು ರಾಜಮನೆತನದ ಸದಸ್ಯೆ ಅಶ್ವತಿ ತಿರುನಾಳ್ ಗೌರಿ ಲಕ್ಷ್ಮಿ ಬಾಯಿ ಅವರು ಪೆರೂರ್ಕಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಎಫ್‌ಐಆರ್ ಪ್ರಕಾರ, ಈ ಕಳ್ಳತನವು 2025ರ ಅಕ್ಟೋಬರ್ ಮತ್ತು ನವೆಂಬರ್ ನಡುವಿನ ಅವಧಿಯಲ್ಲಿ ನಡೆದಿರಬಹುದು ಎಂದು ಶಂಕಿಸಲಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ ಅರಮನೆಗೆ ನುಗ್ಗಿ, ದೂರುದಾರರ ಮಲಗುವ ಕೋಣೆಯಲ್ಲಿದ್ದ ಕಬ್ಬಿಣದ ಕಪಾಟಿನಲ್ಲಿ ಇರಿಸಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದಾನೆ ಎಂದು ತಿಳಿದುಬಂದಿದೆ. ಕಳ್ಳತನವಾದ ವಸ್ತುಗಳಲ್ಲಿ ಅಮೂಲ್ಯ ಹರಳುಗಳಿಂದ ಅಲಂಕರಿಸಲ್ಪಟ್ಟ ಆಭರಣಗಳು, ಶ್ರೀ ಪದ್ಮನಾಭಸ್ವಾಮಿ ದೇವಾಲಯದ ಚಿತ್ರದ ಪೆಂಡೆಂಟ್ ಹಾಗೂ ವಿದೇಶಗಳಿಂದ ತರಿಸಲಾದ ಅಪರೂಪದ ಪ್ರಾಚೀನ ಆಭರಣಗಳು ಸೇರಿವೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಾರೆ ಸುಮಾರು 2 ಕೋಟಿ ರೂ. ಮೌಲ್ಯದ ಆಭರಣಗಳು ಮತ್ತು ಪ್ರಾಚೀನ ವಸ್ತುಗಳು ಕಳುವಾಗಿವೆ ಎಂದು ತಿಳಿದುಬಂದಿದೆ.

ಈ ಪ್ರಕರಣದಲ್ಲಿ ಈಗ ಎಫ್‌ಐಆರ್ ದಾಖಲಾಗಿದ್ದು, ಕಳೆದ ನಾಲ್ಕು ತಿಂಗಳಿನಿಂದ ಪೊಲೀಸರು ಪ್ರಾಥಮಿಕ ತನಿಖೆ ನಡೆಸುತ್ತಿದ್ದರು. ತನಿಖೆಯನ್ನು ಅಧಿಕೃತವಾಗಿ ಮುಂದುವರಿಸಲು ಇದೀಗ ಪ್ರಕರಣ ದಾಖಲಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಂಜಯ್ ಕುಮಾರ್ ಗುರುದಿನ್ ತಿಳಿಸಿದ್ದಾರೆ.

ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ ಪ್ರಮಾಣ 77 ಲಕ್ಷಕ್ಕೆ ಕುಸಿತ

ಹೊಸದಿಲ್ಲಿ: ಎಲ್‌ಪಿಜಿ ರೀಫಿಲ್ ಬುಕ್ಕಿಂಗ್ 88.8 ಲಕ್ಷಗಳಿಂದ 77 ಲಕ್ಷಗಳಿಗೆ ಕುಸಿದಿದೆ. ಅಂದರೆ ಜನರು ಹೆದರಿಕೆಯಿಂದಲೇ ಗ್ಯಾಸ್ ಖರೀದಿಗೆ ಮುಗಿಬೀಳುತ್ತಿದ್ದ ಸನ್ನಿವೇಶ ಅಲ್ಪಮಟ್ಟಿಗೆ ಕಡಿಮೆಯಾಗಿದೆ. ಇದೇ ವೇಳೆ ಪೆಟ್ರೋಲ್, ಡೀಸೆಲ್ ಅಥವಾ ಅಡುಗೆ ಅನಿಲಗಳ ಕೊರತೆಯಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹೊರತೂ ದೇಶದಲ್ಲಿ ಇವುಗಳ ಪೂರೈಕೆ ವ್ಯವಸ್ಥೆ ಸ್ಥಿರವಾಗಿದೆ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಆದರೆ, ಆನ್‌ಲೈನ್ ಮುಖೇನ ಎಲ್‌ಪಿಜಿ ಬುಕ್ಕಿಂಗ್ ಶೇ.84 ರಿಂದ ಶೇ.87ಕ್ಕೇರಿದೆ. ಗ್ಯಾಸ್ ಸಿಗದಿದ್ದರೆ ಏನು ಮಾಡುವುದೆಂಬ ಹೆದರಿಕೆಯಿಂದ ಎಲ್‌ಪಿಜಿ ಡೀಲರ್‌ಶಿಪ್‌ಗಳ ಬಳಿ ಸರತಿಯಲ್ಲಿ ನಿಲ್ಲುವ ಬದಲು, ಡಿಜಿಟಲ್ ಮುಖೇನ ಬುಕ್ ಮಾಡಿ ಎಂಬ ತೈಲ ಮಾರ್ಕೆಟಿಂಗ್ ಕಂಪನಿಗಳ ಅಭಿಯಾನದ ಪರಿಣಾಮ, ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಶೇಕಡಾವಾರು ಹೆಚ್ಚತೊಡಗಿದೆ.

ದೇಶೀಯ ತೈಲ ಸಂಸ್ಕರಣಾಗಾರಗಳು ಅತ್ಯುನ್ನತ ಸಾಮರ್ಥ್ಯದಿಂದ ಕಾರ್ಯನಿರ್ವಹಿಸುತ್ತಿದ್ದು, ಸಾಕಷ್ಟು ಕಚ್ಚಾತೈಲ ದಾಸ್ತಾನನ್ನು ಕಾಯ್ದುಕೊಳ್ಳುತ್ತಿವೆ.

ಪಶ್ಚಿಮ ಬಂಗಾಳ, ಕೇರಳದಲ್ಲಿ ನಿಕಟ ಸ್ಪರ್ಧೆ: ಸಮೀಕ್ಷೆ


ಎನ್‌ಡಿಎ ತೆಕ್ಕೆಗೆ ತ.ನಾಡು, ಅಸ್ಸಾಂ?

ಹೊಸದಿಲ್ಲಿ: ಒಂದು ಕೇಂದ್ರಾಡಳಿತ ಪ್ರದೇಶ ಪುದುಚೇರಿ ಸೇರಿದಂತೆ ಒಟ್ಟು ಐದು ರಾಜ್ಯಗಳ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ನಾಲ್ಕು ಪ್ರಮುಖ ರಾಜ್ಯಗಳ ಚುನಾವಣಾ ಪೂರ್ವ ಸಮೀಕ್ಷೆಯೂ ಬಹಿರಂಗವಾಗಿದೆ.

ಅಸ್ಸಾಂನಲ್ಲಿ ಮತ್ತೆ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದಿರುವ ಸಮೀಕ್ಷೆ, ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದಿದೆ. ಹಾಗೆಯೇ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಭಾರೀ ಸ್ಪರ್ಧೆ ಏರ್ಪಡಲಿದೆ ಎಂದಿದ್ದರೆ, ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ನಿಕಟ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ ಎಂದಿದೆ.

ಅಸ್ಸಾಂನಲ್ಲಿ ಮತ್ತೆ ಕಾಂಗ್ರೆಸ್ ಹಿಂದೆ ಬೀಳಲಿದ್ದು, 126 ಕ್ಷೇತ್ರಗಳ ಈ ವಿಧಾನಸಭೆಯಲ್ಲಿ 26-28ರಲ್ಲಿ ಗೆಲ್ಲಬಹುದು ಎಂದಿದೆ. ಆದರೆ, ಬಿಜೆಪಿ ಇಲ್ಲಿ 96ರಿಂದ 98ರಲ್ಲಿ ಗೆಲುವು ಸಾಧಿಸಲಿದೆ ಎಂದು ಹೇಳಿದೆ. ಇತರೆಯವರು 2-8ರಲ್ಲಿ ಗೆಲ್ಲಬಹುದು ಎಂದಿದೆ.

ತಮಿಳುನಾಡಿನಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿಯ ಎನ್‌ಡಿಎ ಒಕ್ಕೂಟ 114-127ರಲ್ಲಿ ಗೆಲುವು, ಡಿಎಂಕೆ-ಕಾಂಗ್ರೆಸ್ ಒಕ್ಕೂಟ 104ರಿಂದ 114, ನಟ ವಿಜಯ್ ಅವರ ಟಿವಿಕೆ 6.12 ಮತ್ತು ಇತರೆಯವರು 1-6ರಲ್ಲಿ ಗೆಲ್ಲಬಹುದು ಎಂದಿದೆ.



ಕೇರಳ

- ಎಡರಂಗ- 61-71
- ಕಾಂಗ್ರೆಸ್ - 58-69
- ಎನ್‌ಡಿಎ - 2

ಪಶ್ಚಿಮ ಬಂಗಾಳ


- ಟಿಎಂಸಿ - 155-170
- ಬಿಜೆಪಿ - 100-115
- ಇತರೆ - 5-7

ಆರೋಗ್ಯ ಬಜೆಟ್‌ನಿಂದ ವಾರ್ಷಿಕ 150 ಕೋಟಿ ರೂ. ಕಾಂಗ್ರೆಸ್ ಜೇಬಿಗೆ

ಜನಪರವಾಗಿ ಸ್ವಾಸ್ಥ್ಯ ರಂಗ ಬದಲಿಸಿದ ಬಿಜೆಪಿ

ಗುವಾಹತಿ: ಅಸ್ಸಾಂನಲ್ಲಿ 15 ವರ್ಷಗಳ ಕಾಲ ಆಡಳಿತದಲ್ಲಿದ್ದಾಗ ರಾಜ್ಯ ಆರೋಗ್ಯ ಬಜೆಟ್‌ನಿಂದ ವರ್ಷಕ್ಕೆ 150 ಕೋಟಿ ರೂ.ಗಳನ್ನು ಕಾಂಗ್ರೆಸ್ ಜೇಬಿಗೆ ಹಾಕಿಕೊಳ್ಳುತ್ತಿತ್ತು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ. ಏಕಕಾಲಕ್ಕೆ ಬಿಜೆಪಿ ತನ್ನ 10 ವರ್ಷಗಳ ಆಳ್ವಿಕೆಯಲ್ಲಿ ಸ್ವಾಸ್ಥ್ಯ ರಂಗವನ್ನು ಜನಪರವಾಗಿ ಪರಿವರ್ತಿಸಿದೆ ಎಂದು ಹೇಳಿದರು. ಮಾತ್ರವಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಅಸ್ಸಾಂ ವೈದ್ಯಕೀಯ ಚಿಕಿತ್ಸಾ ರಂಗ ಮತ್ತು ಶಿಕ್ಷಣ ರಂಗಗಳಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರು.

ಕಾಂಗ್ರೆಸ್ ತನ್ನ ನಾಯಕರ ಕುಟುಂಬಗಳ ಹಣಕಾಸು ಆರೋಗ್ಯ ಬಗ್ಗೆ ಮಾತ್ರ ಚಿಂತನೆ ನಡೆಸಿದ್ದರಿಂದ 10 ವರ್ಷಗಳ ಹಿಂದೆ ಅಸ್ಸಾಂನಲ್ಲಿ ಆರೋಗ್ಯ ರಂಗವು ಅಧೋಗತಿಗೆ ಜಾರಿತ್ತು. ಕಾಂಗ್ರೆಸ್ ಆಳ್ವಿಕೆಯ 2016ರವರೆಗೂ ರಾಜ್ಯದ ಸ್ವಾಸ್ಥ್ಯ ರಂಗದಲ್ಲಿ ಭಾರೀ ಭ್ರಷ್ಟಾಚಾರ ತಾಂಡವಿಸಿತ್ತು ಎಂದವರು ಆಪಾದಿಸಿದರು.



ಸುಮಾರು 2,092 ಕೋಟಿ ಮೊತ್ತದ ಸ್ವಾಸ್ಥ್ಯಪರ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ, ಹಲವನ್ನು ಉದ್ಘಾಟಿಸಿ ಸಚಿವರು ಮಾತನಾಡಿದರು.

ಹುಟ್ಟಿರದ 9 ಲಕ್ಷ ಅಸ್ವಸ್ಥ ಮಕ್ಕಳ ಚಿಕಿತ್ಸೆಯ ನೆಪ: ಆರೋಗ್ಯ ಬಜೆಟ್‌ನಿಂದ ಕಾಂಗ್ರೆಸ್ ಪ್ರತಿ ವರ್ಷವೂ ಸುಲಿಗೆ ಮಾಡುತ್ತಿದ್ದ ಬರೋಬ್ಬರಿ 150 ಕೋಟಿ ರೂಗಳನ್ನು, ಈ ಭೂಮಿಗೇ ಬಂದಿರದ 9 ಲಕ್ಷ ಮಕ್ಕಳ ಚಿಕಿತ್ಸೆಗೆ ಮತ್ತು ಅಸ್ತಿತ್ವದಲ್ಲೇ ಇಲ್ಲದ 390 ಅಂಗನವಾಡಿ ಕೇಂದ್ರಗಳಿಗೆ ವ್ಯಯಿಸುತ್ತಿರುವುದಾಗಿ ದಾಖಲೆಗಳಲ್ಲಿ ತೋರಿಸುತ್ತಿತ್ತು ಎಂದು ಶಾ ಹೇಳಿದರು.

ರಾಹುಲ್‌ಗೆ ಬ್ರೇಕ್‌ಫಾಸ್ಟ್ ಮಾಡೋ ಜಾಗ ಗೊತ್ತಿಲ್ಲ!

ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡು, ಬಿಜೆಪಿ ಮತ್ತು ದೇಶದ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶವನ್ನು ಅಪಮಾನಿಸುವ ರಾಹುಲ್ ನಡೆಯನ್ನು ಯಾರೇ ಭಾರತೀಯರು ಬೆಂಬಲಿಸುವುದಿಲ್ಲ. ಕಾಂಗ್ರೆಸಿಗರು ಎಐ ಶೃಂಗಸಭೆ ಸಂದರ್ಭ ಶರ್ಟ್‌ರಹಿತವಾಗಿ ಪ್ರತಿಭಟಿಸಿದ್ದು ತೀರಾ ನಾಚಿಕೆಗೇಡು. ನಾವು ಕೂಡ ವಿಪಕ್ಷ ಸ್ಥಾನದಲ್ಲಿದ್ದು ಸರಕಾರದ ವಿರುದ್ಧ ಪ್ರತಿಭಟಿಸಿದ್ದೇವೆ, ಪ್ರತಿಭಟನೆಗೊಂದು ರೀತಿ ನೀತಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಚಿವ ಶಾ, ಪ್ರಜಾಸತ್ತೆಯಲ್ಲಿ ಸಂಸತ್ತಿಗೆ ಪವಿತ್ರ ಜಾಗವಿದೆ. ಸಂಸತ್‌ಭವನದ ಮೆಟ್ಟಿಲುಗಳನ್ನು ಧರಣಿಗೂ ಬಳಸುವಂತಿಲ್ಲ. ಆದರೆ ಇದರ ಮಹತ್ತ್ವವನ್ನೇ ಅರಿಯದ ರಾಹುಲ್ ಗಾಂಧಿ ಸಂಸತ್ತಿನ ಮೆಟ್ಟಿಲಲ್ಲೇ ಕುಳಿತು ಚಹಾ-ಪಕೋಡಾ ತಿನ್ನುತ್ತಿದ್ದದ್ದು ಸರಿಯಲ್ಲ ಎಂದರು.

ಸಂಪಾದಕೀಯ

ಕೋಲ್ಕೊತ್ತಾ ರ‍್ಯಾಲಿ ಸಂದೇಶ ನೀಡಿದೆ

ಕೋಲ್ಕೊತ್ತಾದ ಬ್ರಿಗೇಡ್ ಪೆರೇಡ್ ಮೈದಾನ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದೆ. ಪ್ರಧಾನಿ ಪ್ರವಾಸದ ಭಾಗ ಮತ್ತು ಬಿಜೆಪಿಯ ರ‍್ಯಾಲಿಯ ಕಾರಣಕ್ಕಲ್ಲದೆ ಪ.ಬಂಗಾಳದ ಪ್ರತಿ ಪ್ರಜೆಯೂ ಅಂದು ಮೂಗಿನ ಮೇಲೆ ಬೆರಳಿಟ್ಟು ಅದನ್ನು ಗಮನಿಸಿದ. ಪ. ಬಂಗಾಳದಲ್ಲಿ ಐತಿಹಾಸಿಕ ಮಹತ್ತ್ವವಿರುವ ಬ್ರಿಗೇಡ್ ಪೆರೇಡ್ ಮೈದಾನ ಬ್ರಿಟಿಷ್ ಕಾಲದಿಂದಲೇ ರಾಜ್ಯದ ಹೆಗ್ಗುರುತು. ವಿಶಾಲ ಮೈದಾನದ ಸಮೀಪದಲ್ಲೇ ವಸಾಹತುಶಾಹಿಯ ಕುರುಹಾದ ವಿಕ್ಟೋರಿಯಾ ಭವನ ತನ್ನ ಕತೆಯನ್ನು ಹೇಳುತ್ತದೆ. ಅಂಥ ಬ್ರಿಗೇಡ್ ಮೈದಾನ ಮೊನ್ನೆ ಮೊಟ್ಟಮೊದಲ ಬಾರಿಗೆ ತುಂಬಿತ್ತು. ಇದುವರೆಗೆ ಕಾಂಗ್ರೆಸಿಗರು, ಕಮ್ಯುನಿಸ್ಟರು ಮತ್ತು ತೃಣಮೂಲ ಹಲವು ಬಾರಿ ಆ ಮೈದಾನದಲ್ಲಿ ರ‍್ಯಾಲಿ ನಡೆಸಿ ಮೈದಾನ ತುಂಬಿಸಲು ಪ್ರಯತ್ನಿಸಿದರೂ ಇದುವರೆಗೂ ಯಶಸ್ಸು ಕಂಡಿರಲಿಲ್ಲ. ಸುಮಾರು ಐದು ಲಕ್ಷ ಜನ ನೆರೆಯಬಹುದಾದ ಮೈದಾನ ಅಂದು ಹೊಸ ರಾಜಕೀಯ ವ್ಯಾಖ್ಯಾನವನ್ನೂ ನಿರ್ಮಿಸಿತು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್



ದೌರ್ಜನ್ಯ, ಕೇಂದ್ರವನ್ನು ಲೆಕ್ಕಿಸದಿರುವ ಅದರ ದುಂಡಾವರ್ತನೆಗಳ ತರುವಾಯವೂ ಜನ ಬಿಜೆಪಿಯ ರ‍್ಯಾಲಿಯನ್ನು ಬೆಂಬಲಿಸಿದ್ದರೆಂದರೆ ಬಂಗಾಳ ಬದಲಾಗುತ್ತಿದೆ ಎಂದೇ ಅರ್ಥ.

ರ‍್ಯಾಲಿಗೆ ಡಾರ್ಜಲಿಂಗ್‌ನ ಕೊನೆಯ ಹಳ್ಳಿಯಿಂದ ಪರಗಣ ಜಿಲ್ಲೆಗಳ ಕೊನೆಯ ಹಳ್ಳಿಯವರೆಗೆ, ಕೂಚ್ ಬಿಹಾರಿನ ಪೂರ್ವದಿಂದ ಪುರುಲಿಯಾದ ಪಶ್ಚಿಮ ತುದಿಯವರೆಗೆ ಪ್ರವಾಹದಂತೆ ಜನರು ಆಗಮಿಸಿದ್ದರು. ಕೆಲವು ಜಿಲ್ಲೆಗಳಿಂದ ಕೋಲ್ಕೊತ್ತಾಕ್ಕೆ ರೈಲು ಪ್ರಯಾಣದ ಅವಧಿಯೇ 20 ಗಂಟೆಗಳಿಗೂ ಹೆಚ್ಚು. ಅಂಥ ಸುದೀರ್ಘ ಪ್ರಯಾಣದಲ್ಲಿ ಸ್ವಂತ ಊಟ ಮತ್ತು ವಸತಿಯ ವ್ಯವಸ್ಥೆಯೊಂದಿಗೆ ಜನರು ಮೋದಿಯವರ ಮಾತನ್ನು ಆಲಿಸಲು ಬಂದಿದ್ದರೆಂದರೆ ಅವರು ವಾಸ್ತವದಿಂದ ಹೊರಗೆ ಬರಲು ತಹತಹಿಸುತ್ತಿದ್ದಾನೆಂದೇ ಅರ್ಥ. ಒಂದು ಕಾಲದಲ್ಲಿ ಇದೇ ಜನರು ಕಾಂಗ್ರೆಸನ್ನು ನಂಬಿ ಗೆಲ್ಲಿಸಿದ್ದರು. ಅನಂತರ ಕಮ್ಯುನಿಸ್ಟರ ಘೋಷಣೆಗಳಿಗೆ ಮರುಳಾಗಿ ಕಾಮ್ರೆಡ್‌ಗಳಿಂದ ಆಳಿಸಿಕೊಂಡಿದ್ದರು. ಕಮ್ಯುನಿಸ್ಟರ ಅರಾಜಕತೆಯನ್ನು ದೂರ ಮಾಡುವ ನೆಪದಲ್ಲಿ ಮಮತಾ ಬ್ಯಾನರ್ಜಿ ರಾಜ್ಯಾದ್ಯಂತ ಚಳವಳಿಯನ್ನು ನಡೆಸಿ ಅಧಿಕಾರಕ್ಕೆ ಬಂದರು. ಆದರೆ ಬಂಗಾಳಕ್ಕೆ ಸಿಕ್ಕಿದ್ದು ಕಮ್ಯುನಿಸ್ಟರಿಗಿಂತ ಹೆಚ್ಚಿನ ದುರಾಡಳಿತ. ಇಂದು ತೃಣಮೂಲ ಕಾಂಗ್ರೆಸಿನ ಪಾಪದ ಕೊಡ ತುಂಬಿದೆ. ಅದಕ್ಕೆ ಸಾಕ್ಷಿ ಕೋಲ್ಕೊತ್ತಾದ ಈ ರ‍್ಯಾಲಿ. ಒಂದು ಮೈದಾನದಲ್ಲಿ ಐದು ಲಕ್ಷಕ್ಕಿಂತಲೂ ಹೆಚ್ಚು ಸೇರುವುದೊಂದು ಸಾಹಸವಾದರೆ, ಆ ಬೃಹತ್ ಸಂಖ್ಯೆಯನ್ನು ಭಾಷಣದವರೆಗೆ ಶಾಂತಿಯುತವಾಗಿ, ಶಿಸ್ತಿನಿಂದ ಕೂರಿಸುವುದು ಇನ್ನೊಂದು ಸಾಹಸ. ಮೋದಿಯವರ ಭಾಷಣವಿದ್ದುದು ಅಪರಾಹ್ನ. ಮುಂಜಾನೆಯಿಂದಲೇ ಮೈದಾನದತ್ತ ಆಗಮಿಸುತ್ತಿದ್ದ ಜನಸಾಗರ ಮಧ್ಯಾಹ್ನದ ಹೊತ್ತಿಗೆ ತುಂಬಿತ್ತೆಂದರೆ ಪಶ್ಚಿಮ ಬಂಗಾಳ ಏನನ್ನು ನಿರೀಕ್ಷಿಸುತ್ತಿದೆ ಎನ್ನುವುದನ್ನು ನಾವು ಅಂದಾಜಿಸಬಹುದು.

ಮೋದಿಯವರು ಸಹಜವಾಗಿಯೇ ಆಕ್ರಮಣಕಾರಿಯಾಗಿ ಮಾತುಗಳನ್ನಾಡಿದರು. ನೊಂದ ಬಂಗಾಳಕ್ಕೆ ಅದರ ಅವಶ್ಯಕತೆ ಇತ್ತು. ಮುಂದಿನ ದಿನಗಳಲ್ಲಿ ಅದರ ಫಲವನ್ನು ಪ.ಬಂಗಾಳದಲ್ಲಿ ಕಾಣಬಹುದು ಎಂಬುದನ್ನು ಕಾರ್ಯಕ್ರಮ ಹೇಳುತ್ತಿತ್ತು.

ವಿಶ್ವಯುದ್ಧ: ಸಾವರ್ಕರ್ ದೃಷ್ಟಿಕೋನ ಹೇಗಿತ್ತು?

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬದು ಸಾವರ್ಕರ್ ದೃಷ್ಟಿಕೋನವಾಗಿತ್ತು.

ನೇರ ನೋಟ

• ದು.ಗು. ಲಕ್ಷ್ಮಣ
dugulakshman@yahoo.com



ಜಾಗತಿಕ ಮಟ್ಟದಲ್ಲಿ ಯುದ್ಧೋನ್ಮಾದ ಹೆಚ್ಚಾಗಿ ಅಮೆರಿಕ, ಇಸ್ರೇಲ್ ಜಂಟಿ ದಾಳಿಯಿಂದ ಇರಾನ್ ಎಂಬ ತೈಲ ಸಂಪದ್ಭರಿತ ರಾಷ್ಟ್ರ ಸ್ಮಶಾನಸದೃಶವಾಗಿರುವುದು, ಇರಾನ್ ಕೂಡ ಅಮೆರಿಕ, ಇಸ್ರೇಲ್ ನೆಲೆಗಳನ್ನು ಧ್ವಂಸಗೊಳಿಸುತ್ತಿರುವುದು, ತತ್ಪರಿಣಾಮವಾಗಿ ಜಾಗತಿಕವಾಗಿ ತೈಲ ಬೆಲೆಯೇರಿಕೆ, ಅಡುಗೆ ಅನಿಲಕ್ಕೆ ತತ್ವಾರ- ಇತ್ಯಾದಿ ಗಂಭೀರ ಸಮಸ್ಯೆ ಉದ್ಭವಿಸಿರುವುದು ವರ್ತಮಾನದ ವಿದ್ಯಮಾನಗಳು.

ಈಗಿನಯುದ್ಧದಹಿನ್ನೆಲೆಯಲ್ಲಿ ಹಿಂದೆಎರಡನೇಜಾಗತಿಕಸಮರನಡೆದಾಗ ಭಾರತದ ಪರಿಸ್ಥಿತಿ ಹೇಗಿತ್ತು? ಆಗ ವೀರ ಸಾವರ್ಕರ್, ಆ ಯುದ್ಧದಲ್ಲಿ ಪಾರತಂತ್ರ್ಯದಲ್ಲಿನರಳುತ್ತಿದ್ದಭಾರತದನಿಲುವುಹೇಗಿರಬೇಕೆಂಬುದನ್ನುತಮ್ಮ ಭಾಷಣ, ಬರೆಹಗಳಲ್ಲಿ ಸೂಚಿಸಿದ್ದರು? ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶ ನಾಯಕರ ನಿಲುವು ಹೇಗಿರಬೇಕೆಂದು ಹೇಳಿದ್ದರು? ಮುಂತಾದ ಕುತೂಹಲಕರ ಸಂಗತಿಗಳತ್ತ ಒಮ್ಮೆ ಗಮನಹರಿಸುವ ಪ್ರಯತ್ನ, ಉದ್ದೇಶ ಈ ಲೇಖನದ್ದು.

ಸಾವರ್ಕರ್ ಅಂಡಮಾನ್ ಸೆರೆಯಿಂದ ಬಿಡುಗಡೆಯಾಗಿ ಭಾರತಕ್ಕೆ ಬಂದ ಬಳಿಕ ಹಿಂದು ಮಹಾಸಭಾ ಸ್ಥಾಪಿಸಿ, ಅಖಂಡ ಹಿಂದುಸ್ತಾನದ ಹೋರಾಟದಲ್ಲಿ ಪಾಲ್ಗೊಂಡಿದ್ದರು. 1940ರಲ್ಲಿ ಮಧುರೈಯಲ್ಲಿ ನಡೆದ ಹಿಂದು ಮಹಾಸಭಾದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆ ವಹಿಸಿ ದೀರ್ಘ ಭಾಷಣ ಮಾಡಿದ ಸಾವರ್ಕರ್, ಆಗ ನಡೆಯುತ್ತಿದ್ದ ವಿಶ್ವಯುದ್ಧದ ಬಗ್ಗೆಯೂ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದರು. ಸಾವರ್ಕರ್ ಮಾತುಗಳಲ್ಲೇ ಅದನ್ನು ಕೇಳಿ:

''ಎರಡನೇ ವಿಶ್ವಯುದ್ಧಕ್ಕೆ ಯಾವುದೇ ಘನ ಉದ್ದೇಶವಿಲ್ಲ. ಯಾವ ನೈತಿಕ ಕಾರಣವೂ ಇಲ್ಲ. ಯುದ್ಧನಿರತ ಇಂಗ್ಲೆಂಡ್, ಅಮೆರಿಕಾ, ರಷ್ಯಾ, ಜಪಾನ್, ಜರ್ಮನಿ, ಫ್ರಾನ್ಸ್, ಇಟಲಿ ಇತ್ಯಾದಿ ದೇಶಗಳಿಗೆ ಯಾವುದೇ ಉದಾತ್ತ ಉದ್ದೇಶವೂ ಇಲ್ಲ. ಎಲ್ಲರೂ ಸ್ವಾರ್ಥಿಗಳೇ. ಎಲ್ಲರೂ ಕಳ್ಳರೇ. ಕಳ್ಳನ ನಡೆಯನ್ನು ಕಳ್ಳನೇ ಬಲ್ಲ.... ಯುದ್ಧದ ಕುರಿತಂತೆ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ನಿಲುವುಗಳು ಭಿನ್ನವಾಗಿವೆ. ಕಾಂಗ್ರೆಸ್ ಇಂಗ್ಲೆಂಡ್, ಅಮೆರಿಕಗಳ ಉದಾತ್ತ ನೀತಿಯನ್ನು ಸಮರ್ಥಿಸುತ್ತಿದೆ. ಕಾಂಗ್ರೆಸ್‌ನ ಸ್ವಯಂಭೂ ನೇತಾರ ಸರ್ವಾಧಿಕಾರಿ ಗಾಂಧೀಜಿಯವರು ಅದರ ಪ್ರಬಲ ಸಮರ್ಥಕರಾಗಿದ್ದಾರೆ. ಗಾಂಧೀಜಿ ಪ್ರಕಾರ, 'ಯುದ್ಧದ ಸಂದರ್ಭದಲ್ಲಿ ಸ್ವಾತಂತ್ರ್ಯದ ಬೇಡಿಕೆ ಇಡುವುದು ಸರಿಯಲ್ಲ. ಈ ಸಂದರ್ಭದಲ್ಲಿ ಇಂಗ್ಲೆಂಡ್, ಫ್ರಾನ್ಸ್‌ಗಳ ರಕ್ಷಣೆಯೇ ಮುಖ್ಯ. ಪ್ರಜಾತಂತ್ರದ ರಕ್ಷಣೆಗಾಗಿ ನಾವು ಈಗ ಯಾವುದೇ ಷರತ್ತಿಲ್ಲದೆ ಆ ದೇಶಗಳ ಪರವಾಗಿ ನಿಲ್ಲಬೇಕು. ಅವರಿಗೆ ಸಹಾಯ ಮಾಡಬೇಕು. ಅದಕ್ಕಾಗಿ ಭಾರತೀಯರು ಸಿದ್ಧರಾಗಿರಬೇಕು' ನೆಹರೂ ಹೇಳುವಂತೆ, 'ಫ್ರಾನ್ಸ್, ಇಂಗ್ಲೆಂಡ್‌ಗಳಿಗೆ ಪ್ರಜಾತಂತ್ರದ ಉಳಿವಿಗಾಗಿ ಸಹಾಯ ಮಾಡಲು ನಾವು ತಯಾರಾಗಿರಬೇಕು. ಏಕೆಂದರೆ ಆ ದೇಶಗಳ ಮೇಲೆ ಸಾಮ್ರಾಜ್ಯವಾದಿ ಜರ್ಮನಿ ಆಕ್ರಮಣ ಮಾಡಿದೆ'

ಆದರೆ ಯುದ್ಧದ ಕುರಿತಂತೆ ಹಿಂದು ಮಹಾಸಭಾದ ನಿಲುವು ತೀರಾ ಭಿನ್ನವಾಗಿದೆ. ನಮ್ಮ ಪ್ರಕಾರ, ಯುದ್ಧನಿರತ ಯುರೋಪಿನ ದೇಶಗಳಿಗೆ ಯಾವುದೇ ಘನವಾದ ಉದ್ದೇಶವಿಲ್ಲ. ಪ್ರಜಾತಂತ್ರ ಸ್ಥಾಪನೆ ಅಥವಾ ತತ್ವ, ಸಿದ್ಧಾಂತಗಳ ಪ್ರತಿಷ್ಠಾಪನೆ ಇತ್ಯಾದಿ ಯಾವ ಉದಾತ್ತ ಕಾರಣವೂ ಅದರಲ್ಲಿಲ್ಲ. ಯುದ್ಧ ನಡೆಯುತ್ತಿರುವುದು ಕೇವಲ ಸ್ವಾರ್ಥಕ್ಕಾಗಿ, ಪ್ರತಿಷ್ಠೆಗಾಗಿ, ಅಷ್ಟೆ. ತಮಾಷೆಯೆಂದರೆ ಇಂಗ್ಲೆಂಡ್‌ನ ಚರ್ಚಿಲ್ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್‌ಗೆ ಹೇಳಿದ–ಪೋಲೆಂಡ್ ಅನ್ನು ಬಿಟ್ಟುಬಿಡು ಎಂದು. ಆಗ ಹಿಟ್ಲರ್ ಹೇಳಿದ್ದು – ಸರಿ, ನಾನು ಪೋಲೆಂಡ್ ಅನ್ನು ಬಿಡುವೆ. ಆದರೆ ನೀವು (ಇಂಗ್ಲೆಂಡ್) ಹಿಂದುಸ್ತಾನವನ್ನು ಬಿಡುವಿರಾ? ಅದಕ್ಕೇ ಹೇಳುವುದು– ಕಳ್ಳನೇ ಕಳ್ಳನ ನಡೆಯನ್ನು ಬಲ್ಲ. ಏಕೆಂದರೆ ಎಲ್ಲರೂ ಕಳ್ಳರೇ ಆಗಿದ್ದಾರೆ!

ತಮ್ಮ ತಮ್ಮ ಸಾಮ್ರಾಜ್ಯಗಳ ರಕ್ಷಣೆ, ವಸಾಹತುಗಳು ವಿಸ್ತರಣೆ ಮತ್ತು ಅದರ ಸ್ಥಿರತೆಗಾಗಿ ಯುರೋಪಿನ ದೇಶಗಳು ಯುದ್ಧದಲ್ಲಿ ನಿರತವಾಗಿವೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ರಷ್ಯಾ, ಚೀನಾ ಇತ್ಯಾದಿ ಎಲ್ಲ ದೇಶಗಳೂ ಸಾಮ್ರಾಜ್ಯವಾದಿ ದೇಶಗಳೇ. ಆದರೆ ಆ ದೇಶಗಳು ಬಳಸುವುದು ಮಾತ್ರ ಪ್ರಜಾತಂತ್ರದ ರಕ್ಷಣೆ ಎಂಬ ಘೋಷಣೆ. ಇಂತಹ ಸಾಮ್ರಾಜ್ಯಶಾಹಿ ದೇಶಗಳ ಕಪಿಮುಷ್ಟಿಯಲ್ಲಿ ಸಿಲುಕಿದ ಏಷ್ಯಾ, ಆಫ್ರಿಕಾ, ಯುರೋಪಿನ ಹಲವಾರು ದೇಶಗಳು ದಾಸ್ಯದಲ್ಲಿ ನರಳಿ ನರಳಿ ಸಾಯುತ್ತಿವೆ....



ಎರಡನೇ ವಿಶ್ವಯುದ್ಧ ಹಿನ್ನೆಲೆಯಲ್ಲಿ ವಿಭಿನ್ನ, ವಿಚಿತ್ರ ವಾದ(ಇಸಂ) ಕೇಳಿಬರುತ್ತಿದೆ. ಪ್ರಜಾಪ್ರಭುತ್ವ, ಸಾಮ್ರಾಜ್ಯವಾದ, ವಸಾಹತುಶಾಹಿ, ನಾಝಿಸಂ, ಫ್ಯಾಸಿಸಂ, ಸೋಶಿಯಲಿಸಂ ಇತ್ಯಾದಿ ಎಲ್ಲವೂ ಒಂದೇ ಚೀಲದೊಳಗಿರುವ ಬೇರೆ ಬೇರೆ ಪದಗಳು. ಇವರೆಲ್ಲರ ಉದ್ದೇಶ ಒಂದೇ– ತಮ್ಮ ತಮ್ಮ ಸಾಮ್ರಾಜ್ಯದ (ವಸಾಹತು) ಹಿತರಕ್ಷಣೆ ಹಾಗೂ ವಿಸ್ತರಣೆ. ಅದಕ್ಕಾಗಿ ಕತ್ತಿಯ ಬಲಪ್ರಯೋಗ ಮತ್ತು ಅದರ ಬಲದಿಂದ ಗೆಲ್ಲುವ ಪ್ರಯತ್ನ. ಜಿಸ್‌ಕೀ ಲಾಠೀ ಉಸ್‌ಕೀ ಭೈಂಸ್(ಲಾಠಿ ಉಳ್ಳವನದ್ದೇ ಕೋಣ). ಹಾಗಾಗಿ ಯುದ್ಧನಿರತ ದೇಶಗಳ ಮೂಲ ಉದ್ದೇಶವನ್ನೇ ಅರ್ಥ ಮಾಡಿಕೊಳ್ಳದೆ ಕೇವಲ ಆಕರ್ಷಕ ಘೋಷಣೆಗೆ ಮರುಳಾಗಿ ಬೆಂಬಲ, ಸಮರ್ಥನೆ ನೀಡುವುದು ಮೂರ್ಖತನವಷ್ಟೇ ಅಲ್ಲ, ಆತ್ಮಹತ್ಯಾಕಾರಕವೂ ಹೌದು.

ಹಿಟ್ಲರ್‌ನನ್ನು ರಾಕ್ಷಸ, ನಾಝೀವಾದಿ, ಸರ್ವಾಧಿಕಾರಿ, ಕ್ರೂರಿ ಹಾಗೂ ಚರ್ಚಿಲ್‌ನನ್ನು ಪ್ರಜಾತಂತ್ರವಾದಿ, ದೇವದೂತ ಎಂಬಂತೆ ಬಣ್ಣಿಸುವುದು ಎರಡೂ ಮೂರ್ಖತನವೇ. ಇಬ್ಬರೂ ಒಂದೇ. ಜರ್ಮನಿಗೆ ನಾಝಿಸಂ, ರಷ್ಯಾಕ್ಕೆ ಬೋಲ್ಶೇಯಿಸಂ, ಇಟಲಿಗೆ ಫ್ಯಾಸಿಸಂ ಲಾಭದಾಯಕವೇ. ಪ್ರಜಾತಂತ್ರ ಸ್ಥಾಪನೆಗಾಗಿ ಇಂಗ್ಲೆಂಡ್ ತೆತ್ತ ಬೆಲೆ ಎಷ್ಟು ಎಂಬುದು ನಮಗೆ ತಿಳಿದೇ ಇದೆ.

ರಾಜನೀತಿಯಲ್ಲಿ ವಾಸ್ತವಿಕ ಕಾರ್ಯನೀತಿ, ಪದ್ಧತಿ ಹೇಗಿರಬೇಕು, ಅದು ಹೇಗೆ ವ್ಯಾವಹಾರಿಕವಾಗಿರಬೇಕು ಎಂಬುದು ಚಿಂತನಾರ್ಹ ಸಂಗತಿ. ರಾಜನೀತಿ ಶಾಸ್ತ್ರ ಮತ್ತು ವಿಶ್ವದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸಿದ್ಧಾಂತವಿದೆ. ಹಾಗೆಯೇ ಜಗತ್ತಿನ ಎಲ್ಲ ಜನರಿಗೆ ಎಲ್ಲ ಕಾಲಕ್ಕೂ ಉಪಯುಕ್ತವಾದ ಘಟನಾವಳಿ ಇಲ್ಲವೇ ಸಮಾಜ ರಚನಾ ಪದ್ಧತಿ (ಸಾಮಾಜಿಕ ವ್ಯವಸ್ಥೆ)ಗಳು ಶಾಶ್ವತವಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ.

ಪ್ರಜಾತಾಂತ್ರಿಕ ಮೌಲ್ಯಗಳು, ವೈಯಕ್ತಿಕ ಸ್ವಾತಂತ್ರ್ಯ ಇತ್ಯಾದಿ ವಿಷಯಗಳಲ್ಲಿ ಆಂಗ್ಲರಿಗಿರುವ ನಂಬಿಕೆ, ಬದ್ಧತೆಗಳನ್ನು ಸರಿಗಟ್ಟುವವರು ಜಗತ್ತಿನಲ್ಲಿ ಯಾರೂ ಇಲ್ಲ, ನಿಜ. ಆದರೆ ಯುದ್ಧ ಪ್ರಾರಂಭವಾಗುತ್ತಿದ್ದಂತೆಯೇ ಅವರು ತಮ್ಮ ಸಂವಿಧಾನ, ಪ್ರಜಾತಾಂತ್ರಿಕ ಮೌಲ್ಯ ಆದಿಗಳನ್ನು ಬದಿಗಿಟ್ಟು ಯುದ್ಧತಂತ್ರವನ್ನಷ್ಟೇ ಅನುಸರಿಸುವುದು ಯಾಕೆ? ಜರ್ಮನಿಯಲ್ಲಾದರೋ ಹಿಟ್ಲರನ ಮಾತೇ ಕಾನೂನು. ಇಂಗ್ಲೆಂಡ್‌ನ ಚರ್ಚಿಲ್‌ನದ್ದೂ ಅದೇ ರೀತಿ. ಜರ್ಮನಿ ಸಾಮ್ರಾಜ್ಯವಾದಿ ದೇಶ. ಹಿಟ್ಲರ್‌ನದು ನಾಝೀವಾದ. ಅವರದ್ದು ಆಕ್ರಮಕ ನೀತಿ. ಆದ್ದರಿಂದ ಜರ್ಮನ್ ವಿರುದ್ಧ ಭಾರತೀಯರು ಹೋರಾಡಲೇಬೇಕು, ಅದು ಭಾರತೀಯರ ಕರ್ತವ್ಯವೆಂದೋ ಅಥವಾ ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್‌ಗಳು ಪ್ರಜಾತಂತ್ರದ ಸಮರ್ಥಕರು, ಹಾಗಾಗಿ ಅವರನ್ನು ಬೆಂಬಲಿಸಬೇಕೆಂದೋ ಹೇಳುವುದು ಸರಿಯಲ್ಲ. ಏಕೆಂದರೆ ಹಾಗೆ ಹೇಳುವುದರಲ್ಲಿ ಯಾವುದೇ ಸತ್ಯವಿಲ್ಲ.

ಹಾಗಾಗಿ ಯುದ್ಧದ ಈ ಸಂದರ್ಭದಲ್ಲಿ ಯಾವ ದೇಶ ಹಿಂದುಸ್ತಾನದ ಹಿತ ರಕ್ಷಿಸಬಲ್ಲುದೋ ಅದೇ ನಮ್ಮ ಮಿತ್ರದೇಶ. ಅದೇ ನಮ್ಮ ವಾಸ್ತವಿಕ, ವ್ಯಾವಹಾರಿಕ ಮತ್ತು ರಾಜನೈತಿಕ ಕಾರ್ಯನೀತಿಯಾಗಬೇಕು. ಅವರು (ಆ ದೇಶಗಳು) ಯಾವ ವಾದ(ಇಸಂ)ಕ್ಕೆ ಸೇರಿದ್ದರೂ ಸರಿಯೇ, ನಮ್ಮ ಹಿತರಕ್ಷಕ ದೇಶವೇ ನಮ್ಮ ಮಿತ್ರ.

ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್, ಜರ್ಮನಿ, ರಷ್ಯಾ ಮತ್ತಿತರ ದೇಶಗಳು ಪರಸ್ಪರ ಯುದ್ಧ ಮಾಡಿರುವ ನಿದರ್ಶನಗಳಿವೆ. ಉದಾಹರಣೆಗೆ–ಇಂಗ್ಲೆಂಡ್ ವಿರುದ್ಧ ಅಮೆರಿಕಾ, ಇಂಗ್ಲೆಂಡ್ ವಿರುದ್ಧ ಫ್ರಾನ್ಸ್, ಜರ್ಮನಿ ವಿರುದ್ಧ ಫ್ರಾನ್ಸ್ ಇತ್ಯಾದಿ. ಅಮೆರಿಕನ್ನರು ತಮ್ಮ ಸ್ವಾತಂತ್ರ್ಯಕ್ಕಾಗಿ ಬ್ರಿಟನ್ ವಿರುದ್ಧವೇ ಹೋರಾಡಿದ್ದಾರೆ. ಈ ಎಲ್ಲ ಯುದ್ಧಗಳಿಗೆ ಮೂಲ ಕಾರಣ– ಸಾಮ್ರಾಜ್ಯ ವಿಸ್ತರಣೆ. ಇನ್ನು ನಾಝಿಗಳು ಮತ್ತು ಬೋಲ್ಸೆವಿಕರು ಕಟ್ಟರ್ ಶತ್ರುಗಳು. ಆದರೆ ಪೋಲೆಂಡ್ ಪ್ರಶ್ನೆ ಬಂದಾಗ ಇಬ್ಬರೂ ಒಂದಾದರು. ಒಂದು ಕಾಲಘಟ್ಟದಲ್ಲಿ ಪರಸ್ಪರ ಕತ್ತಿ ಹಿಡಿದು ಯುದ್ಧ ಮಾಡಿದ್ದವರು. ಇಂದು ಅನಿವಾರ್ಯವಾಗಿ ಮಿತ್ರರಾಗಿದ್ದಾರೆ. ಕಾಲಕ್ಕೆ ತಕ್ಕಂತೆ ಕೋಲ ಕಟ್ಟುವವರಂತೆ, ಅಷ್ಟೇ. ಇದು ಸಮಯಸಾಧಕ ನೀತಿ. ಅನುಕೂಲಸಿಂಧು ಶಾಸ್ತ್ರ. ಒಂದು ಕಾಲದ ಮಿತ್ರರು ಇದೀಗ ಶತ್ರುಗಳಾಗಿದ್ದಾರೆ. ಶತ್ರು ಪಕ್ಷದಲ್ಲಿದ್ದವರು ಮಿತ್ರರಾಗಿದ್ದಾರೆ. ಇದಕ್ಕೆ ಯಾವ ನೈತಿಕ ಆಧಾರವೂ ಇಲ್ಲ.

ಶತ್ರು ಇನ್ನೊಂದು ದೇಶದೊಂದಿಗೆ ಯುದ್ಧ ನಿರತನಾಗಿರುವಾಗ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಸಶಸ್ತ್ರ ಕ್ರಾಂತಿ ಮಾಡುವುದು ಗುಲಾಮೀ ದೇಶದ ಜನರ ಪ್ರಮುಖ ದಾರಿಯಾಗಿದೆ ಎಂದು ಸಾಕ್ರಟೀಸ್ ಹೇಳಿದ್ದಾನೆ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ನಮ್ಮನ್ನು ನಿಃಶಸ್ತ್ರರನ್ನಾಗಿ ಮಾಡಲಾಗಿದೆ.... ಅಹಿಂಸಾವಾದ ಮಾರ್ಗ ನೈತಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದಲೂ ತ್ಯಾಜ್ಯವೇ ಸರಿ. ಯುದ್ಧನೀತಿ ಶಾಸ್ತ್ರದಲ್ಲಿ ವ್ಯಾವಹಾರಿಕ ದೃಷ್ಟಿಕೋನಕ್ಕೇ ಮಹತ್ವ. ವ್ಯಾವಹಾರಿಕ ದೃಷ್ಟಿಕೋನವೇ ನೀತಿಶಾಸ್ತ್ರದ ಆಧಾರ. ಮಾನದಂಡ. ನೀತಿ–ಅನೀತಿ, ನ್ಯಾಯ–ಅನ್ಯಾಯ. ಒಳಿತು– ಕೆಡುಕು, ಸದ್ಗುಣ–ದುರ್ಗುಣ ಇತ್ಯಾದಿಗಳಿಗೆ ವ್ಯವಹಾರವೇ ಆಧಾರ. ಅದನ್ನು ವ್ಯಾವಹಾರಿಕ ಮಾನದಂಡದಿಂದ ನಿರ್ಧರಿಸಬೇಕು ಎನ್ನುತ್ತಾರೆ ನೀತಿಶಾಸ್ತ್ರಜ್ಞರು. ಮಾನವ ಬದುಕಿಗೆ ಉಪಯುಕ್ತವಾದ ಆಚಾರ–ವಿಚಾರಗಳೆಲ್ಲ ನೀತಿಸಮ್ಮತವಾದವುಗಳೇ. ಅಹಿಂಸಾವಾದ ವ್ಯವಹಾರ ಯೋಗ್ಯವಲ್ಲ....''

ಯುದ್ಧ ಯಾರ ನಡುವೆಯೇ ನಡೆದಿರಲಿ, ಹಿಂದುಸ್ತಾನದ ಹಿತರಕ್ಷಣೆಗೇ ಆದ್ಯತೆ ನೀಡಬೇಕೆಂಬದು ಸಾವರ್ಕರ್ ದೃಷ್ಟಿಕೋನವಾಗಿತ್ತು. ವರ್ತಮಾನದ ಅಮೆರಿಕಾ–ಇರಾನ್ ಯುದ್ಧದಲ್ಲೂ ಅಷ್ಟೆ. ಆ ದೇಶಗಳು ಎಷ್ಟಾದರೂ ಬಡಿದಾಡಿಕೊಳ್ಳಲಿ. ಆದರೆ ಅದರಿಂದ ಭಾರತಕ್ಕೆ, ಇಲ್ಲಿನ ಜನಜೀವನಕ್ಕೆ ತೊಂದರೆ ಆಗುತ್ತದೆ ಎಂದಾದರೆ ಭಾರತ ಸರಕಾರವು ಅಮೆರಿಕ, ಇಸ್ರೇಲ್ ಮತ್ತು ಇರಾನ್ – ಈ ಎಲ್ಲ ದೇಶಗಳ ಮೇಲೆ ಒತ್ತಡ ಹೇರಿ ಯುದ್ಧ ಸ್ಥಗಿತಕ್ಕೆ ಆದ್ಯತೆ ನೀಡಬೇಕಾಗಿದೆ. ಅಂತಿಮವಾಗಿ ನಮಗೆ ನಮ್ಮ ದೇಶದ ಹಿತವೇ ಮುಖ್ಯವಾಗಬೇಕಾಗಿದೆ.

(ಆಧಾರ: Hindu Rashtra Darshan by Veer Sarvarkar, ಪ್ರಕಾಶಕರು: ಪ್ರಭಾತ್ ಪ್ರಕಾಶನ, ನವದೆಹಲಿ)

ಹರೆಯದವರ ಒತ್ತಡಗಳು


ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗಬೇಕು.

ತಾರುಣ್ಯ ತಲ್ಲಣ

• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ರಾಮು ಈಗ ಎರಡನೇ ಪಿಯುಸಿಯಲ್ಲಿ ಓದುತ್ತಿದ್ದಾನೆ. ಒಂಭತ್ತನೇ ತರಗತಿಯಲ್ಲಿ ಒಳ್ಳೆಯ ಅಂಕ ಗಳಿಸಿದ್ದ ರಾಮುವಿಗೆ ಹತ್ತನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಇದರಿಂದ ಅವನು ಮನೆಯವರಿಂದ ಹಲವಾರು ಟೀಕೆ ಟಿಪ್ಪಣಿಗಳನ್ನು ಎದುರಿಸಬೇಕಾಗಿ ಬಂತು. ನೀನು ಸರಿಯಾಗಿ ಓದಲಿಲ್ಲ, ಆಟ ಆಟ ಅಂತ ಟೈಮು ಕಳೆದೆ. ಅದಕ್ಕಾಗಿ ನಿನಗೆ ಕಡಿಮೆ ಅಂಕಗಳು ಬಂದವು ಎಂದು ಅಪ್ಪ ಹೇಳಿದರೆ, ಅಮ್ಮ ನೋಡು ನಿನ್ನ ಅಕ್ಕ ಚೆನ್ನಾಗಿ ಓದಿ ಹತ್ತನೇ ತರಗತಿಯಲ್ಲಿ ತೊಂಭತ್ತು ಪರ್ಸೆಂಟ್ ತಗೊಂಡಿದ್ಲು. ಈಗ ನೋಡು, ನಿನಗೆ ನಾವು ಏನು ಮಾಡ್ಬೇಕೂ ಅಂತಾ ಗೊತ್ತಾಗ್ತಿಲ್ಲ. ಅದೂ ಅಲ್ದೇ ನೋಡೋರ ಮುಂದೆ ತಲೆ ತಗ್ಗಿಸಬೇಕು ಎಂಬ ಟೀಕೆ. ಅವೆಲ್ಲವನ್ನೂ ಸಹಿಸಿಕೊಂಡ ರಾಮುವಿಗೆ ಮೊದಲನೇ ಪಿಯುಸಿಯಲ್ಲಿ ಒಳ್ಳೆಯ ಅಂಕಗಳು ಬಂದರೂ, ಅಕ್ಕನಿಗಿಂತ ಕಡಿಮೆಯಾಗಿತ್ತು. ಹೇಗಾದರೂ ಮಾಡಿ ಎರಡನೇ ಪಿಯುಸಿಯಲ್ಲಿ ಒಳ್ಳೆಯ ಅಂಕ ಪಡೆದು ಎಲ್ಲರಿಂದಲೂ ಹೊಗಳಿಸಿಕೊಳ್ಳಬೇಕೆಂಬ ಹಂಬಲ ರಾಮುವಿಗೆ. ಅದಕ್ಕಾಗಿ ಆಟವಾಡುವುದನ್ನು ಬಿಟ್ಟ, ಕಾಲೇಜಿನ ಯಾವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ನೇಹಿತರೊಂದಿಗೆ ಬೆರೆಯುತ್ತಿರಲಿಲ್ಲ. ದಿನದ ಇಪ್ಪತ್ನಾಲ್ಕು ಗಂಟೇನೂ ಓದು ಓದು ಓದು. ಆದರೂ ಕೊನೆಗೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳು ಬರಲಿಲ್ಲ.



ಹರೆಯದವರಲ್ಲಿ ಒತ್ತಡ ತರುವ ಮುಖ್ಯವಾದ ಅಂಶವೆಂದರೆ ಪಾಠ ಮತ್ತು ಪರೀಕ್ಷೆ. ಪೋಷಕರು, ಉಪಾಧ್ಯಾಯರು, ಸ್ನೇಹಿತರು ಅಥವಾ ಸಂಬಂಧಿಕರೇ ಆಗಲಿ ಎಲ್ಲರ ಗಮನವೂ ತಮ್ಮ ಮಗ/ಮಗಳು ಎಷ್ಟು ಅಂಕ ಗಳಿಸುತ್ತಾರೆಂಬುದು. ಇದಕ್ಕೆ ಅವರು ಮಾಡುವ ಟೀಕೆ ಟಿಪ್ಪಣಿಗಳು. ಕೆಲವು ವಿದ್ಯಾರ್ಥಿಗಳು ಒತ್ತಡವನ್ನು ತಡೆಯಲಾರದೇ ಖಿನ್ನತೆಗೆ ಒಳಗಾಗುತ್ತಾರೆ. ಕೆಲವರು ರಾಮುವಿನ ಹಾಗೆ, ಪಠ್ಯೇತರ ಚಟುವಟಿಕೆಗಳನ್ನು ಬಿಟ್ಟು, ಬೇರೆ ಪ್ರಪಂಚವೇ ಇಲ್ಲವೆಂಬಂತೆ ಓದುವುದರಲ್ಲಿ ಮಗ್ನರಾಗುತ್ತಾರೆ. ಇದರಿಂದ ಅವರ ಒತ್ತಡ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಲಿಕೆಯಲ್ಲಿ ಉತ್ತಮವಾಗಲು ಸಾಧ್ಯವಿಲ್ಲ. ಇಂಗ್ಲೀಷಿನ "All study no play makes jack a dull boy" ಅಂದರೆ, ಜಾಣನೂ ಓದಿನಲ್ಲಿ ಮಗ್ನನಾಗಿ ಮರುಳಾದ ಕೂಚು ವಿದ್ಯಾರ್ಥಿಯಾಗುತ್ತಾನೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು.

ಸಾಮಾಜಿಕವಾಗಿ ಹರೆಯದವರು ಎದುರಿಸಬೇಕಾದ ಒತ್ತಡಗಳು ಹಲವು. ಮುಖ್ಯವಾಗಿ, ಹಿರಿಯರು ಮತ್ತು ಇತರರು ಹೇಳುವ, ನೀನು ಕುಡುಮಿ, ಬುದ್ಧು, ಎಂಬ ಟೀಕೆ ಟಿಪ್ಪಣಿಗಳು. ಉದಾಹರಣೆಗೆ ನೀನು ಕುಳ್ಳ ಕಣೋ, ನೋಡು ಅವನು ಎಷ್ಟು ಎತ್ತರವಾಗಿದ್ದಾನೆ. ನೀನೇನೋ ಇನ್ನೂ ಹೆಣ್ಣು ಆಗಿದೀಯ, ಜೋರು ಇರಬೇಕು ಕಣೋ, ಯಾಕೋ ಒಂಥರಾ ಇದೀಯಾ, ನಮ್ಮ ಜೊತೆಗೆ ಸೇರೋಲ್ಲ ಎಂಬ ಸ್ನೇಹಿತರ ಹೋಲಿಕೆಯ ಮಾತುಗಳು. ನಿನಗೆ ಲವ್ ಮಾಡೋದಕ್ಕೆ ಬರೋಲ್ಲ ಕಣೋ. ನೋಡು ಅವನು ಎಷ್ಟು ಧೈರ್ಯದಿಂದ ಮಾತಾಡ್ತಾನೆ. ಯಾರನ್ನಾದ್ರೂ ಲವ್ ಮಾಡ್ಬೇಕು ಕಣೋ ಅದು ಖುಷಿ ಕೊಡುತ್ತೆ ಎಂಬ ಸ್ನೇಹಿತರ ಉಚಿತ ಸಲಹೆಗಳು ಕೂಡ ಹರೆಯದವರ ಮನಸ್ಸಿನಲ್ಲಿ ತಡೆಯಲಾರದ ಒತ್ತಡವನ್ನುಂಟು ಮಾಡುತ್ತದೆ.

ಕಲುಷಿತ ಕೌಟುಂಬಿಕ ವಾತಾವರಣವೂ ಹರೆಯದವರ ಮನಸ್ಸನ್ನು ಇನ್ನಿಲ್ಲದ ಒತ್ತಡಕ್ಕೀಡು ಮಾಡುತ್ತದೆ. ಪೋಷಕ ದಂಪತಿಗಳ ಮಧ್ಯೆ ಜಗಳ, ವಿವಾಹ ವಿಚ್ಛೇಧನ, ಪೋಷಕರ ಅತಿಯಾದ ನಿರೀಕ್ಷೆ, ನಕಾರಾತ್ಮಕ ಸ್ವಭಾವದ ಪೋಷಕರು, ಆರ್ಥಿಕ ಮುಗ್ಗಟ್ಟು ಮತ್ತು ಸದಾ ಮಕ್ಕಳ ಕುರಿತು ಕೀಳು ನುಡಿಗಳನ್ನಾಡುವ ಕೆಲವು ಪೋಷಕರ ಹೀಗೆ ಇರಬೇಕು, ನಾವು ಹೇಳಿದ ಹಾಗೇ ಕೇಳಬೇಕು ಎಂಬ ಪೋಷಕರ ಕಠಿಣ ನಿರ್ದೇಶನಗಳು ಸಹ ಕುಟುಂಬದ ವಾತಾವರಣವನ್ನು ಕಲುಷಿತ ಗೊಳಿಸುತ್ತದೆ. ಇದು ಹರೆಯದವರ ಒತ್ತಡಕ್ಕೆ ಕಾರಣ.

ಹರೆಯದವರನ್ನು ಒತ್ತಡಕ್ಕೀಡು ಮಾಡುವ ಮತ್ತೊಂದು ಅಂಶ 'ತನ್ನತನ'ವನ್ನು ಕಂಡುಕೊಳ್ಳುವ ತವಕ, ತಾನು ಹೇಗೆ ಬೇರೆಯಾಗಿ ಕಾಣಬೇಕು, ತನ್ನನ್ನು ಯಾರು ಗುರುತಿಸುತ್ತಾರೆ, ಯಾರ ಹಾಗೆ ಕಂಡರೆ ಚೆನ್ನ ಮತ್ತು ಯಾರಂತಾಗಬೇಕು ಎಂಬ ಹಲವಾರು ಪ್ರಶ್ನೆಗಳು. ತಾನು ಯಾರಂತೆ ಆಗಬೇಕು? ಯಾವ ಉಡುಪು ಧರಿಸಿದರೆ, ಎಲ್ಲರಿಗಿಂತ ಸುಂದರವಾಗಿ ಕಾಣುತ್ತೇನೆ? ಯಾವ ಉದ್ಯೋಗ ಆರಿಸಿಕೊಂಡರೆ ಒಳ್ಳೆಯದು? ಎಂಬ ಹಲವಾರು ಯೋಚನೆಗಳಿಂದ 'ತನ್ನತನ'ವನ್ನು ಕಂಡುಕೊಳ್ಳುವುದು ಹರೆಯದವರಿಗೆ ಒತ್ತಡವನ್ನುಂಟು ಮಾಡುತ್ತದೆ.

ಮನೋವಿಕಾಸದಿಂದ, ತನ್ನ ಮುಂದಿನ ನಡೆ ಏನು? ಓದು ಮುಗಿಸಿದ ನಂತರ ಮುಂದೇನು? ತಾನು ಯಾವ ಹುದ್ದೆ ಆರಿಸಿಕೊಳ್ಳಬೇಕು, ಅದರಲ್ಲಿ ಸಾಧನೆ ಮಾಡುವುದು ಸಾಧ್ಯವೇ? ತನ್ನ ಸ್ನೇಹಿತರು ಯಾವ ವೃತ್ತಿಯನ್ನು ಆರಿಸಿಕೊಳ್ಳುತ್ತಾರೆ. ಮುಂದಿರುವ ಆಗು ಹೋಗುಗಳನ್ನು ನಿಭಾಯಿಸುವುದು ಹೇಗೆ? ಅದು ತಂನ್ನಿಂದ ಸಾಧ್ಯವೇ ಎಂಬ ಹಲವು ಪ್ರಶ್ನೆಗಳು ಹರೆಯದವರನ್ನು ಒತ್ತಡಕ್ಕೀಡು ಮಾಡುತ್ತವೆ.

ಸಾಮಾಜಿಕ ಜಾಲತಾಣಗಳಾದ, ಫೇಸ್‌ಬುಕ್, ವಾಟ್ಸ್‌ಅಪ್, ಯೂಟ್ಯೂಬ್, ಟ್ವಿಟರ್, ಟಿ.ವಿ. ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಆಕರ್ಷಕ ಜಾಹೀರಾತುಗಳು, ಕೆಲವು ಅಸಹಜವಾದ ದೃಶ್ಯಗಳನ್ನು ಅತ್ಯಾಕರ್ಷಕವಾಗಿ ತೋರಿಸುತ್ತಾರೆ. ಅಪಕ್ವವಾದ ಹರೆಯದ ಮನಸ್ಸಿಗೆ ಇವುಗಳಲ್ಲಿ ಯಾವುದು ಸಹಜ? ಯಾವುದು ಅಸಹಜ? ಅದರಿಂದ ತನ್ನ ಭವಿಷ್ಯಕ್ಕೆ ಏನು ಉಪಯೋಗವಾಗುತ್ತದೆ ಎಂಬ ಗೊಂದಲ ಉಂಟಾಗುತ್ತದೆ. ಅದರಂತೆ ಸನ್ಮಾರ್ಗ ತೆಗೆದುಕೊಳ್ಳಬೇಕು. ಇವೂ ಸಹ ಹರೆಯದ ಮನಸ್ಸನ್ನು ಒತ್ತಡಕ್ಕೀಡುಮಾಡುತ್ತವೆ.

ಪರಿಣಾಮಗಳು: ಮೇಲಿನ ಒತ್ತಡಗಳ ಪರಿಣಾಮ ಹರೆಯದ ಮನಸ್ಸು ಸದಾ ಗೊಂದಲದಿಂದ ಕೂಡಿರುತ್ತದೆ. ಇದರಿಂದ ಯೋಚನೆಗಳು ಹೊಳೆಯುವುದಿಲ್ಲ. ತನ್ನ ಭವಿಷ್ಯವೇ ಕತ್ತಲಾದಂತೆನಿಸುತ್ತದೆ. ಓದಲು ಆಸಕ್ತಿ ಕಡಿಮೆಯಾಗುತ್ತದೆ. ಆತ್ಮವಿಶ್ವಾಸದ ಕೊರತೆ ಉಂಟಾಗುತ್ತದೆ. ತನ್ನನ್ನು ಕುರಿತು ನಕಾರಾತ್ಮಕ ಭಾವನೆಗಳು ಆಳವಾಗಿ ಬೇರೂರುತ್ತವೆ. ಕೆಲವೊಮ್ಮೆ ನಾನೇಕೆ ಈ ಪ್ರಪಂಚಕ್ಕೆ ಬಂದೆ ಎಂಬ ಯೋಚನೆಯಿಂದ ಪಾಪ ಪ್ರಜ್ಞೆ ಉಂಟಾಗುತ್ತದೆ. ಓದುವುದರಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಓದಿದ್ದೆಲ್ಲವೂ ಮರೆತಂತೆನಿಸುತ್ತದೆ. ಸದಾ ಒಂದು ವಿಧದ ಭಯ, ಆತಂಕ ಮನಸ್ಸನ್ನು ಕಾಡುತ್ತವೆ. ಒಂಟಿತನವೇ ಮೇಲು ಎಂಬ ಭಾವನೆ ಉಂಟಾಗಿ ಯಾರೊಂದಿಗೂ ಬೆರೆಯುವುದಿಲ್ಲ. ಸದಾ ಯಾವುದೋ ಲೋಕದಲ್ಲಿ ಮಗ್ನನಾಗಿರುವಂತೆ ವರ್ತಿಸುತ್ತಾನೆ. ಕೆಲವೊಮ್ಮೆ ಖಿನ್ನತೆ ಉಂಟಾಗುತ್ತದೆ. ತೀವ್ರವಾದ ಖಿನ್ನತೆಯು ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅದಿಲ್ಲದಿದ್ದಲ್ಲಿ ಮದ್ಯ, ಮಾದಕ ವಸ್ತುಗಳ ವ್ಯಸನಕ್ಕೊಳಗಾಗಿ ಹರೆಯದವರು ದಾರಿ ತಪ್ಪಿದ ಮಕ್ಕಳಾಗುತ್ತಾರೆ. ಕೆಲವರು ಸಮಾಜಬಾಹಿರ ಕಾರ್ಯಗಳಲ್ಲಿ ಭಾಗಿಯಾಗಬಹುದು.

ಮೇಲಿನ ಒತ್ತಡಗಳು ಎಲ್ಲರಿಗೂ ಬರುವುದು ಸಹಜ. ಆದರೆ ಒತ್ತಡಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ, ಪರಿಹಾರ ಕಂಡುಕೊಂಡು ಮುಂದೆ ಸಾಗುತ್ತಾ ಸಾಧನೆಗೈಯುವುದು ಮುಖ್ಯ. ಇದಕ್ಕೆ ಅವಶ್ಯವಿರುವುದು ಸಹನೆ, ಆತ್ಮವಿಶ್ವಾಸ ಮತ್ತು ಹಿತವಾದ ಕೌಟುಂಬಿಕ ವಾತಾವರಣ. ಅದರೊಂದಿಗೆ ಪೋಷಕರ ಸಕಾರಾತ್ಮಕ ಮಾರ್ಗದರ್ಶನ. ಆತ್ಮೀಯ ಸ್ನೇಹಿತರು, ಉಪಾಧ್ಯಾಯರು ಮತ್ತು ಸಮಾಜಚಿಂತಕರೊಂದಿಗೆ ತಮ್ಮ ಒತ್ತಡಗಳನ್ನು ಹಂಚಿಕೊಂಡು ಪರಿಹಾರವನ್ನು ಕಂಡುಕೊಂಡಾಗ ಹರೆಯದವರ ಬಾಳು ಹಸನಾಗುತ್ತದೆ.

ಕೆಮ್ಮು ಒಂದು; ಅರ್ಥ ಹಲವು

ಕೆಮ್ಮುವುದರ ಪರಿ ಅಪಾರ!

ವಾರದ ವರಸೆ

• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಕೆಮ್ಮಿದರೆ ಆ ಪರಿ ಕಸಿವಿಸಿಗೊಳ್ಳುವ, ಗುಮಾನಿಯ ಕಣ್ಣುಗಳಲ್ಲಿ ಕಾಣುವ ಕಾಲವೊಂದು ಬಂದೀತು ಎಂದು ಖುದ್ದು 'ಕೆಮ್ಮು'ವೂ ಕೂಡಾ ಎಂದೂ ಭಾವಿಸಿರಲಿಕ್ಕಿಲ್ಲ. ಆದರೂ 'ಕೆಮ್ಮು=ಡೇಂಜರ್!' ಏನೋ ಎಂಬಂತೆ ಮಾಡಿದ ಕುಖ್ಯಾತಿ ಕೊರೊನಾಕ್ಕೆ ಸಲ್ಲುತ್ತದೆ. ಹಾಗೆ ನೋಡಿದರೆ ಮನುಷ್ಯರು ವಿವಿಧ ಸಂದರ್ಭಗಳಲ್ಲಿ, ಬೇರೆ ಬೇರೆ ಅರ್ಥ–ದನಿ–ಭಾವಗಳಲ್ಲಿ 'ಯಾರೂ ಕೆಮ್ಮಂಗಿಲ್ಲ' ಎಂದು ಹೇಳಿಕೊಂಡೇ ಬರುತ್ತಿದ್ದರು. ಆದರೆ ಕೊರೊನಾ ಕಾಲಘಟ್ಟದಲ್ಲಿ ಮಾತ್ರ ಆ ಸೂಚನೆಯ ತೀವ್ರತೆ ಬೇರೆಯದೇ ಮಟ್ಟವನ್ನು ತಲುಪಿತ್ತು. 'ರೂಪ ಒಂದೇ, ಭಾವ ಹಲವು' ಎಂಬ ಮಾತಿನಂತೆ ಕೆಮ್ಮು ಒಂದೇ ಆದರೂ ಅದರ ಹಿಂದಿನ ಭಾವ–ಅರ್ಥ ಹತ್ತು ಹಲವು. ಬನ್ನಿ, ಅಂಥ ಹತ್ತು ಬಗೆಯ ಕೆಮ್ಮುಗಳನ್ನು ಅರ್ಥೈಸಿಕೊಳ್ಳೋಣ...

1. **'ನೆಗಡಿ'ಯಾರ ಕೆಮ್ಮು :** ಇಲ್ಲಿ 'ನೆಗಡಿ'ಯಾರ ಎಂಬ ಪದ ಬಳಸಿದ್ದು, ಒಂದು ನೆಗಡಿ ಯಾರನ್ನು ಬಿಟ್ಟಿದೆ ಎಂಬರ್ಥದಲ್ಲಾದರೆ, ಇನ್ನೊಂದು ಅನಾರೋಗ್ಯ ಕಾಲಿಡುವ, ಕಾಡುವ ಸಮಯ ಇದಾಗಿದೆ ಎಂಬ ಸೂಚನೆಯನ್ನು ಅದು ಹೊತ್ತು ತರುತ್ತದೆ ಎಂಬರ್ಥದಲ್ಲಿ. ಶೀತ–ನೆಗಡಿಯ ಬಲು ಹತ್ತಿರದ ನೆಂಟ ಈ ಕೆಮ್ಮು. ನೆಗಡಿಯೇ ತನ್ನ ಅಸ್ತಿತ್ವವನ್ನು, ಕೂಗಿ ಕೂಗಿ ಹೇಳುತ್ತಿದೆಯೋ ಎಂಬಂತೆ ನೆಗಡಿಬಾಧಿತರು ಕೆಮ್ಮುತ್ತಲೇ ಇರುತ್ತಾರೆ. ಈ ನೆಗಡಿ ಕೆಮ್ಮು, ಕಾಲಕ್ರಮೇಣ ಒಣ ಕೆಮ್ಮುವಾಗಿ ಮಾರ್ಪಟ್ಟರಂತೂ ಅದರ ಕಷ್ಟ ಹೇಳತೀರದು. ಆಗ, ರಾತ್ರಿ ಹಗಲೆನ್ನದೇ ನೆಗೆ ನೆಗೆದು ಕೆಮ್ಮಿದರೂ ಸಮಾಧಾನವಾಗುವುದಿಲ್ಲ. ನೆಗಡಿಗೆ ಇಂಗ್ಲೀಷ್‌ಲಿ 'ರನ್ನಿಂಗ್ ನೋಸ್, ರನ್ನೀ ನೋಸ್' ಅಂತೆಲ್ಲ ಹೇಳುತ್ತಾರೆ. ಇದರ ಜೊತೆಗೆ ಕೆಮ್ಮುವೂ ಜೊತೆಯಾದರೆ, ನೋಸ್ ಅಲ್ಲಾ ನಾವೇ ಓಡಬೇಕಷ್ಟೇ!

2. **ಸಿಕ್ ಲೀವ್ ಕೆಮ್ಮು:** ದಾಸರು, 'ಮಾಡು ಸಿಕ್ಕದಲ್ಲ..' ಎಂದು ಹಾಡಿದರು. ಆದರೆ ಈಗಿನ ನರಮಾನವರಾದ ನಾವೆಲ್ಲರೂ ಸಿಕ್ಕದಲ್ಲ ಎಂದು ಹಲುಬುವ ಹಲವಾರು ವಿಷಯಗಳಲ್ಲಿ 'ರಜೆ'ಯೂ ಕೂಡಾ ಒಂದು. ಅದು ಸುಲಭಕ್ಕೆ ಸಿಕ್ಕುವಂತೆ ಮಾಡುವಲ್ಲಿ 'ಸಿಕ್ ಲೀವ್' ಒಂದು ಮಟ್ಟಿಗೆ ನೆರವಿಗೆ ಬರುವುದು ನಿಜವಷ್ಟೇ! ಇಂತಿಪ್ಪ ಸಿಕ್ ಲೀವ್ ಪಡೆದುಕೊಳ್ಳುವ ಪ್ರಕ್ರಿಯೆ ಸಿಕ್ಕು ಸಿಕ್ಕಾಗಿ ಪರಿಣಮಿಸದೇ ಸರಾಗವಾಗಿ ನೆರವೇರುವಲ್ಲಿ ಕೆಮ್ಮು ನೆರವಿಗೆ ಬರುತ್ತದೆ. ರಜೆ ಕೇಳುವಾಗ, ರಜೆ ಮುಗಿಸಿ ಬಂದ ಮೇಲೆ, ಮಧ್ಯೆ ಯಾರಾದರೂ ಕಾಲ್ ಮಾಡಿದಾಗ ಮಾತಿನ ನಡು ನಡುವೆ ಕಾಣಿಸಿಕೊಳ್ಳುವ ಈ ಕೆಮ್ಮು 'ಸಿಕ್‌ಲೀವ್'ನ ಅಥೆಂಟಿಸಿಟಿನ್ನು ಸಾಬೀತುಪಡಿಸುತ್ತದೆ.

3. **ಗಮನಸೆಳೆಯೋ ಕೆಮ್ಮು:** ಮಾತಾಡುವುದಷ್ಟೇ ಮುಖ್ಯವಲ್ಲ. ಅವುಗಳನ್ನು ನಾಲ್ಕು ಜನ ಕೇಳುವಂತೆ ಆಡುವುದು ಬಹಳ ಮುಖ್ಯ. ಅದಕ್ಕೆಂದೇ ಕೆಲವರು – ವೇದಿಕೆಯ ಮೇಲೇ ಇರಲಿ, ಕೆಳಗೇ ಇರಲಿ – ತಮ್ಮ ಮಾತನ್ನು ಆರಂಭಿಸುವ ಮುನ್ನ ಸಣ್ಣಗೆ ಕೆಮ್ಮುತ್ತಾರೆ. ಅದು ಅತ್ತ ಗಂಟಲು ಸರಿಪಡಿಸಿಕೊಂಡಂತೆಯೂ ಆಯಿತು, ಇತ್ತ ಕೇಳುಗರ ಗಮನ ಸೆಳೆದಂತೆಯೂ ಆಯಿತು. ಮಧ್ಯೆ ಮಧ್ಯೆಯೂ ಕೆಲವರು ಈ ಕೆಮ್ಮಸ್ತ್ರವನ್ನು ಬಳಸುತ್ತಾರೆ. ಭಾರೀ ಗಲಾಟೆಯ ಕ್ಲಾಸ್ ರೂಮ್‌ನಲ್ಲಿ ಟೀಚರ್ ಬಂದು ಒಮ್ಮೆ ಜೋರಾಗಿ ಕೆಮ್ಮಿದರೆ, ಇಡೀ ಕ್ಲಾಸ್ ಗಪಚುಪ್ ಆಗುತ್ತದೆಂದರೆ, ಅದು ಕೆಮ್ಮುವಿನ ಪ್ರಭಾವವೋ, ಕೆಮ್ಮುತ್ತಿರುವವರ ಪ್ರಭಾವವೋ ಎಂದು ಯೋಚಿಸಲೇಬೇಕು.

4. **ಕಾಯಿಲೆ ಕೆಮ್ಮು :** ಕೆಮ್ಮು ಕೆಟ್ಟದ್ದು. ಕೆಮ್ಮುವಿನಿಂದ ತೊಂದರೆಯಾಗುತ್ತಿದೆ. ರೋಗದ ಕಾರಣಕ್ಕೆ ಕೆಮ್ಮುವಂತಾಗಿದೆ – ಹೀಗೆಲ್ಲ ಕೆಮ್ಮುವನ್ನು ದೂಷಿಸುವುದಿದೆ. ಆದರ ಧನಾತ್ಮಕ ಆಯಾಮ ನೋಡುವುದಾದರೆ, ಕೆಮ್ಮುವು ಮುಂದೆ ಬರುವ ಕಾಯಿಲೆ–ಕಸಾಲೆಗಳ ಬಗ್ಗೆ ಒಂದು ಮಟ್ಟಿಗಿನ ಮುನ್ನೆಚ್ಚರಿಕೆಯನ್ನು ನೀಡುತ್ತದೆ. ಒಳಗೇನೋ ಸರಿಯಿಲ್ಲ ಎನ್ನುವುದನ್ನು ದೇಹವು ಕೆಮ್ಮುವಿನ ಮೂಲಕವೇ ದಾಟಿಸಿದಂತಾಗುತ್ತದೆ. ಸಿನಿಮಾಗಳಲ್ಲಿ ತೋರಿಸುವಂತೆ ಒಮ್ಮಿಂದೊಮ್ಮೆಗೆ ಕೆಮ್ಮು ಆರಂಭವಾಗಿ, ಅದು ತೀವ್ರ ಸ್ವರೂಪ ಪಡೆದುಕೊಂಡು, ಬಳ್ ಎಂದು ರಕ್ತ ವಾಂತಿ ಮಾಡಿ, ಆಗಿಂದಾಗ್ಗೆ ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿರುವ ಬಗ್ಗೆ ಗೊತ್ತಾದಂತೆಲ್ಲಾ ನಿಜ ಜೀವನದಲ್ಲಿ ಘಟಿಸದೇ ಹೋದರೂ ಕೆಮ್ಮು ಒಂದು ಮಟ್ಟಿಗೆ ವಾರ್ನ್ ಮಾಡುತ್ತಲೇ ಇರುತ್ತದೆ.

5. **ದುಃಖ ಪ್ರಚೋದಿತ ಕೆಮ್ಮು :** ದುಃಖವಾದಾಗ ಮೌನವಾಗುವುದು, ಕಣ್ಣಾಲಿಗಳು ತುಂಬುವುದು, ಅಳುವುದು ಸಹಜ. ಕೆಲವೊಮ್ಮೆ ಎಷ್ಟೇ ಅತ್ತರೂ ಯಾರೂ ಕ್ಯಾರೇ ಅನ್ನದಿದ್ದಾಗ ಅತ್ತು ಅತ್ತು ರಚ್ಚೆ ಹಿಡಿದು ಅದರ ಉಚ್ಛ್ರಾಯ ಸ್ಥಿತಿಯೋ ಎಂಬಂತೆ ಒಂದೇ ಸಮನೆ ಕೆಮ್ಮಲಾರಂಭಿಸುತ್ತಾರೆ. ಹಾಗಾದರೂ ಎದುರಿನವರಿಗೆ ಇವರ ದುಃಖ, ಸಂಕಟಗಳು ತಟ್ಟಲಿ ಎನ್ನುವುದೇ ಅದರ ಉದ್ದೇಶ. 'ಅಯ್ಯೋ ಅಷ್ಟು ಕೆಮ್ಮುತ್ತಾರಲ್ಲ, ಏನಾಯ್ತು ನೋಡ್ರಪಾ' ಎಂದು ಎಲ್ಲರೂ ಅತ್ತಲೆಡೆಗೆ ಕೊಂಚ ಅಲರ್ಟ್ ಆಗುತ್ತಾರೆ.

6. **ಕಾಳು ಹಾಕೋ ಕೆಮ್ಮು :** 'ಒಣಕೆಮ್ಮು' ಎಂದೇ ಇದೆಯೆಂಬ ಕಾರಣಕ್ಕೆ ಕೆಮ್ಮನ್ನು 'ಡ್ರೈ' ವಿಷಯ ಎಂಬಂತಿಲ್ಲ. ಅದರಲ್ಲೂ ರಸವತ್ತಾದ, ಪುಳಕ ಮೂಡಿಸುವ ಸಂಗತಿಗಳು ಘಟಿಸುತ್ತವೆ. ಯಾರೋ ತಮ್ಮೆಡಗೆ ನೋಟ ಹರಿಸುವಂತೆ ಮಾಡಿಕೊಳ್ಳಲು ಕೆಲವರು, ನಾಟಕೀಯ ಕೆಮ್ಮಿನ ಮೊರೆ ಹೋಗುತ್ತಾರೆ. ಆ ಕೆಮ್ಮಿನ ರೀತಿ ಮನ–ಮೋಹಕ, ಅತಿ ಮಧುರ. ಇಂಥ ಕೆಮ್ಮು ಕಾಯಿಲೆಯ ಸೂಚಕವಲ್ಲದೇ ಹೋದರೂ, ಅವು 'ಪ್ರೇಮಜ್ವರದ' ಕಾವು ಏರಿಸುವ ಸಾಧ್ಯತೆ ಹೆಚ್ಚಿರುವುದನ್ನು ತಳ್ಳಿ ಹಾಕುವಂತಿಲ್ಲ. ಕೆಲವೊಮ್ಮೆ ಈ ಕೆಮ್ಮಿಗೆ ಪ್ರತಿಯಾಗಿ ಎದುರಿನಿಂದ ಸಿಗುವ ಸಿಗ್ನಲ್ ಯಾವುದೇ ವೈ–ಫೈ ಸಿಗ್ನಲ್‌ನ್ನೂ ಮೀರಿಸುವಂತಿರುತ್ತದೆ. ಈ ಕೆಮ್ಮು ಕಳ್ಳ ನೋಟ, ಕಿರುನಗೆ, ಆತ್ಮೀಯ ಭಾವ ಹೀಗೇ ಮುಂದುವರಿದು ಮೆಸೇಜ್, ಕಾಲ್, ಮೀಟ್ ಹೀಗೆ ಯಾವ್ಯಾವುದೋ ಮಟ್ಟವನ್ನು ತಲುಪುತ್ತದೆ.

7. **ಕರೆಗಂಟೆ ಕೆಮ್ಮು :** ಒಳಗಿನಿಂದ ಬಾಗಿಲು ಹಾಕಿಕೊಂಡ ಯಾರದೋ ಮನೆಯ ಮುಂದೆ ನಿಂತಿದ್ದೀರಿ. ಒಳಗಿರುವವರನ್ನು ಕರೆಯಬೇಕು. ಅಲ್ಲೆಲ್ಲೂ ಬೆಲ್ ಇಲ್ಲ. ಯಾವುದೋ ಹೆಸರಿನಿಂದ ಕರೆಯಲು ಮುಜುಗರ. ಆಗ ಕೆಮ್ಮು ಕರೆಗಂಟೆಯಂತೆ ನಮ್ಮ ನೆರಗವಿಗೆ ಬರುವುದು. ಒಂದು ನಾಲ್ಕೈದು ಸಲ ಜೋರಾಗಿ ಕೆಮ್ಮುತ್ತಾ ಹೊರಗಡೆ ಅತ್ತಿಂದಿತ್ತ ನಡೆದಾಡಿದರೆ ಸಾಕು, ಒಳಗಿರುವವರಿಗೆ ಯಾರೋ ಬಂದಿದ್ದಾರೆ ಎಂಬ ವಿಷಯ ತಿಳಿದು, ಬಾಗಿಲು ತೆರೆದುಕೊಳ್ಳುತ್ತದೆ. ಅಂದರೆ ವ್ಯಕ್ತಿಯೊಬ್ಬ ಅಲ್ಲಿ ಬಂದಿದ್ದು, ಆ ವ್ಯಕ್ತಿಯ ಇರುವಿಕೆಯನ್ನು ಅಕ್ಕಪಕ್ಕದವರಿಗೆ ತಿಳಿಸಲು ಕೆಮ್ಮು ಸಹಕಾರಿಯಾಗಿದೆ.

8. **ಆಕ್ರೋಶ ಪ್ರಣೀತ ಕೆಮ್ಮು :** ಆಕ್ರೋಶ, ಉದ್ವೇಗಗಳು ಜೊತೆಯಾದಾಗ ಗಂಟಲು ಕಟ್ಟಿಕೊಳ್ಳುವುದಿದೆ. ಹಾಗೆ ಗಂಟಲು ಕಟ್ಟಿ ದನಿ ಹೊರ ಹೊಮ್ಮದೇ ಹೋದರೂ, ಆಕ್ರೋಶದ ಕಾರಣಕ್ಕೆ ಕಿರುಚುವ, ಅರಚುವ ಜನರೇ ಹೆಚ್ಚು, ಆ ಸಂದರ್ಭದಲ್ಲಿ ಮಾತು, ಕೂಗಾಟಗಳೆಲ್ಲ ಕೊನೆಗೆ ಹೋಗಿ ತಲುಪುವುದು ಈ ಕೆಮ್ಮುವಸ್ಥಿತಿಯನ್ನೇ. ಅಷ್ಟೇ ಏಕೆ, 'ಯಾರೂ ನನ್ನ ಮುಂದೆ ಕೆಮ್ಮಂಗಿಲ್ಲ' ಎಂದು ಸೂಚ್ಯವಾಗಿ ಹೇಳುವುದರ ಹಿನ್ನೆಲೆಯಲ್ಲಿ ಇರುವುದು ಇದೇ ಆಕ್ರೋಶ. ಈ ಕೆಮ್ಮಿನ ರೀತಿನೀತಿಯಲ್ಲೇ ಅರ್ಥವಾಗುತ್ತದೆ ಕೆಮ್ಮುವವರ ಕೋಪ–ತಾಪಗಳು. ಇನ್ನು ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಕೆಮ್ಮುವುದೂ ಅನ್ಯರಿಗೆ ಕಿರಿ ಕಿರಿ ಉಂಟಾಗಿ ಆಕ್ರೋಶಕ್ಕೆ ತಿರುಗುವುದೂ ಇದೆ!

9. **ಕ್ಯಾತೆ ಕೆಮ್ಮು :** 'ನೋಡಿ ನಾನು ಆ ಸಭೆಯನ್ನು ಅದ್ಯಾವ ಪರಿ ಅದ್ದೂರಿಯಾಗಿ ವ್ಯವಸ್ಥಿತವಾಗಿ ಆಯೋಜಿಸುತ್ತೇನೆ ಎಂದರೆ ಯಾರೂ ಕೂಡಾ ಕೆಮ್ಮಂಗಿಲ್ಲ' ಎಂದು ಹೇಳುವುದಿದೆ. ಅಂದರೆ ಕೆಲವರು ಸಣ್ಣಪುಟ್ಟದಕ್ಕೂ ಕೆಮ್ಮುತ್ತಲೇ ಇರುತ್ತಾರೆ ಎಂದರ್ಥವಲ್ಲವೇ? ಕೆಮ್ಮುವುದು ಎಂದರೆ ಕ್ಯಾತೆ ತೆಗೆಯುವುದು ಎಂದೇ ಆಯಿತಲ್ಲವೇ? ಇಲ್ಲಿ ಕೆಮ್ಮು ವಾಚ್ಯವಾಗದೇ, ಸೂಚ್ಯವಾಗಿರುವಂಥದ್ದು. ಅದೊಂದು ಸಂಕೇತ, ಅದೊಂದು ಸೂಚನೆ ಹಾಗೂ ಅದೊಂದು ಅನ್ವರ್ಥ. ಇನ್ನು ಅಸಲಿ ಕೆಮ್ಮುವಿಗಾದರೂ ಸೂಕ್ತ ಔಷಧಿ, ಚಿಕಿತ್ಸೆ ಇದೆ, ಆದರೆ ಈ ಮೇಲೆ ತಿಳಿಸಿದ ಕೆಮ್ಮುವಿನ ಉಪಶಮನ ಕಷ್ಟಸಾಧ್ಯವೇ ಸರಿ.

10. **ಕೆಟ್ ಅಡುಗೆ ಕೆಮ್ಮು:** ಬಾಯಿಗೆ ರುಚಿಸದ ಅಡುಗೆಯ ಬಗ್ಗೆ ಪ್ರತಿಕ್ರಿಯೆ ನೀಡುವ ಬೇರೆ ಬೇರೆ ಪರಿಗಳಿವೆ. ಮುಖ ಸಿಂಡರಿಸುವುದು, ಊಟಕ್ಕೇ ಕೈ ತೊಳೆದು ಎದ್ದೇಳುವುದು, ತಟ್ಟೆ ದೂರಕ್ಕೆ ತಳ್ಳುವುದು ಇನ್ನೂ ಹಲವು. ಅದೇ ರೀತಿಯಲ್ಲಿ ಕೆಮ್ಮುವುದೂ ಕೂಡಾ ಒಂದು. ಇದಕ್ಕೆ ಸಿನಿಮಾ, ಸೀರಿಯಲ್ ದೃಶ್ಯಗಳೇ ಪ್ರೇರಣೇ ಆದರೂ ಆಗಿದ್ದಿರಬಹುದು. ತುತ್ತೊಂ ದನ್ನು ಬಾಯಿಗಿಟ್ಟಾಕ್ಷಣ, ವಿಚಿತ್ರ ಪ್ರತಿಕ್ರಿಯೆ ನೀಡುತ್ತಾ ಗಂಟಲು, ಎದೆಯನ್ನೆಲ್ಲಾ ಹಿಡಿದು, ಕೆಮ್ಮುತ್ತಾ ತುತ್ತನ್ನು ಬಾಯಿಯಿಂದ ಹೊರಕ್ಕೆ ಚೆಲ್ಲುವ ಈ ವೈಖರಿಯು, ಅಡುಗೆ ಅದೆಷ್ಟು ಕೆಟ್ಟದಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ, ಯಾರು ಕೆಮ್ಮಿದರು ಅಷ್ಟೇ ಅಲ್ಲ, ಹೇಗೆ ಕೆಮ್ಮಿದರು ಎನ್ನುವುದೂ ಮುಖ್ಯವಾಗುತ್ತದೆ. ಅಂದರೆ ಅದನ್ನು 'ಕೇಳಿಸದೆ ಕೆಮ್ಮು ಕೆಮ್ಮಿನಲಿ....' ಎಂದು ಹಾಡಬಹುದು. ಹ್ಲಾಂ.. ಪಕ್ಕದಲ್ಲಿ ಯಾರೋ ಕೆಮ್ಮುತ್ತಿರುವ ದನಿ ಕೇಳಿಸುತ್ತಿದೆಯೇ?!

ಓವರ್‌ಡೋಸ್: ಯಾರಾದರೂ ''ಹೇಗಿದ್ದೀರಿ?' ಎಂದು ಕೇಳಿ, ನೀವು ಅದಕ್ಕೆ ಪ್ರತಿಯಾಗಿ 'ಚೆನ್ನಾಗಿದೀನಿ' ಎಂದುತ್ತರಿಸಿದ ಮರುಕ್ಷಣವೇ ಜೋರಾಗಿ ಬರುವ ಕೆಮ್ಮು, ನಾವು ನೀಡಿದ ಉತ್ತರವನ್ನೇ ಅನುಮಾನಿಸುವಂತೆ ಮಾಡುತ್ತದೆ!

ಕಿರುಸುದ್ದಿ

ವಿದ್ಯಾರ್ಥಿಗಳಲ್ಲಿ ಜಾಗತಿಕ ಶಿಕ್ಷಣದ ಒಲವು

ಬೆಂಗಳೂರು: ಭಾರತೀಯ ವಿದ್ಯಾರ್ಥಿಗಳು ತಮ್ಮ ಜಾಗತಿಕ ಶಿಕ್ಷಣದ ಪರಿಧಿಯನ್ನು ವಿಸ್ತರಿಸುತ್ತಿದ್ದಾರೆ ಮತ್ತು ಸ್ಪೇನ್, ಜರ್ಮನಿ, ಫ್ರಾನ್ಸ್, ಸಿಂಗಾಪುರ, ಯುಎಇ, ನ್ಯೂಜಿಲೆಂಡ್ ಮತ್ತು ದಕ್ಷಿಣ ಕೊರಿಯಾದಂತಹ ಶಿಕ್ಷಣ ತಾಣವನ್ನು ಹೆಚ್ಚಾಗಿ ಆರಿಸಿಕೊಳ್ಳುತ್ತಿದ್ದಾರೆ. ಇದು ಸಾಗರೋತ್ತರ ಶಿಕ್ಷಣ ಆದ್ಯತೆಗಳಲ್ಲಿ ಸ್ಪಷ್ಟ ಬದಲಾವಣೆಯನ್ನು ತೋರಿಸುತ್ತದೆ ಎಂದು ಆಕ್ಸಿಲೋ ಫಿನ್ಸರ್ವ್ ಸಾಗರೋತ್ತರ ಸಾಲದ ಸಿಬಿಓ ಶ್ವೇತಾ ಗುರು ಮಾಹಿತಿ ನೀಡಿದ್ದಾರೆ. ಯುಎಸ್ಎ, ಕೆನಡಾ, ಯುನೈಟೆಡ್ ಕಿಂಗ್ಡಮ್ ಮತ್ತು ಆಸ್ಟ್ರೇಲಿಯಾದಂತಹ ಇಂಗ್ಲಿಷ್ ಭಾಷಾ ತಾಣಗಳು ಹೆಚ್ಚು ಅಪೇಕ್ಷಣೀಯವಾಗಿ ಉಳಿದಿದ್ದರೂ, ವಿಶೇಷವಾಗಿ ಸ್ಟೆಮ್ ಕೋರ್ಸ್‌ಗಳಿಗಾಗಿ ಯುಎಸ್ಎ ಮತ್ತು ಭಾರತೀಯ ವಿದ್ಯಾರ್ಥಿಗಳು ಈಗ ತಮ್ಮ ಆಯ್ಕೆಗಳನ್ನು ಸಕ್ರಿಯವಾಗಿ ವೈವಿಧ್ಯಗೊಳಿಸುತ್ತಿದ್ದಾರೆ. ಈ ಬದಲಾವಣೆಯು ಶಿಕ್ಷಣದ ಒಟ್ಟಾರೆ ವೆಚ್ಚ, ಸಂಸ್ಥೆಗಳ ಗುಣಮಟ್ಟ, ವೀಸಾ ಮಾನದಂಡಗಳು, ಇಂಟರ್ನ್‌ಶಿಪ್ ಮತ್ತು ಉದ್ಯೋಗಾವಕಾಶಗಳು ಮತ್ತು ವಿದ್ಯಾರ್ಥಿಗಳ ಸುರಕ್ಷತೆಯಂತಹ ಅಂಶಗಳಿಂದ ಪ್ರಭಾವಿತವಾಗಿದೆ ಎಂದರು. ಭಾರತೀಯ ವಿದ್ಯಾರ್ಥಿಗಳು ಇಂದು ಸಾಗರೋತ್ತರ ಶಿಕ್ಷಣ ವಿಧಾನದಲ್ಲಿ ಹೆಚ್ಚು ಪ್ರಾಯೋಗಿಕ ಮತ್ತು ಆರ್‌ಓಐ(ರಿಟರ್ನ್ ಆನ್ ಇನ್ವೆಸ್ಟ್ಮೆಂಟ್)ಚಾಲಿತರಾಗಿದ್ದಾರೆ. ಸ್ಪೇನ್, ಜರ್ಮನಿ ಮತ್ತು ನ್ಯೂಜಿಲೆಂಡ್ನಂತಹ ತಾಣಗಳು ಉತ್ತಮ ಗುಣಮಟ್ಟದ ಶಿಕ್ಷಣ, ಕೈಗೆಟುಕುವಿಕೆ, ಸ್ಪಷ್ಟ ವೀಸಾ ಮಾರ್ಗಗಳು ಮತ್ತು ಶಿಕ್ಷಣ ಮತ್ತು ಉದ್ಯೋಗ ಫಲಿತಾಂಶಗಳ ನಡುವೆ ಉತ್ತಮ ಹೊಂದಾಣಿಕೆಯನ್ನು ನೀಡುತ್ತಿರುವುದರಿಂದ ಬಲವಾದ ಬೇಡಿಕೆಗೆ ಸಾಕ್ಷಿಯಾಗುತ್ತಿವೆ, ವಿಶೇಷವಾಗಿ ಸ್ನಾತಕೋತ್ತರ ಮತ್ತು ಸ್ಟೆಮ್ ಕಾರ್ಯಕ್ರಮಗಳಿಗೆ ಎಂದು ಶ್ವೇತಾ ಹೇಳಿದರು.

ಹಣ ವಸೂಲಿ: ಆರೋಪಿ ಸೆರೆ

ಮೈಸೂರು: ಗ್ರಾಹಕರಿಂದ ಸಾಲ ವಸೂಲಿ ಮಾಡಿ ಬ್ಯಾಂಕ್‌ಗೆ ಸಂದಾಯ ಮಾಡದೆ ತಲೆ ಮರೆಸಿಕೊಂಡಿದ್ದ ಬ್ಯಾಂಕ್ ಸಿಬ್ಬಂದಿಯನ್ನು ಜಿಲ್ಲೆಯ ಹುಣಸೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಹುಣಸೂರು ನಗರದ ಖಾಸಗಿ ಬ್ಯಾಂಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಾಲ್ಲೂಕಿನ ಗೌರಿಪುರ ಗ್ರಾಮದ ನಿವಾಸಿ ಸುವಾಸ್ ಬಂಧಿತ ಆರೋಪಿ. ಬ್ಯಾಂಕ್‌ನಲ್ಲಿ ಸಾಲ ಪಡೆದ ಗ್ರಾಹಕರಿಂದ ಸಾಲ ವಸೂಲಿ ಮಾಡಿ ಖಾತೆಗೆ ಸಂದಾಯ ಮಾಡುವ ಕೆಲಸಕ್ಕೆ ನಿಯೋಜನೆಗೊಂಡಿದ್ದ ಆತ, ಇತ್ತೀಚೆಗೆ 50 ಗ್ರಾಹಕರಿಂದ ಸಂಗ್ರಹಿಸಿದ್ದ 1,72,200 ಗ್ರಾಹಕರ ಖಾತೆಗೆ ಪಾವತಿಸದೆ ತಲೆ ಮರೆಸಿಕೊಂಡಿದ್ದ. ಬ್ಯಾಂಕ್ ವ್ಯವಸ್ಥಾಪಕರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದ ಸರ್ಕಲ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ನೇತೃತ್ವದಲ್ಲಿ ತಂಡ ರಚಿಸಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಿದ್ದಾರೆ.

ನಾಳೆಯಿಂದ ಬೆಂಗಳೂರು ವಿವಿ ವಿಜ್ಞಾನ ಉತ್ಸವ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸೈನ್ಸ್ ಫೋರಂ (ಬಿಯುಎಸ್ಎಫ್) ಹಾಗೂ ಪಿಎಂ ಉಷಾ ಸಹಯೋಗದೊಂದಿಗೆ ನಗರದ ಜ್ಞಾನಭಾರತಿ ಆವರಣದಲ್ಲಿ ಮಾ. 17 ಮತ್ತು 18ರಂದು ವಿಜ್ಞಾನದಲ್ಲಿ ಮಹಿಳೆಯರು: ವೇಗವರ್ಧಕ ವಿಕಸಿತ್ ಭಾರತ್ ಎಂಬ ಘೋಷವಾಕ್ಯದೊಂದಿಗೆ ಬೆಂಗಳೂರು ವಿಶ್ವವಿದ್ಯಾಲಯ ವಿಜ್ಞಾನ ಉತ್ಸವ-2026 ಆಯೋಜಿಸಲಾಗಿದೆ. ಈ ಎರಡು ದಿನಗಳ ವಿಜ್ಞಾನ ಉತ್ಸವದಲ್ಲಿ ವಿಶ್ವವಿದ್ಯಾಲಯದಲ್ಲಿರುವ 6 ಸ್ನಾತಕೋತ್ತರ ವಿಜ್ಞಾನ ವಿಭಾಗಗಳಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ವಿಜ್ಞಾನಿಗಳು ಮತ್ತು ವಿಷಯ ತಜ್ಞರ ಉಪನ್ಯಾಸಗಳು ನಡೆಯಲಿದ್ದು, ಸಂಶೋಧನಾ ಪ್ರಸ್ತುತಿಗಳು ಹಾಗೂ ಶೈಕ್ಷಣಿಕ ಚರ್ಚೆಗಳು ವಿಜ್ಞಾನ ಕ್ಷೇತ್ರದ ಹೊಸ ಅನ್ವೇಷಣೆಗಳ ಕುರಿತು ಚರ್ಚೆ ನಡೆಯಲಿದೆ. ಈ ವಿಜ್ಞಾನ ಉತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನೂ ಆಯೋಜಿಸಲಾಗಿದೆ. ವಿಜ್ಞಾನ ಮಾದರಿ ಸ್ಪರ್ಧೆ, ವಿಜ್ಞಾನ ಪೋಸ್ಟರ್ ಪ್ರಸ್ತುತಿ, ಕ್ವಿಜ್ ಸ್ಪರ್ಧೆ, ಪ್ರಬಂಧ ಬರವಣಿಗೆ ಮತ್ತು ಪಿಕ್ ಆ್ಯಂಡ್ ಸ್ಪೀಕ್ ಸ್ಪರ್ಧೆಗಳು ನಡೆಯಲಿದ್ದು, ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರತಿ ಸ್ಪರ್ಧೆಗೆ 100 ರೂ. ಮತ್ತು ಇತರ ವಿದ್ಯಾರ್ಥಿಗಳಿಗೆ 200 ರೂ. ಶುಲ್ಕ ನಿಗದಿಪಡಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆ-1: ಮಾದರಿ ಉತ್ತರ ಪ್ರಕಟ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ-1ರ ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ (ಕೆಎಸ್ಇಎಬಿ)ಯು ತನ್ನ ಜಾಲತಾಣದಲ್ಲಿ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಸಮಯ ಅವಕಾಶ ನೀಡಿದೆ. ಪರೀಕ್ಷೆ-1 ಫೆ.28 ರಿಂದ ಆರಂಭವಾಗಿದೆ. ಮಾ.17ರವರೆಗೆ ಪರೀಕ್ಷೆ ನಡೆಯಲಿದೆ. ಮಾ.13 ರವರೆಗೆ ನಡೆಸಿರುವ 27 ವಿಷಯಗಳ ವಿಷಯವಾರು ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರಗಳನ್ನು ಪ್ರಕಟಿಸಲಾಗಿದೆ. ಮಾ.16ರ ಸಂಜೆ 5 ಗಂಟೆಯೊಳಗೆ ಆಕ್ಷೇಪಣೆ ಸಲ್ಲಿಸಬಹುದು. ಮಾ. 17 ರವರೆಗೆ ನಡೆಯಲಿರುವ ಉಳಿದ 13 ವಿಷಯಗಳ ವಿಷಯವಾರು ಪ್ರಶ್ನೆ ಪತ್ರಿಕೆಗಳ ಮಾದರಿ ಉತ್ತರಗಳನ್ನು ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಲಿದ್ದು, ಮಾ.17 ರಿಂದ 19ರವರೆಗೆ ಆಕ್ಷೇಪಣೆಗೆ ಅವಕಾಶ ನೀಡಲಾಗುತ್ತದೆ.

ಶ್ರೀ ಶಂಭುನಾಥ ಸ್ವಾಮೀಜಿ 47ನೇ ವರ್ಷದ ವರ್ಧಂತಿ ಆಚರಣೆ | ಗುರುವಂದನೆ ಕಾರ್ಯಕ್ರಮ

ಧರ್ಮಾಧಾರಿತ ಸಮಾಜದಿಂದ ನೆಮ್ಮದಿ

ಕನಕಪುರ: ಧರ್ಮಾಧಾರಿತ ಜೀವನದಿಂದ ನೆಮ್ಮದಿಯ ಸಮಾಜ ಕಟ್ಟಲು ಸಾಧ್ಯವಾಗಲಿದೆ ಎಂದು ಶ್ರೀ ಶಂಭುನಾಥ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಗಡಿ ಭಾಗದ ಶ್ರೀ ಕ್ಷೇತ್ರಆಲ್ಕುಳೇಶ್ವರ ಸ್ವಾಮಿ ದೇವಾಲಯ ಆವಣದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಹಾಸನ ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸ್ವಾಮೀಜಿಗಳಾದ ಶ್ರೀಶಂಭುನಾಥ ಸ್ವಾಮೀಜಿಗಳ 47ನೇ ವರ್ಷದ ವರ್ಧಂತಿ ಮಹೋತ್ಸವ ಹಾಗೂ ಗುರುವಂದನೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಇದರ ಅಂಗವಾಗಿ ಬೃಹತ್ ಆರೋಗ್ಯ, ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರ ನಡೆಸಲಾಯಿತು. ತಾಲೂಕಿನ ಉಯ್ಯಂಬಳ್ಳಿ ಹೋಬಳಿ ಆಲ್ಕುಳಿ ಗ್ರಾಮದ ವಸಂತ ಮಾಸದಂತೆ ಶೃಂಗಾರಗೊಂಡಿದ್ದ ದೇವಾಲಯದ ಆವರಣದಲ್ಲಿ ಮಠದ ಭಕ್ತಾದಿಗಳು ಅಭಿಮಾನಿಗಳು ಸೇರಿ ಸ್ವಾಮೀಜಿಗಳ ಗುರುವಂದನಾ ಕಾರ್ಯಕ್ರಮ ನಡೆಸಿಕೊಟ್ಟರು. ಸ್ವಾಮೀಜಿ ಅವರಿಗೆ 101 ಪೂರ್ಣಕುಂಭಸ್ವಾಗತದೊಂದಿಗೆ ವೇದಿಕೆಗೆ ಬರಮಾಡಿ ಕೊಳ್ಳಲಾಯಿತು. ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಗುರುವಂದನೆ ಸ್ವೀಕರಿಸಿ ಆಶೀರ್ವಚನ ನೀಡಿದ ಶ್ರೀಗಳು ಐತಿಹಾಸಿಕ ಪುರಾಣ ಪ್ರಸಿದ್ಧ ಕ್ಷೇತ್ರ ಕಾಶಿವಿಶ್ವನಾಥ ಸನ್ನಿಧಿಯಂತೆ ಕಂಗೊಳಿಸುತ್ತಿರುವ ಆಲ್ಕುಳೇಶ್ವರ ಸ್ವಾಮಿ ಪುಣ್ಯಕ್ಷೇತ್ರವು ಪವಾಡ ಹಿನ್ನೆಲೆವುಳ್ಳ ಸ್ಥಾನವಾಗಿದೆಂದರು.

ಆದಿಚುಂಚನಗಿರಿ ಕ್ಷೇತ್ರಕ್ಕೆ ಹೊಸ ರೂಪ ನೀಡಿದ ಮಠದ ಕಾರ್ಯವನ್ನು ರಾಷ್ಟ್ರಮಟ್ಟದಲ್ಲಿ ವಿಸ್ತರಿಸಿದ ಶ್ರೀಬಾಲ ಗಂಗಾಧರನಾಥ ಸ್ವಾಮೀಜಿಗಳು ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ, ಶಿಕ್ಷಣ ನೀಡಬೇಕೆಂಬ ಪರಿಕಲ್ಪನೆಯಲ್ಲಿ ಮಠನ್ನು



ಕಟ್ಟಿದ್ದಾರೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹೀಗೆ ಹತ್ತು ಹಲವು ಕ್ಷೇತ್ರದಲ್ಲಿ ಅವಿಸ್ಮರಣೀಯ ಸೇವೆಗೈದಿದ್ದಾರೆಂದು ತಿಳಿಸಿದರು. ಇದೇ ಹಾದಿಯಲ್ಲಿ ಇಂದು ನಿರ್ಮಲಾನಂದನಾಥ ಸ್ವಾಮೀಜಿಗಳು ಮಠವನ್ನು ಮುನ್ನಡೆಸುತ್ತಿದ್ದಾರೆ. ನಾವು ಸಹ ಕೊಡಗು ಹಾಗೂ ಹಾಸನ ಜಿಲ್ಲೆಯ ಶಾಖಾ ಮಠಗಳ ಉಸ್ತುವಾರಿ ನೋಡುತ್ತಿದ್ದೇವೆ. ನನ್ನ ಸ್ವಂತ ಅವರು ಆಲ್ಕುಳಿಯಲ್ಲಿ ನೆಲೆಸಿರುವ ಆಲ್ಕುಳೇಶ್ವರ ಸ್ವಾಮಿ ಕ್ಷೇತ್ರವನ್ನು ವಿಸ್ತಾರ ಗೊಳಿಸಬೇಕೆಂಬ ಸಂಕಲ್ಪ ನಮ್ಮದಾಗಿದೆಂದರು. ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಮಾತನಾಡಿ, ಆಲ್ಕುಳಿ ದೇವಸ್ಥಾನವು ಬಹಳ ಇತಿಹಾಸವನ್ನ ಹೊಂದಿದ ದೇಗುಲವಾಗಿದೆ. ಇದರ ಜೀರ್ಣೋದ್ಧಾರಕ್ಕೆ ಸ್ವಾಮೀಜಿಗಳು ಮುಂದೆ ಬಂದಿರುವುದು

ಹೆತ್ತವರು, ಗುರುವನ್ನು ಗೌರವಿಸಿ

ಮನುಷ್ಯನ ಜೀವನದಲ್ಲಿ ಪಾಪ ಪುಣ್ಯಗಳು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಜೀವನ ಧರ್ಮದ ಮೇಲೆ ಆಧಾರಿತವಾಗಿದೆ. ಒಳ್ಳೆಯ ಕೆಲಸಗಳು ಸದ್ಗತಿ ಅಥವಾ ಸುಖ ನೀಡಿದರೆ, ಕೆಟ್ಟ ಕೆಲಸಗಳು ದುಃಖಕ್ಕೆ ಕಾರಣವಾಗುತ್ತದೆ. ದೇವರು ಗುಡಿಯಲ್ಲಿ ಮಾತ್ರ ನೆಲೆಸಿರುವುದಿಲ್ಲ. ಹೆತ್ತವರು, ಗುರುಹಿರಿಯರ ರೂಪದಲ್ಲಿ ನೆಲೆಸಿರುತ್ತಾನೆ. ಪ್ರೀತಿ, ಗೌರವದಿಂದ ಕಂಡರೆ ಭಗವಂತನು ಒಲಿಯುತ್ತಾನೆಂದು ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಮ್ಮೆಲ್ಲರ ಸೌಭಾಗ್ಯವಾಗಿದೆಂದರು. ಶಿವಗಿರಿ ಕ್ಷೇತ್ರದ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ ಆಶೀರ್ವದಿಸಿ, ಶ್ರೀ ಶಂಭುನಾಥ ಸ್ವಾಮೀಜಿ ಶಾಖಾ ಮಠ ಅಭಿವೃದ್ಧಿ ಪಡಿಸುವುದರ ಜೊತೆ ತಮ್ಮ ಸ್ವಗ್ರಾಮದ ಆಲ್ಕುಳಿ ದೇವಾಲಯದ ಜೀರ್ಣೋದ್ಧಾರಕ್ಕೆ ಮನಸು ಮಾಡಿದ ಮನಸ್ಸು ಮಾಡಿದ್ದಾರೆ. ಇದಕ್ಕೆ ಎಲ್ಲಾ ಭಕ್ತಾದಿಗಳ ಸಹಕಾರ ಅಗತ್ಯವಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎಸ್.ರವಿ, ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಲಕ್ಷ್ಮಣ್, ಬಾಳೆಪುರದೊಡ್ಡಿ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಎಸ್.ಮಂಜುನಾಥ್, ತಾಪಂ ಮಾಜಿ ಅಧ್ಯಕ್ಷ ಎಸ್.ಉಮೇಶ್, ಎಸ್.ಶಿವಶಂಕರ್, ರಾಜೇಂದ್ರ, ಕಾಂತರಾಜು, ಚಿಕ್ಕಣ್ಣ, ದೊಡ್ಡೇಗೌಡ, ಸುರೇಶ; ಬಾಲಾಜಿ, ಸೇರಿದಂತೆ ಬಿಜಿಎಸ್ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಭಾಗವಹಿಸಿದ್ದರು.

ಉತ್ತಮ ಜೀವನದ ಸಂಕೇತ ಉಡುಪು



ಆನೇಕಲ್: ಸಾಂಪ್ರದಾಯಿಕ ಬಿಳಿ ಧೋತಿಗಳು ಮತ್ತು ಎತ್ನಿಕ್ ಉಡುಪುಗಳಿಗೆ ಹೆಸರಾದ ಪ್ರತಿಷ್ಠಿತ ರಾಮ್ ರಾಜ್ ಕಾಟನ್ ಸಂಸ್ಥೆಯು ಆನೇಕಲ್ ಪಟ್ಟಣದಲ್ಲಿ ತನ್ನ ನೂತನ ಮಳಿಗೆಯನ್ನು ಉದ್ಘಾಟಿಸಿದೆ. ಈ ಮೂಲಕ ಕರ್ನಾಟಕದಲ್ಲಿ ತನ್ನ ಉಪಸ್ಥಿತಿ ಹೆಚ್ಚಿಸಿಕೊಂಡಿದೆ. ಈ ಮಳಿಗೆಯನ್ನು ಆನೇಕಲ್‌ನ ವಿಜಯ್ ನರ್ಸಿಂಗ್ ಹೋಮ್ ಡಾ. ಸಿ. ಬಿ. ಮೋಹನ್ ಅವರು ಉದ್ಘಾಟಿಸಿದರು. ಆನೇಕಲ್‌ನ ಶ್ರೀ ರಾಘವೇಂದ್ರ ಭವನದ ಮಾಲೀಕರಾದ ಶ್ರೀ ಈರೋಡಿ ರಾಮದಾಸ್ ಕಾರಂತ್ ಮತ್ತು ಸಾಹಿತಿ ತಾನಂ ಕುಮಾರಸ್ವಾಮಿ, ಅವರು ದೀಪ ಬೆಳಗಿಸುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು. ಮಳಿಗೆಯ ಮೊದಲ ಖರೀದಿಯನ್ನು ಆನೇಕಲ್ ಎಲೈಟ್ ಅಕಾಡೆಮಿಯ ಡಾ. ಜಿ. ಮುನಿರಾಜು ಅವರು ಮಾಡಿದರು. ರಾಮ್ ರಾಜ್ ಕಾಟನ್ ಸಂಸ್ಥೆಯ ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಕೆ.ಆರ್. ನಾಗರಾಜನ್ ಅವರು ಮಾತನಾಡಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ಆನೇಕಲ್ ನಲ್ಲಿ ನಮ್ಮ ಮಳಿಗೆಯನ್ನು ಉದ್ಘಾಟಿಸುತ್ತಿರುವುದು ನಮಗೆ ಬಹಳ ಸಂತೋಷ ತಂದಿದೆಂದರು. ಮಹಿಳೆಯರಿಗಾಗಿ ಹತ್ತಿ ಮತ್ತು ರೇಷ್ಮೆ ಸೀರೆಗಳು, ಲೆಗ್ಗಿಂಗ್ಸ್ ಸೇರಿದಂತೆ ದೈನಂದಿನ ಹಾಗೂ ವಿಶೇಷ ಸಮಾರಂಭಗಳಿಗೆ ಬೇಕಾದ ಉಡುಪುಗಳ ದೊಡ್ಡ ಶ್ರೇಣಿಯೇ ಇಲ್ಲಿದೆ.

ವಿಜೃಂಭಣೆಯ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆ

80 ಅಡಿ ತೇರು ಎಳೆದ 17 ಗ್ರಾಮದ ಜನ

ಆನೇಕಲ್: ಐತಿಹಾಸಿಕ ಹಿನ್ನೆಲೆ ಹೊಂದಿರುವ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರಾ ರಥೋತ್ಸವ ಬಹಳ ವಿಜೃಂಭಣೆ ನಡೆಯಿತು. 17 ಗ್ರಾಮಗಳ 80 ಅಡಿ ಎತ್ತರದ ತೇರುಗಳು ಯಾವುದೇ ಗೊಂದಲವಿಲ್ಲದೆ ದೇವಾಲಯದ ಆವರಣಕ್ಕೆ ತಲುಪಿರುವುದು, ಜಾತ್ರೆಯ ಸಂಭ್ರಮವನ್ನು ಹೆಚ್ಚಿಸಿದೆ. ಗ್ರಾಮಗಳ ಭಕ್ತರು ವೈಭವದ ಜಾತ್ರೆಗೆ ಸಾಕ್ಷಿಯಾದರು.

ಮದ್ದೂರಮ್ಮ ದೇವಿ ಜಾತ್ರೆಯ ಪ್ರಯುಕ್ತ ಹುಸ್ಕೂರು ಸುತ್ತಮುತ್ತಲ ಗ್ರಾಮಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಯಿತು, ಜಾತ್ರೆ ಪ್ರಮುಖ ಆಕರ್ಷಣೆಯಾದ ಎತ್ತರ ತೇರುಗಳು 17 ಗ್ರಾಮಗಳಿಂದ ಹುಸ್ಕೂರಿಗೆ ತಲುಪಿವೆ. ಕಳೆದ ಬಾರಿ ನಡೆದ ಅನಾಹುತ ದಿಂದ ಈ ಬಾರಿ ತೇರಿನ ಎತ್ತರವನ್ನು 80 ಅಡಿಗೆ ಸೀಮಿತಗೊಳಿಸಲಾಗಿತ್ತು. ವಿವಿಧ ಗ್ರಾಮಗಳಿಂದ ಹೊರಟ ತೇರುಗಳು ಹಳ್ಳ ದಿಣ್ಣೆಗಳನ್ನು ದಾಟಿ ಸುರಕ್ಷಿತವಾಗಿ ದೇವಾಲಯದ ಆವರಣ ತಲುಪಿದೆ. ಈ ಬಾರಿ ಎತ್ತುಗಳು, ಆನೆ, ಒಂಟಿ ಹಾಗೂ ಟ್ರಾಕ್ಟರ್ ಮೂಲಕ ಎಳೆದ ತರಲಾಯಿತು. 80 ಅಡಿ ಎತ್ತರದ ತೇರುಗಳನ್ನು ಎರಡು ತಿಂಗಳಿಂದ ಗ್ರಾಮದಲ್ಲಿ ಭಕ್ತರು ಸಿದ್ಧಪಡಿಸಿ ಶುಕ್ರವಾರ ತಮ್ಮ ಗ್ರಾಮಗಳಲ್ಲಿ ಪೂಜೆ ಸಲ್ಲಿಸಿ ಶನಿವಾರ ಮಧ್ಯಾಹ್ನ 12ರ ವೇಳೆಗೆ ತಮ್ಮ ಗ್ರಾಮದಿಂದ ಹುಸ್ಕೂರು ಮದ್ದೂರಮ್ಮ ದೇವಾಲಯದ ಆವರಣಕ್ಕೆ ತೇರುಗಳು ಬರಲು



ಆರಂಭಿಸಿದರು.ಹೊಲ ಗದ್ದೆಗಳನ್ನು ಜೆಸಿಬಿ ಮೂಲಕದಾರಿಮಾಡಿಕೊಂಡುತೇರನ್ನುಎತ್ತುಗಳು ಮತ್ತು ಜನರು ಎಳೆದು ತರುವುದೇ ಒಂದು ರೋಮಾಂಚವಾಗಿದೆ. ತೇರಿನ ಹಾದಿಯುದ್ದಕ್ಕೂ ತಮಟೆ ವಾದನದೊಂದಿಗೆ ಭಕ್ತರು ಕುಣಿಯುತ್ತಾ ಸಂಭ್ರಮದಿಂದ ತೇರುಗಳನ್ನು ಎಳದು ತಂದರು. ತೇರು ದೇವಾಲಯದ ಅವರಣಕ್ಕೆ ಬರುತ್ತಿದ್ದಂತೆ ಗ್ರಾಮಸ್ಥರ ಉತ್ಸಾಹ ಮುಗಿಲುಮುಟ್ಟುತ್ತಿತ್ತು. ಮದ್ದೂರಮ್ಮ ದೇವಿಯ ಜಯಘೋಷ ಮಾಡುತ್ತಾ ದೇವಾಲಯದ ಆವರಣ ತಲುಪಿದರು. ಮದ್ದೂರಮ್ಮ ದೇವಿಗೆ ಜೈಕಾರ ಕೂಗಿ ತಮ್ಮ ತೇರುಗಳನ್ನು ನಿಗದಿತ ಜಾಗದಲ್ಲಿ ನಿಲ್ಲಿಸಿದರು. ದೊಡ್ಡನಾಗಮಂಗಲ, ರಾಮಸಾಗರ, ಸಿಂಗೇನಅಗ್ರಹಾರ, ರಾಯಸಂದ್ರ, ಹೀಲಲಿಗೆ, ಲಕ್ಷ್ಮೀನಾರಾಯಣಪುರ, ಸಂಜೀವನಗರ, ಗೋವಿಂದಶೆಟ್ಟಿಪಾಳ್ಯ ಕುರ್ಜುಗಳು ಹುಸ್ಕೂರು ಮದ್ದೂರಮ್ಮ ದೇವಿ ದೇವಾಲಯದ ಆವರಣಕ್ಕೆ ಭಕ್ತರು ಎಳೆದು ತಂದರು. ನಾರಾಯಣಘಟ್ಟ, ಕಗ್ಗಲಿಪುರ, ಹಾರೋಹಳ್ಳಿ, ಕೊಡತಿ, ಚೊಕ್ಕಸಂದ್ರ, ಸೂಲಿಕುಂಟೆ ರಾಯಸಂದ್ರ, ಗೋವಿಂದಶೆಟ್ಟಿಪಾಳ್ಯ, ಕೋನಪ್ಪಅಗ್ರಹಾರ, ಲಕ್ಷ್ಮೀನಾರಾಯಣಪುರ, ದೊಡ್ಡನಾಗಮಂಗಲ, ಗ್ರಾಮಗಳ ಕುರ್ಜುಗಳು ದೊಡ್ಡನಾಗಮಂಗಲ ತೇರುಗೆ ಆನೆ ಮತ್ತು ಒಂಟೆ ಬಂದು ಮೆರಗು ನೀಡಿತು. ದೊಡ್ಡನಾಗಮಂಗಲದ ಕುರ್ಜುಗೆ ಆನೆ ಮತ್ತು ಒಂಟೆ ಸಾಥ್ ನೀಡಿದ ಅಂಗವಾಗಿ ಹಬ್ಬದ ವಾತಾವರಣ ಮನೆ ಮಾಡಿತ್ತು. ತೇರಿನ ಮುಂದೆ ಆನೆ, ಒಂಟೆಗಳು ಸಾಗಿದವು. ಚಂಡೆ ತಮಟೆ : ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ತೇರನ್ನು ಎಳೆದರು.

ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಗೆ ಬರುವ ತೇರುಗಳ ವೈಭವವನ್ನು ದೂರದ ಗ್ರಾಮಗಳಿಂದ ಲಕ್ಷಾಂತರ ಭಕ್ತರು ದೇವಿಯ ಆಗಮಿಸಿ ಕೃಪೆಗೆ ಪಾತ್ರರಾದರು. ಶಾಸಕರಾದ ಬಿ.ಶಿವಣ್ಣ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ರಾಜಕಾರಣಿಗಳಿಂದಲೇ ಹೆಚ್ಚು ಅಪರಾಧ

ಮೈಸೂರು: ಜೈಲಿನಲ್ಲಿರುವ ಕೈದಿಗಳಿಗಿಂತ ಸಹಸ್ರಪಟ್ಟು ಅಪರಾಧ ಮಾಡಿರುವ ರಾಜಕಾರಣಿಗಳು ನಮ್ಮನ್ನು ಆಳುತ್ತಿದ್ದಾರೆ. ಅವರು ಶ್ರೀಮಂತಿಕೆಯಲ್ಲಿ ಸುಖವಾಗಿಯೇ ಬದುಕುತ್ತಿದ್ದಾರೆ. ಆದರೆ, ನಾವು ಅವರನ್ನು ಅಪರಾಧಿಗಳೆಂದು ಕನಸು, ಮನಸ್ಸಿನಲ್ಲಿ ಭಾವಿಸುತ್ತಿಲ್ಲ ಎಂದು ವಿಮರ್ಶಕ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಸಭಾಂಗಣದಲ್ಲಿ ಕವಿತಾ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಮೇಶ್ ಚಂದ್ರ ಅವರ 'ಝುಹಾದಿ ಯಳಗಣ ಹಾಡೇ ಝು', ಗಣೇಶ್ ಅಮಿನಗಡ ಅವರ 'ಕೈದಿಗಳ ಕಥನ', 'ರಂಗ ಪ್ರಸಂಗ' ಹಾಗೂ 'ರಂಗ ಕರ್ಪೂರ' ಕವನ ಸಂಕಲನಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿ, ಜೈಲಿಗೆ ಹೋಗಿ ಬಂದ ನಂತರ ಅಪರಾಧದ ಕಳಂಕವನ್ನು ಜೀವನಪೂರ್ತಿ ಹೊತ್ತಿಕೊಂಡು ಬದುಕಬೇಕೇ ಎಂಬ ಪ್ರಶ್ನೆ ಮೂಡುತ್ತದೆ. ಆದರೆ, ಇದೇ ಅಪಮಾನ ರಾಜಕಾರಣಿಗಳಿಗೆ ಯಾಕೆ ಆಗುವುದಿಲ್ಲ? ಸಾವಿರಾರು ಕೋಟಿ ರೂ. ದುಡ್ಡು ಮಾಡಿರುವವರನ್ನು ಅಪರಾಧಿಗಳೆಂದು ತಿಳಿದಿದ್ದರೂ, ಅವರಿಗೆ ನಮಸ್ಕಾರ ಮಾಡಿ ಹಾರ, ತುರಾಯಿ ಹಾಕಲಾಗುತ್ತದೆ. ನಮ್ಮ ನ್ಯಾಯದ ಕಲ್ಪನೆಯನ್ನೇ ಪ್ರಶ್ನೆ ವಾಡಿಕೊಳ್ಳುವಂತಹ ಪರಿಸ್ಥಿತಿ ಇದೆ ಎಂದು ಹೇಳಿದರು. ಸುಧಾರಣೆ ಎಂಬ ನೆಪದಲ್ಲಿ ಕ್ರೌರ್ಯವೂ ನಡೆಯುತ್ತಿದೆ. ಜೈಲಿನಲ್ಲಿ ಇರುವವರಲ್ಲಿ 100ರಲ್ಲಿ 98 ಮಂದಿ ಹಳ್ಳಿಗಳಿಂದ ಬಂದ ಬಡವರು, ಅಲ್ಪ ಶಿಕ್ಷಿತರು. ಶಿಕ್ಷಣ ಪಡೆದವರಿದ್ದರೂ ನ್ಯಾಯವನ್ನು ಖರೀದಿಸಲು ಸಾಧ್ಯವಾಗದವರೇ ಹೆಚ್ಚು, ಅವರ ಮನಸ್ಥಿತಿಯನ್ನು ಅರಿತು ಅವರನ್ನು ಸುಧಾರಣೆ ಮಾಡಬೇಕಾಗಿದೆ ಎಂದು ಹೇಳಿದರು. ಜೈಲಿನಲ್ಲಿ 10-15ವರ್ಷದಿಂದ ಇರುವ ವರನ್ನು ನೋಡಿದಾಗ ಸಂಕಟವಾಗುತ್ತದೆ. ಕೈದಿಗಳಿಗೆ ಕನಸು ಕಾಣುವ ಸ್ವಾತಂತ್ರ್ಯವೂ ಇಲ್ಲ. ಆರ್ಥಿಕ, ಅಧಿಕಾರ ಮತ್ತು ಜಾತಿ ಅಸಮಾನತೆ ಜೊತೆಗೆ ಕನಸು ಕಾಣುವ ಅಸಮಾನತೆಯ ಸಮಾಜದಲ್ಲಿ ಸೃಷ್ಟಿಯಾಗಿದೆ ಎಂದು ಹೇಳಿದರು. ದುರ್ಬಲರಾದವರು ನ್ಯಾಯದ ಹೆಸರಿನಲ್ಲಿ ಸಮಾಜದಿಂದ ದೂರವಾಗಿ ಮನುಷ್ಯತ್ವವನ್ನೇ ಹಿಸುಕಿಕೊಂಡು ಬದುಕುವ ಸ್ಥಿತಿ ನಿರ್ಮಾಣವಾಗಿದೆ. ಇದು ಕ್ರೌರ್ಯದ ಮನಸ್ಥಿತಿಯನ್ನು ಉಂಟು ಮಾಡುತ್ತದೆ. ಜೈಲುಗಳು ಹೆಚ್ಚಾಗಲು ನ್ಯಾಯದ ಕಲ್ಪನೆ ಕಡಿಮೆಯಾಗಿರುವುದೇ ಕಾರಣ ಎಂದರು. ಕಾರ್ಯಕ್ರಮದಲ್ಲಿ ಲೇಖಕರಾದ ರಮೇಶ್‌ಚಂದ್ರ, ಗಣೇಶ್ ಅಮಿನಗಡ, ಹಿರಿಯ ರಂಗಕರ್ಮಿ ಹುಲಿಗಪ್ಪ ಕಟ್ಟಿಮನಿ, ಬಿಡುಗಡೆಗೊಂಡ ಕೈದಿಗಳಾದ ಎಚ್.ವಿ.ರಮೇಶ್, ಮಹೇಶ ಬಾಗಳಿ ಮತ್ತಿತರರು ಉಪಸ್ಥಿತರಿದ್ದರು.

ವಿಮರ್ಶಕ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಆತಂಕ

ಮಾರಕ ವೃಷಭಾವತಿ ಯೋಜನೆ ರದ್ದಾಗಲಿ

ದೊಡ್ಡಬಳ್ಳಾಪುರ: ಬೆಂಗಳೂರಿನ ವೃಷಭಾವತಿ ವ್ಯಾಲಿಯಿಂದ ಶುದ್ಧೀಕರಿಸಿದ ಕೊಳಚೆ ನೀರನ್ನು ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಹೋಬಳಿಯ ಕೆರೆಗಳಿಗೆ ಹರಿಸುವ ಯೋಜನೆಯನ್ನು ರಾಜ್ಯ ಸರ್ಕಾರ ತಕ್ಷಣವೇ ರದ್ದುಪಡಿಸಬೇಕು ಎಂದು ನವ ಕರ್ನಾಟಕ ಯುವಶಕ್ತಿ ವೇದಿಕೆಯ ಕಾರ್ಯದರ್ಶಿ ಉದಯ ಆರಾಧ್ಯ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರ 2026-27ರ ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಯಂತೆ ಬೆಂಗಳೂರಿನ ವೃಷಭಾವತಿ ವ್ಯಾಲಿಯಿಂದ ಎರಡು ಹಂತದಲ್ಲಿ ಶುದ್ಧೀಕರಿಸಿದ 308 ಎಂಎಲ್‌ಡಿ ನೀರಿನಿಂದ 259 ಕೆರೆಯನ್ನು ತುಂಬಿಸುವ ಮೂಲ ಯೋಜನೆ ಕೈಗೆತ್ತಿಕೊಳ್ಳಲಾಗಿದೆಂದರು. ಈ ಯೋಜನೆಯಲ್ಲಿ ದೊಡ್ಡಬಳ್ಳಾಪುರ ವಿಧಾನಸಭಾಕ್ಷೇತ್ರದ ಕೆರೆಯನ್ನು ಹೊರತುಪಡಿಸಿ ದೇವನ ಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಹೋಬಳಿಯ ಕಾರ್ನಾಳ ಕೆರೆ, ಲಕ್ಷ್ಮೀದೇವಿಪುರ ಕೆರೆ, ತಿರುಮಗೊಂಡನಹಳ್ಳಿ ಕೆರೆ, ಕುರುವಿಗೆರೆ ಕೆರೆ, ತೂಬಗೆರೆ ಕೆರೆ, ಗೂಳ್ಯ ನಂದಿಗುಂದ ಕೆರೆ, ಮೇಳೇಕೋಟೆ ಕೆರೆ, ಗಂಟಿಗಾನಹಳ್ಳಿ ಕೆರೆ, ಕಂಚಿಗಾನಳ ಕೆರೆ, ತಪಸೀಹಳ್ಳಿ ಕೆರೆ ಸೇರಿ ಒಟ್ಟು 19 ಕೆರೆಗಳಿಗೆ



ವೃಷಭಾವತಿ ವ್ಯಾಲಿಯಿಂದ ನೀರು ಹರಿಸುವ ಪ್ರಸ್ತಾವನೆ ರೂಪಿಸಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ ಎಂದು ಹೇಳಿದರು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಸಿ. ವ್ಯಾಲಿ ಹಾಗೂ ಎಚ್.ಎನ್ ವ್ಯಾಲಿ ಯೋಜನೆಗಳ ಮೂಲಕ ಹರಿಯುತ್ತಿರುವ ಕೊಳಚೆ ನೀರಿನ ಪರಿಣಾಮ ಸ್ಥಳೀಯರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂತರ್ಜಲದ ಗುಣಮಟ್ಟ ಹದಗೆಟ್ಟಿದ್ದು, ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಈ ನೀರನ್ನು ಬಳಸಿಕೊಂಡು ಕೃಷಿ ಮಾಡುತ್ತಿರುವ ರೈತರಿಗೆ ಸಮಸ್ಯೆಗಳು ಎದುರಾಗುತ್ತಿದೆ. ಆ ನೆಲದಲ್ಲಿ ಬೆಳೆಯುವ ಬೆಳೆಗಳ ಗುಣಮಟ್ಟದ ಬಗ್ಗೆ ಜನರಲ್ಲಿ ಆತಂಕ ಹೆಚ್ಚಾಗಿದೆ. ಕುಡಿಯುವ ನೀರು ಮತ್ತು ಆಹಾರ ಕಲುಷಿತವಾಗುವ ಅಪಾಯವೂ ಎದುರಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದರು. ಕಳೆದ ಕೆಲವು ವರ್ಷದಿಂದ ಆ ಭಾಗದಲ್ಲಿ ಕಿಡ್ನಿ ಸಂಬಂಧಿತ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವ ಬಗ್ಗೆ ಸ್ಥಳೀಯರು ಹೇಳುತ್ತಿ ರುವುದು ಕೂಡ ಚಿಂತಾಜನಕ ಸಂಗತಿ. ಯೋಜನೆ ಯನ್ನು ಜಾರಿಗೆ ತರಲು ಸರ್ಕಾರ ಮುಂದಾದರೆ ಪಕ್ಷಾತೀತವಾಗಿ ಹೋರಾಟ ನಡೆಸಬೇಕಾಗುತ್ತದೆ. ತೂಬಗೆರೆ ಹೋಬಳಿಯ ಕೆರೆಗಳಿಗೆ ಎತ್ತಿನಹೊಳೆ ಯೋಜನೆಯಡಿ ದೊರೆಯುವ ಶುದ್ಧ ನೀರನ್ನು ಮಾತ್ರ ಹರಿಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ನಂತರ ನವ ಕರ್ನಾಟಕ ಯುವಶಕ್ತಿ ವೇದಿಕೆ ಅಧ್ಯಕ್ಷ ಹಳ್ಳಿರೈತ ಅಂಬರೀಶ್, ತೂಬಗೆರೆ ಹೋಬಳಿಯ ಜನರಿಗೆ ಎತ್ತಿನಹೊಳೆ ಯೋಜನೆಯ ನೀರು ಬೇಕಾಗಿದೆ. ವೃಷಭಾವತಿ ಕೊಳಚೆ ನೀರು ಯಾವುದೇ ರೀತಿಯ ಅಗತ್ಯವಿಲ್ಲ. ಈ ರೀತಿಯ ನೀರನ್ನು ನೀಡುವಂತೆ ಸ್ಥಳೀಯರು ಯಾರೂ ಕೇಳಿಕೊಂಡಿಲ್ಲ ಎಂದು ಹೇಳಿದರು. ಇಂತಹ ಕೊಳಚೆ ನೀರನ್ನು ಹರಿಸಿದರೆ ಮುಂದಿನ ದಿನಗಳಲ್ಲಿ ಎರಡು ನಗರಗಳ ಕುಡಿಯುವ ನೀರಿನ ಸಮಸ್ಯೆಗೆ ದೊಡ್ಡ ಹೊಡೆತ ಬೀಳುವ ಸಾಧ್ಯತೆ ಇದೆ. ಆದ್ದರಿಂದ ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರ ಬೆಂಬಲ ಪಡೆದು ರಾಜ್ಯಮಟ್ಟದಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ ಎಂದು ತಿಳಿಸಿದರು. ಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳು ಹಾಗೂ ಮುಖಂಡರಾದ ಹರೀಶ್ ಇತರರಿದ್ದರು.

ಗ್ಯಾಸ್ಟ್ರೊ ಸೆಂಟರ್ ಆಸ್ಪತ್ರೆಯಿಂದ ಜೀರ್ಣಾಂಗ ತಪಾಸಣಾ ಶಿಬಿರ

ಗ್ಯಾಸ್ಟ್ರೊ ಮುಕ್ತ ರಾಜ್ಯಕ್ಕಾಗಿ ಸಹಕರಿಸಲಿ

ಹೊಸಕೋಟೆ: ಗ್ಯಾಸ್ಟ್ರೊ ಮುಕ್ತ ಕರ್ನಾಟಕವನ್ನಾಗಿಸುವ ನಿಟ್ಟಿನಲ್ಲಿ ಈ ಶಿಬಿರ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಭಾಗದ ಜನರು ಸಂಕುಚಿತ ಮನಸ್ಥಿತಿ ಬಿಟ್ಟು ಕ್ಯಾನ್ಸರ್, ಅಲ್ಸರ್, ಲಿವರ್, ಗ್ಯಾಸ್ಟಿಕ್ ಮತ್ತಿತರ ಪರೀಕ್ಷೆ ತಪಾಸಣೆ ಮಾಡಿಸಿಕೊಂಡು ರೋಗಮುಕ್ತವಾಗುವ ಅವಕಾಶ ಪಡೆಯುವಲ್ಲಿ ಹೆಚ್ಚು ಸಹಕಾರ ದೊರೆತಿದೆ ಎಂದು ರೋಟರಿ ಸೆಂಟ್ರಲ್ ನ ಬೆಂ.ಗ್ರಾ. ಹಾಗೂ ಕೋಲಾರ ವಿಭಾಗದ ಸಹಾಯಕ ಪಾಲಕರಾದ ಡಿ. ಎಸ್. ರಾಜ್‌ಕುಮಾರ್ ತಿಳಿಸಿದರು.

ನಗರದ ಜಿಕೆಬಿಎಂಎಸ್ ಶಾಲಾ ಆವರಣದ ಬಿ.ಎನ್. ಬಚ್ಚೇಗೌಡ ಅಕಾಡಮಿಕ್ ಬ್ಲಾಕ್ ನಲ್ಲಿ ಹೊಸಕೋಟೆ ರೋಟರಿ ಸೆಂಟ್ರಲ್, ರೋಟರಿ ಕಬ್ಬನ್ ಪಾರ್ಕ್ ಘಟಕ ಹಾಗೂ ಬೆಂಗಳೂರು ಗ್ಯಾಸ್ಟ್ರೊ ಸೆಂಟರ್ ಆಸ್ಪತ್ರೆಯಿಂದ ಜೀರ್ಣಾಂಗ ತಪಾಸಣಾ ಶಿಬಿರ, ಉಚಿತ ಔಷಧ ವಿತರಣೆ ಹಾಗೂ ಎಂಡೋಸ್ಕೋಪಿ ಪರೀಕ್ಷಾ ಶಿಬಿರದಲ್ಲಿ ಮಾತ ನಾಡಿ, ರಾಜ್ಯದಲ್ಲಿ ಮೊಟ್ಟಮೊದ ವಾಹನವಾದ ಎಂಡೊಸ್ಕೋಪಿ ಆನ್‌ವೀಲ್ ವಾಹನವನ್ನು ರೋಟರಿ ಸಂಸ್ಥೆವತಿಯಿಂದ ನೀಡಲಾಗಿದೆಂದರು. ರಾಜ್ಯದ ಮೂಲೆ ಮೂಲೆಗೆ ತಲುಪಿ ಗ್ಯಾಸ್ಟ್ರೊ



ಸಮಸ್ಯೆ ಅಥವ ಜೀರ್ಣಾಂಗ ಸಮಸ್ಯೆ ಸಂಬಂಧ ಸ್ಥಳದಲ್ಲಿಯೇ ತಪಾಸಣೆ ಮಾಡಬಹುದಾಗಿದೆ. ಇದರ ಪ್ರಯೋಜನ ಪಡೆಯುವಲ್ಲಿ ಜೀರ್ಣಾಂಗ ಸಮಸ್ಯೆ ಬಾಧಿತರು 250 ಕ್ಕೂ ಹೆಚ್ಚು ಜನ ಈ ಶಿಬಿರದಲ್ಲಿ ಬಾಗಿಯಾಗಿ ತಪಾಸಣೆ ಜತೆ ಉಚಿತ ಔಷಧವನ್ನು ಪಡೆದಿದ್ದಾರೆ. ಈ ಶಿಬಿರದಲ್ಲಿ ರಾಜ್ಯದ ಹುಬ್ಬಳ್ಳಿ, ಹಾಸನ ಹೀಗೆ ಹಲವಾರು ಜಿಲ್ಲೆಗಳಿಂದ ಗ್ಯಾಸ್ ಸಮಸ್ಯೆ ಬಾಧಿತರು ಈ ಶಿಬಿರದ ಪ್ರಯೋಜನ ಪಡೆದಿರುವುದು ಸಂತಸದ ವಿಚಾರ ಎಂದರು. ಗ್ಯಾಸ್ಟ್ರೊ ಆಸ್ಪತ್ರೆಯ ಮುಖ್ಯಸ್ಥ ಡಾ.ಯೋಗಾನಂದರೆಡ್ಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಶೈಲಜಾ ರೆಡ್ಡಿ, ಡಾ.ವರಧರಾಜ್, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ರೋಟರಿ ಸಂಸ್ಥೆಯ ಸಹಾಯಕ ಪಾಲಕ ಡಿ.ಎಸ್. ರಾಜ್ ಕುಮಾರ್, ರೋಟರಿ ಸಂಸ್ಥೆಯ ವೈ. ಸಿ. ರಾಯ್, ಸುಬ್ರಹ್ಮಣಿ, ಗೌರಿಶಂಕರ್, ಉಷಾ ವೆಂಕಟೇಶ್, ಶಾಮಲಾ ವಿದ್ಯಾರಣ್ಯ, ಕಾರ್ಯದರ್ಶಿ ಬಚ್ಚಣ್ಣ ಸೇರಿ ಹಲವರು ಹಾಜರಿದ್ದರು.

ಸಮೃದ್ಧಿ ಜಾನಪದ ಕಲಾ ಉತ್ಸವ-2026 ಕಾರ್ಯಕ್ರಮ

ಜಾನಪದ ಕಲೆ ನಮ್ಮ ಸಂಸ್ಕೃತಿ ಪ್ರತಿಬಿಂಬ

ದೇವನಹಳ್ಳಿ: ಜಾನಪದ ಕಲೆಯು, ಭಾವನಾತ್ಮಕವಾಗಿ ಕೂಡಿರುವ ಕಲೆಯಾಗಿದೆ. ದೇಶ, ವಿದೇಶದಲ್ಲಿ ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮೂಲಕಗಂಡುಕಲೆಯಾಗಿಪ್ರಸಿದ್ಧಿ ಪಡೆದುಕೊಂಡಿದೆ. ಈ ಕಲೆಯನ್ನು ಉಳಿಸಿ ಬೆಳೆಸುವ ಕಾರ್ಯವಾಗಬೇಕು ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ತಾಲೂಕಿನ ವೆಂಕಟಗಿರಿಕೋಟೆಯ ಮಂಜುನಾಥ ಪ್ರೌಢಶಾಲೆಯ ಆವರಣದಲ್ಲಿ, ಸಮೃದ್ಧಿ ಸಮಾಜ ಸೇವಾ ಟ್ರಸ್ಟಿನ, 3ನೇ ವರ್ಷದ, ವಾರ್ಷಿಕೋತ್ಸವದ ಅಂಗವಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ, ಆಯೋಜಿಸಿದ್ದ ಸಮೃದ್ಧಿ ಜಾನಪದ ಕಲಾ ಉತ್ಸವ-2026 ಕಾರ್ಯಕ್ರಮ ಉದ್ಘಾಟನೆ ಮಾತನಾಡಿ, ಗ್ರಾಮೀಣ ಭಾಗದಲ್ಲಿನ ಕಲಾವಿದರಿಂದ ಜಾನಪದ ಕಲೆ ಜೀವಂತವಾಗಿದೆಂದರು.

ಶಿಡ್ಲಘಟ್ಟ ತಾಲೂಕಿನ ಪಿಂಡಿಪಾಪನಹಳ್ಳಿ ಮುನಿ ವೆಂಕಟಪ್ಪ ಅವರು, ತಮಟೆ ವಾದನದ ಮೂಲಕ ಜಪಾನ್ ನಲ್ಲಿ ಕಲೆ ಪ್ರದರ್ಶನ ಮಾಡಿ, ದೇಶದ ಕೀರ್ತಿಯನ್ನು ಮೆರೆದಿದ್ದಾರೆ. ಅಂತಹ ಕಲಾವಿದರನ್ನು ಹುಟ್ಟು ಹಾಕುವುದಕ್ಕೆ, ಮತ್ತು ಕಲಾವಿದರಲ್ಲಿನ ಕಲೆಯನ್ನು ಅನಾವರಣಗೊಳಿಸುವುದಕ್ಕೆ ಜಾನಪದ



ಕಲಾ ಉತ್ಸವಗಳು ಉತ್ತಮ ವೇದಿಕೆಗಳಾಗಲಿವೆ. ಯುವಪೀಳಿಗೆ ಇಂತಹ ಕಲೆಯನ್ನು ಮೈಗೂಡಿಸಿ ಕೊಳ್ಳುತ್ತಿರುವುದು ಸಂತಸದ ವಿಷಯ ಎಂದರು. ಬುಳ್ಳಹಳ್ಳಿಯ ತಮಟೆ ವಾದನ ತಂಡ ಪ್ರಥಮ ಬಹುಮಾನ 44 ಸಾವಿರದ, 444 ರೂಪಾಯಿ ನಗದು, ಆಕರ್ಷಕ ಟ್ರೋಫಿ ಪಡೆದುಕೊಂಡರು. ಬೈಚಾಪುರ ತಮಟೆ ವಾದನ ತಂಡ ದ್ವಿತೀಯ ಸ್ಥಾನ, ಆಕರ್ಷಕ ಟ್ರೋಫಿ 22 ಸಾವಿರದ 222 ರೂಪಾಯಿ ನಗದು ಬಹುಮಾನ, ಮೂರನೇ ಬಹುಮಾನವನ್ನು ಬೂದಿಗೆರೆ ತಮಟೆ ವಾದನ ತಂಡದವರು 11 ಸಾವಿರದ 111 ರೂಪಾಯಿ ಬಹುಮಾನ ಪಡೆದುಕೊಂಡರು.

ಅಂತರಾಷ್ಟ್ರೀಯ ಖ್ಯಾತಿಯ ಜಂಬೆಬಾಲು ಅವರ ತಂಡದಿಂದ ಆಕರ್ಷಕವಾದ ಜಂಬೆವಾದನ ಎಲ್ಲರ ಗಮನ ಸೆಳೆಯಿತು. ಮಂಜುನಾಥ ಪ್ರೌಢಶಾಲೆ ವಿದ್ಯಾರ್ಥಿಗಳು, ಕರಗ ನೃತ್ಯ ಪ್ರದರ್ಶನ ಮಾಡಿ, ಗಮನಸೆಳೆದರು. ಮಾಜಿ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಹೊಸಕೋಟೆ ಸುಬ್ಬರಾಜು, ಕದಿರಪ್ಪ.ಎ, ಬಮೂಲ್ ನಿರ್ದೇಶಕ ಎಸ್.ಪಿ.ಮುನಿರಾಜು, ಬಯಾಪ ನಿರ್ದೇಶಕ ವಿ.ರಾಮಚಂದ್ರಪ್ಪ, ಶ್ರೀನಿವಾಸ್, ಮುದುಗುರ್ಕಿ ವಿ.ನಾರಾಯಣಸ್ವಾಮಿ, ವಿ.ಹನುಮಂತಪ್ಪ, ಮಾಜಿ ಶಾಸಕ ಎಸ್.ಎಂ.ಮುನಿಯಪ್ಪ ಇದ್ದರು.

ಕಿರುಸುದ್ದಿ

ಕಲಾಗ್ರಾಮದಲ್ಲಿ ನಾಟಕೋತ್ಸವ

ಬೆಂಗಳೂರು: ರಾಷ್ಟ್ರೀಯ ಖ್ಯಾತಿಯ ನಾಡಿನ ಹಿರಿಯ ರಂಗಕರ್ಮಿ ಸುರೇಶ್ ಆನಗಳ್ಳಿ ಅವರ ನೇತೃತ್ವದ ಅನೇಕ ರಂಗತಂಡವು ಇದೇ ತಿಂಗಳ 17, 18 ಮತ್ತು 19 ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಮೂರು ದಿನಗಳ ನಾಟಕೋತ್ಸವವನ್ನು ಹಮ್ಮಿಕೊಂಡಿದೆ.



ಮೊದಲ ದಿನ ಎನ್.ಎಸ್.ಡಿ. ಪದವೀಧರೆ ಅಪೂರ್ವ ಆನಗಳ್ಳಿ ಅವರು ನಿರ್ದೇಶಿಸಿದ ರಕ್ತ ವಿವಾಹ ಹಾಗೂ ಎರಡನೇ ದಿನ ಮುರಳಿ ಪೂರ್ವಿಕ್ ಅವರು ನಿರ್ದೇಶಿಸಿದ ಸು ಬಿಟ್ರೆ ಬಣ್ಣ... ಬ ಬಿಟ್ರೆ ಸುಣ್ಣ ನಾಟಕವನ್ನು ಕೋಶಿಕಾ ತಂಡದವರು ಅಭಿನಯಿಸಲಿದ್ದಾರೆ. ಕೊನೆಯ ದಿನ ನಿರ್ದಿಗಂತ ಮೈಸೂರು ಅನುಷ್ ಶೆಟ್ಟಿ ಅವರ ನಿರ್ದೇಶನದಲ್ಲಿ ಪೊಲಿಟಿಕಲ್ ಪ್ರಿಸನರ್ಸ್ ನಾಟಕವನ್ನು ಅಭಿನಯಿಸಲಿದ್ದಾರೆ. ಈ ಬಾರಿಯ ಫಿಲಂಫೇರ್ ವಿಜೇತ ನಟಿ ಅಕ್ಷತಾ ಪಾಂಡವಪುರ ಮತ್ತು ಬ್ಲಿಂಕ್ ಖ್ಯಾತಿಯ ಶ್ರೀನಿಧಿ ಬೆಂಗಳೂರು, ಲೆಕ್ಕ ಪರಿಶೋಧಕ ಪ್ರಭಾತ್ ಪಿ.ಭಟ್ ಅವರು ನಾಟಕೋತ್ಸವ ಉದ್ಘಾಟಿಸಲಿದ್ದಾರೆ. ಪತ್ರಕರ್ತ ಹಾಗೂ ಲೇಖಕ ಜೋಗಿ ಅವರ ಉಪಸ್ಥಿತಿಯೂ ನಾಟಕೋತ್ಸವದಲ್ಲಿ ಇರಲಿದೆ. ಹೆಚ್ಚಿನ ಮಾಹಿತಿಗಾಗಿ 9718080422 ಈ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ಸಾರಿಗೆ ಬಸ್ಸಿನಲ್ಲಿ ಕುಳಿತಲ್ಲೇ ವ್ಯಕ್ತಿ ಸಾವು

ಕೊಳ್ಳೇಗಾಲ: ಕೆಎಸ್‌ಆರ್‌ಟಿಸಿ ಬಸ್ಸನಲ್ಲಿ ಪ್ರಯಾಣಿಕನೊಬ್ಬ ಮೃತನಾಗಿರುವ ಘಟನೆ ಇಲ್ಲಿನ ಬಸ್ ನಿಲ್ದಾಣದ ಬಳಿ ಜರುಗಿದೆ. ಹನೂರು ತಾಲೂಕಿನ ವಡ್ಡರದೊಡ್ಡಿ ಗ್ರಾಮದ ಆರೋಗ್ಯಸ್ವಾಮಿ ಎಂಬಾತ ಮೃತ್ತ ದುರ್ದೈವಿ. ಈತ ಮೈಸೂರಿಗೆ ತೆರಳಿ ವಾಪಸ್ಸು ಊರಿಗೆ ತೆರಳಲು ಕೊಳ್ಳೇಗಾಲ ಪಟ್ಟಣದ ಬಸ್ ನಿಲ್ದಾಣದ ಬಳಿ ಬಂದಾಗ ಎಲ್ಲಾ ಪ್ರಯಾಣಿಕರು ಇಳಿದರೂ ಈತ ಇಳಿಯದಿರುವುದನ್ನು ಕಂಡು ಕಂಡಕ್ಟರ್ ಎಬ್ಬಿಸಲು ಹೋದಾಗ ಅಸ್ವಸ್ಥನಾಗಿದ್ದನ್ನು ಕಂಡು ತಕ್ಷಣ ಅಂಬ್ಯುಲೆನ್ಸ್ ಮೂಲಕ ಕರೆಯಿಸಿ ಸಮಾಜಸೇವಕ ರಾಜೇಶ್ ಸಹಾಯದಿಂದ ಆಸ್ಪತ್ರೆಗೆ ಕರೆದು ಕೊಂಡು ಹೋದಾಗ ವೈದ್ಯರು ತಪಾಸಣೆ ಮಾಡಿ ಮೃತಪಟ್ಟಿರುವುದನ್ನು ಖಚಿತ ಪಡಿಸಿದರು. ಬಳಿಕ ಮೃತ್ತದೇಹವನ್ನು ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಯಿತು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪೂಜೆ ನೆಪದಲ್ಲಿ ವಂಚನೆ: ಗಿಳಿಶಾಸ್ತ್ರ ಹೇಳಿದವನ ಬಂಧನ

ಬೆಂಗಳೂರು: ಜೀವನ ಸುಧಾರಣೆಗಾಗಿ ವಿಶೇಷ ಪೂಜೆ ಮಾಡುವ ನೆಪದಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಯಿಂದ ಲಕ್ಷಾಂತರ ರೂ. ಚಿನ್ನಾಭರಣ ಪಡೆದು ವಂಚಿಸಿದ್ದ ಆರೋಪದ ಅಡಿ ನಕಲಿ ಗಿಳಿಶಾಸ್ತ್ರ ಹೇಳುವವನನ್ನು ಭಾರತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡು ಮೂಲದ ಶೇಖರ್ (33) ಬಂಧಿತ. ಆರೋಪಿಯು ನಗರದಲ್ಲಿರುವ ಆದಾಯ ತೆರಿಗೆ ಇಲಾಖೆಯಲ್ಲಿ ಆಡಳಿತ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಸತ್ಯನಾರಾಯಣ ಎಂಬುವರಿಂದ 35 ಲಕ್ಷ ರೂ. ಬೆಲೆ ಬಾಳುವ 194 ಗ್ರಾಂ. ಚಿನ್ನಾಭರಣ, 1.3 ಕೆ.ಜಿ. ಬೆಳ್ಳಿ ವಸ್ತುಗಳನ್ನು ಪಡೆದು ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದ್ದು, ಸದ್ಯ ಆರೋಪಿಯ ವಿಚಾರಣೆಯಲ್ಲಿ ಭವಿಷ್ಯ, ಗಿಳಿಶಾಸ್ತ್ರ ಹೇಳುವ ನೆಪದಲ್ಲಿ ಆರೋಪಿ ಇದೆ ರೀತಿ ಸಾಕಷ್ಟು ಜನರಿಗೆ ವಂಚಿಸಿದ್ದಾನೆ ಎಂದು ಪೊಲೀಸರು ಹೇಳಿದರು. ಸತ್ಯನಾರಾಯಣ ಅವರು ಕಳೆದ ಡಿಸೆಂಬರ್‌ನಲ್ಲಿ ಭಾರತಿನಗರ ವೃತ್ತ ರಸ್ತೆಯಲ್ಲಿ ಹೋಗುತ್ತಿದ್ದಾಗ, ಗಿಳಿಶಾಸ್ತ್ರ ಹೇಳುವ ಶೇಖರ್, ನಿಮ್ಮ ಮುಖ ನೋಡಿ ಭವಿಷ್ಯ ಹೇಳುತ್ತೇನೆ, ನಿಮಗೆ ಒಳ್ಳೆಯದಾಗುತ್ತದೆ ಎಂದು ನಂಬಿಸಿ ಹಂತ-ಹಂತವಾಗಿ ದೊಡ್ಡ ಪೂಜೆ ಮಾಡಬೇಕೆಂದು ಹೇಳಿ, ಆ ಪೂಜೆಗೆ ಮನೆಯಲ್ಲಿದ್ದ ಚಿನ್ನಾಭರಣವನ್ನು ತರುವಂತೆ ಹೇಳಿದ್ದ. ಸತ್ಯನಾರಾಯಣ ಅವರಿಂದ ಚಿನ್ನಾಭರಣ ಮತ್ತು ಬೆಳ್ಳಿ ವಸ್ತುಗಳನ್ನು ಪಡೆದು ಆರೋಪಿ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

ಪಿಜಿಯಲ್ಲಿದ್ದ ಯುವತಿಗೆ ಕಿರುಕುಳ: ಬಂಧನ

ಬೆಂಗಳೂರು: ಕೋ-ಪಿಜಿಯಲ್ಲಿ ವಾಸವಿದ್ದ ಯುವತಿಗೆ ಕಿರುಕುಳ ನೀಡಿದ ಆರೋಪಿಯೊಬ್ಬನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ದಿಲ್ಲಿಯ ನೋಯ್ಡಾ ಮೂಲದ ಮನು ಶರ್ಮಾ(32) ಬಂಧಿತ. ದೊಮ್ಮಲೂರಿನಲ್ಲಿ ಯುವಕರು ಮತ್ತು ಯುವತಿಯರು ವಾಸವಿರುವ ಕೋ-ಪಿಜಿ ಇದೆ. ಆರೋಪಿ ಮನುಶರ್ಮಾ ಮತ್ತು ಯುವತಿ ಕೆಲ ತಿಂಗಳಿಂದ ಈ ಪಿಜಿಯಲ್ಲಿ ವಾಸವಾಗಿದ್ದಾರೆ. ಕೆಲ ದಿನಗಳಿಂದ ಆರೋಪಿ ಸಂತ್ರಸ್ತೆ ಹಿಂದೆ ಬಿದ್ದು, ತನ್ನೊಂದಿಗೆ ಸಂಬಂಧ ಬೆಳೆಸುವಂತೆ ಒತ್ತಾಯಿಸಿದ್ದಾನೆ. ಅದಕ್ಕೆ ಆಕೆ ನಿರಾಕರಿಸಿದ್ದಳು. ಘಟನಾ ಸ್ಥಳದ ಸಿಸಿಟಿವಿ ಕ್ಯಾಮೆರಾದ ದೃಶ್ಯಗಳ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಇಂದಿರಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಕಾಡಿನಲ್ಲಿ ಬತ್ತಿಹೋದ ಕೆರೆಕಟ್ಟೆಗಳು | ನೀರಿಲ್ಲದೆ ಬಳಲುತ್ತಿರುವ ಪ್ರಾಣಿಗಳಿಗೆ ನಾಡೇ ಆಸರೆ

ನೀರು ಕುಡಿಯಲು ನಾಡಿಗೆ ಬಂದ ಪ್ರಾಣಿಗಳು

ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ





ತಾವರೆಕೆರೆ: ಹೊಸಕೋಟೆ ತಾಲೂಕಿನಲ್ಲಿ ಕೆಲವೆಡೆ ಮೀಸಲು ಅರಣ್ಯ ಪ್ರದೇಶದ ಸಾವಿರಾರು ಎಕರೆ ಯಿದೆ. ಇಷ್ಟು ಅರಣ್ಯ ಪ್ರದೇಶವಿದ್ದರೂ ಕಾಡುಗಳಲ್ಲಿ ಪ್ರಾಣಿಗಳು ಪಕ್ಷಿಗಳು ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತಿಲ್ಲ.

ಈ ಅರಣ್ಯ ಪ್ರದೇಶದಲ್ಲಿ ಸಾವಿರಾರು ನವಿಲುಗಳಿವೆ. ಚಿರತೆ, ಜಿಂಕೆ, ತೋಳ, ನರಿ, ಕಾಡುಹಂದಿ, ಮೊಲ, ಕೋತಿಗಳು ಸೇರಿದಂತೆ ನೂರಾರು ಬಗೆಯ ಪ್ರಾಣಿ ಪಕ್ಷಿಗಳಿವೆ. ಇವುಗಳಿಗೆ ಬೇಸಿಗೆ ಬಂದರೆಕುಡಿವ ನೀರಿನ ಸಮಸ್ಯೆ ತೀವ್ರತರವಾಗಿ ಎದುರಾಗುತ್ತಿದೆ. ಬೆಟ್ಟಗುಡ್ಡಗಳ ಮತ್ತುಕಾಡಿನ ಪ್ರದೇಶದಲ್ಲಿ ಅಂತರ್ಜಲ ಕುಸಿದಿರುವುದರಿಂದ ನೀರಿನ ಆಸರೆಗಳು ಬೇಸಿಗೆ ಕಾಲಕ್ಕೆ ಬತ್ತಿ ಹೋಗುತ್ತಿವೆ. ಇದರಿಂದಕುಡಿವ ನೀರನ್ನು ಅರಸಿ ಗ್ರಾಮಗಳ ಕಡೆಗೆಕಾಡು ಪ್ರಾಣಿಗಳು ಬರುತ್ತಿವೆ.

ಗ್ರಾಮಗಳ ತೋಟಗಳಲಲಿ ಡ್ರಿಪ್ಸ್ ಅಳವಡಿಕೆ ಮಾಡಿರುವುದರಿಂದ ಹಾಗೂ ಕೃಷಿ ಹೊಂಡ ಮಾಡಿದ ಕಾರಣ ನೀರು ಕುಡಿಯಲು ಸಿಗದೆ ಕೆಲವೊಮ್ಮೆ ಕೃಷಿ ಹೊಂಡಗಳಲ್ಲಿ ನೀರಿನಲ್ಲಿ ಬಿದ್ದು ಸಾವನ್ನಪ್ಪಿದ ಸಂದರ್ಭಗಳುಂಟು. ಆದರೂ ಪ್ರಾಣಿಗಳು ಊರಿನಕಡೆಗೆ ಬರುತ್ತಿರುವ ಚಿರತೆ ಆಹಾರಕ್ಕಾಗಿ ಹಸು, ಕುರಿ, ಮೇಕೆಗಳನ್ನು ಕೊಲ್ಲುತ್ತಿವೆ. ಇದರಿಂದರೈತರು ಸಹಜವಾಗಿ ಆತಂಕಕ್ಕೆ ಒಳಗಾಗಿದ್ದಾರೆ.

ಬೇಸಿಗೆ ಕಾಲದಲ್ಲಿ ತಾಲೂಕಿನ ಅರಣ್ಯ ಪ್ರದೇಶದಲ್ಲಿ ಬೇಸಿಗೆ ಬಿಸಿಲಿನ ತಾಪಕ್ಕೆ ಒಣಗಿದ ಹುಲ್ಲು, ಗಿಡಗಳು, ಹತ್ತಿ ಉರಿಯುತ್ತಿರುವುದು ಸಾಮಾನ್ಯವಾಗಿದೆ. ಬೆಟ್ಟ, ಬಯಲಿನಲ್ಲಿ ಬೆಳೆದಿದ್ದ ಕುರುಚಲು ಗಿಡಗಳಿಗೆ ಬೆಂಕಿ ತಗುತ್ತಿರುವುದು ಸಾಮಾನ್ಯವಾಗಿದೆ. ನಂದಗುಡಿ. ಮೋತಕದಹಳ್ಳಿ, ಚೊಕ್ಕಸಂದ್ರ, ಕರಘನಹಳ್ಳಿ , ದಿನ್ನಹಳ್ಳಿ, ಹಳೆಊರು, ರಾಮಗೋವಿಂದಪುರ. ನಾರಾಪುರ, ಇಟ್ಟಸಂದ್ರ, ಚೀಮಸಂದ್ರ, ಅನಪಳ್ಳಿ. ಅತ್ತಿವಟ್ಟ, ಗೊಟ್ಟಿಪುರ ಗ್ರಾಮಗಳ ತಪ್ಪಲಿನ ಬರುವ 'ಅರಣ್ಯ ಪ್ರದೇಶಕ್ಕೂ ಬೆಂಕಿ ಅನಾಹುತ ಸಂಭವಿಸುತ್ತಿದೆ.

ಇದರಿಂದ ಕಾಡು ಪ್ರಾಣಿಗಳಿಗೆ ನೀರು ಮತ್ತು ನೆರಳಿನ ಸಮಸ್ಯೆ ಉಂಟಾಗಿದೆ. ಪಕ್ಷಿಗಳಿಗೆ ಮತ್ತು ಕೆಲವು ಪ್ರಾಣಿಗಳಿಗೆ ನೆರಳಿನ ಆಸರೆಯಾಗಿದ್ದ ಸಾವಿರಾರು ಮರವನ್ನು ಹೆದ್ದಾರಿಗಳ ನಿರ್ಮಾಣಕ್ಕಾಗಿ ಕಡಿಯಲಾಗಿದೆ. ಪ್ರಾಣಿ, ಪಕ್ಷಿಗಳಿಗೆ ಕುಡಿಯುವ ನೀರಿಗಾಗಿ ನಿರ್ಮಿಸಿದ್ದ ಹೊಂಡ ಮಣ್ಣಿನಿಂದ ಹೂಳು ತುಂಬಿಕೊಂಡು ನೀರು ನಿಲ್ಲದಾಗಿವೆ.

ಕೆಲವು ಕಡೆಗಳಲ್ಲಿ ಅಕ್ರಮ ಮಣ್ಣು ಸಾಗಾಣೆಯಿಂದ ನೀರು ನಿಲ್ಲದಾಗಿದೆ. ಮೊಲ, ನವಿಲು, ಕಾಡು ಹಂದಿ ಮತ್ತು ಹಲವು ಬಗೆಯ ಪಕ್ಷಿಗಳು ಬೇಸಿಗೆಯಲ್ಲಿ ಕುಡಿಯುವ ನೀರು ಹುಡುಕಿಕೊಂಡು ಗ್ರಾಮದ ಅಂಚಿಗೆ ಬಂದಾಗ ಅವು ಬೇಟೆಗಾರರ ಪಾಲಾಗುತ್ತಿರುವುದು ಸಾಮಾನ್ಯವಾಗಿದೆ.

ಜಮೀನಿಗೆ ತಂತಿಬೇಲಿ, ಕಾಂಪೌಂಡ್

ಜಮೀನು ಖರೀದಿ ಮಾಡುತ್ತಿರುವವರು ತಮ್ಮ ಜಮೀನುಗಳಿಗೆ ತಂತಿಬೇಲಿ ಮತ್ತು ಕಾಂಪೌಂಡ್ ನಿರ್ಮಿಸಿಕೊಳ್ಳುತ್ತಿದ್ದಾರೆ. ಇದರಿಂದ ಕಾಡು ಪ್ರಾಣಿಗಳು ನೀರುಆಹಾರ ಹುಡುಕುತ್ತಾ ಬೇರೆಕಡೆಗೆ ಹೋಗುತ್ತಿವೆ. ಬೆಂಗಳೂರಿನ ಕಸ ಕಾಡು ಪ್ರಾಣಿಗಳಿಗೆ ತೊಂದರೆ ನೀಡುತ್ತಿದೆ. ಬಿಬಿಎಂಪಿ ಕಸದ ದುರ್ನಾತ, ಸೊಳ್ಳೆ, ನೊಣಗಳ ಕಾಟ ಮನು?ನಿಗೆ ಆಗುವಂತೆ ಕಾಡು ಪ್ರಾಣಿಗಳಿಗೂ ಆಗುತ್ತಿದೆ ಎಂದು ಪರಿಸರವಾದಿ ಎಂ.ರಾಮೇಗೌಡ.

ಕಾಡಂಚಿನಲ್ಲಿ ತೋಟಗಳ ನಿರ್ಮಾಣ

ಕಾಡುಗಳಲ್ಲಿದ್ದ ನವಿಲುಗಳು ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿ, ಸೂಲಿಬೆಲೆ ಹೋಬಳಿ ಜಡಿಗೇನಹಳ್ಳಿ ಹೋಬಳಿ ವ್ಯಾಪ್ತಿಗೆ ಬರುವ ಅರಣ್ಯ ಪ್ರದೇಶದಲ್ಲಿ ಸಮೀಪ ಇರುವ ಕೆರೆ ಗ್ರಾಮದ ತೋಟಗಳ ಸಮೀಪದಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ. ಕೋತಿಗಳು ಸಹ ನಗರದ ಮತ್ತು ಗ್ರಾಮಗಳಲ್ಲಿ ವಾಸಿಸುವಂತಾಗಿದೆ. ಮಳೆಗಾಲ ಕಳೆಯುತ್ತಿದ್ದಂತೆ ಬೆಟ್ಟದಲ್ಲಿನ ಮೊಲ, ನವಿಲು, ಗೌಜುಗನ ಪಕ್ಷಿ, ಕಾಡು ಹಂದಿ, ನರಿಗಳು ಕುಡಿವ ನೀರು ಹುಡುಕಿ ಕೊಂಡು ಬೆಟ್ಟದ ತಪ್ಪಲಿನ ಗ್ರಾಮಗಳ ಸುತ್ತಲಿನ ರೈತರ ತೋಟಗಳಿಗೆ ಬರುತ್ತಿವೆ.

ಭಾಷಣಕ್ಕೆ ಸೀಮಿತ ಪರಿಸರ ಕಾಳಜಿ

ಪರಿಸರದ ಬಗೆಗಿನ ಕಾಳಜಿ ಕೇವಲ ಭಾಷಣಗಳಿಗಷ್ಟೆ ಸೀಮಿತವಾಗಬಾರದು. ಪರಿಸರ ನಾಶದಿಂದ ಮನುಕುಲದ ನಾಶ ಖಂಡಿತ ಎನ್ನುವ ಎಚ್ಚರಿಕೆ ಸದಾಜನರಿಗೆ ಇರಬೇಕಾಗಿದೆ.

ಇಂದಿನ ಪೀಳಿಗೆಗೆ ಪರಿಸರದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ. ಮಾನವ ಸಮುದಾಯ ಪರಿಸರವನ್ನು ನಿರ್ಲಕ್ಷಿಸುತ್ತಿರುವ ಕಾರಣದಿಂದ ಕೆಲವೇ ವರ್ಷದಲ್ಲಿ ವಿನಾಶವನ್ನು ಹೊಂದಲಿದೆ. ಅದನ್ನು ತಪ್ಪಿಸಬೇಕಾದರೆ, ಎಲ್ಲರೂ ಪರಿಸರ ಸಂರಕ್ಷಣೆಯ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಅರಣ್ಯಾಧಿಕಾರಿ ಪುಷ್ಪಾ ಹೇಳಿದರು.



ಕಾಡಂಚಿನಲ್ಲಿ ಫಾರಂ ಹೌಸ್

ಬೆಂಗಳೂರಿನ ಜನರು ಬೆಟ್ಟದ ತಪ್ಪಲಲ್ಲಿ ಫಾರಂ ಹೌಸ್‌ಗಳನ್ನು ನಿರ್ಮಾಣ ಮಾಡುತ್ತಿರುವುದು ಸಾಮಾನ್ಯವಾಗಿದೆ. ಬೆಟ್ಟದ ತಪ್ಪಲನ್ನು ಮತ್ತು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡುತ್ತಾ ಫಾರಂ ಹೌಸ್ ನಿರ್ಮಿಸಿಕೊಳ್ಳುತ್ತಿದ್ದಾರೆ. ಹೆಚ್ಚಿನ ಎಕರೆ ಪ್ರದೇಶದ ಅರಣ್ಯ ಭೂಮಿ ಒತ್ತುವರಿಯಾಗಿದೆ. ಈ ಫಾರಂ ಹೌಸ್‌ಗಳನ್ನು ನಿರ್ಮಿಸುತ್ತಿರುವವರು ತಮ್ಮ ಜಮೀನಿಗಳಿಗೆ ತಂತಿ ಬೇಲಿ, ಕಟ್ಟಡ ಮಾದರಿ ಕಾಂಪೌಂಡ್ ನಿರ್ಮಿಸುತ್ತಿದ್ದಾರೆ. ಅರಣ್ಯ ಪ್ರದೇಶ ಸಮೀಪ ತೋಟ ನಿರ್ಮಿಸಿ ಕಾಂಪೌಂಡ್ ನಿರ್ಮಾಣ ಮಾಡಿಕೊಂಡಿದ್ದಾರೆ.
ಪ್ರಾಣಿ ಪಕ್ಷಿಗಳಿಗೆ ಕುಡಿವ ನೀರು ದೊರೆಯುತ್ತಿದ್ದ ಸ್ಥಳಗಳು ಇದು ಜನ ಸಂಚಾರ ಮತು ವಿವಿಧ ಚುಟವಟಿಕೆಗಳ ತಾಣವಾಗಿದೆ.

ಬಸವೇಶ್ವರ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ

ಹೆಣ್ಣಿಗಿದೆ ಸಮಾಜ ನಿರ್ಮಾಣ ಮಾಡುವ ಶಕ್ತಿ

ನೆಲಮಂಗಲ: ಸಮಾಜದಲ್ಲಿ ಸಾಧನೆ ಮಾಡಿ ಉನ್ನತ ಸ್ಥಾನದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ,ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮೀ ಎಂದಿಗೂ ಸಂಸ್ಕಾರ ಮರೆತವರಲ್ಲ ಅಂತವರು ಆದರ್ಶವಾಗ ಬೇಕು ಎಂದು ಪವಾಡ ಶ್ರೀ ಬಸವಣ್ಣ ದೇವರ ಮಠದ ಶ್ರೀ ಸಿದ್ದಲಿಂಗಸ್ವಾಮೀಜಿ ತಿಳಿಸಿದರು.

ನಗರದ ಬಸವಣ್ಣ ದೇವರ ಮಠದ ಸಭಾಂಗಣದಲ್ಲಿ ಶ್ರೀ ಬಸವೇಶ್ವರ ಮಹಿಳಾ ಪ್ರಥಮ ದರ್ಜೆ ಕಾಲೇಜಿನಿಂದ ಆಯೋಜಿಸಲಾಗಿದ್ದ ಮಹಿಳಾ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿ, ಹೆಣ್ಣು ಮನೆಯ ನಿರ್ವಹಣೆಯ ಜತೆ ಸಮಾಜವನ್ನು ನಿರ್ವಹಣೆ ಮಾಡುವ ಶ್ರೇಷ್ಟ ಕೆಲಸವನ್ನು ಮಾಡುತ್ತಾರೆಂದರು.

ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಮಹಿಳೆಯ ಸಾಧನೆ ಕಾಣುತ್ತಿರುವುದು ಮರೆಯುವಂತಿಲ್ಲ, ಆದರೆ ಪ್ರಸ್ತುತ ಹೆಣ್ಣು ಮಕ್ಕಳಿಗೆ ಸಂಸ್ಕಾರದ ಅನಿವಾರ್ಯತೆ ಇದ್ದು ಅದರ ಬಗ್ಗೆ ಮನೆಗಳಲ್ಲಿ ಹೆಚ್ಚು ನಿಗಾವಹಿಸಬೇಕು. ಹೆಣ್ಣು ಮಕ್ಕಳಿಗೆ ಶಿಕ್ಷಣದ ಜತೆ ಎಲ್ಲಾ ಕ್ಷೇತ್ರದಲ್ಲಿ ಭಾಗವಹಿಸುವ ಅವಕಾಶ ನೀಡಿದ್ದಾರೆ.

ಆದರೆ, ಪ್ರಮುಖವಾಗಿ ಸಂಸ್ಕಾರ ಕಲಿಸುವುದನ್ನು ಎಂದಿಗೂ ಮರೆಯಬಾರದು ಎಂದರು.

ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಪತ್ರಿಕೋದ್ಯಮದಲ್ಲಿ ಸಾಧನೆ ಮಾಡಿ ಹಿರಿಯ ಪತ್ರಕರ್ತೆ ಶೋಭಾಮಳವಳ್ಳಿ ಹಾಗೂ ಶಾಂತಲಾಧರ್ಮರಾಜ್‌ಗೆ ಅಭಿನಂದನೆ ಸಲ್ಲಿಸಿದರು.

ಶ್ರೀ ಬಸವೇಶ್ವರ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ರುದ್ರಮಹೇಶ್, ಶಾಂತಲಾ ಧರ್ಮರಾಜ್, ಕಾಲೇಜಿನ ಅಧ್ಯಾಪಕರಾದ ವನಜಾಕ್ಷಿ.ಆರ್, ಜಯಲತಾ. ಬಿ.ಎಸ್, ತಾರಾ.ಎಚ್.ಜೆ, ಸೌಮ್ಯಶ್ರೀ, ನವೀನ್, ಸುಷ್ಮಾ, ಗೋವಿಂದರಾಜು, ಮೋಹನ್,ಭವ್ಯ, ಹೇಮಂತ್ ಕುಮಾರ್, ತೇಜಸ್ವಿನಿ, ವಸಂತ್‌ಕುಮಾರ್, ನಾಗರತ್ನಾ, ಸುಮಿತ್ರಾ, ಪ್ರದೀಪ್, ರೂಪಿಣಿ, ವೇದಾವತಿ, ಮಮತಾ, ಅಶ್ವಿನಿ, ಸುಚಿತ್ರಾ, ಲಕ್ಷ್ಮೀಕುಮಾರಿ, ವನಜಾಕ್ಷಮ್ಮ, ಸಿದ್ದಲಿಂಗಮ್ಮ ಸೇರಿದಂತೆ ಮತ್ತಿತರರಿದ್ದರು.



ಅಲಿಯನ್ಸ್ ವಿಶ್ವವಿದ್ಯಾಲಯದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ

ಮಹಿಳೆಯ ಕೊಡುಗೆ ಸಮಾಜಕ್ಕೆ ಅಪಾರ

ಆನೇಕಲ್: ಮಹಿಳೆಯರು ಅನೇಕ ಸವಾಲುಗಳ ಮಧ್ಯೆ ಅವಕಾಶಗಳನ್ನು ಕಲ್ಪಿಸಿಕೊಂಡು ಎಲ್ಲಾ ಕ್ಷೇತ್ರಗಳಲ್ಲಿ ಉನ್ನತವಾದ ಸಾಧನೆ ಮಾಡಿ ಸಮಾಜಕ್ಕೆ ತಮ್ಮದೇ ಯಾದ ಕೊಡುಗೆ ನೀಡಬೇಕು ಎಂದು ಇಸ್ರೋ ವಿಜ್ಞಾನಿ ಡಾ. ಶಿವಾನಿ ಕೋನಂದೂರ್ ತಿಳಿಸಿದರು.

ತಾಲೂಕಿನ ಕಾವಲಹೊಸಹಳ್ಳಿಯ ಅಲಿಯನ್ಸ್ ವಿಶ್ವ ವಿದ್ಯಾಲಯ ಆಯೋಜಿಸಿದ್ದ ಮಹಿಳಾ ದಿನಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ ಮಹಿಳೆಯರಿಗೆ ಅಲಿಯನ್ಸ್ ಸ್ಪಂದನ ಪ್ರಶಸ್ತಿ ನೀಡುವ ಮೂಲಕ ಅವರನ್ನು ಸನ್ಮಾನಿಸಿ ಮಾತನಾಡಿ, ಹೆಣ್ಣು ಏನು ಬೇಕಾದರೂ ಸಾಧನೆ ಮಾಡಬಹುದಾದ ಅವಕಾಶಗಳಿವೆ. ಹಾಗಾಗಿ ಮಹಿಳೆಯರು ಭಯಪಡದೆ ಧೈರ್ಯವಾಗಿ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕೆಂದು ತಿಳಿಸಿದರು.

ಅಲಿಯನ್ಸ್ ವಿಶ್ವ ವಿದ್ಯಾಲಯದ ಕುಲಪತಿ ಅಭಯ್ ಛಬ್ಬಿ ಮಾತನಾಡಿ, ವಿಶ್ವ ಮಹಿಳಾ ದಿನಾಚರಣೆಯಲ್ಲಿ ಆರೋಗ್ಯ, ಕೃಷಿ, ಸಿನಿಮಾ, ಕ್ರೀಡೆ, ಹಾಗೂ ಪತ್ರಿಕೋದ್ಯಮದಲ್ಲಿ ಸಾಧನೆ ಮಾಡಿದ ಅನೇಕ ಮಹಿಳೆಯರಿಗೆ ಅಲಿಯನ್ಸ್ ಸ್ಪಂದನ ಪ್ರಶಸ್ತಿ ನೀಡಿ ಅವರನ್ನು ಸನ್ಮಾನಿಸಿ ಗೌರವಿಸುತ್ತಿರುವುದು ಸಂತಸ ತಂದಿದೆ. ಗ್ರಾಮೀಣ ಭಾಗದ ಹಕ್ಕಿ ಪಕ್ಕಿ ಕಾಲೊನಿಯಲ್ಲಿ ಮಹಿಳೆಯರಿಗೆ ಅನೇಕ ಕಾರ್ಯಕ್ರಮ ರೂಪಿಸಿ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತಿಳಿಸಿದರು.

ಏಕಲವ್ಯ ಪ್ರಶಸ್ತಿ ಪುರಸ್ಕೃತೆ ಉಷಾ ಬಿ.ಎನ್.ಮಾತನಾಡಿ, ಸಾಧನೆ ಗೆ ಹೆಣ್ಣು ಗಂಡು ಎಂದು ಭಾವಿಸದೆ ತಮ್ಮ ಕ್ಷೇತ್ರದಲ್ಲಿ ಪ್ರಮಾಣಿಕವಾಗಿ ಕೆಲಸ ಮಾಡಿದ್ದಾರೆ. ಏನು ಬೇಕಾದರೂ ಸಾಽ ಸಬಹುದು. ಈ ನಿಟ್ಟಿನಲ್ಲಿ ಕ್ರೀಡೆಯಲ್ಲಿ ಹೆಚ್ಚು ಶ್ರಮವಹಿಸಿ ಅಭ್ಯಾಸ ಮಾಡಿದ ಸಲುವಾಗಿ ವೇಟ್ ಲಿಫ್ಟಿಂಗ್ ನಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು. ಹಾಗಾಗಿ ಅವರವರ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಬಹುದು ಎಂದು ತಿಳಿಸಿದರು.



ಮಹಿಳಾ ದಿನಾಚರಣೆ ಯಲ್ಲಿ ಅಲಿಯನ್ಸ್ ಸ್ಪಂದನ ಪ್ರಶಸ್ತಿಗೆ ಬಾಜನರಾದ ಗಿರಿಜಾಲೋಕೇಶ್, ವೈಜಯಂತಿ, ಪ್ರತಿಮಾ ಭಟ್, ಆಶಾ ವಿಜಯ್, ಮಾನಸಿ ಸುಧೀರ್ , ಅಕ್ಷತಾ ಪಾಂಡವಪುರ, ಶರ್ಮಿತ ಶೆಟ್ಟಿ ,ಛಯಾ ನಂಜಪ್ಪ ಸೇರಿದಂತೆ ಅನೇಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಅಲಿಯನ್ಸ್ ವಿಶ್ವ ವಿದ್ಯಾಲಯದ ಆಡಳಿತ ಮಂಡಳಿ ಶೈಲಜಾ ಛಬ್ಬಿ, ವಿಶ್ವನಾಥಯ್ಯ, ಜನರಲ್ ರಿಜಿಸ್ಟರ್ ಸುರೇಖಶೆಟ್ಟಿ ಸೇರಿದಂತೆ ಹಲವರಿದ್ದರು.

ನಂದಗುಡಿ ಕೆಪಿಎಸ್ ಶಾಲೆಯಲ್ಲಿ ಶಾರದಾ ಪೂಜಾ

ವಿದ್ಯಾರ್ಥಿಗಳಲ್ಲಿ ಶ್ರದ್ಧೆ ಇದ್ದಲ್ಲಿ ಫಲ

ತಾವರೆಕೆರೆ: ಶಾಲಾ ದಿನಗಳಿಂದ ಉನ್ನತ ಶಿಕ್ಷಣಕ್ಕೆ ಹೋಗುತ್ತಿರುವವರಲ್ಲಿ ಶ್ರದ್ಧತೆ ಇರಲಿ ಎಂದ ಕೆಪಿಎಸ್ ಶಾಲೆಯ ಉಪಾಧ್ಯಕ್ಷ ಎನ್.ಗಂಗಾಧರ್ ತಿಳಿಸಿದರು.

ನಂದಗುಡಿ ಗ್ರಾಮದಲ್ಲಿರುವ ಕೆಪಿಎಸ್ ಶಾಲೆಯ ಆವರಣದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಶಾರದಾ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಮಾನವನ ಜೀವನದ ಅಮೂಲ್ಯ ಕ್ಷಣಗಳು ಇಂತಹ ದಿನವನ್ನು ಮಕ್ಕಳು ಅನುಭವಿಸಿ ಉನ್ನತ ಶಿಕ್ಷ ಣದತ್ತ ಮುಖ ಮಾಡುತ್ತಿದ್ದಿರಿ ಆದ ಕಾರಣ ಮುಂದಿನ ದಿನದಲ್ಲಿಯೂ ಶ್ರದ್ದೆಯಿಂದ ಉನ್ನತ ಶಿಕ್ಷಣ ಮುಗಿಸಿ ಭವಿಷ್ಯ ರೂಪಿಸಿಕೊಳ್ಳಿ ಎಂದು ಹೇಳಿದರು.

ನಂದಗುಡಿ ಪೊಲೀಸ್ ಠಾಣೆಯ ಪೊಲೀಸ್ ಪೇದೆ ನಟರಾಜ್ ಮಾತನಾಡಿ, ಸರಸ್ವತಿ ಜ್ಞಾನವನ್ನು ಕೊಡುವವಳು, ನಮಗೆ ಬುದ್ಧಿವಂತಿಕೆ, ಕಲಿಕೆ ಮತ್ತು ಬುದ್ಧಿಶಕ್ತಿಯನ್ನು ಅನುಗ್ರಹಿಸುತ್ತಾಳೆ. ಅಷ್ಟೇ ಅಲ್ಲದೇ ತನಗೆ ಬೇಕಾದ ರೂಪವನ್ನು ಧರಿಸಬಲ್ಲವಳು ಎಂದರ್ಥ ಎಂದು ವಿವರಿಸಿದರು.

ಬರೀ ವಿದ್ಯೆ ಸಿಕ್ಕಿದರೆ ಪ್ರಯೋಜನವಿಲ್ಲ, ಅದನ್ನು ಸರಿಯಾಗಿ ಬಳಸಲು ಬುದ್ಧಿಯೂ ಬೇಕು. ಇಂಥ ಬುದ್ಧಿಯನ್ನು ಕೊಡುವ ದೇವತೆ ಸರಸ್ವತಿ. ಹಿಂದೂ ಧರ್ಮದಲ್ಲಿ ಸರಸ್ವತಿ ದೇವಿಯನ್ನು ಪೂಜಿಸಿದರೆ ಜ್ಞಾನ ಸಿಗುತ್ತದೆ ಎಂಬ ನಂಬಿಕೆ ನಮ್ಮಲ್ಲಿದೆಂದು ತಿಳಿಸಿದರು.



ಈ ಕಾರಣಕ್ಕೆ ಮನೆಗಳಲ್ಲಿ ಮತ್ತು ವಿದ್ಯಾಸಂಸ್ಥೆಗಳಲ್ಲಿ ಸರಸ್ವತಿ ಪೂಜೆ ಮಾಡಲಾಗುತ್ತದೆ. ಈ ಶುಭ ದಿನ ಅಕ್ಷರ ಅಭ್ಯಾಸ ಮಾಡಿದ ಮಗು ಮುಂದೆ ವಿದ್ಯಾವಂತನಾಗಿ, ಉತ್ತಮ ಸಂಸ್ಕಾರವನ್ನು ಬೆಳೆಸಿಕೊಳ್ಳುತ್ತದೆ ಎಂಬ ನಂಬಿಕೆಯಿದೆ ಎಂದು ಹೇಳಿದರು.

ಶಾಲಾ ಸಹ ಶಿಕ್ಷಕರಾದ ಶುಭಾ, ನೇತ್ರಾವತಿ, ಜಯಶ್ರೀ, ಯಶೋಧಾಮಣಿ, ಮುರುಳಿ, ಎಲಿಜಬೆತ್,ಅಶ್ವಿನಿ, ಸುಬ್ರಹ್ಮಣಿ, ಶಕುಂತಲಮ್ಮ, ಮುರಳಿ, ಶ್ರೀಧರ್, ಹರೀಶ್, ಗಾಯತ್ರಿ, ಗಗನ, ಶಾಲಿನಿ, ಜಾನಕಿ ಹಾಜರಿದ್ದರು.

ನೂತನ ಕಾಯ್ದೆ ಗಿಗ್ ಕಾರ್ಮಿಕರ ಕಲ್ಯಾಣಕ್ಕೆ ಸಂಚಕಾರ ಸಾಧ್ಯತೆ

ಕಲ್ಯಾಣ ನಿಧಿ ಸಂಗ್ರಹ ತಡೆಗೆ ಮನವಿ

ಬೆಂಗಳೂರು: ಕರ್ನಾಟಕ ಸರ್ಕಾರದ ನೂತನ ಗಿಗ್ ಕೆಲಸಗಾರರ ಕಾಯ್ದೆ ಮತ್ತು ಕೇಂದ್ರ ಸರ್ಕಾರದ ಸಾಮಾಜಿಕ ಭದ್ರತಾ ಸಂಹಿತೆಯ ನಡುವೆ ಸಮನ್ವಯದ ಕೊರತೆಯಿದ್ದು, ಇದು ಕಾರ್ಮಿಕರ ಕಲ್ಯಾಣಕ್ಕೆ ಸಂಚಕಾರ ತರುವ ಸಾಧ್ಯತೆಯಿದೆ ಎಂದು ಇಂಟರ್‌ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಐಎಎಂಎಐ) ಎಚ್ಚರಿಸಿದೆ. ಈ ಕುರಿತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಸಂಸ್ಥೆಯು, ನಿಯಮಗಳಲ್ಲಿ ಸ್ಪಷ್ಟತೆ ಸಿಗುವವರೆಗೆ ಕಲ್ಯಾಣ ನಿಧಿಗೆ ವಂತಿಗೆ ಸಂಗ್ರಹಿಸುವುದನ್ನು ತಡೆಹಿಡಿಯುವಂತೆ ಮನವಿ ಮಾಡಿದೆ.

ಕೇಂದ್ರ ಸರ್ಕಾರ ಅಧಿಸೂಚನೆ ನೀಡಿರುವ ಸಾಮಾಜಿಕ ಭದ್ರತಾ ಸಂಹಿತೆ-2020 ಈಗಾಗಲೇ ಪ್ರತಿಯೊಬ್ಬ ಅಗ್ರಿಗೇಟರ್ (ಸಂಸ್ಥೆ) ತನ್ನ ವಾರ್ಷಿಕ ವಹಿವಾಟಿನ ಶೇ. 1ರಿಂದ ಶೇ.2ರಷ್ಟು ಮೊತ್ತವನ್ನು ಗಿಗ್ ಮತ್ತು ಪ್ಲಾಟ್ ಫಾರ್ಮ್ ಕೆಲಸಗಾರರ ಸಾಮಾಜಿಕ ಭದ್ರತೆಗಾಗಿ ನೀಡಬೇಕೆಂದು ಆದೇಶಿಸಿದೆ ಎಂದು ಐಎಎಂಎಐ ಹೇಳಿದೆ.

ಅದೇ ಸಮಯದಲ್ಲಿ, ಕರ್ನಾಟಕದ ಕಾಯ್ದೆಯು ಅಗ್ರಿಗೇಟರ್‌ಗಳು ರಾಜ್ಯದ ಗಿಗ್ ಕೆಲಸಗಾರರಿಗೆ ಮಾಡುವ ಪಾವತಿಯ ಮೇಲೆ ಶೇ.1ರಿಂದಶೇ.5 ರಷ್ಟು ಕಲ್ಯಾಣಶುಲ್ಕವನ್ನು ವಿಧಿಸುತ್ತದೆ. ರಾಜ್ಯದ ಕಾಯ್ದೆಯು ಈ ಶುಲ್ಕ ಪಾವತಿಯನ್ನು ಕೇಂದ್ರದ ನಿಯಮದ ಅಡಿಯಲ್ಲಿ ಸಲ್ಲಿಸಬೇಕಾದ ವಂತಿಗೆಗೆ ಸರಿಹೊಂದಿಸಬಹುದು ಎಂದು ಹೇಳಿದೆಯಾದರೂ, ಈ ಹೊಂದಾಣಿಕೆಯ ಕಾರ್ಯವಿಧಾನ ಹೇಗೆ ಕೆಲಸ ಮಾಡುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಕುರಿತಾದ ಯಾವುದೇ ಮಾರ್ಗಸೂಚಿ ಅಥವಾ ಅಧಿಸೂಚನೆಗಳು ಇದುವರೆಗೆ ಹೊರಬಂದಿಲ್ಲ. ಇಂತಹ ಸ್ಪಷ್ಟತೆಯಿಲ್ಲದ ಸಂದರ್ಭದಲ್ಲಿ, ಸಂಸ್ಥೆಗಳು ಒಂದೇ ಉದ್ದೇಶಕ್ಕಾಗಿ ಎರಡು ಬಾರಿ ಹಣ ಪಾವತಿಸಬೇಕಾದ ಅನಿವಾರ್ಯತೆ ಎದುರಾಗಬಹುದು. ಈ ಹಿನ್ನೆಲೆಯಲ್ಲಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಈ ಹೊಂದಾಣಿಕೆಯ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಒಪ್ಪಂದ ಏರ್ಪಡುವವರೆಗೆ ರಾಜ್ಯ ಕಾಯ್ದೆಯಡಿ ಹಣಕಾಸಿನ ವಂತಿಗೆಯನ್ನು ತಡೆಹಿಡಿಯಬೇಕೆಂದು ಐಎಎಂಎಐ ವಿನಂತಿಸಿದೆ.

ಪ್ರಸ್ತುತ ಅನೇಕ ಸಂಸ್ಥೆಗಳು ಖಾಸಗಿ ವಿಮಾ ಕಂಪನಿಗಳ ಮೂಲಕ ವಿಮಾ ಸೌಲಭ್ಯವನ್ನು ಒದಗಿಸುತ್ತಿವೆ ಮತ್ತು ಇದರ ಕಂತುಗಳನ್ನು ಸಂಸ್ಥೆಗಳೇ ಭರಿಸುತ್ತಿವೆ. ರಾಜ್ಯ ಕಾಯ್ದೆಯಲ್ಲಿ ಕಲ್ಯಾಣ ಯೋಜನೆಗಳು ಜಾರಿಯಾದ ನಂತರ ಮತ್ತು ಕೇಂದ್ರ ಹಾಗೂ ರಾಜ್ಯದ ನಿಯಮಗಳ ನಡುವಿನ ಹೊಂದಾಣಿಕೆಯ ಬಗ್ಗೆ ಸ್ಪಷ್ಟತೆ ಸಿಕ್ಕ ನಂತರವಷ್ಟೇ ಕಲ್ಯಾಣ ಶುಲ್ಕ ವಂತಿಗೆಯನ್ನು ಕಡ್ಡಾಯಗೊಳಿಸಬೇಕು ಎಂದು ಸಂಘಟನೆಯು ವಿನಂತಿಸಿದೆ.

ಶ್ರೀ ಕಾಶಿ ವಿಶಾಲಾಕ್ಷಿ ವಿಪ್ರ ವನಿತಾ ವೇದಿಕೆಯಿಂದ ಮಹಿಳಾ ದಿನಾಚರಣೆ

ಕೌಟುಂಬಿಕ ಕಲಹದಿಂದ ನೊಂದ ಮಹಿಳೆ

ದೊಡ್ಡಬಳ್ಳಾಪುರ: ಸಾಮಾಜಿಕ ಬದ್ದತೆ ಹಾಗೂ ಕುಟುಂಬದ ಜವಾಬ್ದಾರಿ ನಿರ್ವಹಿಸುವಾಗ ಮಹಿಳೆಯರ ಪಾತ್ರ ಹೆಚ್ಚಾಗಿರುತ್ತದೆ ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವರಲಕ್ಷ್ಮೀ ಹೇಳಿದರು.

ನಗರದ ಕಾಶಿ ವಿಶ್ವನಾಥ ದೇವಾಲಯದ ಸಭಾ ಭವನದಲ್ಲಿ ಶ್ರೀ ಕಾಶಿ ವಿಶಾಲಾಕ್ಷಿ ವಿಪ್ರ ವನಿತಾ ವೇದಿಕೆಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಇಂದು ಸಮಾಜದಲ್ಲಿ ಕೌಟುಂಬಿಕ ಕಲಹದಲ್ಲಿ ಹೆಚ್ಚು ದೌರ್ಜನ್ಯಕ್ಕೊಳಗಾಗುತ್ತಿರುವುದು ಮಹಿಳೆಯರೇ ಹೆಚ್ಚಾಗಿದ್ದಾರೆ. ಆದ್ದರಿಂದ ನಾವು ಅವರಿಗೆ ಉತ್ತಮ ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲಾ ರಂಗದಲ್ಲೂ ಮುನ್ನೆಲೆಗೆ ಬರುವಂತ ಯೋಜನೆ ರೂಪಿಸಬೇಕಾಗಿದೆಂದರು.

ನಮ್ಮ ಭಾರತ ಸಂವಿಧಾನದಲ್ಲಿ ಪ್ರತಿಯೊಬ್ಬ ಮಹಿಳೆ ಪುರುಷರಿಗೂ ಸಮಾನವಾದ ಕಾನೂನಿದ್ದರೂ ಹೆಚ್ಚು ಶೋಷಣೆಗೆ ಒಳಗಾಗುತ್ತಿರುವುದು ಮಹಿಳೆಯರೇ ಎಂದುಹೇಳಬಹುದು. ಆನಿಟ್ಟಿನಲ್ಲಿನಾವೆಲ್ಲರೂಸಮಾಜ ಮುಖಿ ಕೆಲಸದಲ್ಲಿ ಅವರಿಗೆ ಅವಕಾಶ ನೀಡಿ ಬೆಳಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ವಕೀಲಿ ರಾಧಾಮುರುಳಿದರ್ ಮಾತನಾಡಿ, ಕಾನೂನುವೃತ್ತಿಯಲ್ಲಿಮಹಿಳೆಯರಅಷ್ಟೊಂದುತೊಡಿಸಿಕೊಳ್ಳದಿದ್ದರೂ ಇತ್ತೀಚಿನ ದಿನಗಳಲ್ಲಿ ಗಣನೀಯವಾಗಿ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದು ಸಂತಸದ ಸಂಗತಿ.ಏಕೆಂದರೆ,ಕಾನೂನುತಿಳಿದುಕೊಂಡಾಗಸಮಾಜದಲ್ಲಿ ಪ್ರಬಲವಾಗಿ ಹೋರಾಟ ಮಾಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ನಾವು ಮಹಿಳೆಯರಿಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟಕ್ಕೆ ಸಹಕಾರ ನೀಡಬೇಕಾಗಿದೆಂದು ಹೇಳಿದರು.



ವೇದಿಕೆ ಅಧ್ಯಕ್ಷೆ ರೂಪಾರಘುನಾಥ ಮಾತನಾಡಿ, ನಮ್ಮ ವೇದಿಕೆಯ ಮುಖ್ಯ ಉದ್ದೇಶ ಸಾಮಾಜಿಕ ಕಾರ್ಯಕ್ರಮವನ್ನು ಮಾಡುವುದು. ಕಳೆದ ಒಂದು ವರ್ಷದಿಂದ ಅನೇಕ ವಿಶಿಷ್ಟ ಕಾರ್ಯಕ್ರಮವಾದ ಮಡಿಲು ತುಂಬುವ ಕಾರ್ಯಕ್ರಮ, ಸಾಧಕರ ಸನ್ಮಾನ, ಉಚಿತವಾಗಿ ಇಂಗ್ಲಿಷ್ ತರಬೇತಿ, ಭಜನಾ ಕಾರ್ಯಕ್ರಮ, ಮನೆ ಮನೆಗಳಲ್ಲಿ ದಸಾರ ಬೊಂಬೆ ಪ್ರದರ್ಶನ, ಸಂಕ್ರಾತಿ ಆಚರಣೆ, ಪ್ರತಿಭಾ ಪುರಸ್ಕಾರ, ವಾರ್ಷಿಕ ಕ್ರೀಡಾಕೂಟ, ಗೀತಗಾಯನ ಸ್ಪರ್ಧೆ, ಕಾನೂನಿನ ಅರಿವು ಸೇರಿದಂತೆ ಹತ್ತು ಹಲವಾರು ಕಾರ್ಯಕ್ರಮ ಮಾಡಿದ್ದೇವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಸ್ತೂರಿ ಬಾ ಮಹಿಳಾ ಸಮಾಜದ ಅಧ್ಯಕ್ಷೆ ವತ್ಸಲಾಜಗನಾಥ್, ನಗರಸಭಾ ಸದಸ್ಯೆ ಇಂದ್ರಾಣಿ, ಶ್ರೀಕಾಶಿ ವಿಶಾಲಾಕ್ಷಿ ವಿಪ್ರ ವನಿತಾ ವೇದಿಕೆಯ ಉಪಾಧ್ಯಕ್ಷೆ ಲಕ್ಷ್ಮಿ ವೇಣುಗೋಪಾಲ್, ಕಾರ್ಯದರ್ಶಿ ಗಾಯತ್ರಿಪ್ರಸಾದ್ ಸೇರಿದಂತೆ ಹಲವರಿದ್ದರು.

ಸುತ್ತೂರು ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿಶ್ಲೇಷಣೆ

ಸಂಗೀತಕ್ಕೆ ಗವಾಯಿಗಳ ಕೊಡುವೆ ಅಪಾರ

ಮೈಸೂರು: ವಚನಸಾಹಿತ್ಯವನ್ನು ಸಂಗೀತಕ್ಕೆಅಳವಡಿಸಿದ ಕೀರ್ತಿಪಂಡಿತ ಪಂಚಾಕ್ಷರ ಗವಾಯಿಗಳ ಪರಂಪರೆಗೆ ಸಲ್ಲುತ್ತದೆ ಎಂದು ಸುತ್ತೂರು ಮಠದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅವರು ಹೇಳಿದರು.



ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ವತಿ ಯಿಂದ ಏರ್ಪಡಿಸಿದ್ದ ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿ ಅವರ 135ನೇ ಪದ್ಮಭೂಷಣ ಡಾ.ಪುಟ್ಟರಾಜ ಗವಾಯಿಗಳ 112ನೇ ಜಯಂತ್ಯುತ್ಸವ, ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಅವರ ಶಿಷ್ಯರು ಸಂಗೀತ ಕಛೇರಿಗಳಲ್ಲಿ ವಚನಗಳನ್ನು ಹಾಡುವುದಕ್ಕೆ ಪ್ರಾರಂಭಿಸಿದರು. ಹೀಗಾಗಿ ಪ್ರಸ್ತುತ ದಿನಮಾನದಲ್ಲಿ ವಚನ ಸಾಹಿತ್ಯವನ್ನೇ ಪೂರ್ಣ ಕಛೇರಿ ಮಾಡುವಂತಾಗಿರುವುದು ಸಂತೋಷಕರ ವಿಷುಂ ವಾಗಿದೆ ಎಂದರು.

ಹಾನಗಲ್ ಕುಮಾರಸ್ವಾಮಿಗಳ ಶಿಷ್ಯರಾಗಿದ್ದ ಪಂಚಾಕ್ಷರಿ ಗವಾಯಿಗಳು ಸಂಗೀತ ಕಲಿಯುವ ಸಮಯದಲ್ಲಿ ಮದುವೆ ಯಾಗಬೇಕು ಎನ್ನುವ ಅಭಿಲಾಷೆಯನ್ನು ಹೊಂದಿದ್ದರು. ಆದರೆ ಅವರು ಆಸೆಯನ್ನು ಬಿಟ್ಟು ದೃಢವಾದ ಒಂದು ನಿರ್ಧಾರವನ್ನು ಮಾಡಿಕೊಂಡ ಕಾರಣದಿಂದ ಸಂತರಾಗಿ ನಡೆಯುವುದಕ್ಕೆ ಸಾಧ್ಯವಾಯಿತು. ಜೀವನ ದಲ್ಲಿ ನಡೆಯುವಂತಹ ಒಂದೊಂದು ಘಟನೆಗಳು ಬದುಕಿನಲ್ಲಿ ಹೇಗೆ ತಿರುವು ನೀಡುತ್ತದೆ ಎನ್ನುವುದಕ್ಕೆ ಆ ಒಂದು ಘಟನೆ ಸಾಕ್ಷಿ ಯಾಗುತ್ತದೆಂದರು.

ಪ್ರವಚನಕಾರ ಪಂಡಿತ ಎಂ.ಕಲ್ಲಿನಾಥ ಶಾಸ್ತ್ರಿ ಅಡ್ಡೂರ ಮಾತನಾಡಿ, ಒಂದು ಕೋಲು ಹಿಡಿದುಕೊಂಡು, ಬಸ್‌ಸ್ಟ್ಯಾಂಡ್, ರೈಲ್ವೆಸ್ಟೇಷನ್, ಸರ್ಕಲ್ಲು, ಮಠ, ಮಂದಿರ, ಗುಡಿ ಗುಂಡಾರ, ಬೀದಿ ಬೀದಿಗಳಲ್ಲಿ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಕಾಣುತ್ತಿದ್ದೇವೆ. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಕಲ್ಲ್‌ಯುಜ್ಜ, ಕುಂದೂರು ಮಠದ ಡಾ. ಶರತ್ಚಂದ್ರ ಸ್ವಾಮೀಜಿ, ಗೌರಿಶಂಕರನಗರದ ಅರಮನೆ ಪಂಚಗವಿ ಮಠದ ಶ್ರೀಕಂಠಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಗಾನಯೋಗಿ ಕಲಾ ಟ್ರಸ್ಟ್‌ನ ಗೌರವಾಧ್ಯಕ್ಷ ಮ.ಗು. ಸದಾನಂದಯ್ಯ ಅಧ್ಯಕ್ಷತೆ ವಹಿಸಿದ್ದರು. ಟ್ರಸ್ಟ್‌ನ ಅಧ್ಯಕ್ಷ ಎಚ್.ಎನ್.ಲೋಕೇಶಪ್ಪ,ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮತ್ತಿತರರು ಹಾಜರಿದ್ದರು. ಕಾಂರ್ಯಕ್ರಮದ ಅಂಗವಾಗಿ ಹಿಂದೂಸ್ತಾನಿ ಗಾಯಕ ಪಂಡಿತ ಎಂ.ವೆಂಕಟೇಶ ಕುಮಾರ ಅವರಿಗೆ ಗಾನಯೋಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಲವಾರು ವಿಶೇಷ ಚೇತನರಿಗೆ ಸಲಕರಣೆಗಳನ್ನು ವಿತರಿಸಲಾಯಿತು. ಡಾ.ರವಾ ವಿ.ಬೆಣ್ಣೂರು ರಚಿಸಿರುವ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಶುದ್ಧ ನೀರಿಗಾಗಿ ಚಿಕ್ಕಬಳ್ಳಾಪುರದಲ್ಲಿ ಜನಾಂದೋಲನ

ಚಿಕ್ಕಬಳ್ಳಾಪುರ: ನಗರದಲ್ಲಿ ಭಾನುವಾರ ಜೀವಜಲ ಜಲಾಗ್ರಹ ವೇದಿಕೆ, ಶುದ್ಧ ನೀರಿಗಾಗಿ ಜನಾಂದೋಲನ ಹೆಸರಿನಲ್ಲಿ ಏರ್ಪಡಿಸಿದ್ದ ಎಚ್.ಎನ್.ವ್ಯಾಲಿ ಕ್ರಾಸ್ ನೀರಿನ 3ನೇ ಹಂತದ ಶುದ್ಧೀಕರಣ ಮಾಡಬೇಕೆಂದು ಆಗ್ರಹಿಸಿ ನಡೆಸಿದ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಯಿತು.

ವೇದಿಕೆ ಕಾರ್ಯಕ್ರಮದಲ್ಲಿ ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ಸ್ವಾತಂತ್ರ್ಯ ನಂತರದ ಪ್ರಜಾಪ್ರಭುತ್ವದಲ್ಲಿ ನಮ್ಮನ್ನಾಳುವ ಸರಕಾರಗಳು, ಜನತೆಗೆ ಕುಡಿಯಲು ಶುದ್ಧನೀರು ಕೊಡಿ ಎಂದು ಕೇಳಿದರೆ, ಬೆಂಗಳೂರಿನ ಕೊಳಚೆ ನೀರನ್ನು ಎರಡು ಹಂತದಲ್ಲಿ ಶುದ್ಧೀಕರಿಸಿ ಕೆರೆಗಳಿಗೆ ಹರಿಸುತ್ತಿವೆ. ಎರಡೂ ಹಂತಗಳ ಶುದ್ಧೀಕರಣವನ್ನೂ ಸಹಾ ಪರಿಪೂರ್ಣವಾಗಿ ಮಾಡದ ಕಾರಣ ವಿಷದ ನೀರು ಕೆರೆಗಳಿಗೆ ಬಂದು ತುಂಬಿದೆ ಎಂದರು. ಇನ್ನಾದರೂ ಸರಿಯೆ ರಾಜ್ಯ ಸರಕಾರ 3ನೇ ಹಂತದ ಶುದ್ಧೀಕರಣ ಮಾಡಲು ಮನಸ್ಸು ಮಾಡಬೇಕು. ಇಲ್ಲದಿದ್ದಲ್ಲಿ ಜನತೆ ಆಕ್ರೋಶಕ್ಕೆ ತುತ್ತಾಗಬೇಕಾಗುವುದು. ನೇಪಾಳ ಬಾಂಗ್ಲಾ, ಶ್ರೀಲಂಕಾ ದೇಶದಲ್ಲಿ ಜನತೆಯ ಸಿಟ್ಟು ಉಂಟು ಮಾಡಿದ ಪರಿಣಾಮವನ್ನು ಜನಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು ಎಂದು ಎಚ್ಚರಿಸಿದರು. ಹೆಬ್ಬಾಳದಿಂದ ಶುದ್ಧೀಕರಿಸಿ ಕೆರೆಗಳಿಗೆ ಹರಿಸುವ ಯೋಜನೆ ಇದಾಗಿದ್ದರೂ, ಅಧಿಕಾರಿಗಳ ವೈಫಲ್ಯದಿಂದ ಪ್ರತಿ ದಿನ ಪ್ರಯೋಗಾಲಯಕ್ಕೆ ಕಳುಹಿಸುವ 1ನೇ ಹಂತದ ಶುದ್ಧೀಕರಿಸಿದ ನೀರನ್ನೇ ಕಳುಹುತ್ತಾರೆ. ರಾತ್ರಿ ಹೊತ್ತು 2ನೇ ಹಂತದಲ್ಲಿ ಶುದ್ಧೀಕರಣ ಮಾಡದೆಯೇ ಹಾಗೆಯೇ ಹರಿಬಿಡುತ್ತಾರೆ. ಹೀಗಾಗಿ ಈ ಸಮಸ್ಯೆ ಉಂಟಾಗಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಹಿಂದಿನ ಸರಕಾರದಲ್ಲಿ ನಾವು 3ನೇ ಹಂತದ ಶುದ್ಧೀಕರಣಕ್ಕೆ ಬಜೆಟ್ ನಲ್ಲಿಯೇ ತಿಳಿಸಿದ್ದೆ. ನಮ್ಮ ಸರಕಾರ ಬದಲಿಲ್ಲ, ಕಾಂಗ್ರೆಸ್ ಸರಕಾರಕ್ಕೆ ಆಲೋಚನೆಯಿಲ್ಲ ಎಂದು ಹರಿಹಾಯ್ದರು.



IN THE COURT OF THE PRL SENIOR CIVIL JUDGE AND JMFC AT MALUR.
EX. NO.37/2024.

DHR : Narayanaswamy, Dead by his LR's

V/S

JDR : Ravindra, Dead by his LR's

NOTICE UNDER ORDER 5 RULE 20 OF CPC TO JDR NO.3

JDR NO.3 : Geetha D/o Rananayaka W/o JHarish, Aged about 34 years, Residing at, Mindahalli village, Kasaba Hobli, Kolar Taluk.

Whereas, the DHR filed this above petition for execution of judgment and decree of OS. No.71/2017 dated 31/03/2021. The Hon'ble court has issued notices to the 3rd JDR to depend his case. But she is intentional evading and avoiding to receive the notice issued by this Hon'ble court. hence of this the notices has not been served on him. As such you have her by summoned or notice to appear in the court of Prl Senior civil Judge at Malur in person or by a pleader on : **17.04.2026** at 11.AM. Take notice that in default of your appearance on the date before mentioned the petition will be heard and determined in your absence. Given under my hand and seal of the court, on this 12th day of March 2026 by order of the court.

By orders of the court
Sheristedar,
Prl Senior Civil Judge at Malur.
Advocate for petitioner :
L. Srinivas, Advocate, Kolar.
Place: Malur. Dated :12.03.2026

CHANGE OF NAME

I, KUSUMITHA Daughter of Vijaya Kumar.H, aged about 22 years, (D.O.B: 06.05.2003) presently residing at No.06, 3rd Cross road, Sapthagiri Engg College Road, Chikkasandra T Dasarahali, Bangalore North Taluk, Bangalore - 560057, have changed my name from **KUSUMITHA.V** to **KUSUMITHA**, vide affidavit dated 13/3/2026 sworn to before K Ramegowda Advocate and Notary Bangalore.

ಸಾರ್ವಜನಿಕ ಪ್ರಕಟಣೆ

[illegible] ಸಂಖ್ಯೆ:2100307/2026 (ದಿನಾಂಕ 09-03-2026) ದಾಖಲಿಸಲಾಗಿದೆ. [illegible] ಮೊಬೈಲ್: 9538993668 [illegible]

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ಕೇಂದ್ರ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂ.ಬೆಂಜಮಂ/ಮುಅ(ಕೇಂದ್ರ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/262/2025–26 ದಿನಾಂಕ: 12.03.2026		
1.	ದೊಮ್ಮಲೂರು, ರಾಯಲ್ ಆರ್ಕಿಡ್ ಹೋಟೇಲ್ ಎದುರಿನಿಂದ ಕೆಜಿಎ ರಸ್ತೆಯವರೆಗೆ ಮಳೆ ನೀರು ಕಾಲುವೆ ಒಳಭಾಗದಲ್ಲಿ 1100 ಮಿ.ಮೀ ವ್ಯಾಸದ ಡಿಐ ರೈಸಿಂಗ್ ಮೇನ್‌ನನ್ನು ಒದಗಿಸಿ ಅಳವಡಿಸುವ ಕಾಮಗಾರಿ. (ಹೆಚ್ಚುವರಿ ಉದ್ದಕ್ಕೆ)	ರೂ. 358.09 ಲಕ್ಷಗಳು / ರೂ. 5.37 ಲಕ್ಷಗಳು
ಸಂ.ಬೆಂಜಮಂ/ಮುಅ(ಕೇಂದ್ರ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/260/2025–26 ದಿನಾಂಕ: 12.03.2026		
2.	ದೊಮ್ಮಲೂರು, ಮೇಲ್ಸೇತುವೆ ಬಿಎಸ್‌ಪಿಎಸ್ ನಿಂದ ಹಳೆ ವಿಮಾನ ನಿಲ್ದಾಣ ರಸ್ತೆ, ಡೈಮಂಡ್ ಡಿಸ್ಟ್ರಿಕ್ಟ್ ಅಪಾರ್ಟ್‌ಮೆಂಟ್ ಕಡೆಗೆ 1100 ಮಿ.ಮೀ ವ್ಯಾಸದ ಡಿಐ ರೈಸಿಂಗ್ ಮೇನ್‌ನನ್ನು ಒದಗಿಸಿ ಅಳವಡಿಸುವ ಕಾಮಗಾರಿ. (ಹೆಚ್ಚುವರಿ ಉದ್ದಕ್ಕೆ)	ರೂ. 358.30 ಲಕ್ಷಗಳು / ರೂ. 5.37 ಲಕ್ಷಗಳು

ಮೇಲ್ಕಂಡ ಕಾಮಗಾರಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 15.04.2026 ರಂದು ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 16.04.2026ರ ಸಂಜೆ 5.00 ಗಂಟೆಗೆ

ಸಹಿ/– ಮುಖ್ಯ ಅಭಿಯಂತರರು (ಕೇಂದ್ರ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/6252/Zen/2025-26

[illegible Kannada court notice]

ಚಿಟ್ಸ್ ಫಂಡ್ ಸಹಕಾರ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

[illegible Kannada notice] ದಿನಾಂಕ : 16-3-26ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ. [illegible]

IN THE COURT OF THE SENIOR CIVIL JUDGE AND JMFC AT SIDLAGHATTA
O.S. No. 51/2025

Plaintiff : Lakshmi Sagar

V/S

Defendants : Smt. Shanthamma and others,

2. Smt. Kalavathi D/o. Late. S.B. Munikrishnappa, Aged about 46 Years, **4. Smt. Vanaja** D/o.Late. S.B. Munikrishnappa, Aged about 42 Years, **5. Smt. Girija** D/o.Late. S.B. Munikrishnappa, Aged about 42 Years, **6.Shri. Ravikumar** S/o. Late. S.B. Munikrishnapp Aged about 40 Years, **7.Smt. Rathnamma** D/o. Late. Lakshmamma, Aged about 56 Years, 2, 4 to 7 are R/at, Ward No.3, K.K. Pete, Shidlaghatta Town, Chikkaballapura District, PIN CODE-562105.

NOTICE

Notice is hereby given that the above-named Plaintiff has instituted a suit for partition and separate possession of his lawful share in the schedule property described below, against the above-named Defendants.

The suit is filed seeking division of the suit schedule property by metes and bounds and for allotment of the Plaintiff's legitimate share, along with all consequential reliefs. The Hon'ble court has issued notice to above defendants through the court as well as RPAD but they are evading to receive the same. Hence this publication.

Any person claiming any right, title, interest, or share in the schedule property is hereby called upon to appear before this Hon'ble Court either in person or through an advocate on or before **01/04/2026** failing which the matter will be proceeded with in accordance with law.

SCHEDULE PROPERTY

Item No. 1 : All that part and parcel of the Agriculture property, land bearing Survey No.274/4, measuring an extent of 26 Guntas land, situated at Shidlaghatta Village, Kasaba Hobali, Shidlaghatta Taluk, Chikkaballapura District, the following boundaries:- **East by :** Road and Nagaraj's Land, **West by :** Sharadamma's Land, **North by :** Raja Kaluve, **South by :** Road.

Item No. 2 : All that part and parcel of the Agriculture property, land bearing Survey No.274/7, measuring an extent of 1 Acre 12 Guntas land, situated at Shidlaghatta Village, Kasaba Hobali, Shidlaghatta Taluk, Chikkaballapura District, the following boundaries:- **East by :** Survey No.86/1, **West by :** Doddamanavara Gangadharappa's Land, **North by :** Raja Kaluve, **South by :** Road.

Item No. 3 : All that part and parcel of the Agriculture property, land bearing Survey No.86/1, measuring an extent of 16 Guntas land, situated at Gowdanakere Village, Kasaba Hobali, Shidlaghatta Taluk, Chikkaballapura District, the following boundaries :- **East by :** Survey No. 86/2, **West by :** Survey No. 274/7, **North by :** Raja Kaluve, **South by :** Road.

Item No. 4 : All that part and parcel of the Agriculture property, land bearing Survey No. 110/2, measuring an extent of 6 Acre 16 Guntas land, situated at Hittalahalli Village, Kasaba Hobali, Shidlaghatta Taluk, Chikkaballapura District, the following boundaries:- **East by :** Krishnappa's Land, **West by :** Road, **North by :** Raja Kaluve, **South by :** Narayanappa's land.

Item No.5 : All that part and parcel of the Agriculture property, land bearing Survey No.63/2, measuring an extent of 2 Acre 32 Guntas land, situated at Hittalahalli Village, Kasaba Hobali, Shidlaghatta Taluk, Chikkaballapura District, the following boundaries:- **East by :** B Narayanappa's Land, **West by :** Survey No.62/1, **North by :** Road, **South by :** Survey No.62/1,

Item No.6 : All that part and parcel of the Agriculture property, land bearing Survey No.62/1, measuring an extent of 1 Acre land, situated at Hittalahalli Village, Kasaba Hobali, Shidlaghatta Taluk, Chikkaballapura District, the following boundaries:- **East by :** Survey No. 63/2, **West by :** B. Narayanappa's Land, **North by :** Road, **South by :** Reddyyavara Muniyappa's Land.

Item No.7:- All that part and parcel of the Agriculture property, land bearing Survey No.81/7, measuring an extent of 7 Guntas land, situated at Anuru Village, Kasaba Hobali, Shidlaghatta Taluk, Chikkaballapura District, the following boundaries:- **East by :** A. M. Munikrishnappa's Land, **West by :** Chandrappa's Land, **North by :** A. Hunasenahalli to Anuru Road, **South by :** Chikkamariyappa's Land

Item No. 8 : All that part and parcel of the Agriculture property, land bearing Survey No.273/2, measuring an extent of 27 Guntas land, situated at Shidlaghatta Village, Kasaba Hobali, Shidlaghatta Taluk, Chikkaballapura District, the following boundaries:- **East by :** B Narayanappa's Land, **West by :** Reddyyavara Gangadharappa and Chikkanna's Land, **North by :** Raja Kaluve, **South by :** Raja Kaluve.

Item No. 9 : All that part and parcel of the Agriculture property land bearing Survey No.273/3, measuring an extent of 29 Guntas land, situated at Shidlaghatta Village, Kasaba Hobali, Shidlaghatta Taluk, Chikkaballapura District, the following boundaries:- **East by :** B. Narayanappa's Land, **West by :** Reddyyavara Gangadharappa and Chikkanna's Land, **North by :** Raja Kaluve, **South by :** Raja Kaluve.

Item No. 10 : All that part and parcel of the Agriculture property, land bearing Survey No.273/4, measuring an extent of 30 Guntas land, situated at Shidlaghatta Village, Kasaba Hobali, Shidlaghatta Taluk, Chikkaballapura District, the following boundaries:- **East by :** B.Narayanappa's Land, **West by :** Reddyyavara Gangadharappa and Chikkanna's Land, **North by :** Raja Kaluve, **South by :** Raja Kaluve.

Item No. 11 : All that part and parcel of the House property, the Shidlaghatta Municipal House List No.541, Assessment No. 4272/3348/1, measuring an extent of East to West 33 ¼ Feet and North to South 63 feet, situated at K.K.Pete, Shidlaghatta Town, Shidlaghatta Taluk, Chikkaballapura District, the following boundaries:- **East by :** B. Narayanappa's House, **West by :** Road, **North by :** Srinivasa's House, **South by :** Road.

By order of the Court, Sheristedar, Sr. Civil Judge & JMFC, Sidlaghatta.
Counsel for Plaintiff : **V. Muniraju,** Advocate Bangalore
Place : Sidlaghatta, Date : 10.03.2026

IN THE COURT OF THE ADDI CIVIL JUDGE AND JMFC AT TIPTUR.
C.MIS NO: 27/2026.

PETITIONER : N.S.Siddaraju and others.
V/s
RESPONDENT : The Tahsildar, Tiptur Taluk, Tiptur.

PAPER PUBLICATION

That the petitioners have filed the petition under section 13(3) of Indian Birth and Death Act, in the above case for obtaining Death Certificate of **N.S.Bhavya** D/o late Somanna.N.S who died on: 06.02.2015 at Nonavinakere village, Nonavinakere Hobli, Tiptur Taluk. The case is posted for hearing **on : 16/05/2026** at 11.00 A.M. If any body has any objection or interest, in this behalf, they may come personally or through their Advocates before this Hon'ble court. Otherwise, the case will be decided one sided.

By order of the court
Sheristedar,
Civil Judge & JMFC Tiptur.
K.B. Banashankar, Advocate,
Tiptur, Date: 09/3/2026.

BEFORE THE DEPUTY REGISTRAR OF CHIT FUNDS AT BANGALORE
Dispute No. 128/2026-27

BETWEEN : M/s. S.P. Paper Converter ...Disputant/Petitioner
AND : M/s. NavaShakthi Chits Private Ltd., ...Opponent/Respondent

NOTICE TO RESPONDENT

M/s. Nava Shakthi Chits Private Ltd., Regd. Off. No. 553/7, 7th Cross, 3rd Main, Ayyappa Temple Road, Prakash Nagar, Bangalore-560 021.
Rept. By its Managing Director,
Mr. Vadivelu Narayana Murthy Saravanan And its Director, Mr. Vadivelu Narayana Murthy,

WHEREAS, the disputant has initiated the above dispute u/s 64 of the Chit Funds Act, 1982 before The Deputy Registrar of Chits, 1st Zone, Bangalore, for recovery of a sum of **Rs.20,00,000/- (Rupees Twenty Lakhs Only)** from the opponent.

The summons issued by RPAD to the opponent to appear for hearing on 27.02.2026 and the same have duly returned as not served. Therefore, the said opponent is hereby summoned to appear before this Court in person **on 07.04.2026 at 3 p.m.** before The Deputy Registrar of Chits, sitting at the Deputy Registrar of Chits, 1st Zone, No. 146, 1st Floor, Sahakara Soucha Building, 8th Cross, Margosa Road, Malleshwaram, Bangalore - 560 003. If you wish to contest the above dispute with all relevant documents, failing which the above dispute will be decided as per law in your absence.

Given Under my Hand seal of the Court on this 27th day of February 2026.

ಚೀಟಿನಿಧಿಗಳ ಉಪ ನಿಬಂಧಕರು
ಒಂದನೇ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

IN THE COURT OF THE PRL SENIOR CIVIL JUDGE AT TUMAKURU.
O.S. No.371/2024.

PLAINTIFF : Lakshmamma @ Gundamma
V/S
DEFENDANTS : Thopaiah and others.

Notice to DEFENDANT No.4

GANGAMMA D/o late Rangaiah @ Rangappa, Aged about 61 years, residing at, Ranganganapalya Village, Ballagere Post, Hebbur Hobli, Tumakuru Taluk.

PAPER PUBLICATION

WHEREAS, the above plaintiff have filed this suit against the defendants No.4, and others for partition, and separate possession of her legitimate share and such other reliefs.

SUIT SCHEDULE PROPERTIES

1. All the piece and parcel of the land bearing Sy.No.82/6, measuring 1-02, assessed at Rs.1.79 paisa, situated at Ballagere Village, Hebburu Hobli, Tumakuru Taluk, Tumakuru District and bounded on: East Land of S.S.Shanthamma, West Land of Hulluraiah, North Land of Ramanna, South: Land of Shanaiah.
2. All the piece and parcel of the land bearing Sy.No.84/2, totally measuring 4-10 guntas, kharab 0-16 guntas, jatha measuring 3-34 guntas, assessed at Rs.8.17 paisa, out of which 0-07.04.00 guntas, situated at Ballagere Village, Hebburu Hobli, Tumakuru Taluk, Tumakuru District and bounded on:East: Land of Kalaiah, West: Land of Kalaiah, North: Land of Hombanna, South: Land of Thimmaiah.
3. All the piece and parcel of the land bearing Sy.No.80, totally measuring 9-21 guntas, kharab 0-04 guntas, jatha measuring 9-17 guntas, assessed at Rs.20.45 paisa, our of which 0-20 guntas, situated at Ballagere Village, Hebburu Hobli, Tumakuru Taluk, Tumakuru District and bounded on:East: Karekallu, West: Land of Hombanna, North : Land of Nagaraju,South: Land of Thimmarayagowda.
ಚನ್ನರಾಯಪಟ್ಟಣ: ನಾಡಪ್ರಭು ಕೆಂಪೇಗೌಡ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಹಾಗೂ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಕಾಳೇನಹಳ್ಳಿ ಆನಂದ್‌ಕುಮಾರ್ ಪಟ್ಟಣದ ಸ್ನೇಹಸೌಧ ನಿವಾಸದಲ್ಲಿ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ಅವರನ್ನು ಭೇಟಿ ಮಾಡಿ ಬೆಂಬಲವನ್ನು ನೀಡುವಂತೆ ಮನವಿ ಮಾಡಿದರು. ಆನಂದಕುಮಾರ್ ಮಾತನಾಡಿ ಕಳೆದು ಇಪ್ಪತ್ತು ವರ್ಷಗಳಿಂದ ಕನ್ನಡ ಭಾಷೆ, ನಾಡು, ನುಡಿಗಾಗಿ ದುಡಿಯುತ್ತಾ ಬಂದಿದ್ದೇನೆ, ನನ್ನ ಕನ್ನಡಾಂಬೆ ಹಾಗೂ ಸಮಾಜ ಸೇವೆಯನ್ನು ಪರಿಗಣಿಸಿ ಈ ಬಾರಿ ನನ್ನನ್ನು ಬೆಂಬಲಿಸುವಂತೆ ಶಾಸಕರಲ್ಲಿ ಮನವಿ ಮಾಡಿಕೊಂಡಿದ್ದೇವೆ ಎಂದರು. ನಾಡಪ್ರಭು ಕೆಂಪೇಗೌಡ ವೇದಿಕೆ ಸ್ಥಾಪನೆ ಮಾಡಿ ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದೇನೆ. ನಮ್ಮ ಜಿಲ್ಲೆಯ ಸಮಸ್ತ ಕನ್ನಡಿಗರು ನನ್ನನ್ನು ಬೆಂಬಲಿಸಿ, ಆಶೀರ್ವದಿಸಬೇಕೆಂದು ಮನವಿ ಮಾಡಿದರು. ನವೋದಯ ವಿದ್ಯಾ ಸಂಸ್ಥೆಯ ಅಧ್ಯಕ್ಷ ಮುರಾರ್ಜಿ ಮಂಜಣ್ಣ, ಕನ್ನಡಪರ ಹೋರಾಟಗಾರ ಕನ್ನಡ ವಾಸು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಕಾಳೇನಹಳ್ಳಿ ಗೋಪಾಲ್, ಪಿಎಸಿಸಿಎಸ್ ಮಾಜಿ ಅಧ್ಯಕ್ಷರಾದ ಕಾಳೇನಹಳ್ಳಿ ಮೊಗಣ್ಣ, ಗದ್ದೆ ರಾಮೇಶ್ವರಿ ಯುವಕರ ಸಂಘದ ಅಧ್ಯಕ್ಷರಾದ ರಾಜು, ಚಕ್ಕೆ ರಾಜು, ದಿಲೀಪ್, ಗುಂಡ, ಸಾಬ್ರು ಮಂಜಣ್ಣ, ಶಂಕರ್, ದಲಿತ ಸಂಘಟನೆ ಮುಖಂಡ ಶಂಕರ್, ಸಾಮಾಜಿಕ ಹೋರಾಟಗಾರ ಕಾಳೇನಹಳ್ಳಿ ಉಮೇಶ್, ಪಾಪಣ್ಣ, ಕುಮಾರ್, ಜಯರಾಮ್, ಸಿ ಐ ಟಿ ಯು ಮುಖಂಡರಾದ ಗಿರೀಶ್, ಸುರೇಶ್ ತಾಲೂಕಿನ ಕನ್ನಡ ಪರ ಹೋರಾಟಗಾರರು ಸೇರಿದಂತೆ ಇತರರು ಹಾಜರಿದ್ದರು.



ಚನ್ನರಾಯಪಟ್ಟಣ ತಾಲೂಕಿನ ಬಾಗೂರು ಹೋಬಳಿಯ ಬೀಜಗೋಡನಹಳ್ಳಿಯ ಗ್ರಾಮದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು ಪ್ರದೀಪ್, ಮೋಹನ್, ಚಂದ್ರಣ್ಣ, ದೊರೆ, ರಂಗ, ದಿನೇಶ್, ಸೋಮಣ್ಣ, ಜಗದೀಶ್, ನಿತಿ, ಮಂಜುನಾಥ್, ಆನಂದ್, ಮಾಸ್ಟರ್ ಮಾರುತಿ, ಸತೀಶ್, ಈಶ, ಸಂದೀಪ್ ಮುಂತಾದವರು ಹಾಗೂ ಗ್ರಾಮಸ್ಥರ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ ಬಿಜೆಪಿ ಮುಖಂಡರಾದ ಸಿ. ಆರ್. ಚಿದಾನಂದ್ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

9 ಕೇಂದ್ರಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ

ತಿಪಟೂರು: 2025-26 ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 1115 ಬಾಲಕಿಯರು ಮತ್ತು 1153 ಬಾಲಕರು ಸೇರಿದಂತೆ ಒಟ್ಟು 2268 ವಿದ್ಯಾರ್ಥಿಗಳು ತಾಲೂಕು ಹಾಗೂ ಗ್ರಾಮಾಂತರ ಪ್ರದೇಶದ 9 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ತಹಸೀಲ್ದಾರ್ ಮೋಹನ್‌ಕುಮಾರ್ ತಿಳಿಸಿದರು.

ಪ್ರತಿಯೊಂದು ಕೇಂದ್ರಕ್ಕೂ 9 ಮುಖ್ಯ ಅಧೀಕ್ಷಕರು, 9 ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆ ಅಭಿರಕ್ಷಕರು ಹಾಗೂ 9 ಮೊಬೈಲ್ ಸ್ವಾಧೀನಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದರು.

ಉಪಖಜಾನೆ ಸಹಾಯಕ ನಿರ್ದೇಶಕರು ಪ್ರಶ್ನೆಪತ್ರಿಕೆ ವಿತರಣೆಗೆ ಸಹಕಾರ ನೀಡಲಿದ್ದು, ಪೊಲೀಸ್ ಇಲಾಖೆ ವತಿಯಿಂದ ಪರೀಕ್ಷೆಗಳು ಸುಸೂತ್ರವಾಗಿ ನಡೆಯಲು ಅಗತ್ಯ ಪೊಲೀಸ್ ಸಿಬ್ಬಂದಿಯನ್ನು ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆ ಕಡತಗಳನ್ನು ಸಾಗಿಸುವ ವಾಹನಗಳಿಗೆ ಪೊಲೀಸ್ ಭದ್ರತೆ ಒದಗಿಸಲಾಗುತ್ತದೆ ಎಂದು ಹೇಳಿದರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ (ಸೆಕ್ಷನ್ 163)ಜಾರಿಗೊಳಿಸಲಾಗಿದೆ. ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ ಹಾಗೂ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲು ಕೆಎಸ್ ಆರ್‌ಟಿಸಿ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ

ಕ್ಷೇತ್ರ ಶಿಕ್ಷಣಾಧಿಕಾರಿ ತಾರಾಮಣಿ ಮಾತನಾಡಿ, ಮೂರು ಪೂರ್ವಸಿದ್ಧತಾ ಪರೀಕ್ಷೆಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಶೇಕಡಾ 93 ಫಲಿತಾಂಶ ಪಡೆದು ಪ್ರಥಮ ಸ್ಥಾನ ಪಡೆದಿದ್ದು, ಹಿಂದುಳಿದ ವಿದ್ಯಾರ್ಥಿಗಳಿಗಾಗಿ ವಿಶೇಷ ತರಗತಿಗಳನ್ನು ನಡೆಸಲಾಗಿದೆ ಎಂದರು.



ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಎನ್‌ಎಸ್‌ಎಮ್ ಬಾಲಿಕ ಪ್ರೌಢಶಾಲೆ, ಸ್ಟೆಲ್ಲಾ ಮೇರೀಸ್ ಪ್ರೌಢಶಾಲೆ, ಕರ್ನಾಟಕ ಪಬ್ಲೀಕ್ ಶಾಲೆ ನೊಣವಿನಕೆರೆ, ಕರ್ನಾಟಕ ಪಬ್ಲೀಕ್ ಶಾಲೆ ಹೊನ್ನವಳ್ಳಿ, ಶ್ರೀಮದ್ ರಂಬಾಪುರಿ ಆಂಗ್ಲ ಪ್ರೌಢಶಾಲೆ ಕೆ.ಬಿ.ಕ್ರಾಸ್ ಎಚ್. ಎಂ.ಸಿ.ಜಿ ಪ್ರೌಢಶಾಲೆ ಹಾಲ್ಕುರಿಕೆ, ಎಸ್.ಪಿ.ಎಸ್,ಜೆ.ಸಿ ರಂಗಾಪುರ ಸೇರಿದಂತೆ ಒಟ್ಟು 09 ಪರೀಕ್ಷಾ ಕೇಂದ್ರದಲ್ಲಿ ನಡೆಯಲಿದೆ.

ತಾಲೂಕಿನಲ್ಲಿ 181 ಪುನರಾವರ್ತಿತ ವಿದ್ಯಾರ್ಥಿ, 12 ಅಂಗವಿಕಲ ವಿದ್ಯಾರ್ಥಿಗಳಿದ್ದು, 5 ವಿದ್ಯಾರ್ಥಿಗಳಿಗೆ ಬದಲಿ ಅಭ್ಯರ್ಥಿಗಳ ಮೂಲಕ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಗೈರುಹಾಜರಿ ಹಾಗೂ ಇತರೆ ಕಾರಣಗಳಿಂದ 178 ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗಿದ್ದಾರೆ ಎಂದು ತಿಳಿಸಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸುದರ್ಶನ್, ಬಿಆರ್‌ಸಿ ಉಮೇಶ್‌ಗೌಡ, ಶಿಕ್ಷಣ ಸಂಯೋಜಕ ಹಾಗೂ ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ಮಂಜುನಾಥ್ ಎಂ. ಉಪಸ್ಥಿತರಿದ್ದರು.

ಜಾತ್ರೆಗಳು ಸಂಸ್ಕೃತಿಯ ಪ್ರತೀಕ: ಶಾಸಕ

ಆಲೂರು: ಆಧುನಿಕತೆಯ ಅಬ್ಬರದ ಮಧ್ಯೆಯೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಜಾತ್ರೆ ಹಾಗೂ ಇತರ ಧಾರ್ಮಿಕ ಕಾರ್ಯಕ್ರಮಗಳು ಸಂಸ್ಕೃತಿ ಉಳಿಸುವಲ್ಲಿ ಸಹಕಾರಿಯಾಗಿವೆ ಎಂದು ಆಲೂರು-ಸಕಲೇಶಪುರ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ತಾಲೂಕಿನ ಪಾಳ್ಯ ಹೋಬಳಿಯ ಕಾಮತಿ ಗ್ರಾಮದಲ್ಲಿ ನೆಲೆಸಿರುವ ಶ್ರೀ ಅಗ್ನಿಉದ್ಭವ ಶನೈಶ್ಚರ ಸ್ವಾಮಿಯವರ 25ನೇ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಪ್ರತಿಯೊಬ್ಬರೂ ಮಾನವ ಧರ್ಮದ ನೆಲೆಗಟ್ಟಿನ ಮೇಲೆ ಬದುಕು ಸಾಗಿಸುತ್ತಿದ್ದಾರೆ ಧರ್ಮದ ಜಾಗೃತಿ ಮೌಲ್ಯ ಉಳಿಸಿ ಬೆಳೆಸಿಕೊಂಡು, ಬದುಕಿಗೆ ಅರ್ಥ ತಂದುಕೊಡುವಲ್ಲಿ ಪ್ರತಿಯೊಬ್ಬರೂ ಗಮನ ಹರಿಸಬೇಕಿದೆ ಹಳ್ಳಿಗಳಲ್ಲಿ ಮನೆ ಮಂದಿಯೆಲ್ಲಾ ಸೇರಿ ಆಚರಿಸುವ ಪ್ರತೀ ಆಚರಣೆಗಳು ವಿಶೇಷ ಅನುಭವವನ್ನು ನೀಡಿ ಸಂಭ್ರಮವನ್ನು ಹೆಚ್ಚಿಸುತ್ತವೆ ಗ್ರಾಮೀಣ ಭಾಗದಲ್ಲಿ ಜಾತಿ ಭೇದ ಮತವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಇಂತಹ ಕಾರ್ಯಗಳನ್ನು ಮಾಡಿದ್ದೆ ಅದರೆ ಪ್ರತಿಯೊಬ್ಬರೂ ನೆಮ್ಮದಿ ಬದುಕು ಕಟ್ಟಿಕೊಳ್ಳುವ ಸಾಧ್ಯವಾಗುತ್ತದೆ ಎಂದರು.



ಅರ್ಚಕ ವೆಂಕಟೇಶ್ ಕಶ್ಯಪ್ ಮಾತನಾಡಿ ಜಾತ್ರೆಗಳು ನಮ್ಮ ಗತಕಾಲದ ರೂಢಿ ಸಂಪ್ರದಾಯ, ಆಚರಣೆ ಸಂಸ್ಕೃತಿಯನ್ನು ಉಳಿಸುತ್ತಾ ಮುಂದಿನ ಪೀಳಿಗೆಗೆ ವರ್ಗಾಯಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ ಸಮಾಜದಲ್ಲಿ ಸಹಕಾರ, ಸಹಬಾಳ್ವೆಯ ಗುಣಗಳು ವೃದ್ದಿಸುತ್ತವೆ. ದೇವರ ಮೇಲಿನ ನಂಬಿಕೆಯಿಂದ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್.ಮಂಜೇಗೌಡ, ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾಮತಿ ಗ್ರಾಮದ ಯುವಕರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಹಾಜರಿದ್ದರು.

ಮಹಿಳಾ ದಿನಾಚರಣೆ, ವಾರ್ಷಿಕೋತ್ಸವ ಸಮಾರಂಭದಲ್ಲಿ ಗೀತಾ ಹೇಳಿಕೆ

ಮಹಿಳೆಯರ ಸಾಧನೆ ಎಲ್ಲ ಕ್ಷೇತ್ರಗಳಲ್ಲೂ ಶ್ಲಾಘನೀಯ


ಅರಕಲಗೂಡು: ಬಹು ವರ್ಷಗಳಿಂದ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಇದ್ದರೂ ಮಹಿಳೆಯರ ಸಾಧನೆ ಅತ್ಯಂತ ದೊಡ್ಡದಾಗಿದೆ. ಇಂದಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಿ ಸಮಾಜದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ ಎಂದು 'ಬೆಳಕು' ವೃದ್ಧಾಶ್ರಮದ ಸಂಸ್ಥಾಪಕಿ ಗೀತಾ ಹೇಳಿದರು.

ಪಟ್ಟಣದ ಶ್ರೀ ಕೋದಂಡರಾಮಸ್ವಾಮಿ ದೇವಾಲಯದ ಪ್ರವಚನ ಮಂದಿರದಲ್ಲಿ ವಿಪ್ರ ಮಹಿಳಾ ಬಳಗ ಆಯೋಜಿಸಿದ್ದ ಮಹಿಳಾ ದಿನಾಚರಣೆ ಹಾಗೂ ವಾರ್ಷಿಕೋತ್ಸವ ಸಮಾರಂಭದಲ್ಲಿ ನೀಡಿದ ಗೌರವವನ್ನು ಸ್ವೀಕರಿಸಿ ಅವರು ಮಾತನಾಡಿದರು.

ಮಹಿಳೆಯರ ಸಾಧನೆಗೆ ಸಮಾಜದಲ್ಲಿ ಹಲವು ಅಡೆತಡೆಗಳಿದ್ದರೂ ಕುಟುಂಬದ ಸದಸ್ಯರ ಬೆಂಬಲ ದೊರೆತರೆ ಮಹಿಳೆಯರು ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಸಮಾರಂಭವನ್ನು ಅನುರಾಧ ಅನಂತಮೂರ್ತಿ ಅವರು ಉದ್ಘಾಟಿಸಿ ಮಾತಾಡಿದರು.

ಮುಂದುವರೆದಂತೆ ಕಾರ್ಯಕ್ರಮದಲ್ಲಿ ಶಿಕ್ಷಕಿ ಶ್ವೇತಾ ಮೋಹನ್ ಅವರು ಮಾತನಾಡಿ, ಗೀತಾ ಅವರ ಸಾಧನೆಯನ್ನು ಸ್ಮರಿಸಿ ಮಹಿಳೆಯರು ಪುರುಷರಷ್ಟೇ ಕೆಲಸ ಮಾಡುತ್ತಿದ್ದರೂ ಸಮಾನ ವೇತನ ದೊರಕದ ಪರಿಸ್ಥಿತಿ ಯೂರೋಪ್ ಖಂಡಗಳಲ್ಲಿ ಇತ್ತು. ಅದರಿಂದಲೇ ಮಹಿಳಾ ಚಳುವಳಿ ರೂಪುಗೊಂಡು ನಂತರ ಮಹಿಳಾ ದಿನಾಚರಣೆ ಪ್ರಾರಂಭವಾಯಿತು ಎಂದು ಹೇಳಿದರು.



ಸಂಸ್ಕಾರ ನೀಡುವಲ್ಲಿ ತಾಯಿಯ ಪಾತ್ರ ಮಹತ್ವದ್ದಾಗಿದೆ. ಕುಟುಂಬ ಮತ್ತು ಸಮಾಜ ಎರಡನ್ನೂ ಸಮತೋಲನದಲ್ಲಿ ನಡೆಸುವ ಶಕ್ತಿ ಮಹಿಳೆಯರಿಗೆ ಇದೆ. ಸಮಾಜದಲ್ಲಿ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳನ್ನು ತಡೆಗಟ್ಟಲು ತಾಯಂದಿರ ಪಾತ್ರ ಬಹು ಮುಖ್ಯವಾಗಿದೆ. ಗಂಡು ಮಕ್ಕಳಿಗೂ ಸಂಸ್ಕಾರಗಳನ್ನು ನೀಡಿ, ಮಹಿಳೆಯರನ್ನು ಗೌರವಿಸುವಂತೆ ಬೆಳೆಸಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ರುಕ್ಮಿಣಿ ಗುಂಡಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸುಧಾ ರಮೇಶ್, ಶಿಕ್ಷಕಿ ನಾಗಮಣಿ ವೆಂಕಟೇಶಮೂರ್ತಿ, ಸವಿತಾ ಶ್ರೀಧರ್ ಸೇರಿದಂತೆ ಇತರರಿದ್ದರು. ಹಾಗೂ ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳು ಹಾಗೂ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು.

ರಾಜೀ ಮೂಲಕ ಪ್ರಕರಣ ಇತ್ಯರ್ಥವಾದರೆ ಸೌಹಾರ್ದ ಜೀವನ

ಲೋಕ ಅದಾಲತ್: 56,235 ಪ್ರಕರಣ ಇತ್ಯರ್ಥ

ಕೋಲಾರ: ರಾಜಿ ಸಂಧಾನದ ಮೂಲಕ ಕೇಸ್‌ಗಳನ್ನು ಇತ್ಯರ್ಥಪಡಿಸಿಕೊಳ್ಳಿ, ಪರಸ್ಪರ ಸೌಹಾರ್ದತೆಯಿಂದ ಜೀವನ ನಡೆಸಲು ಇದು ಸಹಕಾರಿಯಾಗಿದ್ದು, ಕಕ್ಷಿದಾರರ ಹಣ, ನ್ಯಾಯಾಲಯದ ಸಮಯ ಉಳಿಯುತ್ತದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿಜಯಕುಮಾರ ಎಂ.ಆನಂದಶೆಟ್ಟಿ ತಿಳಿಸಿದರು.

ಈ ಬಾರಿಯ ಲೋಕ್ ಅದಾಲತ್‌ಅನ್ನು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಅದಾಲತ್ ನಲ್ಲಿ ವಕೀಲರು,ನ್ಯಾಯಾಧೀಶರು,ಕಕ್ಷಿದಾರರ ಸಹಕಾರದಿಂದ ಅನೇಕ ಪ್ರಕರಣಗಳು ಇತ್ಯರ್ಥವಾಗಿ ಸೌಹಾರ್ದತೆಯ ಜೀವನ ನಡೆಸಲು ಸಹಕಾರಿಯಾಗಿದೆ ಎಂದರು.

ವರ್ಷಾನುಗಟ್ಟಲೇ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ, ರಾಜೀ ಮೂಲಕ ಇತ್ಯರ್ಥವಾದರೆ ಅಂತಹ ಪ್ರಕರಣದಲ್ಲಿ ಮೇಲ್ಮನವಿ ಹೋಗುವ ಮನಸ್ಥಿತಿ ಇರುವುದಿಲ್ಲ ಇದರಿಂದಾಗಿ ಗ್ರಾಮಗಳಲ್ಲಿ ಶಾಂತಿ ನೆಲಸಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟು, ಇದರ ಪ್ರಯೋಜನ ಪಡೆಯಲು ಕಕ್ಷಿದಾರರಿಗೆ ಮನವಿ ಮಾಡಿದರು. ಜಿಲ್ಲೆಯಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದ ಅವರು, ನ್ಯಾಯಾಲಯಗಳಿಗೆ ಜನರ ಅಲೆದಾಟ ತಪ್ಪಿಸಲು, ಸಮಾಜದಲ್ಲಿ ಶಾಂತಿ, ಪರಸ್ಪರ ಸೌಹಾರ್ದತೆ ನೆಲೆಗೊಳ್ಳಲು ಇಂತಹ ಅದಾಲತ್‌ಗಳು ಸಹಕಾರಿಯಾಗಿವೆ ಎಂದ ಅವರು, ಪ್ರಕರಣಗಳ ಇತ್ಯರ್ಥದಿಂದಾಗಿ ನ್ಯಾಯಾಲಯಗಳ ಸಮಯ ಮಾತ್ರವಲ್ಲ ಕಕ್ಷಿದಾರರ ಸಮಯ, ಹಣವೂ ಉಳಿಯುತ್ತದೆ ಎಂದರು. ಅದಾಲತ್ ಯಶಸ್ಸಿನಲ್ಲಿ ಕಕ್ಷಿದಾರರ ಜತೆಗೆ ವಕೀಲರ ಸಹಕಾರವು ಅಗತ್ಯವಿದೆ, ಈ ನಿಟ್ಟಿನಲ್ಲಿ ಇಷ್ಟೊಂದು ಉತ್ತಮಸಾಧನೆ ಮಾಡುವಲ್ಲಿ ಎಲ್ಲರೂ ನೆರವಾಗಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ವಿವಾಹ ವಿಚ್ಛೇದನಕ್ಕೆ ಅರ್ಜಿ ಹಾಕಿದ್ದ ದಂಪತಿಗಳು ರಾಜೀ ಮೂಲಕ ಮತ್ತೆ ಒಂದಾಗಿ ಹೊಸ ಜೀವನ ಆರಂಭಿಸಲು ಮುಂದಾಗಿದ್ದು, ಅದಾಲತ್‌ನಿಂದ ಉತ್ತಮ ಫಲಿತಾಂಶ ವ್ಯಕ್ತವಾಯಿತು.

56,235 ಪ್ರಕರಣ ಇತ್ಯರ್ಥ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟು 56,235 ಪ್ರಕರಣಗಳನ್ನು ಪರಸ್ಪರ ರಾಜೀ ಸಂಧಾನದ ಮೂಲಕ ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಟೇಶ ಆರ್. ತಿಳಿಸಿದರು.

ಲೋಕಅದಾಲತ್ ಬೈಠಕ್‌ಗಳು ಜಿಲ್ಲಾ ಹಾಗೂ ಎಲ್ಲಾ ತಾಲೂಕು ನ್ಯಾಯಾಲಯಗಳಲ್ಲೂ ನಡೆದಿದ್ದು, ಪರಸ್ಪರ ರಾಜೀ ಮೂಲಕ ಪ್ರಕರಣಗಳ ಇತ್ಯರ್ಥವಾಗಿದ್ದು, ಸೌಹಾರ್ದತೆ ಮೂಡಲು ಸಹಕಾರಿಯಾಗಿದೆ ಎಂದು ತಿಳಿಸಿದ್ದಾರೆ.

ಕಿರುಸುದ್ದಿ

ಯುದ್ಧದ ಬಿಸಿ: ಎಫ್-1 ರೇಸ್ ಮುಂದೂಡಿಕೆ

ದುಬೈ: ಸೌದಿ ಅರೇಬಿಯಾ ಮತ್ತು ಬಹ್ರೇನ್‌ನಲ್ಲಿ ನಡೆಯಬೇಕಿದ್ದ ಫಾರ್ಮುಲಾ 1 ರೇಸ್ ಮಧ್ಯಪ್ರಾಚ್ಯದಲ್ಲಿ ಹೆಚ್ಚಾಗುತ್ತಿರುವ ಯುದ್ಧ ತೀವ್ರತೆಯಿಂದ ಮುಂದೂಡಲಾಗಿದೆ. ಗಲ್ಫ್ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾದ ಪರಿಣಾಮ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಂತಾರಾಷ್ಟ್ರೀಯ ಮೋಟಾರ್ ಸ್ಪೋರ್ಟ್ಸ್ ಸಂಸ್ಥೆ ಶನಿವಾರದಂದು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದೆ. ವಿಶ್ವಾದ್ಯಂತ ಹೆಚ್ಚಾದ ಯುದ್ಧ ಉದ್ವೇಗದಿಂದಾಗಿ ಈ ಬಾರಿಯ ಗ್ರ್ಯಾಂಡ್ ಪ್ರಿಕ್ಸ್ ಕೂಟ ಮುಂದೂಡಲಾಗಿದೆ ಎಂದು ಹೇಳಿದೆ. ಮುಂದೂಡಿಕೆ ಅನಿರ್ದಿಷ್ಟಾವಧಿಗೆ ಸಿಮೀತವಾಗಿರಲಿದೆ. ಮುಂದಿನ ದಿನಾಂಕ ಚರ್ಚಿಸಿ ಪರಿಸ್ಥಿತಿಗೆ ತಕ್ಕಂತೆ ತೀರ್ಮಾನ ಮಾಡಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಏಪ್ರಿಲ್ 10-12ರವರೆಗೆ ಕೂಟ ನಡೆಯಬೇಕಿತ್ತು.

ಓಪನ್ ಜಂಪ್ಸ್: ಸರ್ವೇಶ್ ಚಾಂಪಿಯನ್

ಬೆಂಗಳೂರು: ಇಲ್ಲಿ ನಡೆಯುತ್ತಿರುವ 5ನೇ ಓಪನ್ ಜಂಪ್ಸ್ ಕ್ರೀಡಾಕೂಟದಲ್ಲಿ ಮಹಾರಾಷ್ಟ್ರದ ಸರ್ವೇಶ್ ಕುಶಾರೆ ಚಾಂಪಿಯನ್ ಅನಿಸಿಕೊಂಡರು. ಬೆಂಗಳೂರಿನ ಅಂಜು ಬೊಬ್ಬಿ ಹೈ ಪರ್ಫಾಮನ್ಸ್ ಸೆಂಟರ್‌ನಲ್ಲಿ ನಡೆದ ಈ ಕೂಟದಲ್ಲಿ ಮಿಂಚಿದ ಅವರು ಪದಕ ಗಿಟ್ಟಿಸಿಕೊಂಡರೂ ದಾಖಲೆ ಬರೆಯಲಾಗಲಿಲ್ಲ. 2.16 ಮೀ. ದೂರದ ಜಿಗಿತದೊಂದಿಗೆ ಸರ್ವೇಶ್ ಈ ಸಾಧನೆ ಮಾಡಿದರು. 2020ರ ಟೋಕಿಯೊ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಪ್ಯಾರಾ ಅಥ್ಲೀಟ್ ನಿಶಾದ್ ಕುಮಾರ್ ಅವರು 2.10 ಮೀ. ದೂರ ಜಿಗಿದರೂ ಐದನೇ ಸ್ಥಾನಕ್ಕೆ ತೃಪ್ತರಾದರು. ಅಬ್ದುಲ್ಲಾ 16.83ಮೀ.ದೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ 16.78ಮೀ.ದೊಂದಿಗೆ ಹೊರನಡೆದರು.

ದ್ರಾವಿಡ್, ಬಿನ್ನಿ, ಮಿಥಾಲಿಗೆ ಜೀವಮಾನ ಸಾಧನೆ ಪ್ರಶಸ್ತಿ | ದಿಲ್ಲಿಯಲ್ಲಿ ಸಂಪನ್ನಗೊಂಡ ನಮನ್ ಕಾರ್ಯಕ್ರಮ

ಅಪ್ರತಿಮ ಕ್ರಿಕೆಟಿಗರಿಗೆ ಅತ್ಯುನ್ನತ ಗರಿ







ಹೊಸದಿಲ್ಲಿ: ಕ್ರಿಕೆಟ್ ದಿಗ್ಗಜರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ ಮತ್ತು ಮಹಿಳಾ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರಿಗೆ ಬಿಸಿಸಿಐ ದಿಲ್ಲಿಯಲ್ಲಿ ಭಾನುವಾರ ನಡೆದ ನಮನ್ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಹಿರಿಯ ಕ್ರಿಕೆಟಿಗರು, ಹಾಲಿ-ಮಾಜಿ ಚಾಂಪಿಯನ್‌ಗಳು ಮತ್ತು ಕ್ರೀಡಾಳಿತ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ಕ್ರಿಕೆಟಿಗರಿಗೆ ಗೌರವ ಸಲ್ಲಿಸಲಾಗಿದೆ. ಭಾರತೀಯ ಕ್ರಿಕೆಟಿಗೆ ಆಟಗಾರರಾಗಿ ಮಾರ್ಗದರ್ಶಕರಾಗಿ, ನಾಯಕರಾಗಿ ಮುಂದೆ ಕೋಚ್ ಆಗಿ ದೊಡ್ಡ ಕೊಡುಗೆಗಳನ್ನು ನೀಡಿರುವ ರಾಹುಲ್ ದ್ರಾವಿಡ್ ಅವರನ್ನು ದಿಗ್ಗಜ ಎಂದು ಬಣ್ಣಿಸಲಾದರೆ, ಇತ್ತ ರೋಜರ್ ಬಿನ್ನಿ ಅವರನ್ನು ಅಪ್ರತಿಮ ಕ್ರಿಕೆಟಿಗ, ಅತ್ಯುತ್ತಮ ಆಡಳಿತಗಾರ ಎನ್ನಲಾಗಿದೆ. ಇಬ್ಬರಿಗೂ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿ ನೀಡಲಾಗಿದೆ. ಇನ್ನು ಮಹಿಳಾ ಕ್ರಿಕೆಟ್‌ನಲ್ಲಿ ಅಚ್ಚಳಿಯದ ದಾಖಲೆಗಳನ್ನು ಮಾಡಿರುವ ಮಿಥಾಲಿ ರಾಜ್ ಅವರನ್ನು ಮಹಿಳಾ ಕ್ರಿಕೆಟ್‌ನ ಐಕಾನ್ ಎಂದು ಬಣ್ಣಿಸಲಾಗಿದ್ದು, ಜೀವಮಾನ ಸಾಧನೆಯ ಪ್ರಶಸ್ತಿ ನೀಡಲಾಗಿದೆ.

ಇದರ ಜೊತೆಗೆ ಶುಭಮನ್ ಗಿಲ್ ಅವರಿಗೆ ವಾರ್ಷಿಕ ಅತ್ಯುತ್ತಮ ಆಟಗಾರ ಎಂಬ ಪಾಲಿ ಪ್ರಶಸ್ತಿ ನೀಡಲಾಗಿದೆ. ಮಂಧಾನ ಅವರಿಗೆ ಅತ್ಯುತ್ತಮ ಮಹಿಳಾ ಕ್ರಿಕೆಟರ್ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿದ ಆಟಗಾರರಿಗೆ ಇನ್ನಷ್ಟು ಉತ್ಸಾಹ ನೀಡುವುದಕ್ಕೆ ವಿವಿಧ ಪ್ರಶಸ್ತಿಗಳನ್ನೂ ನೀಡಲಾಗಿದೆ.

ರಾಹುಲ್ ಕೊಡುಗೆಗೆ ತಕ್ಕ ಗರಿ: ರಾಹುಲ್ ದ್ರಾವಿಡ್ ಅವರಿಗೆ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಲಾಗುವುದು. ಟೀಂ ಇಂಡಿಯಾದ ಬಿಗ್ ಫೋರ್' ಬ್ಯಾಟಿಂಗ್ ಲೈನ್ ಅಪ್‌ನ ಭಾಗವಾಗಿದ್ದ ರಾಹುಲ್ ದ್ರಾವಿಡ್, ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್ ಅಂತಹ ದಿಗ್ಗಜರ ಪಟ್ಟಿಯಲ್ಲಿ ಒಬ್ಬರಾಗಿದ್ದರು. ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡಕ್ಕೆ ದ್ರಾವಿಡ್ ನೀಡಿರುವ ಕೊಡುಗೆ ಅಪಾರ. ಏಕದಿನ ಮಾದರಿಯಲ್ಲಿ 10,000 ಕ್ಕೂ ಹೆಚ್ಚು ರನ್ ಗಳಿಸಿರುವ ದ್ರಾವಿಡ್, ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ಪರ ಅತಿ ಹೆಚ್ಚು ರನ್ (13,288) ಗಳಿಸಿದ ಎರಡನೇ ಆಟಗಾರ ಎನಿಸಿಕೊಂಡಿದ್ದಾರೆ. 2012 ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ನಿಂದ ನಿವೃತ್ತರಾದ ದ್ರಾವಿಡ್, ಆ ಬಳಿಕ ವೀಕ್ಷಕ ವಿವರಣೆಗಾರನಾಗಿ ಕಾಣಿಸಿಕೊಂಡರು. ನಂತರ ತರಬೇತುದಾರರಾಗಿ ಭಾರತ 19 ವರ್ಷದೊಳಗಿನವರ ತಂಡವನ್ನು 2018 ರ ವಿಶ್ವಕಪ್‌ನಲ್ಲಿ ಚಾಂಪಿಯನ್ ಮಾಡಿದರು. ಮುಂದೆ ಹಿರಿಯರ ತಂಡಕ್ಕೆ ಪ್ರಧಾನ ಕೋಚ್ ಆಗಿ ನೇಮಕಗೊಂಡಿದ್ದ ದ್ರಾವಿಡ್, ತಮ್ಮ ಅವಧಿಯಲ್ಲಿ ತಂಡವನ್ನು 2023ರ ಏಕದಿನ ವಿಶ್ವಕಪ್ ಫೈನಲ್‌ಗೇರಿಸಿದ್ದರು. ಬಳಿಕ 2024 ರಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ತಂಡವನ್ನು ಚಾಂಪಿಯನ್ ಕೂಡ ಮಾಡಿದ್ದರು.

ರೋಜರ್ ಬಿನ್ನಿಗೆ ಅತ್ಯುತ್ತಮ ಸಾಧನೆಗೆ ಪ್ರಶಸ್ತಿ

1983ರಲ್ಲಿ ಭಾರತ ಮೊದಲ ಬಾರಿಗೆ ವಿಶ್ವಕಪ್ ಗೆದ್ದಾಗ ತಂಡದ ಭಾಗವಾಗಿದ್ದ ರೋಜರ್ ಬಿನ್ನಿ ಕೂಡ ಕನ್ನಡಿಗರು. ವಿಶ್ವಕಪ್ ಗೆದ್ದ ತಂಡದ ಪ್ರಮುಖ ಆಟಗಾರ ಅನ್ನಿಸಿಕೊಂಡಿದ್ದ ಅವರು, ಭಾರತವೆಂದೂ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ. ವಿಶ್ವಕಪ್‌ನಲ್ಲಿ ನೆನಪಿಗೆ ಬರುವಂಥ ಇನ್ನಿಂಗ್ಸ್‌ಗಳನ್ನು ಕಟ್ಟಿದ್ದಾರೆ. ಅಷ್ಟಕ್ಕೇ ಸಿಮೀತವಾಗದೆ ಕೋಚ್ ಹುದ್ದೆಯಲ್ಲೂ ಪ್ರಮುಖ ಕೊಡುಗೆಗಳನ್ನು ನೀಡಿದ್ದಾರೆ. ಬಿಸಿಸಿಐ ಆಡಳಿತಾಧಿಕಾರಿ ಕೂಡ ಆಗಿದ್ದ ಅವರು, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ವಿಭಿನ್ನ ಯೋಜನೆಗಳೊಂದಿಗೆ ಕೊಡುಗೆ ನೀಡಿದ್ದಾರೆ.

ಮಿಥಾಲಿ ರಾಜ್ ಆಟಕ್ಕೆ ಸಂದ ಪ್ರಶಸ್ತಿ

ಭಾರತ ಮಹಿಳೆಯರ ಕ್ರಿಕೆಟ್ ಎಂದ ತಕ್ಷಣಕ್ಕೆ ನೆನಪಾಗಲೇ ಬೇಕಾದ ಹೆಸರಿದು. ವಿಶ್ವದ ಯಾವುದೇ ಮಹಿಳೆ ಮಾಡಲಾಗದ ದಾಖಲೆಗಳನ್ನು ಮಾಡಿದ್ದಾರೆ. ಇಲ್ಲಿಯವರೆಗೂ ಅತಿ ಹೆಚ್ಚು ರನ್ ಗಳಿಸಿದ ದಾಖಲೆಗಳನ್ನು ಮಾಡಿದ್ದಾರೆ. ಸಾಧನೆಗೆ ಯಾವುದೇ ಸರಿಸಾಟಿ ಇಲ್ಲದಂತೆ ಮುಂದೆ ನಾಯಕಿಯಾದ ಅವರು, ತಂಡ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಿಳಾ ಕ್ರಿಕೆಟ್‌ನಲ್ಲಿ ಭಾರತ ಎತ್ತರಕ್ಕೆ ಬೆಳೆಯಬೇಕಾದರೆ ಅವರ ಪಾತ್ರ ದೊಡ್ಡದು. ಈ ಎಲ್ಲಾ ಸಾಧನೆಗಳನ್ನು ಗಮನಿಸಿ ಅವರಿಗೆ ಪ್ರಶಸ್ತಿ ನೀಡಲಾಗಿದೆ.

ಪ್ರಮುಖ ಪ್ರಶಸ್ತಿ ಪಟ್ಟಿ

ಆಟಗಾರ/ ಆಟಗಾರ್ತಿ	ಪ್ರಶಸ್ತಿ
ರೋಜರ್ ಬಿನ್ನಿ	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ರಾಹುಲ್ ದ್ರಾವಿಡ್	ಸಿ.ಕೆ. ನಾಯ್ಡು ಜೀವಮಾನ ಸಾಧನೆ
ಮಿಥಾಲಿ ರಾಜ್	ಜೀವಮಾನ ಸಾಧನೆ
ಶುಭಮನ್ ಗಿಲ್	ಪಾಲಿ ಉಮ್ರಿಗರ್
ಸ್ಮೃತಿ ಮಂಧಾನ	ವರ್ಷದ ಅತ್ಯುತ್ತಮ ಅಂತಾರಾಷ್ಟ್ರೀಯ ಆಟಗಾರ್ತಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ	ಎನ್ ಶ್ರೀ ಚರಣಿ
ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ	ಹರ್ಷಿತ್ ರಾಣಾ

ವಿವಿಧ ಆಟಗಾರರಿಗೆ ಪ್ರಶಸ್ತಿ

ಕಾರ್ಯಕ್ರಮದಲ್ಲಿ ವಿವಿಧ ಆಟಗಾರರಿಗೆ ಪ್ರಶಸ್ತಿ ನೀಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ, ವಿಕೆಟ್ ಪಡೆದ ಆಟಗಾರರಿಗೂ ಪ್ರಶಸ್ತಿ ನೀಡಲಾಗಿದೆ. ಹರ್ಷಿತ್ ರಾಣ ಅವರಿಗೆ ವರ್ಷದಲ್ಲಿ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ ಎಂಬ ಪ್ರಶಸ್ತಿ ನೀಡಿದರೆ, ಸ್ನೇಹ ರಾಣಾ ಅವರಿಗೆ ಶ್ರೇಷ್ಠ ಪದಾರ್ಪಣೆ ಮಾಡಿದ ಆಟಗಾರ್ತಿ ಎಂಬ ಪ್ರಶಸ್ತಿ ನೀಡಲಾಗಿದೆ.

ವಿಶ್ವಕಪ್ ಗೆದ್ದ ತಂಡಗಳಿಗೆ ಬಿಸಿಸಿಐ ಸನ್ಮಾನ



ಪುರುಷರ ಟಿ20 ವಿಶ್ವಕಪ್ ಚಾಂಪಿಯನ್ಸ್



ಚಾಂಪಿಯನ್ಸ್ ಟ್ರೋಫಿ ಚಾಂಪಿಯನ್ಸ್



ಮಹಿಳಾ ಏಕದಿನ ವಿಶ್ವಕಪ್ ಚಾಂಪಿಯನ್ಸ್



ಅಂಡರ್-19 ಏಕದಿನ ವಿಶ್ವಕಪ್ ಚಾಂಪಿಯನ್ಸ್



ಕಪ್ ವಿಜೇತ ನಾಯಕರು

ಹೊಸದಿಲ್ಲಿ: ದಿಲ್ಲಿಯಲ್ಲಿ ನಡೆದ ಬಿಸಿಸಿಐ ನಮನ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ವಿಶ್ವಕಪ್ ಗೆದ್ದ ಭಾರತೀಯ ತಂಡಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸನ್ಮಾನಿಸಿದೆ.

ಕ್ರಿಕೆಟ್‌ನಲ್ಲಿ ಭಾರತ 2025-26ರಲ್ಲಿ ಹೆಚ್ಚು ಸಾಧನೆಗಳನ್ನು ಮಾಡಿದ್ದು, ಈ ಬಗ್ಗೆ ಶ್ಲಾಘಿಸಿದ ಬಿಸಿಸಿಐ ಅಂಡರ್-19 ತಂಡ, ಏಕದಿನ ವಿಶ್ವಕಪ್ ಗೆದ್ದ ಮಹಿಳೆಯರ ಕ್ರಿಕೆಟ್ ತಂಡ ಹಾಗೂ ಟಿ20 ವಿಶ್ವಕಪ್ ಗೆದ್ದ ತಂಡಗಳನ್ನು ಸನ್ಮಾನಿಸಿತು.

ಕಳೆದ ವರ್ಷ ಭಾರತದಲ್ಲೇ ನಡೆದಿದ್ದ ಮಹಿಳೆಯರ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆದ್ದ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ಮಹಿಳಾ ತಂಡ ಇತಿಹಾಸ ಬರೆದಿತ್ತು. ವರ್ಷಾಂತ್ಯದಲ್ಲಿ ನಡೆದಿದ್ದ ಅಂಡರ್-19 ವಿಶ್ವಕಪ್ ಪಂದ್ಯಾವಳಿಯಲ್ಲಿ ಆಯುಷ್ ಮಾತ್ರೆ ನೇತೃತ್ವದ ಭಾರತ ತಂಡ ವಿಶ್ವಕಪ್ ಗೆದ್ದು ಬೀಗಿತ್ತು. ಕಳೆದ ವಾರವಷ್ಟೇ ಮುಕ್ತಾಯಗೊಂಡಿರುವ ಪುರುಷರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಕಪ್ ಗೆದ್ದಿತ್ತು. ಈ ಮೂರೂ ತಂಡಗಳಿಗೆ ಬಿಸಿಸಿಐ ಸನ್ಮಾನಿಸಿದೆ.

ಸ್ವದೇಶಕ್ಕೆ ಇರಾನಿ ಆಟಗಾರ್ತಿಯರು

ಪರ್ತ್: ಇರಾನಿ ಬೆಂಬಲಿಗರು ದಾಳಿ ಮಾಡಲೆತ್ನಿಸಿದ ನಂತರ ಆಸ್ಟ್ರೇಲಿಯಾದಲ್ಲೇ ಆಶ್ರಯ ಪಡೆದಿದ್ದ ಮೂವರು ಇರಾನಿ ಫುಟ್‌ಬಾಲ್ ಆಟಗಾರ್ತಿಯರು ತಮ್ಮ ದೇಶಕ್ಕೆ ಮರಳಿದರು. ಏಷ್ಯಾಕಪ್ ಫುಟ್‌ಬಾಲ್ ಪಂದ್ಯಾವಳಿ ಆಸ್ಟ್ರೇಲಿಯಾದಲ್ಲಿ ನಡೆದಿತ್ತು. ಈ ಕೂಟದಲ್ಲಿ ಇರಾನ್ ಕೂಡ ಭಾಗವಹಿಸಿ ಸೋತು ಹೊರಬಂದಿತ್ತು. ಆದರೆ ಮೊದಲನೇ ಪಂದ್ಯದಲ್ಲಿ ಇರಾನಿ ಪಡೆಯ ಮೂವರು ಆಟಗಾರ್ತಿಯರು ಪ್ರತಿಭಟನೆ ರೂಪವಾಗಿ ಇರಾನ್‌ನ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದರು. ಅಲ್ಲಿನ ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಪ್ರತಿಭಟನೆ ನಡೆಸಲೆತ್ನಿಸಿದ್ದರು ಎಂಬ ವರದಿಗಳಿವೆ. ಹೀಗೆ ಮಾಡಿರುವುದಕ್ಕೆ ಹತಾಶಗೊಂಡಿದ್ದ ಆಸ್ಟ್ರೇಲಿಯಾದಲ್ಲಿನ ಇರಾನಿ ಬೆಂಬಲಿಗರು, ಆಟಗಾರರ ಹೋಟೆಲಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಸುರಕ್ಷತಾ ಕ್ರಮವಾಗಿ ಆಸ್ಟ್ರೇಲಿಯಾ ಆ ಆಟಗಾರ್ತಿಯರನ್ನು ತನ್ನಲ್ಲೇ ಉಳಿಸಿಕೊಂಡಿತ್ತು. ಸೇಫ್ ಹೌಸ್‌ಗೆ ಕಳುಹಿಸಿತ್ತು. ಆದರೆ ಪರಿಸ್ಥಿತಿ ಸುಧಾರಿಸಿಕೊಂಡಿರುವ ನಂತರ ಮೂವರೂ ಆಟಗಾರ್ತಿಯರನ್ನು ಬಿಡುಗಡೆ ಮಾಡಿದೆ. ಇರಾನ್ ಫುಟ್‌ಬಾಲ್ ಸಂಸ್ಥೆ ಮೂವರೂ ಆಟಗಾರ್ತಿಯರ ಹೆಸರನ್ನು ಬಹಿರಂಗಪಡಿಸಿದ್ದು, ಮೊನಾ ಹಮೌದಿ, ಜಹ್ರಾ ಸಬಾರ್ಲಿ ಮತ್ತು ಜಹ್ರಾ ಮೇಷ್ಟೆಕರ್ ಎಂದು ಗುರುತಿಸಿದೆ. ಆಟಗಾರ್ತಿಯರು ಮಲೇಷ್ಯಾಗೆ ಅಲ್ಲಿಂದ ಪೂರ್ತಿ ತಂಡ ತೆಹ್ರಾನ್ ಮೂಲಕ ಸ್ವದೇಶಕ್ಕೆ ತಲುಪಲಿದೆ ಎಂದು ಹೇಳಲಾಗಿದೆ.



- ಸೇಫ್ ಹೌಸ್‌ನಲ್ಲಿದ್ದ ಮೂವರು
- ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದ ವಿವಾದ

ಕೊಚ್ಚಿಯಲ್ಲಿ ಫುಟ್ಬಾಲ್ ಏಷ್ಯಾಕಪ್ ಅರ್ಹತಾ ಸುತ್ತು


ಕೊಚ್ಚಿ: ಭಾರತದ ಹಿರಿಯ ಪುರುಷರ ಫುಟ್ಬಾಲ್ ತಂಡ ಏಷ್ಯಾಕಪ್ 2027 ಅರ್ಹತಾ ಸುತ್ತಿನ ಕೊನೆಯ ಪಂದ್ಯವನ್ನು ಮಾರ್ಚ್ 31ರಂದು ಕೊಚ್ಚಿಯ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಹಾಂಗ್ ಕಾಂಗ್ ವಿರುದ್ಧ ಆಡಲಿದೆ.

ಈ ಪಂದ್ಯ ಕೊಚ್ಚಿ ಮೈದಾನದಲ್ಲಿ ಭಾರತೀಯ ತಂಡಕ್ಕೆ ವಿಶೇಷವಾಗಿದ್ದು, ಸುಮಾರು 10 ವರ್ಷಗಳ ನಂತರ ಇಲ್ಲಿ ಹಿರಿಯ ಪುರುಷರ ತಂಡದ ಪಂದ್ಯ ನಡೆಯಲಿದೆ. 2016 ಮಾರ್ಚ್‌ನಲ್ಲಿ ಇದೇ ಮೈದಾನದಲ್ಲಿ ಭಾರತ ತುರ್ಕ್ಮೆನಿಸ್ತಾನ್ ವಿರುದ್ಧ ವಿಶ್ವಕಪ್ ಅರ್ಹತಾ ಪಂದ್ಯ ಆಡಿತ್ತು. ಅದು ಕೇರಳದಲ್ಲಿ ಭಾರತೀಯ ತಂಡ ಆಡಿದ ಕೊನೆಯ ಪಂದ್ಯವಾಗಿತ್ತು. ಈ ಬಾರಿ ಏಷ್ಯಾ ಕಪ್ 2027 ಅರ್ಹತಾ ಸುತ್ತಿನಲ್ಲಿ ಭಾರತ ಈಗಾಗಲೇ ಮುಂದಿನ ಹಂತಕ್ಕೆ ಹೋಗುವ ಅವಕಾಶ ಕಳೆದುಕೊಂಡಿದೆ. ಆದರೂ ಅಂತಿಮ ಪಂದ್ಯದಲ್ಲಿ ಗೆಲುವಿನೊಂದಿಗೆ ಅಭಿಯಾನವನ್ನು ಮುಕ್ತಾಯಗೊಳಿಸುವುದು ತಂಡದ ಗುರಿಯಾಗಿದೆ. ಈ ಪಂದ್ಯದಲ್ಲಿ ಎರಡೂ ತಂಡಗಳು ಟೂರ್ನಿಯಿಂದ ಹೊರಬಿದ್ದಿರುವುದರಿಂದ ಫಲಿತಾಂಶ ಅರ್ಹತೆಯ ದೃಷ್ಟಿಯಿಂದ ಮಹತ್ವ ಹೊಂದಿಲ್ಲ. ಆದರೆ ಅಂತರರಾಷ್ಟ್ರೀಯ ಶ್ರೇಯಾಂಕ ಅಂಕಗಳು ಲಭ್ಯವಿರುವುದರಿಂದ ಪಂದ್ಯ ಇನ್ನೂ ಮಹತ್ವ ಪಡೆದುಕೊಂಡಿದೆ. ಉತ್ತಮ ಪ್ರದರ್ಶನ ನೀಡುವುದರಿಂದ ವಿಶ್ವ ಶ್ರೇಯಾಂಕದಲ್ಲಿ ಸುಧಾರಣೆ ಸಾಧಿಸಲು ಭಾರತ ಪ್ರಯತ್ನಿಸಲಿದೆ. ಈ ಅರ್ಹತಾ ಸುತ್ತಿನ ಅಂತಿಮ ಹಂತದಲ್ಲಿ ಭಾರತ ಮೂರು ವಿಭಿನ್ನ ತವರು ಮೈದಾನಗಳಲ್ಲಿ ಪಂದ್ಯಗಳನ್ನು ಆಡುತ್ತಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಬಾಂಗ್ಲಾದೇಶ ವಿರುದ್ಧದ ಪಂದ್ಯವನ್ನು ಶಿಲ್ಲಾಂಗ್ ಆತಿಥ್ಯ ವಹಿಸಿತ್ತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಸಿಂಗಾಪುರ್ ವಿರುದ್ಧದ ಪಂದ್ಯವನ್ನು ಮಾರ್ಗಾವ್‌ನಲ್ಲಿ ನಡೆಸಲಾಗಿತ್ತು. ಈಗ ಕೊಚ್ಚಿ ಮೂರನೇ ತವರು ಮೈದಾನವಾಗಿ ಆತಿಥ್ಯ ವಹಿಸುತ್ತಿದೆ.



ಪದಬಂಧ 5925

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಹಿತವಾಗಿ ನಡೆದುಕೊಳ್ಳುವವನು (5)
5.ತೀಕ್ಷ್ಣ-ಭಯಂಕರವಾದುದು ತಿರುಗಿದೆ (2)
6.ಹೊಸದಾಗಿ ಕರು ಹಾಕಿದ ಹಸು (2)
7.ಜಗಳ-ಹೊಡೆದಾಟ(3)
9.ಅವನು ನಿಂತದ್ದು ಈ ಭೂಮಿಯ ಮೇಲೆ (3)
11.ಕಾದಿರುವಂತೆ ಮಾಡುವುದು ತಿರುಗಿದೆ (3)
13.ಮಂದಿಗೆ ಮೊದಲು ಕಂಡ ತಾಯಿ (3)
15.ಬಲವನ್ನು ಉಪಯೋಗಿಸಿದ ರಾಮಪುತ್ರ (2)
16. ಉಗ್ರ ದೇವತೆಯಿಲ್ಲಿ ತಿರುಗಿದ್ದಾಳೆ (2)
17.ಕರಾರುವಾಕ್ಕಾಗಿ ನಡೆಯುವಂತೆ ಸರಿಹೊಂದಿಸು (5)

ಮೇಲಿನಿಂದ ಕೆಳಕ್ಕೆ
1.ಆಕೆಯ ಕರ್ಕಶ ದನಿಯಲ್ಲಿಯೂ ಸೆಳೆತವಿದೆ (4)
2.ಸಿಕ್ಕ ಕೃಪೆ-ಆಶೀರ್ವಾದವಿದು (4)
3.ಅಗದ ನಡುವಿನ ಪ್ರೇಮ ತಲೆಕೆಳಗಾಗಿದೆ (4)
4.ಮಾಂಸಮಿಶ್ರಿತವಾದ ಕಲಸನ್ನ (4)
8.ಹಿಂದಿ ಭಾಷೆಯಲ್ಲಿ ಜಗಳ (3)
10.ಅಂದು ಬಂದವನ ಮುಖ (3)
11.ಒಳ್ಳೆಯ ಇತಿಹಾಸ ಹೊಂದಿರುವ ವ್ಯಕ್ತಿ (4)
12.ಗತಿಶೀಲವಾದ ಸಮಯ (4)
13.ಮಾಯಿ ನಡುವೆ ಇರುವ ಸಂಗ್ರಹಿಸು (4)
14.ನೋವು ಕಡೆಯಲ್ಲಿರುವ ಅರಿಕೆ (4)

5924 ಉತ್ತರ

ಎಡದಿಂದ ಬಲಕ್ಕೆ:
2.ನಮನ 5.ವಿಧ 7.ಅಕ್ಷ
8.ತಂಬೂರಿ 9.ಹಸನು
10.ವಾಮನ 12.ಬೇಸರ
13.ಖೇದ 14.ಹಣ
16.ಹರಳು

ಮೇಲಿನಿಂದ ಕೆಳಕ್ಕೆ:
1.ಕ್ರೋದಾಂಧ 2.ನರಹರಿ
3.ನವಗ್ರಹ 4.ಸಮಕ್ಷ
6.ವಿತಂಡವಾದ
7.ಅನುಕರಣ
11.ಹನುಮಾನ
12.ಬೇನೆಬೀಳು
13.ಖೇಚರ 15.ಹಲಗೆ

ಉತ್ಪಾದನೆ, ಪರಿವರ್ತನೆ ಮತ್ತು ವೈವಿಧ್ಯೀಕರಣ: ಭಾರತದ ಇಂಧನ ವ್ಯವಸ್ಥೆಯ ಭದ್ರ ಬುನಾದಿ

ಇಂಧನ ಕ್ಷೇತ್ರದಲ್ಲಿನ ರಚನಾತ್ಮಕ ಬದಲಾವಣೆಗಳು ಸುಗಮವಾದ ಕಾಲಘಟ್ಟದಲ್ಲಿ ಸಂಭವಿಸುವುದು ವಿರಳ. ಯಾವುದಾದರೂ ಬಿಕ್ಕಟ್ಟು ಎದುರಾಗಿ, ಕ್ರಮ ಕೈಗೊಳ್ಳದಿದ್ದರೆ ಆಗುವ ನಷ್ಟವು ಅತಿಯಾದಾಗ ಮಾತ್ರ ಇಂತಹ ಬದಲಾವಣೆಗಳು ಅನಿವಾರ್ಯವಾಗುತ್ತವೆ. ಆದರೆ, ಕಳೆದ 11 ವರ್ಷಗಳಲ್ಲಿ ಮೋದಿ ಸರ್ಕಾರವು ಇದಕ್ಕೆ ಭಿನ್ನವಾದ ಹಾದಿ ಆರಿಸಿಕೊಂಡಿದೆ. ಯಾವುದೇ ತುರ್ತು ಪರಿಸ್ಥಿತಿ ಇಲ್ಲದಿದ್ದಾಗಲೂ ಇಂಧನ ವಲಯದಲ್ಲಿ ದೀರ್ಘಕಾಲಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಈ ಮುನ್ನೆಚ್ಚರಿಕೆಯ ಕ್ರಮಗಳು ಜಾಗತಿಕ ಪೂರೈಕೆ ಸರಪಳಿಯಲ್ಲಿ ಉಂಟಾಗುವ ಏರಿಳಿತಗಳನ್ನು ತಡೆದುಕೊಳ್ಳುವ ಬಲಿಷ್ಠ ಸಾಮರ್ಥ್ಯವನ್ನು ಭಾರತಕ್ಕೆ ಒದಗಿಸಿವೆ. ದೇಶೀಯ ಉತ್ಪಾದನೆಯ ವಿಸ್ತರಣೆ, ಹೊಸ ಇಂಧನ ಮೂಲಗಳಿಗೆ ವ್ಯವಸ್ಥಿತ ಪರಿವರ್ತನೆ ಮತ್ತು ಪೂರೈಕೆಯ ಮೂಲಗಳ ವೈವಿಧ್ಯೀಕರಣದ ಮೂಲಕ ಮೋದಿ ಸರ್ಕಾರವು ಇಂಧನ ಭದ್ರತೆಯನ್ನು ಖಾತರಿಪಡಿಸಿದೆ ಮತ್ತು ಬಾಹ್ಯ ಆಘಾತಗಳಿಂದ ದೇಶದ ಮೇಲಿನ ಪರಿಣಾಮವನ್ನು ಯಶಸ್ವಿಯಾಗಿ ತಗ್ಗಿಸಿದೆ.

ಭಾರತವು ಸಾಗಬೇಕಾದ ಹಾದಿ ಎಂದಿಗೂ ಅಸ್ಪಷ್ಟವಾಗಿರಲಿಲ್ಲ; ಅದಕ್ಕೆ ಬೇಕಿದ್ದುದು ಆ ಹಾದಿಯಲ್ಲಿ ಸ್ಥಿರವಾಗಿ ಸಾಗುವ 'ರಾಜಕೀಯ ಇಚ್ಛಾಶಕ್ತಿ' ಮಾತ್ರ. ಕಳೆದ ಒಂದು ದಶಕದಲ್ಲಿ ಮೋದಿ ಸರ್ಕಾರವು ಅಂತಹ ಬದ್ಧತೆಯನ್ನೇ ತೋರಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಅವರಿಗೆ ಉತ್ತರದಾಯಿಯಾಗಿರುವ ಆಡಳಿತವನ್ನೇ ಸರ್ಕಾರವು ತನ್ನ ಆದ್ಯತೆಯನ್ನಾಗಿಸಿಕೊಂಡಿತು. ಈ ಇಡೀ ಕಾರ್ಯತಂತ್ರವು ಮೂರು ಮುಖ್ಯ ಸ್ತಂಭಗಳ ಮೇಲೆ ನಿಂತಿದ್ದು, ಪ್ರತಿಯೊಂದು ಸ್ತಂಭವೂ ಸರ್ಕಾರದ ಕಡೆಯಿಂದ ಭಿನ್ನವಾದ ಮತ್ತು ಗಟ್ಟಿಯಾದ ಬದ್ಧತೆಯನ್ನು ನಿರೀಕ್ಷಿಸಿದ್ದವು.

ಎಥೆನಾಲ್ ಮಿಶ್ರಣದ ಪ್ರಭಾವ: ಮೊದಲನೆಯ ಸ್ತಂಭ 'ದೇಶೀಯ ಉತ್ಪಾದನೆ'. ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುವ ಪ್ರಕ್ರಿಯೆ 2001ರಲ್ಲೇ ಪ್ರಾಯೋಗಿಕ ಯೋಜನೆಯಾಗಿ ಆರಂಭವಾಗಿತ್ತು. ಆದರೆ ದಶಕಗಳ ಕಾಲ ಭಾರತವು ಈ ನಿಟ್ಟಿನಲ್ಲಿ ಯಾವುದೇ ಗಣನೀಯ ಪ್ರಗತಿ ಕಾಣದೆ, ಎಥೆನಾಲ್ ಉತ್ಪಾದನೆಯು ಕುಂಠಿತವಾಗಿತ್ತು. 2014ರ ನಂತರವಷ್ಟೇ, ಸರಣಿ ಸಮಗ್ರ ಸುಧಾರಣೆಗಳ ಮೂಲಕ ಈ ಉಪಕ್ರಮದ ನೈಜ ಸಾಮರ್ಥ್ಯವನ್ನು ಅನಾವರಣಗೊಳಿಸಲು ಭಾರತಕ್ಕೆ ಸಾಧ್ಯವಾಯಿತು. ಇಂಧನ ಭದ್ರತೆಯನ್ನು ಬಲಪಡಿಸಲು, ಹವಾಮಾನ ಬದಲಾವಣೆಯನ್ನು ಎದುರಿಸಲು ಮತ್ತು ಗ್ರಾಮೀಣ ಆರ್ಥಿಕತೆಗೆ ಚೈತನ್ಯ ನೀಡಲು ಮೋದಿ ಸರ್ಕಾರವು ಬೃಹತ್ ಸುಧಾರಣಾ ಕ್ರಮಗಳನ್ನು ಕೈಗೊಂಡಿತು. 'ಎಥೆನಾಲ್ ಮಿಶ್ರಣ ಕಾರ್ಯಕ್ರಮ'ದ (ಇಬಿಪಿ) ಅಡಿಯಲ್ಲಿ ಪೆಟ್ರೋಲ್ ನಲ್ಲಿ ಶೇ. 20 ರಷ್ಟು ಎಥೆನಾಲ್ ಬೆರೆಸುವ ಗುರಿಯನ್ನು ಆರಂಭದಲ್ಲಿ 2030ಕ್ಕೆ ನಿಗದಿಪಡಿಸಲಾಗಿತ್ತು.

ಆದರೆ, 2020ರಲ್ಲಿ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು (ಸಿಸಿಇಎ) ಈ ಗುರಿಯನ್ನು ಐದು ವರ್ಷ ಮುಂಚಿತವಾಗಿ ಅಂದರೆ 2025ಕ್ಕೇ ಅಂತಿಮಗೊಳಿಸಿತು. ಈ ನೀತಿಬದ್ಧ ನಿರ್ಧಾರಗಳ ಫಲವಾಗಿ, 2014ರಲ್ಲಿ ಕೇವಲ ಶೇ. 1.5ರಷ್ಟಿದ್ದ ಎಥೆನಾಲ್ ಮಿಶ್ರಣದ ಪ್ರಮಾಣವು 2025ರ ವೇಳೆಗೆ ಶೇ. 20ಕ್ಕೆ ಏರಿಕೆಯಾಗಿದೆ. ಇದು ಕಳೆದ 11 ವರ್ಷಗಳಲ್ಲಿ ಕಂಡ 13 ಪಟ್ಟು ಭಾರಿ ಹೆಚ್ಚಳವಾಗಿದೆ. ಅಷ್ಟೇ ಅಲ್ಲದೆ, ಎಥೆನಾಲ್ ಉತ್ಪಾದನೆಯು 2014ರಲ್ಲಿದ್ದ 38 ಕೋಟಿ ಲೀಟರ್‌ಗಳಿಂದ ಜೂನ್ 2025ರ ವೇಳೆಗೆ 661.1 ಕೋಟಿ ಲೀಟರ್ ಗಳಿಗೆ ಜಿಗಿದಿದೆ. ಈ ಶೇ. 20 ಎಥೆನಾಲ್ ಮಿಶ್ರಣ ಕಾರ್ಯಕ್ರಮವು ಈಗ ವಾರ್ಷಿಕವಾಗಿ ಸುಮಾರು 44 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲದ ಬಳಕೆಯನ್ನು ಉಳಿಸುತ್ತಿದೆ.



ಇವಿ ಬಳಕೆ ಹೆಚ್ಚಳ: ಇಂಧನ ಭದ್ರತೆಯ ಎರಡನೆಯ ಸ್ತಂಭ 'ಇಂಧನ ಪರಿವರ್ತನೆಯನ್ನು ಸಮರ್ಪಕವಾಗಿ ಜಾರಿಗೆ ತರುವುದು'. ದೇಶದ ಎಲೆಕ್ಟ್ರಿಕ್ ವಾಹನ (ಇವಿ) ಉದ್ಯಮದ ಅಭಿವೃದ್ಧಿಗೆ ಮೋದಿ ಸರ್ಕಾರವು ಎಲ್ಲಾ ಹಂತಗಳಲ್ಲೂ ಬೆಂಬಲ ನೀಡಿದೆ. ಆಟೋಮೊಬೈಲ್ ವಲಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಿದ್ದರಿಂದ, 4 ವರ್ಷಗಳಲ್ಲಿ ಈ ಕ್ಷೇತ್ರವು ಸುಮಾರು 36 ಬಿಲಿಯನ್ ಡಾಲರ್ ಹೂಡಿಕೆ ಆಕರ್ಷಿಸಿದೆ. ತಾಂತ್ರಿಕ ಆವಿಷ್ಕಾರಗಳನ್ನು ಉತ್ತೇಜಿಸಲು ಮತ್ತು ವಾಹನ ಉತ್ಪಾದನಾ ವಲಯದಲ್ಲಿ ಪೂರೈಕೆ ಸರಪಳಿಯನ್ನು ಬಲಪಡಿಸಲು ವಿವಿಧ ಯೋಜನೆಗಳನ್ನು ಜಾರಿಗೆ ತರಲಾಯಿತು. ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳ ಬಳಕೆಯನ್ನು ಹೆಚ್ಚಿಸಲು 2015 ರಲ್ಲಿ 'ಫೇಮ್-1' ಯೋಜನೆಯನ್ನು ಅಧಿಕೃತವಾಗಿ ಆರಂಭಿಸಲಾಯಿತು.

ಮೊದಲ ಹಂತದಲ್ಲಿ, 2.78 ಲಕ್ಷ ಎಲೆಕ್ಟ್ರಿಕ್ ವಾಹನಗಳು ರಸ್ತೆಗಿಳಿದವು, ಇದರಿಂದ ಸರಿಸುಮಾರು 59 ಮಿಲಿಯನ್ ಲೀಟರ್ ಇಂಧನ ಉಳಿತಾಯವಾಯಿತು. 'ಫೇಮ್-1' ಯೋಜನೆಯ ಯಶಸ್ಸು ಮತ್ತು ಅನುಭವದ ಆಧಾರದ ಮೇಲೆ, 2019 ರಲ್ಲಿ ಇದರ ಎರಡನೇ ಹಂತವನ್ನು (ಫೇಮ್-ಐಐ) ಆರಂಭಿಸಲಾಯಿತು. ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಬೆಲೆಯನ್ನು ನೇರವಾಗಿ ಕಡಿತಗೊಳಿಸುವ ಮೂಲಕ ಗ್ರಾಹಕರಿಗೆ ಆಕರ್ಷಕರಿಯಾಯಿತಿ ಮತ್ತು ಉತ್ತೇಜಕಗಳನ್ನು ನೀಡಲಾಯಿತು. ಇದರೊಂದಿಗೆ 16 ಲಕ್ಷ ಎಲೆಕ್ಟ್ರಿಕ್ ವಾಹನಗಳ ಖರೀದಿ ಮತ್ತು ಅಗತ್ಯ ಚಾರ್ಜಿಂಗ್ ಮೂಲಸೌಕರ್ಯಗಳ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಯಿತು, ಇದು ಒಟ್ಟಾರೆಯಾಗಿ 42.9 ಮಿಲಿಯನ್ ಲೀಟರ್ ಇಂಧನವನ್ನು ಉಳಿಸಲು ಸಹಕಾರಿಯಾಯಿತು. ಇದಲ್ಲದೆ, ಸರ್ಕಾರದ ಈ ಸತತ ಪ್ರಯತ್ನಗಳ ಫಲವಾಗಿ, 2019-20ಕ್ಕೆ ಹೋಲಿಸಿದರೆ 2023-24ನೇ ಸಾಲಿನಲ್ಲಿ ಭಾರತದಲ್ಲಿ ನೋಂದಾಯಿಸಲಾದ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆಯಲ್ಲಿ 9.7 ಪಟ್ಟು ಭಾರಿ ಹೆಚ್ಚಳ ಕಂಡುಬಂದಿದೆ. ಎಲೆಕ್ಟ್ರಿಕ್ ವಾಹನಗಳು ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು ಸರಿಯಾದ ದಿಕ್ಕಿನಲ್ಲಿಯೇ ಸಾಗುತ್ತಿವೆಯಾದರೂ, ಈ ಇಂಧನ ಪರಿವರ್ತನೆಯು 'ನಿರ್ಣಾಯಕ ಖನಿಜಗಳ' ಮೇಲಿನ ಅವಲಂಬನೆಯ ಸವಾಲನ್ನು ಹೊತ್ತುತಂದಿದೆ. ಈ ಅಪಾಯವನ್ನು ಮೊದಲೇ ಅರಿತ ಮೋದಿ ಸರ್ಕಾರ, ಇಂಧನ ಭದ್ರತೆಯಲ್ಲಿನ ಈ ದುರ್ಬಲತೆಯನ್ನು ಹೋಗಲಾಡಿಸಲು 'ರಾಷ್ಟ್ರೀಯ ನಿರ್ಣಾಯಕ ಖನಿಜ ಮಿಷನ್' ಅನ್ನು ಪ್ರಾರಂಭಿಸಿದೆ. ನಿರ್ಣಾಯಕ ಖನಿಜಗಳ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಭಾರತದ ಖನಿಜ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ.

ಪೂರೈಕೆ ಪಾಲುದಾರರ ವೈವಿಧ್ಯೀಕರಣ: ಇಂಧನ ಭದ್ರತೆಯ ಮೂರನೆಯ ಸ್ತಂಭ 'ಇಂಧನ ಮೂಲಗಳು ಮತ್ತು ಪೂರೈಕೆ ಪಾಲುದಾರರ ವೈವಿಧ್ಯೀಕರಣ'. ಪ್ರಧಾನಿ ನರೇಂದ್ರ ಮೋದಿ 'ಬಹು-ಪಕ್ಷೀಯ ಹಿತಾಸಕ್ತಿ' ಎಂಬ ರಾಜತಾಂತ್ರಿಕ ನೀತಿಯನ್ನು ಅನುಸರಿಸಿದರು. ಇದು ಭಾರತಕ್ಕೆ ಹಲವಾರು ರಾಷ್ಟ್ರಗಳೊಂದಿಗೆ ಏಕಕಾಲದಲ್ಲಿ ಆಳವಾದ ಮತ್ತು ಸಮಾನಾಂತರವಾದ ಸಂಬಂಧಗಳನ್ನು ಬೆಳೆಸಲು ಹಾಗೂ ದೇಶದ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗಿದೆ. ರಾಜತಾಂತ್ರಿಕ ಸಂಪರ್ಕದ ಫಲವಾಗಿ, ಕಚ್ಚಾ ತೈಲಕ್ಕಾಗಿ ಭಾರತವು ಅವಲಂಬಿಸಿರುವ ದೇಶಗಳ ಸಂಖ್ಯೆ ದಶಕದ ಹಿಂದಿನ 27 ರಿಂದ ಇಂದು 40ಕ್ಕೂ ಹೆಚ್ಚು ದೇಶಗಳಿಗೆ ವಿಸ್ತರಿಸಿದೆ.

ಈ ಎಲ್ಲಾ ಕ್ರಮಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಒಂದು ಉತ್ತಮ ಮಾರ್ಗವೆಂದರೆ, ಒಂದು ವೇಳೆ ಈ ಕ್ರಮಗಳನ್ನು ಕೈಗೊಳ್ಳದಿದ್ದರೆ ಪರಿಸ್ಥಿತಿ ಇಂದು ಹೇಗಿರುತ್ತಿತ್ತು ಎಂದು ಊಹಿಸುವುದು. ರಷ್ಯಾ-ಉಕ್ರೇನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಉದ್ವಿಗ್ನತೆಗಳಂತಹ ಘಟನೆಗಳು, ಜಾಗತಿಕ ಪೂರೈಕೆ ಸರಪಳಿಗಳು ಎಷ್ಟು ವೇಗವಾಗಿ ಅಸ್ತವ್ಯಸ್ತಗೊಳ್ಳಬಲ್ಲವು ಎಂಬುದನ್ನು ಪದೇ ಪದೇ ಸಾಬೀತುಪಡಿಸಿವೆ. ಉದಾಹರಣೆಗೆ, ಎಥೆನಾಲ್ ಮಿಶ್ರಣದಂತಹ ದೇಶೀಯ ಪರ್ಯಾಯಗಳ ವಿಸ್ತರಣೆಯನ್ನೇ ತೆಗೆದುಕೊಳ್ಳಿ; 2014 ರಿಂದ ಈವರೆಗೆ ಇದು 190 ಮಿಲಿಯನ್ ಮೆಟ್ರಿಕ್ ಟನ್ ಗೂ ಹೆಚ್ಚು ಕಚ್ಚಾ ತೈಲ ಆಮದನ್ನು ಮಿತಗೊಳಿಸಿದೆ ಮತ್ತು ಅಂದಾಜು 1.55 ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ವಿದೇಶಿ ವಿನಿಮಯವನ್ನು ಉಳಿಸಿದೆ. ಒಂದು ವೇಳೆ ಎಥೆನಾಲ್ ಮಿಶ್ರಣಕ್ಕೆ ಆದ್ಯತೆ ನೀಡದಿದ್ದಲ್ಲಿ, ಇಂತಹ ಜಾಗತಿಕ ಬಿಕ್ಕಟ್ಟುಗಳಿಗೆ ಭಾರತವು ಅತಿ ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಆ ಸನ್ನಿವೇಶದಲ್ಲಿ, ಜಾಗತಿಕ ಪೂರೈಕೆಯಲ್ಲಾಗುವ ಸಣ್ಣ ವ್ಯತ್ಯಯವೂ ಭಾರತದ ದೇಶೀಯ ಆರ್ಥಿಕತೆಯ ಮೇಲೆ ತೀವ್ರವಾದ ಒತ್ತಡವನ್ನು ಉಂಟುಮಾಡುತ್ತಿತ್ತು. ನೀತಿಗಳನ್ನು ಅನುಸರಿಸದಿದ್ದರೆ, ಜಾಗತಿಕ ಪೂರೈಕೆಯಲ್ಲಿನ ಅಡೆತಡೆಗಳು ಭಾರತದ ಇಂಧನ ವ್ಯವಸ್ಥೆಯಲ್ಲಿ ತೀವ್ರ ಅಸ್ಥಿರತೆಯನ್ನು ಉಂಟುಮಾಡುತ್ತಿದ್ದವು. ಭಾರತದಂತಹ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗೆ ಇದರ ಪರಿಣಾಮಗಳು ಅಕ್ಷರಶಃ 'ಹಾಹಾಕಾರ' ಅಥವಾ ತಲ್ಲಣಕ್ಕೆ ಕಾರಣವಾಗುವ ಸಾಧ್ಯತೆಯಿತ್ತು. ಆದರೆ, ಕಳೆದ ದಶಕದಲ್ಲಿ ಕೈಗೊಂಡ ಸುಧಾರಣೆಗಳು, ಭೌಗೋಳಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಭಾರತಕ್ಕೆ ತನ್ನ ಇಂಧನ ಅಗತ್ಯಗಳನ್ನು ನಿರ್ವಹಿಸುವಲ್ಲಿ ಹೆಚ್ಚಿನ ನಮ್ಯತೆಯನ್ನು ಒದಗಿಸಿವೆ. ಭಾರತದ ಇಂಧನ ಭದ್ರತೆಯು ಕೇವಲ ಒಂದು ಸಮುದ್ರ ಮಾರ್ಗದ ಪರಿಸ್ಥಿತಿಯನ್ನು ಅವಲಂಬಿಸಿ ಏರಿಳಿತ ಕಾಣುತ್ತಿದ್ದ ಕಾಲ ಈಗ ಮುಗಿದಿದೆ.ಯಾವುದೇ ಮಾರ್ಗದಲ್ಲಿ ಅಡೆತಡೆ ಉಂಟಾದರೂ, ಅದು ಕೇವಲ 'ಪೂರೈಕೆಯ ಹೊಂದಾಣಿಕೆ'ಗೆ ಕಾರಣವಾಗುತ್ತದೆಯೇ ಹೊರತು, ತುರ್ತು ಪರಿಸ್ಥಿತಿಯನ್ನಲ್ಲ. ಭಾರತೀಯ ತೈಲ ಸಂಸ್ಕರಣಾಗಾರಗಳು ಈಗ ಕೇವಲ ನಿಶ್ಚಿತ ದೇಶ ಅಥವಾ ನಿಶ್ಚಿತ ಮೂಲದ ಮೇಲೆ ಅವಲಂಬಿತವಾಗಿಲ್ಲ; ಈ ನಮ್ಯತೆಯೇ ದೇಶದ ಇಂಧನ ಭದ್ರತೆಯ ಪ್ರಮುಖ ಆಸ್ತಿಯಾಗಿದೆ. ಹಾರ್ಮುಜ್ ಜಲಸಂಧಿಯು ಇಂದಿಗೂ ಒಂದು ಪ್ರಮುಖ ಮಾರ್ಗವಾಗಿದ್ದರೂ, ಅಗತ್ಯಬಿದ್ದಲ್ಲಿ ಭಾರತವು ತನ್ನ ಹಡಗುಗಳನ್ನು ಮರುಮಾರ್ಗಗೊಳಿಸಿ ಇತರ ರಫ್ತುದಾರ ರಾಷ್ಟ್ರಗಳ ಕಡೆಗೆ ತನ್ನ ಕಾರ್ಯತಂತ್ರವನ್ನು ಬದಲಿಸುವ ಸಾಮರ್ಥ್ಯ ಹೊಂದಿದೆ. ಒಂದು ದಶಕದ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ, ಭಾರತವು ಜಾಗತಿಕ ಮಾರುಕಟ್ಟೆಯ ಅನಿಶ್ಚಿತತೆಗಳನ್ನು ನಿಭಾಯಿಸಲು ಅತ್ಯಂತ ಸದೃಢವಾದ ಸ್ಥಿತಿಯಲ್ಲಿದೆ. ಪೂರೈಕೆ ಸರಪಳಿಗಳು ಅನಿಶ್ಚಿತವಾಗಿರುವ ಇಂದಿನ ಜಗತ್ತಿನಲ್ಲಿ, ಇಂಧನ ಮೂಲಗಳು ಮತ್ತು ಪಾಲುದಾರಿಕೆಗಳ ಈ ವೈವಿಧ್ಯಮಯ ನೆಲೆಯು ಭಾರತದ ಇಂಧನ ಪೂರೈಕೆಯ ಸುಸ್ಥಿರತೆಗೆ ಪ್ರಬಲ ರಕ್ಷಣಾ ಕವಚವಾಗಿ ಮಾರ್ಪಟ್ಟಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಮಾಹಿತಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26

ಕಿರುಸುದ್ದಿ

ಸಮುದಾಯ ಭವನಕ್ಕೆ 20 ಲಕ್ಷ ರೂ. ಅನುದಾನ

ಮಂಡ್ಯ: ತಾಲೂಕಿನ ದುದ್ದ ಹೋಬಳಿಯ ಚಂದಗಾಲು ಗ್ರಾಮದ ಹಿರಿಯಮ್ಮದೇವಿ ಸಮುದಾಯ ಭವನದ ಮುಂದುವರಿದ ಕಾಮಗಾರಿಗೆ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಗುದ್ದಲಿ ಪೂಜೆ ನೆರವೇರಿಸಿದರು. ನಂತರ ಮಾತನಾಡಿದ ಅವರು ಮಂಡ್ಯ ಲೋಕಸಭಾ ಸದಸ್ಯ ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಅನುದಾನದಲ್ಲಿ 20 ಲಕ್ಷ ರೂ.ಬಿಡುಗಡೆ ಮಾಡಿದ್ದಾರೆ ಸಮುದಾಯ ಭವನದ ಕಾಮಗಾರಿ ಪ್ರಾರಂಭಿಸಿ, ಕೆಲಸ ನಿಲ್ಲಿಸುವುದು ಬೇಡ ಎಂದು ತಿಳಿಸಿದರು. ಎಚ್.ಡಿ.ಕುಮಾರಸ್ವಾಮಿ ಅವರನ್ನು ಚಂದಗಾಲು ಗ್ರಾಮಕ್ಕೆ ಕರೆದುಕೊಂಡು ಬಂದು ಸ್ಥಳ ಪರಿಶೀಲಿಸಿ ಮಾಸ್ಟರ್ ಪ್ಲಾನ್ ರೂಪಿಸಲಾಗುವುದು ಎಂದು ಹೇಳಿದರು. ಹಿರಿಯಮ್ಮದೇವಿ ವಿವಿಧೋದ್ದೇಶ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಸಿ.ಕೆ.ನಾಗರಾಜು ಮಾತನಾಡಿ ಹಿಂದುಳಿದ ವರ್ಗದ ಜನರು ವಾಸ ಮಾಡುವ ಈ ಪ್ರದೇಶದ ವಿವಿಧ ಗ್ರಾಮಗಳ ಜನರು ಮಂಗಳ ಕಾರ್ಯ ಮಾಡಲು ಸಮುದಾಯಭವನ ಸಹಕಾರಿಯಾಗಲಿದೆ ಎಂದರು. ಹಿರಿಯಮ್ಮ ದೇವಿ ಟ್ರಸ್ಟ್ ರಚನೆ ಮಾಡಿಕೊಂಡು ಟ್ರಸ್ಟ್ ಮೂಲಕ ಯುವಕರು, ಯುವತಿಯರು, ಮಹಿಳೆಯರಿಗೆ ವಿವಿಧ ತರಬೇತಿಗಳನ್ನು ಕೊಟ್ಟು ಅವರನ್ನು ಸ್ವಾವಲಂಬಿಗಳಾಗಿ ಬದುಕಲು ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಬಡವರು ತಮ್ಮ ಮಕ್ಕಳ ಮದುವೆಗಳನ್ನು ಮಾಡಲು ನಗರ ಪ್ರದೇಶಗಳಲ್ಲಿ ಅತಿ ಹೆಚ್ಚು ಹಣವನ್ನು ಸಮುದಾಯಭವನಗಳಿಗೆ ಕೊಡಬೇಕಾಗುತ್ತದೆ. ಆದ್ದರಿಂದ ಇಲ್ಲಿ ಸಮುದಾಯ ಭವನ ಆದರೆ ಈ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಂದ ಸಿಎಸ್ಆರ್ ಅನುದಾನ ಕೊಡಿಸಿಕೊಟ್ಟು ಸಮುದಾಯಭವನ ಪೂರ್ಣಗೊಳ್ಳಲು ಪುಟ್ಟರಾಜು ಅವರು ಅತಿ ಹೆಚ್ಚು ಕಾಳಜಿ ವಹಿಸಬೇಕು ಎಂದು ತಿಳಿಸಿದರು. ಗ್ರಾಮದ ಮುಖಂಡರಾದ ಜವರೇಗೌಡ, ನಿಂಗೇಗೌಡ,ಚಿಕ್ಕನಾಗೇಗೌಡ, ವಕೀಲ ಚಂದಗಾಲು ಶ್ರೀಧರ್, ಜೋಗಿಗೌಡ, ಪುಟ್ಟಣ್ಣ,ತಮ್ಮಣ್ಣ, ಉಮೇಶ್ ,ಗಂಗಾಧರಗೌಡ, ಸೇರಿದಂತೆ ಇತರರು ಭಾಗವಹಿಸಿದ್ದರು.

ನಾಲೆಯಲ್ಲಿ ನವಜಾತ ಶಿಶು ಶವ ಪತ್ತೆ

ಮೈಸೂರು: ನವಜಾತ ಶಿಶುವೊಂದನ್ನು ನಾಲೆಗೆ ಎಸೆದ ದುರಂತ ಘಟನೆ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನಗರ್ಲೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶ್ರೀ ಮಾಳೀಗೇಶ್ವರಿ ದೇವಾಲಯದ ಸಮೀಪದ ಚಿಕ್ಕ ನಾಲೆಯಲ್ಲಿ ಗಂಡು ಮಗುವಿನ ಮೃತದೇಹ ಪತ್ತೆಯಾಗಿದೆ. ಮಗುವಿಗೆ ಜನ್ಮ ನೀಡಿದ ತಾಯಿ, ಇಲ್ಲವೇ ಆಕೆಯ ಸಂಬಂಧಿಕರು ಶಿಶುವನ್ನು ನಾಲೆಗೆ ಎಸೆದು ಹೋಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ. ಮಗುವಿನ ಶವ ಕಂಡು ತಕ್ಷಣ ಸ್ಥಳೀಯರು ನೀಡಿದ ಮಾಹಿತಿ ಹಿನ್ನಲೆಯಲ್ಲಿ ಬಿಳಿಗೆರೆ ಪೊಲೀಸ್ ಠಾಣೆಯ ಪಿಎಸ್ಐ ಕರಿಬಸಪ್ಪ ಮತ್ತು ಸಿಡಿಪಿಒ ರಾಘವೇಂದ್ರ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಾಲೆಯಿಂದ ಶಿಶುವಿನ ಮೃತದೇಹವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಗುವನ್ನು ಎಸೆದಿದ್ದು ಯಾರು, ಯಾತಕ್ಕಾಗಿ ಎಸೆದರು ಎಂಬುದರ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಕರ್ತವ್ಯ ಲೋಪ : ಅಧಿಕಾರಿಗಳು ಅಮಾನತು

ಮೈಸೂರು: ಕರ್ತವ್ಯ ಲೋಪ ಎಸುಗಿದ ಆರೋಪದ ಮೇಲೆ ಜಿಲ್ಲೆಯ ಸಾಲಿಗ್ರಾಮ ನಾಡ ಕಚೇರಿಯ ಗ್ರಾಮ ಆಡಳಿತ ಅಧಿಕಾರಿಗಳಾದ ಶಶಿಕಾಂತ್ ಮತ್ತು ಅಶ್ವಿನಿ ಚನ್ನಪ್ಪ ಯಲಪಟ್ಟಿ ಹಾಗೂ ಸಾಲಿಗ್ರಾಮ ತಾಲ್ಲೂಕು ಕಚೇರಿಯ ದ್ವಿತೀಯ ದರ್ಜೆ ಸಹಾಯಕ ಎಂ.ಡಿ.ಆದಿ ಅವರುಗಳನ್ನು ಅಮಾನತು ಗೊಳಿಸಲಾಗಿದೆ. ಸಾಲಿಗ್ರಾಮ ತಾಲೂಕಿನ ಚಿಕ್ಕನಾಯಕನಹಳ್ಳಿ ಗ್ರಾಮದ ರಂಗೇಗೌಡ ಎಂಬವರು ಗ್ರಾಮದ ಸರ್ವೆ ನಂ.48ರಲ್ಲಿ 6 ಗುಂಟೆ ಜಮೀನನ್ನು ಶೇಖರೇಗೌಡ ಎಂಬವರಿಗೆ ಮಾರಾಟ ಮಾಡಲು ಅನುಮತಿಯನ್ನು ಕೋರಿ ದಿನಾಂಕ: 19-03-2021 ರಂದು ಅರ್ಜಿ ಸಲ್ಲಿಸಿದ್ದರು. ಸದರಿಯವರು ನಾಡಕಚೇರಿಯಲ್ಲಿ 11 ಇ ಸ್ಕೆಚ್ ಕೋರಿ 29-03-2021ರಂದು ಅರ್ಜಿ ಸಲ್ಲಿಸಿದ್ದರು. ಸದರಿ ಜಮೀನು ಆರ್‌ಟಿಸಿ ಕಾಲಂ ಮೂರು ಮತ್ತು ಒಂಬತ್ತರ ವಿಸ್ತೀರ್ಣ ತಾಳೆ ಇಲ್ಲದ ಕಾರಣ, ತಾಲ್ಲೂಕು ಕಚೇರಿಗೆ ಪರಿಶೀಲಿಸಿ, ಕಂದಾಯ ನಿರೀಕ್ಷಕರು ಕೃಷಿಯೇತರ ಚಟುವಟಿಕೆ ಮತ್ತು ವಸತಿ ಉದ್ದೇಶಕ್ಕಾಗಿ ಬಳಸಿರುವುದಿಲ್ಲವೆಂದು ವರದಿ ಸಲ್ಲಿಸಿದ್ದರು. ತಹಸಿಲ್ದಾರ್ ಅವರು ಆರ್‌ಟಿಸಿ ಕಲಂ 3 ಮತ್ತು 9 ವಿಸ್ತೀರ್ಣ ತಾಳೆ ಸಂಬಂಧ ಭೂಮಾಪಕರಿಗೆ ಅಳತೆಗೆ ಕ್ರಮವಹಿಸುವಂತೆ ವರ್ಗಾಯಿಸಿದ್ದು, ತಾಲೂಕು ಭೂಮಾಪಕರು ಅಳತೆ ಮಾಡಿ ವರದಿ ಸಲ್ಲಿಸಿ ಸಲ್ಲಿಸಿದ್ದರು. ತದನಂತರ ಸಾಲಿಗ್ರಾಮ ತಾಲ್ಲೂಕು ಕಚೇರಿಯಲ್ಲಿ ತಿದ್ದುಪಡಿಗೆ ಮುಂದಿನ ಕ್ರಮ ಆಗಿರುವುದಿಲ್ಲ ರಂಗೇಗೌಡರು 2025ರಲ್ಲಿ ಮತ್ತೊಮ್ಮೆ ಅರ್ಜಿ ಸಲ್ಲಿಸಿ ಸರ್ವೆ ನಂ 48ರಲ್ಲಿ 24 ಗುಂಟೆ ತಿದ್ದುಪಡಿ ಮಾಡಿ ಕೊಡುವಂತೆ ಕೋರಿದ್ದರು. ಅದರಂತೆ ರಾಜಸ್ವ ನಿರೀಕ್ಷಕರು ಆರ್‌ಟಿಸಿ ಕಲಂ 3 ಮತ್ತು ಒಂಬತ್ತರ ವಿಸ್ತೀರ್ಣ ತಾಳೆ ಇಲ್ಲದ ಕಾರಣ ಭೂಮಾಪಕರನ್ನು ನಿಯೋಜಿಸಲು ಕೋರಿದ್ದು, ತಾಲ್ಲೂಕು ಭೂಮಾಪಕರು ಅನುಭವದಂತೆ ಅಳತ ಮಾಡಿ ಗುರುತು ಮಾಡಿ, ವರದಿ ಸಲ್ಲಿಸಿದ್ದರು.



ಪಾಂಡವಪುರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಪೊಲೀಸ್ ಇಲಾಖೆಯ ಡಿ.ವಿ.ಚೈತ್ರಾ ಉದ್ಘಾಟಿಸಿದರು.

ಹೆಣ್ಣುಮಕ್ಕಳ ರಕ್ಷಣೆ ಅತ್ಯಗತ್ಯ

ಪಾಂಡವಪುರ: ಇತ್ತೀಚಿನ ಸಮಾಜದಲ್ಲಿ ಹೆಣ್ಣು ಮಕ್ಕಳ ರಕ್ಷಣೆ ಅತ್ಯಗತ್ಯ ಎಂದು ಪೊಲೀಸ್ ಇಲಾಖೆಯ ಡಿ.ವಿ.ಚೈತ್ರಾ, ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಾಂಡವಪುರ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಪಾಂಡವಪುರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಹಿಳೆಯರ ಬಗ್ಗೆ ಇರುವಂತಹ ವಿವಿಧ ಕಾನೂನುಗಳ ಬಗ್ಗೆ ಹೆಣ್ಣು ಮಕ್ಕಳು ಅರಿವು ಪಡೆದುಕೊಂಡು ಹೆಚ್ಚು ಜಾಗೃತಿ ವಹಿಸುವ ಅವಶ್ಯಕತೆ ಇದೆ ಎಂದರು. ಮೈಸೂರು ವಿಭಾಗೀಯ ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತೆ ಎಸ್.ತೇಜಸ್ವಿನಿ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಎಸ್.ಮಧುಸೂದನ್ ಅಧ್ಯಕ್ಷತೆ ವಹಿಸಿದ್ದರು. ಸಹ ಪ್ರಾಧ್ಯಾಪಕಿ ರಶ್ಮಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪೂರ್ಣಿಮಾ, ಮಂಡ್ಯ ವಿಶ್ವ ವಿದ್ಯಾನಿಲಯದ ಎನ್.ಎಸ್.ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಪ್ರಮೀಳಾ, ಕಾಲೇಜಿನ ಮಹಿಳಾ ಹಿತರಕ್ಷಣಾ ವೇದಿಕೆ ಸಂಚಾಲಕಿ ಡಾ.ಎಚ್.ಡಿ.ಕವಿತಾ, ಐಕ್ಯೂಎಸಿ ಘಟಕದ ಸಂಯೋಜಕ ಡಾ.ಟಿ.ಆರ್.ತ್ರೀಣೇಶ, ಗಣಕ ಯಂತ್ರ ವಿಭಾಗದ ಆಶಾರಾಣಿ, ಭವಾನಿ ಸೇರಿದಂತೆ ಇತರರು ಇದ್ದರು.



ಮೈಸೂರಿನ ದೇವರಾಜ್ ಅರಸು ಕಾಲೋನಿಯಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಟಿ.ಎಸ್ ಶ್ರೀವತ್ಸ ಚಾಲನೆ ನೀಡಿದರು. ವಾರ್ಡ್ ಅಧ್ಯಕ್ಷ ರಾಘವೇಂದ್ರ, ನಗರ ಪಾಲಿಕೆಯ ಮಾಜಿ ಸದಸ್ಯೆ ಶಾಂತಮ್ಮ ವಡಿವೆಲು, ಗೋಪಾಲ್ ರಾಜೇ ಅರಸ್ ಇದ್ದರು.

ಹೊಸ ಮದ್ದೂರು ಶಾಖಾ ನಾಲೆ, ಪಿಕಪ್ ನಾಲೆಗಳ ಆಧುನೀಕರಣ

ಅಭಿವೃದ್ಧಿಗೆ ₹100 ಕೋಟಿ

ಮಂಡ್ಯ: ತಾಲೂಕಿನ ಶಾಖಾ ನಾಲೆಗಳ ಆಧುನೀಕರಣಕ್ಕೆ 100 ಕೋಟಿ ರು. ಅನುದಾನ ಬಿಡುಗಡೆ ಮಾಡಿ ಸಚಿವ ಸಂಪುಟ ಅನುಮೋದನೆ ನೀಡಿರುವುದಾಗಿ ಶಾಸಕ ಪಿ.ರವಿಕುಮಾರ್ ಅವರು ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಅನುದಾನದಲ್ಲಿ ಕ್ಷೇತ್ರದ ಕೆರಗೋಡು, ಶಿಂಷಾ ಹಾಗೂ ಹೊಸ ಮದ್ದೂರು ಶಾಖಾ ನಾಲೆ, ಪಿಕಪ್ ನಾಲೆಗಳ ಆಧುನೀಕರಣ ಮಾಡಲಾಗುವುದು. ಶೀಘ್ರವೇ ಟೆಂಡರ್ ಕರೆದು ಎರಡು ತಿಂಗಳಲ್ಲಿ ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು.

ಕಳೆದ ಎರಡೂವರೆ ವರ್ಷದಲ್ಲಿ ನಾಲೆಗಳ ಆಧುನೀಕರಣಕ್ಕೆ 200 ಕೋಟಿ ರು. ಹಣ ಬಿಡುಗಡೆಗೊಳಿಸಲಾಗಿದೆ. ಇದರಲ್ಲಿ ಶೇ.80ರಷ್ಟು ಕಾಮಗಾರಿ ಮುಗಿದಿದೆ. ತಾಲೂಕಿನ ಬಸರಾಳು ವ್ಯಾಪ್ತಿಯ ಹೇಮಾವತಿ ನಾಲೆಯ ಆಧುನೀಕರಣವನ್ನು 350 ಕೋಟಿ ರು. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ. ಕಾಮಗಾರಿಗೆ ಸಮಗ್ರ ಕ್ರಿಯಾಯೋಜನೆ ತಯಾರಾಗಿದ್ದು ತಾಂತ್ರಿಕ ಅನುಮೋದನೆ ದೊರಕಿದೆ. ಶೀಘ್ರವೇ ಅನುಮೋದನೆಗಾಗಿ ಕ್ಯಾಬಿನೆಟ್ ಮುಂದೆ ತರಲಾಗುವುದು ಎಂದು ತಿಳಿಸಿದರು.

ಮಂಡ್ಯ ನಗರಕ್ಕೆ ಹೊಸ ರೂಪ ಕೊಡುವುದಕ್ಕೆ ನಿರ್ಧರಿಸಲಾಗಿದ್ದು ಡೆಲ್ಟಾ ಸಹಯೋಗದೊಂದಿಗೆ ಬೆಸಗರಹಳ್ಳಿ ರಾಮಣ್ಣ ವೃತ್ತದಿಂದ ಗೌರಿಶಂಕರ ಕಲ್ಯಾಣಮಂದಿರದವರೆಗೆ 6.50 ಕೋಟಿ ರು. ವೆಚ್ಚದಲ್ಲಿ ಫುಟ್‌ಪಾತ್ ಮತ್ತು ಸೈಕಲ್ ಬೇ ನಿರ್ಮಿಸಲಾಗುವುದು. 55 ಲಕ್ಷ ರು. ವೆಚ್ಚದಲ್ಲಿ ವೃತ್ತದ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ನಾಲ್ಕೈದು ದಿನಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ದೊರಕಲಿದೆ. 1.50 ಕೋಟಿ ರು. ವೆಚ್ಚದಲ್ಲಿ ಹೊಸಹಳ್ಳಿ ವೃತ್ತವನ್ನು ವಿದೇಶಿ

ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು. ನಗರಸಭೆ ಮತ್ತು ಡೆಲ್ಟಾ ಸಹಯೋಗದೊಂದಿಗೆ 4 ಕೋಟಿ ರು. ಅನುದಾನದಲ್ಲಿ ವಿ.ವಿ.ರಸ್ತೆಯನ್ನು ಸುಂದರವಾಗಿ ನಿರ್ಮಿಸಲಾಗುವುದು ಎಂದು ಹೇಳಿದರು. ಹೊಸ ಕಾರ್ಖಾನೆಗೆ ಅವಕಾಶವಿಲ್ಲ ನಗರ ವ್ಯಾಪ್ತಿಯೊಳಗೆ ಹೊಸ ಕಾರ್ಖಾನೆಯನ್ನು ನಿರ್ಮಾಣ ಮಾಡುವುದಕ್ಕೆ ಕಾನೂನಾತ್ಮಕವಾಗಿ ಸಾಕಷ್ಟು ಅಡೆ-ತಡೆಗಳು ಇರುವುದರಿಂದ ಹಾಲಿ ಇರುವ ಮಿಲ್‌ನ್ನು 5000 ಟನ್ ಅರೆಯುವಂತೆ ಸಿದ್ಧಪಡಿಸುವುದು. ಬಾಯ್ಲರ್ ಹೌಸ್‌ಗೆ ಸರ್ಕಾರ 60 ಕೋಟಿ ರು. ಹಣ ಮಂಜೂರು ಮಾಡಿ ರುವುದರಿಂದ ಸಮಸ್ಯೆಗಳು ಉದ್ಭವಿಸುವುದಿಲ್ಲ. ಮುಂದಿನ ದಿನಗಳಲ್ಲಿ ಕಾರ್ಖಾನೆ ಸುಗಮವಾಗಿ ಕಾರ್ಯಾಚರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿರುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೈಗಾರಿಕೆಗಳು ಎಷ್ಟು ಮುಖ್ಯವೋ ಕೃಷಿ ಅದಕ್ಕಿಂತ ಹೆಚ್ಚು ಮುಖ್ಯ. ಮುಂದಿನ ದಿನಗಳಲ್ಲಿ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಬರಲಿದೆ ಎಂದರು. ತಾಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು, ಬಿ.ಪಿ.ಪ್ರಕಾಶ್ ಇದ್ದರು.



ಭ್ರಷ್ಟಾಚಾರ ತಡೆಗೆ ಕ್ರಮ

ಮೈಷುಗರ್ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ-ಅವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜ್ಯಸರ್ಕಾರ ತನಿಖಾ ಸಮಿತಿಯನ್ನು ರಚನೆ ಮಾಡಿದೆ. ಸಮಿತಿ ವರದಿ ನೀಡಿದ ಬಳಿಕ ಅದರ ಬಗ್ಗೆ ಕ್ರಮ ಆಗಲಿದೆ. ಕಾರ್ಖಾನೆಗೆ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಇರುವುದರಿಂದ ಕಾರ್ಖಾನೆ ವಿಚಾರದಲ್ಲಿ ಮಧ್ಯಪ್ರವೇಶಿಸಲಾಗುವುದಿಲ್ಲ. ಕಾರ್ಖಾನೆ ಮತ್ತು ಸರ್ಕಾರದ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಬಹುದಷ್ಟೇ ಎಂದು ಸ್ಪಷ್ಟಪಡಿಸಿದರು.

ಅಭಿವೃದ್ಧಿಗೆ ಒತ್ತು ನೀಡಿ

» ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ಜಿ.ಎಚ್.ಕೃಷ್ಣರೆಡ್ಡಿ ಸಲಹೆ

ಮೈಸೂರು: ಸೌಹಾರ್ದ ಸಹಕಾರಿ ಸಂಘಗಳು ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ಜಿ.ಎಚ್.ಕೃಷ್ಣರೆಡ್ಡಿ ತಿಳಿಸಿದರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಕರ್ನಾಟಕರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು ಹಾಗೂ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತದ ಸಹಯೋಗದಲ್ಲಿ ಆಯೋಜಿಸಿದ್ದ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಸದಸ್ಯರು ಮತ್ತು ಪದಾಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸುವುದು ಅಗತ್ಯವಾಗಿದೆ. ಉತ್ತಮವಾಗಿ ಕೆಲಸ ಮಾಡುವವರನ್ನು ಗುರುತಿಸಿ ಅವರಿಗೆ ಜವಾಬ್ದಾರಿ ನೀಡಬೇಕು ಎಂದು ಹೇಳಿದರು.

ಸಹಕಾರಿ ಸಂಘಗಳ ಕಾರ್ಯ ಚಟುವಟಿಕೆಗಳಲ್ಲಿ ಪಾರದರ್ಶಕತೆ ಅತ್ಯಂತ ಮುಖ್ಯವಾಗಿದೆ ಹಲವು ವಿಷಯಗಳಲ್ಲಿ ಸದಸ್ಯರಿಗೆ ಸಮರ್ಪಕ ಮಾಹಿತಿ ದೊರೆಯದಿರುವುದರಿಂದ ಗೊಂದಲದ ಪರಿಸ್ಥಿತಿ ಉಂಟಾಗುತ್ತಿದೆ. ಸಹಕಾರಿ ಅನೇಕ ವಿಷಯಗಳನ್ನು ತಿಳಿಸಿಕೊಡುವುದು ಮುಖ್ಯವಾಗಿದೆ. ಸಂಸ್ಥೆಗಳ ಕಾರ್ಯವೈಖರಿಯಲ್ಲಿ ಕೆಲವೆಡೆ ಗೊಂದಲದ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನು ಸರಿಪಡಿಸಲು ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯವಿದೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಬೆಂಗಳೂರು ಹಾಗೂ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ಆರ್.ನಾರಾಯಣರಾವ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ಎಸ್.ಕೆ.ಮಂಜುನಾಥ್, ವೃತ್ತಿಪರ ನಿರ್ದೇಶಕ ಬಿ.ಮಹದೇವಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಐ.ಪಾಟೀಲ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ಮೈಸೂರು ಪ್ರಾಂತೀಯ ವ್ಯವಸ್ಥಾಪಕ ಗುರುರಾಜ್ ಬಂಗೇರ ಉಪಸ್ಥಿತರಿದ್ದರು.

ಸರ್ಕಾರಿ ಸೌಲಭ್ಯ ಸದ್ಬಳಕೆಯಾಗಲಿ

ಸೌಹಾರ್ದ ಸಹಕಾರಿ ಸಂಘಗಳು ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಒತ್ತು ನೀಡಬೇಕು. ಸದಸ್ಯರು ಸಂಘಗಳ ಮೂಲಕ ವಿವಿಧ ಸೌಲಭ್ಯಗಳನ್ನು ಪಡೆದು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೊಸ ಸಹಕಾರಿ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುವುದು ಮತ್ತು ಸಹಕಾರಿ ಚಳವಳಿಯನ್ನು ಮತ್ತಷ್ಟು ಬಲಪಡಿಸುವ ಕಾರ್ಯವಾಗಬೇಕು ಎಂದು ಸಲಹೆ ನೀಡಿದರು.

ಸ್ವಾರ್ಥ ರಾಜಕೀಯ ಬಿಡಿ

ನಾಗಮಂಗಲ: ಸರ್ಕಾರದಿಂದ ವಿಶಿಷ್ಟಚೇತನರಿಗೆ ನೀಡುವ ಅಂಗವಿಕಲರ ಬೈಕ್ ನಲ್ಲಿಯೂ ಕಾಂಗ್ರೆಸ್ ರಾಜಕೀಯ ಸ್ವಾರ್ಥ ಬಳಸಿಕೊಳ್ಳುತ್ತಿದೆ ಎಂದು ಮಾಜಿ ಶಾಸಕ ಕೆ.ಸುರೇಶ್ ಗೌಡ ಬೇಸರ ವ್ಯಕ್ತಪಡಿಸಿದರು. ವಿ.ಸಿ ಫಾರಂನಲ್ಲಿ ಮಾನ್ಯ ಕೇಂದ್ರ ಸಚಿವರಾದ ಹೆಚ್.ಡಿ ಕುಮಾರಸ್ವಾಮಿ ಹಾಗೂ ಮಾನ್ಸೂನ್ ಮಾಂಡವೀಯರವರಿಂದ ವಿಕಲಚೇತನರಿಗೆ ಎಲೆಕ್ಟ್ರಿಕಲ್ ವಾಹನವನ್ನು ನೀಡಿದ ನಂತರ ಮಾತನಾಡಿದ ಅವರು ಶಾಸಕ ಕೃಷಿ ಸಚಿವರಾದ ಎನ್ ಚಲುವರಾಯಸ್ವಾಮಿಯವರು ತಮ್ಮ ಶಾಸಕರ ಅನುದಾನದಲ್ಲಿ 24/25 ರಲ್ಲಿ ತಾಲ್ಲೂಕಿನ ಲ್ಲಿ ಅಂಗವಿಕಲರಿಗಾಗಿ ಬೈಕ್ ಗಳನ್ನು ನೀಡುವ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದ ಅಂಗವಿಕಲರನ್ನು ಮಾತ್ರ ಗುರುತಿಸಿ ಬೈಕ್ ನೀಡಿದ್ದರು ಇದು ಖಂಡನೀಯ ಅಂಗವಿಕಲರಲ್ಲಿ ರಾಜಕೀಯ ಬೆರೆಸುವುದು ಹಾಗೂ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಅವರ ರಾಜಕೀಯಕ್ಕೆ ಶೋಭೆ ತರುವುದಿಲ್ಲ , ಅಂಗವಿಕಲರು ಕಾಂಗ್ರೆಸ್ ಪಕ್ಷಕ್ಕೆ ಮತ ಚಲಾಯಿಸಿದರೆ ಮಾತ್ರ ಸವಲತ್ತುಗಳನ್ನು ನೀಡಬೇಕು ಎನ್ನುವ ಇವರ ಮನಸ್ಥಿತಿ ಕೆಟ್ಟ ರಾಜಕಾರಣ ತೋರಿಸುತ್ತಿದೆ. ಇಂದು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿಯವರು ಮಂಡ್ಯ ಜಿಲ್ಲಾದ್ಯಂತ ಪಕ್ಷಾತೀತವಾಗಿ 388 ಅಂಗವಿಕಲ ಫಲಾನುಭವಿಗಳಿಗೆ ಎಲೆಕ್ಟ್ರಿಕ್ ಸ್ಕೂಟರ್ ನೀಡಿ ಗೌರವಿಸಿದ್ದಾರೆ ಎಂದು ತಿಳಿಸಿದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರಿಂದ ಬೈಕ್ ಸ್ವೀಕರಿಸಿ ಮಾತನಾಡಿದ ಪಟ್ಟಣದ ವಿಕಲಚೇತನ ರುದ್ರೇಶ್ ನಾನು ನನ್ನ ಅಂಗವಿಕಲ ದಾಖಲೆಗಳನ್ನು ಕೃಷಿ ಸಚಿವರ ಕಛೇರಿಗೆ ನೀಡಿ ಕಳಕಳಿಯಿಂದ ಮನವಿ ಮಾಡಿಕೊಂಡಿದ್ದೆ ಬೈಕ್ ನೀಡುವ ಸಮಯದಲ್ಲಿ ನಾನು ಆರ್ ಎಸ್ ಎಸ್ ಕಾರ್ಯಕರ್ತ ಕಾಂಗ್ರೆಸ್ ಗೆ ಮತನೀಡಿಲ್ಲವೆಂಬ ಕಾರಣ ಒಡ್ಡಿ ಸ್ಥಳೀಯ ಕಾಂಗ್ರೆಸ್ ಮುಖಂಡರುಗಳ


ಮಾತಿಗೆ ಕಿವಿಗೊಟ್ಟು ಬೈಕ್ ನೀಡಲು ನಿರಾಕರಿಸಿದ್ದರು.ನಾನು ಅನಿವಾರ್ಯವಾಗಿ ಒಂದು ಕಾಲನ್ನು ಕಳೆದುಕೊಳ್ಳಬೇಕಾಯಿತು ನಾನು ಯಾವ ಪಕ್ಷದ ಅನುಯಾಯಿಯಾಗಿಲ್ಲಾ ಬಾಲ್ಯದಿಂದಲೂ ಆರ್ ಎಸ್ ಎಸ್ ಕಾರ್ಯಕರ್ತನಾಗಿದ್ದೇನೆ ಎಂದರು.



ಮಕ್ಕಳಿಗೆ ಸಂಸ್ಕೃತಿ ಕಲಿಸಿ: ಎಚ್.ಡಿ.ಕುಮಾರಸ್ವಾಮಿ

ಶ್ರೀರಂಗಪಟ್ಟಣ: ಮಕ್ಕಳಿಗೆ ಉತ್ತಮ ರೀತಿಯ ಸಂಸ್ಕಾರವನ್ನು ಕಲಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪೋಷಕರಿಗೆ ಕಿವಿಮಾತು ಹೇಳಿದರು.

ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಶ್ರೀ ಬಾಲಗಂಗಾಧರ ನಾಥ ಸ್ವಾಮೀಜಿಯವರ 81 ಜಯಂತ್ಯೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. ನಿರ್ಮಲಾನಂದನಾಥ ಸ್ವಾಮೀಜಿರವರು ಬಿಜಿಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಗಣಪತಿ ದೇವಸ್ಥಾನ ಹಾಗೂ ಬೃಹತ್ ಶಾಲಾ ಕಾಲೇಜುಗಳ ಕಟ್ಟಡ ಲೋಕಾರ್ಪಣೆ ಮಾಡಿರುವುದು ಸಮಾಜ ಕಲ್ಯಾಣಕ್ಕಾಗಿ, ಸಮಕಾಲೀನ ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಜೀವನ ಮಾಡುವಲ್ಲಿ, ಪ್ರಮುಖ ಶಿಕ್ಷಣವೂ ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮಿಜಿ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಬಿಜೆಪಿ ಮುಖಂಡ ಎಸ್. ಸಚ್ಚಿದಾನಂದ,ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ,ಜೆ.ಪಿ.ವೆಂಕಟಪ್ಪ, ನಿ.ನ್ಯಾಯ ಮೂರ್ತಿ ಎಂ.ಪುಟ್ಟೇಗೌಡ, ಶಾಲಾ ಜಾಗದದಾನಿ ಶ್ರೀನಿವಾಸ್ ಸುರೇಂದ್ರ, ಬೋರೇಗೌಡ ಇದ್ದರು.



ಸರ್ಕಾರಿ ಕಚೇರಿಗೆ ರೈತರು ನಿತ್ಯ ಅಲೆದಾಟ

» ಅಧಿಕಾರಿಗಳ ನಡೆಗೆ ಮಂಡಿಬೆಟ್ಟಹಳ್ಳಿ ಎಂ.ಎಸ್. ಮಂಜುನಾಥ್ ಖಂಡನೆ



ಪಾಂಡವಪುರ: ಸರ್ಕಾರಿ ಕಚೇರಿಗಳಲ್ಲಿ ಸಾಮಾನ್ಯ ಜನರು ತಮ್ಮ ಸಣ್ಣಪುಟ್ಟ ಕೆಲಸಕ್ಕೂ ದಿನನಿತ್ಯ ಅಲೆದಾಡಿ ಅಧಿಕಾರಿಗಳನ್ನು ಕಾಡಿ ಬೇಡಿ ಕೆಲಸ ಮಾಡಿಸಿಕೊಳ್ಳುವ ದುಸ್ಥಿತಿ ನಿರ್ಮಾಣವಾಗಿರುವುದನ್ನು ಕನ್ನಡ ಸೇನೆ ಜಿಲ್ಲಾ ಕಾರ್ಯಾಧ್ಯಕ್ಷ ಮಂಡಿಬೆಟ್ಟಹಳ್ಳಿ ಎಂ.ಎಸ್. ಮಂಜುನಾಥ್ ತೀವ್ರವಾಗಿ ಖಂಡಿಸಿದ್ದಾರೆ.

ಜನರ ತೆರಿಗೆ ಹಣದಿಂದ ಸಂಬಳ ಪಡೆಯುವ ಅಧಿಕಾರಿಗಳು ಕೆಲವರು,ತಮ್ಮ ಕರ್ತವ್ಯವನ್ನು ಮರೆತು ದರ್ಪ, ಅಹಂಕಾರ ಮತ್ತು ಬೇಜವಾಬ್ದಾರಿತನದಿಂದ ವರ್ತಿಸುತ್ತಿರುವುದು ಅತ್ಯಂತ ಖಂಡನೀಯ ಸಂಗತಿ. ಕಚೇರಿಗಳಿಗೆ ಬರುವ ಬಡವರು, ನಿರ್ಗತಿಕರು ಹಾಗೂ ಮಧ್ಯಮ ವರ್ಗದ ಜನರು ದಿನಗಟ್ಟಲೆ ಅಲೆದಾಡಿದರೂ ಅವರ ಸಮಸ್ಯೆ ಕೇಳುವವರೇ ಇಲ್ಲದಂತಾಗಿದೆ ಎಂದರು. ಕೆಲವು ನಿಷ್ಠಾವಂತ ಅಧಿಕಾರಿಗಳಿಗೆ ಸ್ವಾರ್ಥ,ರಾಜಕಾರಣಿಗಳ ಕಿರುಕುಳ, ವರ್ಗಾವಣೆಯ ಭಯ ನಿಲ್ಲಬೇಕು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ವಿಶೇಷವಾಗಿ ಕಂದಾಯ ಇಲಾಖೆಯಲ್ಲಿ ಜನರ ಸಮಸ್ಯೆಗಳು ಹೆಚ್ಚಾಗಿದ್ದು, ಜಮೀನು ನಿವೇಶನ ಸೇರಿದಂತೆ ಅನೇಕ ವಿಚಾರಗಳಲ್ಲಿ ಜನರು ತಹಸೀಲ್ದಾರ್, ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ನ್ಯಾಯಾಲಯಗಳ ಸುತ್ತಲೇ ಸುತ್ತುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೆ ತಪ್ಪು ಮಾಡಿದ್ದು ತಪ್ಪು ಮಾಡಿದ ಅಧಿಕಾರಿಗಳಿಗೆ ಯಾವ ಶಿಕ್ಷೆಯಾಗಿದೆ? ಅವರ ಅಕ್ರಮ ಆಸ್ತಿಗೆ ಎಲ್ಲಿ ಮುಟ್ಟುಗೋಲು ಹಾಕಲಾಗಿದೆ? ಎಂಬ ಪ್ರಶ್ನೆಗಳು ಜನರಲ್ಲಿ ಮೂಡತೊಡಗಿವೆ ಎಂದು ಸಾರ್ವಜನಿಕರಲ್ಲಿ ಆರೋಪ ಕೇಳಿ ಬರುತ್ತಿದೆ ಎಂದರು. ಸರ್ಕಾರಿ ಕಚೇರಿಗಳಲ್ಲಿ ಪ್ರಮುಖ ಅಧಿಕಾರಿಗಳು ವಾರದಲ್ಲಿ ಮೂರು ದಿನವೂ ಕಚೇರಿಯಲ್ಲಿ ಲಭ್ಯರಾಗುವುದಿಲ್ಲ. ಇದ್ದರೂ ಎರಡು ಮೂರು ಗಂಟೆಗೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಜನರ ಸಮಸ್ಯೆಯನ್ನ ಆಲಿಸುವುದಿಲ್ಲ ಕಚೇರಿಗೆ ಬರುವ ಜನರು ಅಧಿಕಾರಿಗಳನ್ನು ಕಾಣದೆ ದಿನಗಟ್ಟಲೆ ಅಲೆದಾಡಿ ಕೊನೆಗೆ ಶಾಪ ಹಾಕಿಕೊಂಡೇ ಹಿಂತಿರುಗುವ ಪರಿಸ್ಥಿತಿ ದಿನನಿತ್ಯ ಸಾಮಾನ್ಯವಾಗಿ ಬಿಟ್ಟಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕಿ ಆಶಾ ಸಲಹೆ

ಮಹಿಳೆಯರೇ ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಿ

ಮಂಡ್ಯ: ಮಹಿಳೆಯರನ್ನು ಸಬಲೀಕರಣ ಮತ್ತು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಮಹಿಳೆಯರು ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಬೇಕು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಸಾಮರ್ಥ್ಯ ಬೆಳಿಸಿಕೊಳ್ಳಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಆಶಾ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ , ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಮೈ ಭಾರತ್ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ 2025-26 ನೇ ಸಾಲಿನ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಸರ್.ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣ ಆಯೋಜಿಸಿದ್ದ ಮಹಿಳಾ ಕ್ರೀಡಾಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡಿ ಕ್ರೀಡಾಕೂಟಕ್ಕೆ ಆಗಮಿಸಿರುವ ಅಂತಹ ಎಲ್ಲಾ ಮಹಿಳೆಯರಿಗೂ ಶುಭ ಹಾರೈಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಓಂ ಪ್ರಕಾಶ್ ಮಾತನಾಡಿ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಸರ್.ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಮಹಿಳಾ ಕ್ರೀಡಾಕೂಟವನ್ನು ಆಯೋಜಿಸಿದ್ದು ಜಿಲ್ಲೆಯಲ್ಲಿ ಮಹಿಳೆಯರು ಕ್ಯೂಆರ್ ಕೋಡ್ (ಆನ್ಲೈನ್)ಮೂಲಕ 1,200 ರಕ್ಕೂ ಹೆಚ್ಚು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು. ಮಹಿಳೆಯರು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುವ ಸಾಮರ್ಥ್ಯ ಬೆಳಿಸಿಕೊಳ್ಳಿಬೇಕು ಕ್ರೀಡಾ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿ ಭಾಗವಹಿಸಿದ ಎಲ್ಲಾ ಮಹಿಳೆಯರಿಗೂ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕ ಹಾಗೂ ವಿಕಲಚೇತನರ ಕಲ್ಯಾಣಾಧಿಕಾರಿ ಕೋಮಲ್ ಕುಮಾರ್, ನೆಹರು ಯುವ ಕೇಂದ್ರ ಅಧಿಕಾರಿ ಶೃತಿ,ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಕುಮಾರಸ್ವಾಮಿ ರವರು ಉಪಸ್ಥಿತರಿದ್ದರು.



ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮನವಿ

ಹೋಟೆಲ್‌ಗಳಿಗೆ ಶೀಘ್ರ ಸಿಲಿಂಡರ್ ಪೂರೈಸಿ

ಮೈಸೂರು: ರಾಜ್ಯ ಸರ್ಕಾರ ಹೋಟೆಲ್ ಉದ್ಯಮಿಗಳಿಗೆ ಶೇ 25 ರಷ್ಟು ಗ್ಯಾಸ್ ಸಿಲಿಂಡರ್ ಪೂರೈಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ.ಸಿ ಒತ್ತಾಯಿಸಿದರು.

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು,

ಇರಾನ್-ಇಸ್ರೇಲ್ ಸಂಘರ್ಷದ ಕಾರಣದಿಂದ ರಾಜ್ಯದಲ್ಲಿ ವಾಣಿಜ್ಯ ಸಿಲಿಂಡರ್ ಅಭಾವ ಸೃಷ್ಟಿಯಾಗಿದೆ. ಇದರಿಂದಾಗಿ ಪ್ರವಾಸಿಗರು ನಗರ ಮೈಸೂರಿಗೆ ಬರೋಕೆ ಯೋಚನೆ ಮಾಡುವಂತಾಗಿದೆ.

ಕೆಲವು ಕಡೆ ಊಟದ ವಿಚಾರಕ್ಕಾಗಿಯೇ ಪ್ರವಾಸಿಗರು ಹೋಟೆಲ್ ರೂಂ ಬುಕ್ಕಿಂಗ್ ಕ್ಯಾನ್ಸಲ್ ಮಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಆಹಾರ ಇಲಾಖೆ ಸಚಿವ ಮುನಿಯಪ್ಪ ಅವರು ಗ್ಯಾಸ್ ಸಿಲಿಂಡರ್‌ಗಾಗಿ ಇನ್ನು ಒಂದು ವಾರ ತಡೆದುಕೊಳ್ಳಬೇಕು ಎಂದಿದ್ದಾರೆ. ನಾವು ತಡೆದುಕೊಂಡರೆ ಪ್ರವಾಸಿಗರಿಗೆ ಊಟ ಕೊಡುವುದು ಹೇಗೆ. ಈಗಾಗಲೇ 10% ಹೋಟೆಲ್ ಮುಚ್ಚಿವೆ. ಖಾಸಗಿಯಾಗಿ ಹೆಚ್ಚು ಹಣ ಕೊಟ್ಟು ಸಿಲಿಂಡರ್ ಪಡೆದುಕೊಂಡಿರುವುದರಿಂದ ಇಷ್ಟಾಗಿದೆ. ಇಲ್ಲದೇ ಇದ್ದರೆ ಪರಿಸ್ಥಿತಿ ಇನ್ನೂ ಶೋಚನೀಯ ಸ್ಥಿತಿಗೆ ಬರುತ್ತಿತ್ತು ಎಂದರು.

ಹೋಟೆಲ್ ಉದ್ಯಮ ಎದುರಿಸುತ್ತಿರುವ ಸಂಕಷ್ಟದ ಸ್ಥಿತಿಯನ್ನು ಅರಿತುಕೊಂಡು ರಾಜ್ಯ ಸರ್ಕಾರ ತಕ್ಷಣ ಶೇಕಡಾ.10 ರಷ್ಟು ಇರುವ ಕಮರ್ಷಿಯಲ್ ಸಿಲಿಂಡರ್ ಅನ್ನು ಶೇಕಡಾ.25ರಷ್ಟು ನೀಡುವಂತೆ ಕ್ರಮ ವಹಿಸಬೇಕು. ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ತಕ್ಷಣ ಈ ಸಮಸ್ಯೆ ಬಗೆಹರಿಸಬಹುದು. ಒಂದು ವಾರ, ಹತ್ತು ದಿನ ಕಾಯೋದು ಬೇಡ. ಸರ್ಕಾರ ತಕ್ಷಣ ಕ್ರಮ ವಹಿಸಬೇಕು. ತೆರಿಗೆ ಕಟ್ಟುವ ಉದ್ದಿಮೆದಾರರ ಹಿತ ಕಾಯಬೇಕು. ದಯವಿಟ್ಟು ಶೇಕಡಾ.20ರಷ್ಟಾದರೂ ಕಮರ್ಷಿಯಲ್ ಸಿಲಿಂಡರ್ ಒದಗಿಸಲು ಕ್ರಮವಹಿಸಿ ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಹೋಟೆಲ್ ಉದ್ಯಮಿಗಳಾದ ಎ.ಆರ್.ರವೀಂದ್ರಭಟ್, ಸುಬ್ರಹ್ಮಣ್ಯ ತಂತ್ರಿ, ಅರುಣ್ ಉಪಸ್ಥಿತರಿದ್ದರು.



ಕಿರುಸುದ್ದಿ

ಸಮಾಜಕ್ಕೆ ಕಿರುಕುಳ ಮಾರಕ



ಪಾಂಡವಪುರ : ದೈಹಿಕ ಕಿರುಕುಳಗಳು ಸಮಾಜಕ್ಕೆ ಮಾರಕವಾಗಿ ಪರಿಣಮಿಸಿವೆ ಎಂದು ಮೈಸೂರು.ವಿ.ವಿ.ಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರದ ಬೋಧಕಿ ಮತ್ತು ಸಂಶೋಧನಾ ಸಹಾಯಕಿ ಎಚ್.ಕೆ.ಕಲಾವತಿ ಹೇಳಿದರು. ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಪುರಸಭೆ, ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ, ಪಾಂಡವಪುರ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಡೆದ ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರತಿಬಂಧಕ ಅಧಿನಿಯಮ ಮತ್ತು ನಾಗರೀಕ ಹಕ್ಕುಗಳ ಕಾಯ್ದೆ ಕುರಿತ ವಿಚಾರಗೋಷ್ಠಿ ಮತ್ತು ಕಾರ್ಯಾಗಾರದಲ್ಲಿ ಅವರು ಮಾತನಾಡಿ, ಮಾನವ ಹಕ್ಕುಗಳ ಬಗ್ಗೆ ಮಾತನಾಡುತ್ತಲೇ ವಾಮಾಚಾರ ಹೆಸರಿನಲ್ಲಿ ದೇವರಿಗೆ ಸಂತೋಷ ಪಡಿಸಲು ಮನುಷ್ಯರನ್ನೇ ಬಲಿ ನೀಡಲಾಗುತ್ತಿದೆಂದರು. ಸಮಾಜವಾದಿ ಚಿಂತಕ ಮಂಗ್ಳೂರ ವಿಜಯ ಮಾತನಾಡಿ, ದಲಿತ ನಾಯಕರು ಇಂತಹ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ತಮ್ಮ ತಮ್ಮ ಗ್ರಾಮಗಳ ಯುವಕರಲ್ಲಿ ಜಾಗೃತಿ ಮೂಡಿಸಬೇಕಿದೆ. ಓದು ಅಧ್ಯಯನದೊಂದಿಗೆ ಪ್ರತಿರೋಧದ ಮನೋಭಾವ ಬೆಳೆಸಿಕೊಳ್ಳಬೇಕಿದೆ ಎಂದರು. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಉಮೇಶ್ ಮಾತನಾಡಿ, ದೌರ್ಜನ್ಯ ಪ್ರಕರಣಗಳನ್ನು ಇಂತಹ ವಿಶೇಷ ಪೊಲೀಸ್ ಠಾಣೆಯಲ್ಲಿ ದಾಖಲಿಸಿ ನ್ಯಾಯ ಪಡೆಯಬಹುದು ಎಂದರು. ಗ್ರೇಡ್-2 ತಹಶೀಲ್ದಾರ್‌ಗಳಾದ ಎಸ್.ಸಂತೋಷ್, ಪ್ರಕಾಶ್, ತಾಪಂ ಇಒ ಎಂ.ಎಸ್.ವೀಣಾ, ಮುಖ್ಯಾಧಿಕಾರಿ ಎಂ.ಎ.ಸತೀಶ್ ಕುಮಾರ್, ಬಿಇಓ ಧರ್ಮಶೆಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಪ್ರಭಾರಿ ಸಹಾಯಕ ನಿರ್ದೇಶಕಿ ಜಿ.ಕೋಮಲ, ಟಿ.ಲೋಕೇಶ್, ತೋಟಗಾರಿಕೆ ಹಿರಿಯ ಸಹಾಯ ನಿರ್ದೇಶಕ ಪ್ರಸನ್ನ ಇತರರು ಇದ್ದರು.

ಕೋಟೆ ಮಾರಮ್ಮ, ದಂಡಿನ ಮಾರಮ್ಮ ದೇವಿ ಜಾತ್ರೆ

ಮದ್ದೂರು: ಪಟ್ಟಣದ ಐತಿಹಾಸಿಕ ಕೋಟೆಮಾರಮ್ಮ ಮತ್ತು ದಂಡಿನಮಾರಮ್ಮನವರ ಎರಡು ದಿನಗಳ ವಾರ್ಷಿಕ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಕೋಟೆಬೀದಿಯ ಕೋಟೆಮಾರಮ್ಮನ ಹಬ್ಬದ ಪ್ರಯುಕ್ತ ಮಂಗಳವಾರ ಪ್ರಾತಃಕಾಲದಿಂದಲೇ ಹೋಮ, ಹವನ, ಅಭಿಷೇಕ, ಪುಷ್ಪಾಲಂಕಾರ, ಮಹಾಮಂಗಳಾರತಿ ನೆರವೇರಿದ್ದು ಪಟ್ಟಣದ ಮಹಿಳೆಯರು ತಂಬಿಟ್ಟಿನ ಆರತಿಗಳೊಡನೆ ಪೂಜೆ ಸಲ್ಲಿಸಿ ಧನ್ಯತೆ ಮೆರೆದರು. ಹಳೆ ಒಕ್ಕಲಿಗರ ಬೀದಿಯ ದಂಡಿನ ಮಾರಮ್ಮನವರ ವಾರ್ಷಿಕ ಜಾತ್ರೆ ಪ್ರಯುಕ್ತ ಮಂಗಳವಾರ ಪ್ರಾತಃಕಾಲ ಮೂಲ ವಿಗ್ರಹಕ್ಕೆ ಅಭಿಷೇಕ, ಪುಷ್ಪಾಲಂಕಾರ, ವಿಶೇಷ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನೆರವೇರಿತು. ಪ್ರಧಾನ ಅರ್ಚಕರಾದ ಪುಟ್ಟರಾಮು, ಆನಂದ್ ನೇತೃತ್ವದಲ್ಲಿ ನಡೆದ ವಿಶೇಷ ಪೂಜಾ ಕಾರ್ಯಕ್ರಮಗಳ ವೇಳೆ ನೂರಾರು ಭಕ್ತರು ಪಾಲ್ಗೊಂಡರಲ್ಲದೆ ಹಸಿರು ಚಪ್ಪರ, ತಳಿರು ತೋರಣ, ವಿದ್ಯುತ್ ದೀಪಾಲಂಕಾರಗಳೊಡನೆ ದೇವಾಲಯವನ್ನು ಸಿಂಗರಿಸಲಾಗಿತ್ತು.

ಮಹಿಳೆಯರು ದೇವಾಲಯಕ್ಕೆ ತಂಬಿಟ್ಟಿನಾರತಿಯೊಡನೆ ಆಗಮಿಸಿ ವಿಶೇಷ ಪೂಜೆ ಕೈಂಕರ್ಯಗಳ ವೇಳೆ ಪಾಲ್ಗೊಂಡು ದೇವಿಯ ದರ್ಶನ ಪಡೆದರು. ಮಂಗಳವಾರ ತಡರಾತ್ರಿ ಕೊಂಡಕ್ಕೆ ಅಗ್ನಿಸ್ಪರ್ಶ ನೆರವೇರಿದ್ದು ಶಿಂಷಾ ನದಿಯಿಂದ ಹೂಹೊಂಬಾಳೆ, ಬಾಯಿಬೀಗ ಸಮೇತ ಪ್ರಮುಖ ಬೀದಿಗಳಲ್ಲಿ ಕರಗ ಮಹೋತ್ಸವ ಮತ್ತು ಪೂಜೆ ಉತ್ಸವ ಸಾಗಿಬಂದು ಬೆಳಿಗ್ಗೆ 6.30ಕ್ಕೆ ಅಗ್ನಿಕೊಂಡ ಪ್ರವೇಶ ನೆರವೇರಲಿದೆ. ಪ್ರಧಾನ ಅರ್ಚಕ ಪುಟ್ಟರಾಮು ಮತ್ತು ಸೋಮಶೇಖರ್ ರವರು ಕರಗ ಮತ್ತು ಪೂಜಾ ಸಮೇತ ನೆರೆದಿರುವ ಭಕ್ತರ ಸಮ್ಮುಖದಲ್ಲಿ ಅಗ್ನಿಕೊಂಡ ಪ್ರವೇಶ ನೆರವೇರಿಸಲಿದ್ದಾರೆ.

ಕೇರಳ ರಾಜ್ಯದ ಲಾಟರಿ ಮಾರಾಟ: ಬಂಧನ

ಕೊಳ್ಳೇಗಾಲ: ಕೇರಳ ರಾಜ್ಯ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಪೊಲೀಸರು ಬಂಧಿಸಿ, 36 ಲಾಟರಿಯನ್ನು ಜಪ್ತಿ ಮಾಡಿದ್ದಾರೆ. ಮಾಂಬಳ್ಳಿ ಗ್ರಾಮದ ನಾಗರಾಜು(54) ಎಂಬಾತ ಮಾಂಬಳ್ಳಿ ಗ್ರಾಮದ ಕೆನರಾ ಬ್ಯಾಂಕ್ ರಸ್ತೆಯಲ್ಲಿ ಸಾರ್ವಜನಿಕರಿಗೆ ಕೇರಳ ರಾಜ್ಯದ 50 ರೂ. ಮುಖಬೆಲೆ ಲಾಟರಿ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಆಗರ ಮಾಂಬಳ್ಳಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ಲಾಟರಿಯನ್ನು ವಶಕ್ಕೆ ಪಡೆದಿದ್ದಾರೆ. ಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಿದ್ದಾರೆ. ದಾಳಿಯಲ್ಲಿ ಆಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಸ್ಐ ಕರಿಬಸಪ್ಪ, ಕಾನ್ಸ್‌ಟೇಬಲ್ ಶಿವಕುಮಾರ್, ಶ್ರೀಶೈಲ ಇದ್ದರು.



ಚಾಮರಾಜನಗರದಲ್ಲಿ ಕಾನ್ಷಿರಾಮ್ ಅವರ 92ನೇ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಮುಖಂಡರು ಪುಷ್ಪ ನಮನ ಸಲ್ಲಿಸಿದರು.

ಚಾ.ನಗರದಲ್ಲಿ ಕಾನ್ಷಿರಾಂ 92ನೇ ಜಯಂತಿ

ಚಾಮರಾಜನಗರ: ಬಹುಜನ ಸಮಾಜ ಪಕ್ಷದ ಸಂಸ್ಥಾಪಕರಾದ ಕಾನ್ಷಿರಾಮ್ ಅವರು ಸಮ ಸಮಾಜ ನಿರ್ಮಾಣದ ಕರ್ತೃ ವಾಗಿದ್ದು, ದಲಿತರು, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತರ ಹಕ್ಕುಗಳಿಗಾಗಿ ಹೋರಾಟ ಮಾಡಿದ ಮಹಾಪುರುಷ ಎಂದು ಬಿಎಸ್ಪಿ ಮುಖಂಡ ವಾಸು ಹೊಂಡರಬಾಳು ಬಣ್ಣಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಬಹುಜನ ಸಮಾಜ ಪಕ್ಷದಿಂದ ಕಾನ್ಷಿರಾಮ್ ಅವರ 92ನೇ ಜಯಂತಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿ, ಕಾನ್ಷಿರಾಮ್ ಅವರು ಸಂಘಟನೆ ಮೂಲಕ ಜನ ಜಾಗೃತಿ ಮೂಡಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 1971ರಲ್ಲಿ ಬ್ಯಾಮ್‌ಸೆಟ್ ಮತ್ತು 1981ರಲ್ಲಿ ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ ಸ್ಥಾಪಿಸಿಸುವ ಮೂಲಕ ಅಹಿಂದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದರು.

ಕಾನ್ಷಿರಾಮ್ ಅವರು ತತ್ವ ಅದರ್ಶವನ್ನು ಇಂದಿನ ಯುವ ಪೀಳಿಗೆ ಅಳವಡಿಸಿಕೊಂಡು ಅವರ ಹಾದಿಯಲ್ಲಿಯೇ ಸಾಗೋಣ. ಬಹುಜನ ಚಳವಳಿಯನ್ನು ಮುಂದುವರಿಸೋಣ ಎಂದರು. ಮುಖಂಡರಾದ ಸಿದ್ದಯ್ಯನಪುರ ಎಸ್. ಪಿ. ಮಹೇಶ್, ದೇವಲಾಪುರ ಶಿವಣ್ಣ, ಟೌನ್ ಅಧ್ಯಕ್ಷ ಗಾಳಿಪುರ ರಂಗಸ್ವಾಮಿ, ಬಾಬು ರಾಮಸಮುದ್ರ, ಅಮಚವಾಡಿ ಕಾಂತರಾಜು, ಸಿದ್ದರಾಜು, ಛಲವಾದಿ ಮಹಾಸಭಾ ಮಾಜಿ ಅಧ್ಯಕ್ಷ ರಮೇಶ್, ಅಶೀತ್ ರಾಮಸಮುದ್ರ , ಮಧು ಮಹೇಶ, ಶಿವಣ್ಣ ಮೊದಲಾದವರಿದ್ದರು.



ಕೆ.ಆರ್.ಪೇಟೆಯಲ್ಲಿನ ಮಹಿಳಾ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಹಲವು ಗಣ್ಯರು ಮಾತನಾಡಿದರು.

ಬಾನಂದೂರು-ಗೊಲ್ಲಹಳ್ಳಿ, ತೊರೆದೊಡ್ಡಿ, ರಾಮನಹಳ್ಳಿಯಲ್ಲಿ ಕಾಡಾನೆ ಹಾವಳಿ: ಶಾಸಕ ಭೇಟಿ

ಆನೆದಾಳಿಗೆ ಬೆಳೆನಷ್ಟ: ಮಾಹಿತಿ ಸಂಗ್ರಹ

ರಾಮನಗರ: ಕಾಡಾನೆಗಳು ರೈತರ ಜಮೀನಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಅಧಿಕಾರಿಗಳೊಂದಿಗೆ ಬಿಡದಿ ಬಳಿಯ ಹೆಗ್ಗಡಗೆರೆ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲೂಕಿನ ಬಿಡದಿ ಹೋಬಳಿ ಬಾನಂದೂರು- ಗೊಲ್ಲಹಳ್ಳಿ, ತೊರೆದೊಡ್ಡಿ, ರಾಮನಹಳ್ಳಿ ಸುತ್ತಮುತ್ತಲ ಗ್ರಾಮಗಳ ರೈತರ ಜಮೀನಿ ನಲ್ಲಿ ಇತ್ತೀಚಿನ ದಿನದಲ್ಲಿ ಮೂರು ಕಾಡಾನೆಗಳು ಕಾಣಿಸಿಕೊಂಡು ಬೆಳೆ ನಾಶಪಡಿ ಸಿದ್ದವು. ತೀರಾ ಇತ್ತೀಚೆಗೆ ಬಿಡದಿ ಪುರಸಭೆ ವ್ಯಾಪ್ತಿಯ 23ನೇ ವಾರ್ಡ್ ಹೆಗ್ಗಡಗೆರೆ ಗ್ರಾಮದ ಬಳಿ ಒಂಟಿ ಸಲಗವೊಂದು ರಾತ್ರಿವೇಳೆ ಜಮೀನಿಗೆ ಅಳವಡಿಸಿದ್ದ ಕಾಂಪೌಂಡ್ ಕೆಡವಿ, ತೆಂಗು, ಬಾಳೆ, ಮಾವು ಹಾಗೂ ರಾಗಿ ಬೆಳೆ ನಾಶಪಡಿಸಿತ್ತು.

ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಅರಣ್ಯ ಇಲಾಖೆ ಅಧಿಕಾರಿಗಳ ಜತೆಗೆ ಗ್ರಾಮಕ್ಕೆ ಭೇಟಿ ನೀಡಿ ಕಾಡಾನೆ ದಾಳಿ ನಡೆಸಿರುವ ಸ್ಥಳಗಳನ್ನು ಪರಿಶೀಲಿಸಿದರು. ಈ ವೇಳೆ ಜಮೀನಿನಲ್ಲಿ ಬೆಳೆ ನಷ್ಟ ಉಂಟಾಗಿರುವ ರೈತರಿಗೆ ಸಾಂತ್ವನ ಹೇಳಿ, ಕಾಡಾನೆಗಳ ಹಾವಳಿ ತಡೆಗೆ ಸರ್ಕಾರದೊಂದಿಗೆ ಸದನದಲ್ಲಿ ಸೂಕ್ತ ಮಾರ್ಗೋಪಾಯದ ಬಗ್ಗೆ ಚರ್ಚಿ ಸಲಾಗುವುದು. ಹಾಗೆಯೇ ಶಾಶ್ವತ ಪರಿಹಾರ ಕಂಡು ಹಿಡಿಯಲು ಮನವಿ ಮಾಡುವುದಾಗಿ ಅಭಯ ನೀಡಿ ಧೈರ್ಯ ತುಂಬಿದರು.

ಅರಣ್ಯ ಅಧಿಕಾರಿಗಳಿಂದ ಮಾಹಿತಿ: ಹೆಗ್ಗಡಗೆರೆ ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಡಿಎಫ್‌ಒ ರಾಮಕೃಷ್ಣಯ್ಯ ಅವರಿಂದ ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಕುರಿತು ಮಾಹಿತಿ ಪಡೆದರು. ಕಾವೇರಿ ವನ್ಯಜೀವಿ ಧಾಮ ಹಾಗೂ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ನಡುವೆ ಅರಣ್ಯವಲಯದಲ್ಲಿ ಓಡಾಡುವ ಕಾಡಾನೆಗಳು ಹಾಗೂ ಇತ್ತೀಚಿನ ವರ್ಷದಲ್ಲಿ ಕಾಡಾನೆಗಳ ಸಂತತಿ ಹೆಚ್ಚಳವಾಗಿರುವ ಬಗ್ಗೆ, ರೈತರ ತೋಟಗಳಲ್ಲಿ ಬೆಳೆದ ಫಸಲು ತಿಂದು ರುಚಿಕಂಡು ಕಾಡಿಗೆ ಹಿಮ್ಮೆಟ್ಟಿಸಿದರೂ ತೆರಳದೆ ಹಿಂದಿರುಗಿ ಮತ್ತೆ ಮತ್ತೆ ಬರುತ್ತಿರುವ ಪುಂಡಾನೆಗಳ ಬಗ್ಗೆ ರೈತರ ಜಮೀನಲ್ಲಿ ಬೆಳೆ ಜತೆಗೆ ಕೃಷಿ ಯಂತ್ರೋಪಕರಣ ನಾಶ ಮಾಡುತ್ತಿರುವ ಕುರಿತು ಶಾಸಕರಿಗೆ ಸಮಗ್ರ ಮಾಹಿತಿ ನೀಡಿದರು.



ಕಾಡಾನೆ ಹಾವಳಿ ನಿಯಂತ್ರಣಕ್ಕೆ ಪರಿಹಾರವೇನು?: ರೈತರ ಜಮೀನಿನಲ್ಲಿ ಬೆಳೆಗಳ ಜತೆಗೆ ಬೋರ್‌ವೆಲ್ ಮತ್ತಿತರ ಕೃಷಿ ಯಂತ್ರೋಪಕರಣವನ್ನು ನಾಶಪಡಿಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಶಾಸಕರು ಕಾಡಾನೆ ಹಾವಳಿ ನಿಯಂತ್ರಣಕ್ಕೆ ಪರಿಹಾರ ವೇನೆಂದು ಅಧಿಕಾರಿಗಳನ್ನು ಪ್ರಶ್ನೆ ಮಾಡಿದರು. ಈ ವೇಳೆ ಡಿಎಫ್‌ಒ ರಾಮಚಂದ್ರಯ್ಯ ಅವರು ಬೆಂಗಳೂರು ದಕ್ಷಿಣ ಜಿಲ್ಲೆಗೆ ಒಳಪಡುವ ಮೀಸಲು ಅರಣ್ಯ ಪ್ರದೇಶ ಹಾಗೂ ಕಾಡಾನೆ ಚಲನವಲನದ ಕುರಿತು ಸಿದ್ಧಪಡಿಸಿರುವ ನಕ್ಷೆಯಿಡಿದು ಶಾಸಕರಿಗೆ ಸಂಪೂರ್ಣ ಮಾಹಿತಿ ನೀಡಿದರು. ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕ ಬಾಲಕೃಷ್ಣರವರು ಜಿಲ್ಲೆಯ ಅರಣ್ಯ ಇಲಾಖೆಗೆ ಅಗತ್ಯವಿರುವ ಸೌಲಭ್ಯಗಳ ಬಗ್ಗೆ ಅರಣ್ಯ ಸಚಿವರಿಗೆ ಮನವಿ ಮಾಡುವುದಾಗಿ ಹಾಗೂ ಸದನದಲ್ಲಿ ಚರ್ಚಿಸಿ ಸರಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್. ನಟರಾಜು ಗಾಣಕಲ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಲ್. ಚಂದ್ರಶೇಖರ್, ಬಿಡದಿ ಪುರಸಭೆ ವಿಪಕ್ಷ ನಾಯಕ ಸಿ.ಉಮೇಶ್, ಬಿಎಂಐಸಿಪಿ ನಿರ್ದೇಶಕ ರಮೇಶ್ ಅಬ್ಬನಕುಪ್ಪೆ, ಮುಖಂಡರಾದ ಸುಜ್ಞಾನಮೂರ್ತಿ, ಕುಮಾರ್, ವೆಂಕಟಾಚಲಯ್ಯ(ಅಯ್ಯ), ಹೇಮಂತ್ ಕುಮಾರ್, ಮಂಜುನಾಥ್, ಅರ್ಜುನ್‌ಪಟೇಲ್ ರಾಮನಗರ ವಲಯ ಅರಣ್ಯಾಧಿಕಾರಿ ಮಹಮ್ಮದ್ ಮನ್ಸೂರ್ ಅಲಿ, ಪುಟ್ಟಮ್ಮ ಇತರರಿದ್ದರು.

ಆನೆ ಕಾರ್ಯಪಡೆ ತಂಡ, ಸಿಬ್ಬಂದಿ ಕೊರತೆ

ಕಾವೇರಿ ವನ್ಯಜೀವಿ ಧಾಮ ಹಾಗೂ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ನಡುವೆ ಇರುವ ಹಂದಿಗುಂದಿ ಮೀಸಲು ಅರಣ್ಯ, ಚಿಕ್ಕಮಣ್ಣುಗುಡ್ಡೆ ಮೀಸಲು ಅರಣ್ಯ ಪ್ರದೇಶ, ತೆಂಗಿನಕಲ್ಲು, ನರಿಕಲ್ಲುಗುಡ್ಡ, ಕಬ್ಬಾಳು, ತೈಲೂರು, ಅಚ್ಚಲು, ಬಾಣಂತಮಾರಿ, ಗುರುಕಾರು, ಸೀಗೆಕೋಟೆ, ಬೆಟ್ಟಳ್ಳಿವಾಡ ಹಾಗೂ ಸಾವನದುರ್ಗ ಮೀಸಲು ಅರಣ್ಯ ಪ್ರದೇಶಗಳ ಮೂಲಕ ಸುಮಾರು ೨೫ರಿಂದ ೩೦ ಕಾಡಾನೆಗಳು ರೈತರ ಜಮೀನುಗಳಿಗೆ ನಿರಂತರ ಲಗ್ಗೆ ಹಾಕುತ್ತಿವೆ. ಜಿಲ್ಲೆಯಲ್ಲಿ ಒಂದು ಆನೆ ಕಾರ್ಯಪಡೆ ತಂಡವಿದ್ದು ಮತ್ತೊಂದು ತಂಡದ ಅವಶ್ಯಕವಿದೆ. ಅಲ್ಲದೆ ಸಿಬ್ಬಂದಿ ಕೊರತೆಯೂ ಇದೆ ಎಂದು ಡಿಎಫ್‌ಒ ರಾಮಕೃಷ್ಣಯ್ಯ ತಿಳಿಸಿದರು.

ಆಧುನಿಕ ಸುಧಾರಣಾ ಕ್ರಮ ಅಗತ್ಯ

ಕಾಡಾನೆಗಳ ನಿಯಂತ್ರಣಕ್ಕೆ ರೈಲ್ವೆ ಕಂಬಿ ಬ್ಯಾರಿಕೇಟ್, ಅರಣ್ಯದಂಚಿನಲ್ಲಿ ಕಂದಕಗಳ(ಡ್ರೈನ್)ನಿರ್ಮಾಣ, ಅರಣ್ಯ ಸಿಬ್ಬಂದಿ ಹಾಗೂ ಆನೆ ಕಾರ್ಯಪಡೆ ಹೆಚ್ಚಿಸುವುದು, ಆಧುನಿಕ ವಾಹನಗಳು, ಆನೆ ನಿರೋದಕ ಕಂದಕಗಳ(ಎಲಿಫೆಂಟ್ ಪ್ರೊಟೆಕ್ಟಿವ್ ಟ್ರಂಚ್)ನಿರ್ಮಾಣ, ಡ್ರೋಣ್ ಕ್ಯಾಮರಾ(ಚೈನಾ ಮಾಡೆಲ್), ಕಾಡಂಚಿನ ರೈತರ ಜಮೀನುಗಳಲ್ಲಿ ಎಐ ಕ್ಯಾಮರಾ(ಫಾರಂ ಗಾರ್ಡ್)ಅಳವಡಿಕೆ, ಈ ರೀತಿಯ ಸುಧಾರಣಾ ಕ್ರಮಗಳಿಂದ ಕಾಡಾನೆಗಳನ್ನು ಶೇ.೮೦ರಷ್ಟು ನಿಯಂತ್ರಣಕ್ಕೆ ತರಬಹುದು ಎಂದು ಡಿಎಫ್‌ಒ ರಾಮಕೃಷ್ಣಯ್ಯ ಮಾಹಿತಿ ನೀಡಿದರು.

ಶೋಷಿತರಿಗೆ ನ್ಯಾಯ ದೊರಕಲಿ

ಚಾಮರಾಜನಗರ: ಶೋಷಿತ ಸಮುದಾಯಗಳ ಹಕ್ಕುಗಳ ರಕ್ಷಣೆ ಮಾಡುವುದು, ಆ ಸಮುದಾಯಗಳಿಗೆ ನ್ಯಾಯ ಕೊಡಿಸುವುದು ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಮೂಲ ಉದ್ದೇಶವಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ ಹೇಳಿದರು.

ನಗರದ ಪ್ರವಾಸಿಮಂದಿರದಲ್ಲಿ ನಡೆದ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಚಾಮರಾಜನಗರ ಜಿಲ್ಲಾ ಸಮಿತಿ ರಚನೆ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಜಿಲ್ಲಾ ಮುಖಂಡರ ಸಲಹೆಗಳನ್ನು ಸ್ವೀಕರಿಸಿ ಮಾತನಾಡಿದ ಅವರು, ನಮ್ಮ ಸಂಘಟನೆ ಧ್ಯೆಯೋದ್ದೇಶ ಶೋಷಿತ ಸಮುದಾಯಗಳಿಗೆ ನ್ಯಾಯ ಕೊಡಿಸುವುದಾಗಿ ಹೊರತು ಯಾವುದೇ ರಾಜಕೀಯ ಪಕ್ಷಗಳಿಗೆ ಸಂಬಂಧವಿಲ್ಲ, ಇದು ಪಕ್ಷಾತೀತ ಸಂಘಟನೆಯಾಗಿದೆ ಎಂದರು.

ಕರ್ನಾಟಕರಾಜ್ಯ ಅಹಿಂದಒಕ್ಕೂಟದಉದ್ದೇಶ ರಾಜ್ಯದಲ್ಲಿ ಶತಶತಮಾನಗಳಿಂದ ಶೋಷಣೆಗೊಳಾಗಿರುವ ನಮ್ಮ ಸಮುದಾಯ ಗಳು ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಮುದಾಯಗಳಿವೆ ಎಸ್‌ಸಿ, ಎಸ್‌ಟಿ, ಓಬಿಸಿ ಸಮ ದಾಯಗಳಲ್ಲಿ ಸ್ವಾತಂತ್ರ್ಯಬಂದು 78 ವರ್ಷಗಳು ಕಳೆದಿದ್ದರೂ ಕೂಡ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಮುಂದು ವರಿದಿಲ್ಲ ಆಗಾಗಿ ಈ ಸಮುದಾಯಗಳ ಹಕ್ಕುಗಳನ್ನು ರಕ್ಷಣೆ ಮಾಡಬೇಕು ಸಮುದಾಯ ಗಳಿಗೆ ಸರ್ಕಾರಗಳಿಂದ ಸಂವಿಧಾನಬದ್ಧವಾಗಿ ಸಿಗುವ. ಸವಲತ್ತುಗಳನ್ನು ಸಮುದಾಯಕ್ಕೆ ತಲುಪಿಸಿಕೊಡಬೇಕು ಶೋಷಣೆಗೊಳಗಾದ ಕಟ್ಟಕಡೆಯ ವ್ಯಕ್ತಿಗೆ ನ್ಯಾಯ ಕೊಡಿಸಿಕೊಡಬೇಕು ಎಂದು ಈ ಸಂಘಟನೆ ಹುಟ್ಟುಹಾಕಲಾಗಿದೆ ಹೊರತು ವಿಸಿಟಿಂಗ್ ಕಾರ್ಡ್ ಗಾಗಿ, ಶೋಕಿಗಾಗಿ ಮಾಡಿಕೊಂಡಿರುವ ಸಂಘಟನೆಯಲ್ಲ ಎಂದರು.

ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿದರು. ಕಾರ್ಯಾಧ್ಯಕ್ಷ ನಾಗರಾಜು ಕರಳಪುರ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ, ಮೈಸೂರು ಜಿಲ್ಲಾ ಸಲಹೆಗಾರ ಮಹದೇವಪ್ಪ, ಸದಸ್ಯರಾದ ಸುರೇಶ್, ಮುತ್ತು, ಲಕ್ಷ್ಮೀ, ಸರಸ್ವತಿ, ಚಾಮರಾಜನಗರ ಚಿನ್ನಸ್ವಾಮಿ, ಆರ್.ಚೇತನ್ ಕುಮಾರ್, ವಿ.ಹೆಚ್.ಸಿದ್ದರಾಜು, ನಾಗಣ್ಣ, ಉದ್ದೂರು ಸಿದ್ದರಾಜು, ಚೆನ್ನೇಗೌಡ, ಗುರುಲಿಂಗು, ಮುದ್ದುಮಾಧು, ರಂಗಸ್ವಾಮಿ, ಸೀಗಮಾರನಾಯಕ, ನಾಗರಾಜು ಇದ್ದರು.



ಚಾಮರಾಜನಗರ ನಗರದ ಪ್ರವಾಸಿಮಂದಿರದಲ್ಲಿ ನಡೆದ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಜಿಲ್ಲಾ ಸಮಿತಿ ರಚನೆ ಪೂರ್ವಭಾವಿ ಸಭೆಯಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ ಮಾತನಾಡಿದರು.

ಚನ್ನಪಟ್ಟಣದ ಬೊಂಬೆ ಉಳಿಸಿ ಬೆಳೆಸಲು ಪ್ರೋತ್ಸಾಹಿಸಿ

ಕನ್ನಡದ ಅಸ್ಮಿತೆ ಕುರಿತು ಒಂದು ದಿನದ ಶಿಬಿರ

ರಾಮನಗರ: ಸುಪ್ರಸಿದ್ಧ ಚನ್ನಪಟ್ಟಣದ ಬೊಂಬೆಗಳನ್ನು ಒಂದೇ ಜಿಲ್ಲೆಗೆ ಸೀಮಿತಗೊಳಿಸಬಾರದು. ಚನ್ನಪಟ್ಟಣದ ಬೊಂಬೆಗಳಿಗೆ ಅದರದ್ದೇ ಆದ ಇತಿಹಾಸ ವಿದೆ. ಬೊಂಬೆಗಳನ್ನು ಉಳಿಸಿ ಬೆಳಸಬೇಕು ಎಂದು ಕೇಂದ್ರ ಸರ್ಕಾರದ ಅಭಿವೃದ್ಧಿ ಆಯುಕ್ತ (ಕರಕುಶಲ) ದೇವರಮನಿ ಎಸ್. ಸಿ. ಅಭಿಪ್ರಾಯಪಟ್ಟರು.



ಇಲ್ಲಿನ ಜಾನಪದ ಲೋಕದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಜಾನಪದ ಪರಿಷತ್ತಿನಿಂದ ಚನ್ನಪಟ್ಟಣದ ಬೊಂಬೆಗಳು: ಕನ್ನಡದ ಅಸ್ಮಿತೆ ಕುರಿತು ಆಯೋಜಿಸಲಾಗಿದ್ದ ಒಂದು ದಿನದ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಬೊಂಬೆಗಳು ಅಮೆರಿಕಾದ ವೈಟ್ ಹೌಸ್, ಅಲ್ಲಿನ ಅಧ್ಯಕ್ಷರ ಮನೆ ಸೇರಿದಂತೆ ಪ್ರಪಂಚದ ಪ್ರಮುಖರ ಮನೆ, ಭವನಗಳನ್ನು ಅಲಂಕರಿಸಿವೆ ಎಂದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ. ಪಿ.ವಿ.ನಿರಂಜನರಾಧ್ಯ ಮಾತನಾಡಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕನ್ನಡದ ಅಸ್ಮಿತೆ ಹಾಗೂ ಕನ್ನಡಿಗರ ಬದುಕನ್ನು ಕಟ್ಟಿಕೊಡುವ ಪ್ರಾಧಿಕಾರವಾಗಿದೆಎಂದರು. ಡಾ. ಶಿವರಾಜ್ ಬ್ಯಾಡರಹಳ್ಳಿ ಅವರು ಚನ್ನಪಟ್ಟಣದ ಗೊಂಬೆಗಳು: ಕನ್ನಡದ ಅಸ್ಮಿತೆ ಎಂಬ ಕುರಿತು ಉಪನ್ಯಾಸ ನೀಡಿದರು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ, ಆರ್ಟಿಸನ ಫ್ರೈಡ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ನ ಸಿಇಒ ಶಾಹಿದಾ ನೂರಿ, ಕುಶಲಕರ್ಮಿ ಸಿದ್ದರಾಮಯ್ಯ ಮಾತನಾಡಿದರು. ಸು.ತ. ರಾಮೇಗೌಡ, ಶ್ರೀನಿವಾಸ ಮೂರ್ತಿ ದ್ಯಾರ್ಥಿಗಳು ಹಾಗೂ ಇತರರು ಇದ್ದರು.

ಹಿಮವದ್ ಗೋಪಾಲಸ್ವಾಮಿ ರಥೋತ್ಸವ

ಗುಂಡ್ಲುಪೇಟೆ: ತಾಲ್ಲೂಕಿನ ಪುರಾಣ ಪ್ರಸಿದ್ಧ ಹಿಮವದ್ ಗೋಪಾಲ ಸ್ವಾಮಿ ಬೆಟ್ಟದಲ್ಲಿ ಮಾ.15 ಭಾನುವಾರ ದಂದು ಹಿಮವದ್ ಗೋಪಾಲಸ್ವಾಮಿಯ ಬ್ರಹ್ಮರಥೋತ್ಸವ ನಡೆಯಿತು ,

ಗುಂಡ್ಲುಪೇಟೆ ತಾಲ್ಲೂಕಿನ ಹುಲಿ ಸಂರಕ್ಷಿತ ಪ್ರದೇಶವಾದ ಬಂಡಿಪುರವಲಯದಲ್ಲಿರುವ ಹಿಮವದ ಗೋಪಾಲ ಸ್ವಾಮಿ ಬೆಟ್ಟದಲ್ಲಿ ಈ ದಿನ ಜಾತ್ರೆ ಸಂಭ್ರಮ

ತಾಲ್ಲೂಕು ಆಡಳಿತದ ಸಕಲ ಸಿದ್ಧತೆ ಜೊತೆಗೆ ಮಾ.12 ರಿಂದ ವಿಶೇಷ ಉತ್ಸವ ಕಾರ್ಯಕ್ರಮಗಳು ನಡೆಯುತ್ತಿದ್ದು, ಮಾ.14ರ ಶನಿವಾರ ಬೆಳಿಗ್ಗೆ ಶ್ರೀಯವರ ಉತ್ಸವ, ಕಾಶಿಯಾತ್ರಾ ಉತ್ಸವ, ಸಂಜೆ 4 ಗಂಟೆಗೆ ಶ್ರೀ ರುಕ್ಮಿಣಿ, ಸತ್ಯಭಾಮಾ ಸಹಿತ ಗೋಪಾಲಸ್ವಾಮಿಯ ದಿವ್ಯ ಕಲ್ಯಾಣೋತ್ಸವ ಜರುಗಿತು. ಮಾ.15 ರ ಭಾನುವಾರ ಬೆಳಿಗ್ಗೆ ಸ್ವಾಮಿಯ ಬ್ರಹ್ಮ ರಥೋತ್ಸವ ಜರುಗಿತು ಸಂಜೆ ಶಾಂತ್ಯುತ್ಸವ ನಡೆಯಲಿದೆ.

ಬ್ರಹ್ಮರಥೋತ್ಸವದ ಪ್ರಯುಕ್ತ ಗೋಪಾಲಪುರ ಗ್ರಾಮದವರು ರಥ ಕಟ್ಟುತ್ತಾರೆ. ರಾಜ ಅಂಬು ತಂದು ರಥಕ್ಕೆ ಕಟ್ಟುತ್ತಾರೆ. ಕುಣಗಳ್ಳಿ ಗ್ರಾಮದವರು ಚಪ್ಪರ ಹಾಕುತ್ತಾರೆ. ಹೊನ್ನೇಗೌಡನಹಳ್ಳಿ ಗ್ರಾಮಸ್ಥರು ಬಿದಿರು ತರುತ್ತಾರೆ. ಸಾವಿರಾರು ಜನ ಭಕ್ತರು ಪಾಲ್ಗೊಂಡಿದ್ದು ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು . ತಾಲ್ಲೂಕು ಆಡಳಿತ, ಪೊಲೀಸ್ ಇಲಾಖೆ, ಸಾರಿಗೆ, ಆರೋಗ್ಯ ಇಲಾಖೆಯವರ ಸಹಕಾರದೊಂದಿದೆ ಅದ್ದೂರಿಯಾಗಿ ನೂರಾರು ಭಕ್ತರ ಸಮ್ಮುಖದಲ್ಲಿ ಜತೆ ನಡೆಯಿತು .

ಮಾ.17ರಂದು ಮಂಗಳವಾರ ಬೆಳಿಗ್ಗೆ ಸಂಧಾನ ಲೀಲೋತ್ಸವ, ಅವಭೃತಸ್ನಾನಉತ್ಸವ, ಸಂಜೆಉತ್ಸವ, ಫಣಿ ಮಾಲಾ ಪ್ರಬಂಧಸೇವೆ, ಪೂರ್ಣಾಹುತಿ ನಡೆಯ ಲಿದ್ದು, ಮಾ.18ರಬುಧವಾರಬೆಳಿಗ್ಗೆಮಹಾಭಿಷೇಕಮಂಗಳಾರತಿ, ದ್ವಾದಶಾ ರಾಧನಾ, ಪುಷ್ಪಯಾಗ ಧ್ವಜಾ ರೋಹಣ, ಉದ್ವಾಸನೆ, ಸೇತೂ ಸೇವೆ ಮೂಕಬಲಿ ನಡೆಯಲಿದೆ.



ರೋಟರಿ ಬಿಡದಿ ಸೆಂಟ್ರಲ್‌ನಿಂದ ಮಹಿಳೆಯರಿಗೆ 70 ರಾಸು ವಿತರಣೆ

ಆರ್ಥಿಕಾಭಿವೃದ್ಧಿಯಿಂದ ಸಬಲೀಕರಣ

ರಾಮನಗರ: ಗ್ರಾಮೀಣ ಭಾಗದ ಬಡಮಹಿಳೆಯರ ಸ್ವಾವಲಂಬಿ ಜೀವನ ಹಾಗೂ ಆರ್ಥಿಕ ಸಬಲೀಕರಣಕ್ಕಾಗಿ ರೋಟರಿ ಸಂಸ್ಥೆಯ ಶಾಖೆಗಳ ಮೂಲಕ 70ಕ್ಕೂ ಹೆಚ್ಚು ಹಸುಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದು ರೋಟರಿ ಬಿಡದಿ ಸೆಂಟ್ರಲ್ ಅಧ್ಯಕ್ಷ ಬಿ.ಎಂ. ರಮೇಶ್‌ಕುಮಾರ್ ತಿಳಿಸಿದರು.

ತಾಲೂಕಿನ ಬಿಡದಿ ಪಟ್ಟಣದಲ್ಲಿ ಹಾಲ್ ಬಳಿ ರೋಟರಿ ಬಿಡದಿ ಸೆಂಟ್ರಲ್ ವತಿಯಿಂದ ಹಸುಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ರೋಟರಿ ಸಂಸ್ಥೆ ವತಿಯಿಂದ ಕಾಮಧೇನು ಯೋಜನೆಯಡಿಯಲ್ಲಿ ಬಡ ಮಹಿಳೆಯರ ಆರ್ಥಿಕ ಸುಧಾರಣೆಗಾಗಿ ಅಂತರಾಷ್ಟ್ರೀಯ ಮಟ್ಟದ ಗ್ಲೋಬಲ್ ಗ್ರಾಂಟ್ ಅಡಿಯಲ್ಲಿ ರೋಟರಿ ಸಂಸ್ಥೆ ಉಲ್ಲಾಳ್ ಶಾಖೆ ಅಧ್ಯಕ್ಷರಾದ ಮಾಧವಿ ಶ್ರೀಕಾಂತ್ ಅವರ ನೇತೃತ್ವದಲ್ಲಿ ಹಸುಗಳನ್ನು ರಾಮನಗರ ವಲಯದಲ್ಲಿ ವಿತರಿಸುವ ಸಮಾಜಮುಖಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಹೈನುಗಾರಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅರ್ಥಪೂರ್ಣ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತಜ್ಞ ವೈದ್ಯರ ಮೂಲಕ ಪರೀಕ್ಷಿಸಿ ತಲಾ 70 ರಿಂದ 80 ಸಾವಿರ ರೂ. ಮೌಲ್ಯದ ಗುಣಮಟ್ಟದ ಹಸುಗಳನ್ನು ಖರೀದಿಸಿ ನೀಡಲಾಗುತ್ತಿದೆ. ರಾಮನಗರ, ಚನ್ನಪಟ್ಟಣ, ಮಾಗಡಿ ಮತ್ತು ಕನಕಪುರ ತಾಲ್ಲೂಕುಗಳ ಶಾಖೆ ವತಿಯಿಂದ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹಸುಗಳನ್ನು ವಿತರಿಸುವ ಗುರಿ ಹೊಂದಲಾಗಿದ್ದು ಬಿಡದಿ ಭಾಗದಲ್ಲಿಯೂ ಯೋಜನೆಯನ್ನು ವಿಸ್ತರಿಸಲಾಗುವುದು ಎಂದು ರಮೇಶ್‌ಕುಮಾರ್ ವಿವರಿಸಿದರು. ಬಿಡದಿ ಸೆಂಟ್ರಲ್‌ನ ಕಾರ್ಯದರ್ಶಿ ಶ್ರೀವತ್ಸ, ಪದಾಧಿಕಾರಿಗಳಾದ ಚಿಕ್ಕಣ್ಣಯ್ಯ, ನಾಗರಾಜು, ಶಿವಶಂಕರ್, ಪುಟ್ಟಹೊನ್ನಯ್ಯ, ವಸಂತ್‌ಕುಮಾರ್, ಆನಂದ್, ಸಿಲ್ಕ್ ಚಂದ್ರಶೇಖರ್, ಕೃಷ್ಣ, ನಳಿನಾಕ್ಷಿ, ಗಿರಿಧರ್‌ರಾಮಯ್ಯ, ಲೋಕೇಶ್, ಚಂದ್ರಶೇಖರ್, ಬಸವರಾಜ ಅರಸು, ಶಿವಸ್ವಾಮಿ, ಭರತ್‌ಕೀರ್ತಿ ಹಾಗೂ ಇತರರು ಇದ್ದರು.



ರಾಮನಗರದಲ್ಲಿ ಲೋಕ ಅದಾಲತ್: ಹಿರಿಯ ನ್ಯಾಯಾಧೀಶರು, ವಕೀಲರು ಭಾಗಿ

ಜಿಲ್ಲಾದ್ಯಂತ 1.96ಲಕ್ಷ ಪ್ರಕರಣ ಇತ್ಯರ್ಥ

ರಾಮನಗರ: ಲೋಕ ಅದಾಲತ್‌ಗಳಿಂದ ನ್ಯಾಯಾಲಯದ ಸಮಯ ಉಳಿತಾಯ ಮತ್ತು ಜನರಿಗೆ ತ್ವರಿತಗತಿಯಲ್ಲಿ ನ್ಯಾಯ ಒದಗಿಸುವ ಜತೆಗೆ ಕಕ್ಷಿದಾರರ ಅಲೆದಾಟ ತಪ್ಪಿಸಲು ಸಾಧ್ಯವಾಗಲಿದೆ ಎಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶ ಎಂ.ಎಚ್.ಅಣ್ಣಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾದ್ಯಂತ 1.96 ಲಕ್ಷ ಪ್ರಕರಣ ಇತ್ಯರ್ಥಗೊಂಡಿವೆ. ಲೋಕ್ ಅದಾಲತ್ ಇತ್ತೀಚಿನ ದಿನದಲ್ಲಿ ಜನಪ್ರಿಯವಾಗುತ್ತಿದೆಂದರು. ಜಿಲ್ಲಾದ್ಯಂತ ನಡೆದ ಲೋಕ ಅದಾಲತ್‌ನಲ್ಲಿ ಒಟ್ಟು 2,482 ಪ್ರಕರಣ, 1,94,324 ವ್ಯಾಜ್ಯ ಪೂರ್ವ ಪ್ರಕರಣ ಸೇರಿಸಿದಂತೆ ಒಟ್ಟು 1,96,806 ಪ್ರಕರಣವನ್ನು ರಾಜಿ ಸಂದಾನದ ಮೂಲಕ ಇತ್ಯರ್ಥಪಡಿಸಲಾಯಿತು. ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು 58, ನೆಗೋಷಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಪ್ರಕರಣಗಳು 133, ಸಾಲ ವಸೂಲಾತಿ ಪ್ರಕರಣಗಳು 18, ಮೋಟಾರು ವಾಹನ ಅಪಘಾತ ಪ್ರಕರಣ 48, ಕಾರ್ಮಿಕ ವಿವಾದ ಪ್ರಕರಣಗಳು 30, ವಿದ್ಯುತ್ ಕಾಯ್ದೆ ಪ್ರಕರಣಗಳು 19, ಗಣಿ ಮತ್ತು ಭೂ ವಿಜ್ಞಾನ ಪ್ರಕರಣಗಳು 9, ವೈವಾಹಿಕ ಪ್ರಕರಣ 1, ಭೂಸ್ವಾಧೀನ ಪ್ರಕರಣ 1, ಆಸ್ತಿ ವಿಭಾಗ ಪ್ರಕರಣ 68, ನಿರ್ದಿಷ್ಟ ಕಾರ್ಯಕ್ಷಮತೆ ಪ್ರಕರಣ 44, ಅಂತಿಮ ಡಿಕ್ರಿ ಕಾರ್ಯಾಚರಣೆ ಪ್ರಕರಣ 08, ಜಾರಿ ಪ್ರಕರಣ 34, ಮೋಟಾರು ವಾಹನ ಅಪಘಾತ ಜಾರಿ ಪ್ರಕರಣ 14, ಭೂಸ್ವಾಧೀನ ಜಾರಿ ಪ್ರಕರಣ 3, ಹಕ್ಕು ಘೋಷಣೆ, ಶಾಶ್ವತ ನಿರ್ಬಂದಕಾಜ್ಞೆ ಹಾಗೂ ಇತರೆ 54, ಜನನ ಮತ್ತು ಮರಣ ಪತ್ರಕ್ಕೆ ಸಂಬಂಧಿಸಿದ ಪ್ರಕರಣ 34, ಲಘು ವ್ಯಾಜ್ಯ ಪ್ರಕರಣ 1847, ಇತರೆ ಕ್ರಿಮಿನಲ್ ಪ್ರಕರಣ 24, ಬ್ಯಾಂಕ್ ಪ್ರಕರಣ 16, 125 ಸಿಆರ್‌ಪಿಸಿ 14, ಕೌಟುಂಬಿಕ ದೌರ್ಜನ್ಯ ಪ್ರಕರಣ 05, ವ್ಯಾಜ್ಯ ಪೂರ್ವ ಪ್ರಕರಣ 1,94,324 ಒಟ್ಟು 1,96,806 ಪ್ರಕರಣ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥವಾಯಿತು. ಹಿರಿಯ ಸಿವಿಲ್ ನ್ಯಾಯಾಧೀಶರಾದ ಸವಿತಾ ಪಿ.ಆರ್., ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ. ಎಂ.ಪಂಚಾಕ್ಷರಿ, ಪ್ರಧಾನ ಹಿರಿಯ ಸಿವಿಲ್ ಹಾಗೂ ಸಿ ಜೆ ಎಂ ನ್ಯಾ. ಲೋಕೇಶ್, ಒಂದನೇ ಅಪರ ಹಿರಿಯ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾ.ನಿವೇದಿತಾ ಟಿ. ಎಂ., ಪ್ರಧಾನ ಸಿವಿಲ್ ಹಾಗೂ ಜೆಎಂಎಫ್‌ಸಿ ಅವಿನಾಶ್ ಚಿಂದು, ನ್ಯಾ. ಪುಟ್ಟರಾಜು ಸೇರಿದಂತೆ ಹಲವು ವಕೀಲರಿದ್ದರು.



ಕಿರುಸುದ್ದಿ

ಲೋಕ ಅದಾಲತ್‌ನಲ್ಲಿ 1,012 ಪ್ರಕರಣ ಇತ್ಯರ್ಥ

ಬಂಗಾರಪೇಟೆ: ಪಟ್ಟಣದ ನ್ಯಾಯಾಲಯದಲ್ಲಿ ನಡೆದ 1 ನೇ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 1,012 ಪ್ರಕರಣಗಳನ್ನು ಇತ್ಯರ್ಥಪಡಿಸಿ 1,02,92,395 ರೂಗಳನ್ನು ಕಕ್ಷಿದಾರರಿಗೆ ಕೊಡಿಸಿರುತ್ತಾರೆ. ಪಟ್ಟಣದ ಪ್ರಥಮ ಸಿವಿಲ್ ನ್ಯಾಯಾಲಯ, ಒಂದನೇ ಅಪರ ನ್ಯಾಯಾಲಯ ಮತ್ತು ಎರಡನೇ ಅಪರ ನ್ಯಾಯಾಲಯಗಳ ಪ್ರಕರಣಗಳನ್ನು ಪ್ರಥಮ ಸಿವಿಲ್ ನ್ಯಾಯಾಧೀಶ ನ್ಯಾಯಾಧೀಶರಾದ ಸುಕೀತಾ ಎಸ್. ಹದ್ದಿ ಮಾರ್ಗದರ್ಶನದಲ್ಲಿ 1012 ಪ್ರಕರಣಗಳು ಇತ್ಯರ್ಥ ಪಡಿಸಿ 1,02,92,395 ರೂಗಳನ್ನು ಕಕ್ಷಿದಾರರಿಗೆ ಕೊಡಿಸಿರುತ್ತಾರೆ ಹಾಗೂ ತಾಲೂಕಿನ ಎಲ್ಲಾ ಬ್ಯಾಂಕ್‌ಗಳು ಹಾಗೂ ಲಘು 3667 ಪಿಎಲ್‌ಸಿಎಸ್ ಕೇಸುಗಳನ್ನು ಇತ್ಯರ್ಥ ಪಡಸಿ ಇದರಿಂದ ಬಂದಂತಂಹ 1,21,62,803, ರೂಗಳನ್ನು ಬ್ಯಾಂಕ್‌ಗಳಿಗೆ ಮತ್ತು ಸರ್ಕಾರಕ್ಕೆ ಪಾವತಿಸಲಾಗಿದೆ.

ದೇವಾಲಯದಲ್ಲಿ ಕಳವು

ಬಾಗೇಪಲ್ಲಿ: ಚೇಳೂರು ಪೊಲೀಸ್ ಠಾಣೆಯ ರಾಶ್ಚೇರುವು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮಕಲಪಲ್ಲಿ-ಕೊಂಡೋರುಪಲ್ಲಿ ಗ್ರಾಮಗಳ ಮಧ್ಯೆ ಇರುವ ಸೋಮೇಶ್ವರ ದೇವಾಲಯದಲ್ಲಿ ಕಳೆದ ರಾತ್ರಿ ಕಳ್ಳರು ದೇವಾಲಯದ ಬೀಗ ಹೊಡೆದು ಒಳ ನುಗ್ಗಿದ ಕಳ್ಳರು ದೇವರ ಬೆಳ್ಳಿ, ಕಿರೀಟ, ದೇವರ ಬೆಳ್ಳಿ ಕಣ್ಣುಗಳು. ಇತರೆ ಸಾಮಾನುಗಳು. ಹುಂಡಿಯಲ್ಲಿದ್ದ ಅಂದಾಜು 20 ಸಾವಿರ ಹಣ ಬೀರುವು ಮುರಿದು ಹಾಕಿ ಹಣ ಮತ್ತು ವಿವಿಧ ಬೆಲೆ ಬಾಳುವ ವಸ್ತುಗಳು ದೋಚಿಕೊಂಡು ಪರಾರಿಯಾಗಿದ್ದಾರೆ. ಬೆಳಗ್ಗೆ ಅರ್ಚಕ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಹೋದಾಗ ಬಾಗಿಲು ಹೊಡೆದಿದ್ದು ನೋಡಿ ಗಾಬರಿಯಾದ ದೇವಾಲಯದ ಅರ್ಚಕ ಕೆ.ವಿ.ಶ್ರೀರಾಮ ಚೇಳೂರು ಪೊಲೀಸರಿಗೆ ದೂರು ಸಲ್ಲಿಸಿದ್ದು ಸ್ಥಳಕ್ಕೆ ಚೇಳೂರು ಪೊಲೀಸರು ಭೇಟಿ ನೀಡಿ ತನಿಕೆ ನಡೆಸಿ ಮುಂದಿನ ಕಾನೂನಿನ ಕ್ರಮ ಜರುಗಿಸಿದ್ದಾರೆ.

ಗ್ರಾಮದ ಸೋಮೇಶ್ವರ ದೇವಾಲಯದಲ್ಲಿ ಕಳ್ಳತನವಾಗಿದ್ದು ಸೋಮಕಲಪಲ್ಲಿ-ಕೊಂಡೋರುಪಲ್ಲಿ ಗ್ರಾಮಗಳ ಗ್ರಾಮಸ್ತರು ಬೆಚ್ಚಿ ಬಿದ್ದಿದ್ದಾರೆ. ಕಳ್ಳರನ್ನು ಪತ್ತೆ ಮಾಡಿ ಕಾನೂನಿನ ಕ್ರಮ ಜರುಗಿಸಬೇಕೆಂದು ಸೋಮಕಲಪಲ್ಲಿ-ಕೊಂಡೋರುಪಲ್ಲಿ ಗ್ರಾಮಗಳ ಗ್ರಾಮಸ್ಥರು ಪೊಲೀಸರಲ್ಲಿ ಮನವಿ ಮಾಡಿದ್ದಾರೆ.

ಪ್ರತಿಯೊಬ್ಬರೂ ಹೆಲ್ಮೆಟ್ ಕಡ್ಡಾಯ ಧರಿಸಿ: ಸಿಐಸಿ

ಬಂಗಾರಪೇಟೆ: ಪ್ರತಿಯೊಬ್ಬರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಹೆಲ್ಮೆಟ್ ಧರಿಸುವುದರಿಂದ ಜೀವ ಉಳಿಯುತ್ತದೆ ಅಪಘಾತಗಳು ಸಂಭವಿಸುವುದಿಲ್ಲ, ಅಪಘಾತಗಳು ಸಂಭವಿಸಿದ್ದರು ಪ್ರಾಣಹಾನಿ ಆಗುವುದಿಲ್ಲ ಎಂದು ಸಿಐಸಿ ರವಿಕುಮಾರ್ ಹೇಳಿದರು. ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜ್ ಮೈದಾನದಲ್ಲಿ ಭಾರತ್ ಫೌಂಡೇಶನ್ ವತಿಯಿಂದ ಶನಿವಾರ ಸಾರ್ವಜನಿಕರಿಗೆ ಹೆಲ್ಮೆಟ್ ವಿತರಣೆ ಮಾಡಿ ಮಾತನಾಡಿದರು. ನಮ್ಮನ್ನು ನಂಬಿಕೊಂಡು ನಮ್ಮ ಕುಟುಂಬ ಬದುಕುತ್ತಿರುತ್ತಾರೆ ನಮಗೆ ಅಪಘಾತದಲ್ಲಿ ಏನಾದರೂ ಸಂಭವಿಸಿದರೆ ಅದಕ್ಕೆ ನಮ್ಮ ಕುಟುಂಬಸ್ಥರು ನೋವು ಪಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಅದಕ್ಕಾಗಿ ಪ್ರತಿಯೊಬ್ಬ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು. ಹೆಲ್ಮೆಟ್ ಧರಿಸುವುದರಿಂದ ಅಪಘಾತ ಸಂಭವಿಸಿದರೂ ತಲೆಗೆ ಏನು ಆಗುವುದಿಲ್ಲ, ತಲೆಗೆ ಪೆಟ್ಟು ಬೀಳಲಿಲ್ಲವೆಂದರೆ ನಾವು ಬದುಕು ಉಳಿಯಬಹುದು ಎಂದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 741ನೇ ರಾಂಕ್ ಪಡೆದ ತೌಸಿಫ್ ಉಲ್ಲಾಖಾನ್‌ಗೆ ಸನ್ಮಾನಿಸಿ ಗೌರವ ಸಮರ್ಪಣೆ ಮಾಡಿದರು. ಭರತ್ ಫೌಂಡೇಶನ್ ಅಧ್ಯಕ್ಷ ನದೀಮ್ ಶಾ, ಚಿಗುರು ಫೌಂಡೇಶನ್ ಅಧ್ಯಕ್ಷ ಪ್ರತಿಭಾವತಿ, ಪಿಎಸ್ಐ ರಾಜಣ್ಣ, ಭಾರತ್ ಫೌಂಡೇಶನ್ ಅನೇಕ ಮುಖಂಡರು ಉಪಸ್ಥಿತರಿದ್ದರು.

ಮನೆ ಸಿಲಿಂಡರ್ ಬಳಕೆ: ಹೋಟೆಲ್‌ಗಳ ಮೇಲೆ ದಾಳಿ

ಬಂಗಾರಪೇಟೆ: ಪಟ್ಟಣದ ಹೋಟೆಲ್‌ಗಳ ಮೇಲೆ ದಿಢೀರನೆ ದಾಳಿ ನಡೆಸಿ ಅನಧಿಕೃತವಾಗಿ ಮನೆ ಸಿಲಿಂಡರ್‌ಗಳನ್ನು ಬಳಕೆ ಮಾಡುತ್ತಿದ್ದ ವಿವಿಧ ಹೋಟೆಲ್‌ಗಳ 6 ಸಿಲಿಂಡರ್‌ಗಳನ್ನು ತಹಸೀಲ್ದಾರ್ ಸುಜಾತ ಹಾಗೂ ಪುರಸಭೆಯ ಮುಖ್ಯ ಅಧಿಕಾರಿ ಸತ್ಯನಾರಾಯಣ ವಶಕ್ಕೆ ಪಡೆದುಕೊಂಡು ಕ್ರಮ ಕೈಗೊಂಡಿದ್ದಾರೆ. ಈ ವೇಳೆ ತಹಸೀಲ್ದಾರ್ ಸುಜಾತ ಮಾತನಾಡಿ, ಜಿಲ್ಲಾಧಿಕಾರಿಗಳ ಆದೇಶದಂತೆ ಇಂದು ಪಟ್ಟಣದ ವಿವಿಧ ಹಾರು ಹೋಟೆಲ್‌ಗಳ ಮೇಲೆ ದಾಳಿ ನಡೆಸಿ ಅನಧಿಕೃತವಾಗಿ ಬಳಸುತ್ತಿದ್ದ ಆರು ಸಿಲಿಂಡರ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದೇವೆ. ಈಗ ಅವರ ವಿರುದ್ಧ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳುತ್ತೇವೆ ಎಂದರು. ಹಾಗೂ ಪಟ್ಟಣದ ಸುರುಬಿ ಹೋಟೆಲ್‌ನಲ್ಲಿ ಸ್ವಚ್ಛತೆ ಇಲ್ಲದೆ ಇರುವುದು ಕಂಡು ಬಂದಿದೆ. ಅಡಿಗೆಗೆ ಬಳಸುತ್ತಿರುವ ನೀರು ಸಹ ಶುದ್ಧವಾಗಿಲ್ಲದೆ ಇರುವುದು ಕಂಡುಬಂದಿದೆ. ಪರೀಕ್ಷೆಯಲ್ಲಿ ಲೋಪದೋಷ ಕಂಡು ಬಂದಲ್ಲಿ ಅವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಶ್ರೀನಿವಾಸಪುರದ ತಹಸೀಲ್ದಾರ್ ಕಚೇರಿಯಲ್ಲಿ ಜಿ.ಎನ್. ಸುಧೀಂದ್ರ ಅವರು ತಾಲೂಕಿನ ಗ್ಯಾಸ್ ಮಾಲೀಕರೊಂದಿಗೆ ಸಭೆ ನಡೆಸಿದರು.

ಪೂರೈಕೆಯಲ್ಲಿ ವ್ಯತ್ಯಯವಿಲ್ಲ

ಶ್ರೀನಿವಾಸಪುರ: ಯಾವುದೇ ರೀತಿಯಾಗಿ ಗ್ಯಾಸ್ ಸಿಲೆಂಡರ್ ಪೂರೈಕೆಯಲ್ಲಿ ವ್ಯತ್ಯಯವಿಲ್ಲ ಕೇಂದ್ರ ಹಾಗು ರಾಜ್ಯ ರ್‍ಕಾರ ವಾಣಿಜ್ಯ ಸಿಲೆಂಡರ್‌ಗಳನ್ನು ಹೊರತುಪಡಿಸಿ, ಗೃಹಬಳಕೆಯ ಸಿಲೆಂಡರ್‌ಗಳು ಸರ್ಕಾರ ಆದೇಶದಂತೆ ಪೂರೈಕೆಯಾಗಿಲಿವೆ ಎಂದು ತಹಶೀಲ್ದಾರ್ ಜಿ.ಎನ್.ಸುಧೀಂದ್ರ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕಿನ ಗ್ಯಾಸ್ ಮಾಲೀಕರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದರು. ತಾಲ್ಲೂಕಿನ ಸಾರ್ವಜನಿಕರಿಗೆ ಈ ಕುರಿತು ಮಾಹಿತಿ ನೀಡಿದ ಅವರು, ಸರ್ವರ್ ಪ್ರಬ್ಲಮ್ ನಿಂದ ಬುಕಿಂಗ್‌ಗೆ ಸಮಸ್ಯೆಯಾಗಿದೆ ಅಷ್ಟೆ. ತಡವಾಗಿ ತಗೆದುಕೊಳ್ಳುತ್ತಿದೆ. ಹೆಚ್ಚಿನ ಸಿಲೆಂಡರ್‌ಗಳನ್ನು ಬುಕ್ ಮಾಡುವುದರಿಂದ ಈ ವ್ಯತ್ಯಯಗಳು ನಡೆಯುತ್ತಿದೆ ಎಂದರು. ನಾಲ್ಕೈದು ದಿನಗಳಲ್ಲಿ ಬುಕಿಂಗ್‌ಗೆ ಪ್ರಾಬ್ಲಮ್ ಸರಿಹೋಗಲಿದೆ ಎಂದರು. ಸಾಮಾನ್ಯವಾಗಿ ಈ ಹಿಂದೆ ಯಾವ ರೀತಿಯಾಗಿ ಸಿಲೆಂಡರ್ ಬೇಕೋ ಅದೇ ರೀತಿಯಲ್ಲಿ ಗ್ಯಾಸ್ ಮಾಲೀಕರು ಕಂಪನಿಗಳಿಗೆ ಅದೇ ರೀತಿಯಲ್ಲಿ ಕಳುಹಿಸುತ್ತಿದ್ದಾರೆ. ಯಾರು ಗಾಬರಿ ಬೀಳುವುದು ಬೇಡ ಅಲ್ಲದೆ ಗ್ಯಾಸ್ ಅಂಗಡಿಗಳ ಬಳಿ ಗಲಾಟೆಗಳನ್ನು ಮಾಡಬೇಡಿ ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು. ನಾವು ಈ ಹಿಂದೆ ಯಾವರೀತಿಯಾಗಿ ನಮಗೆ ಬೇಡಿಕೆಯನ್ನು ಕಂಪನಿಗೆ ಕಳುಹಿಸುತ್ತೇದ್ದೇವೆ ಅದೇ ರೀತಿಯಾಗಿ ಕಳುಹಿಸುತ್ತಿದ್ದು, ಸರ್ವರ್ ಪ್ರಾಬ್ಲಮ್‌ನಿಂದ ಬುಕಿಂಗ್‌ಗೆ ತೊಂದರೆಯಾಗುತ್ತಿದ್ದು, ಅದು ಸಹ ಅತಿ ಶೀಘ್ರವಾಗಿ ಸರಿಹೋಗಲಿದ್ದು, ಗ್ರಾಹಕರು ಸಹಕರಿಸಬೇಕು ಎಂದು ಮನವಿ ಮಾಡಿದರು.



ಬಾಗೇಪಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲೆಯ ಆವರಣದಲ್ಲಿ ಸರಸ್ವತಿ ಪೂಜಾ ಹಾಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು. ಕರ್ನಾಟಕ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕ ಜಿಲಾನ್ ಬಾಷ, ಸಹಶಿಕ್ಷಕರಾದ ಪಿ.ಜಿ.ವೆಂಕಟರಮಣಾರೆಡ್ಡಿ, ಬಿ.ರಾಮು, ರಾಮನಾಯಕ್, ಸಿಬ್ಬಂದಿ ಆನಂದ್ ಗಂಗುಲ್, ಸುಬ್ಬರಾಯಪ್ಪ, ಸಿಬ್ಬಂದಿ ಪೋಷಕರು ಮಕ್ಕಳು ಹಾಜರಿದ್ದರು.

ವಿಶೇಷ ಪೊಲೀಸ್ ತಂಡ ರಚಿಸಿ : ಎಸ್ಪಿಗೆ ರೈತಸಂಘ ಆಗ್ರಹ

ಮಾದಕದ್ರವ್ಯಕ್ಕೆ ತಡೆ

ಕೋಲಾರ: ಲಕ್ಷಾಂತರ ರೈತ ಕೂಲಿ ಕಾರ್ಮಿಕರ ಹಾಗೂ ಯುವಕರ ಬೀದಿ ಪಾಲು ಮಾಡುತ್ತಿರುವ ಐಪಿಎಲ್ ಬೆಟ್ಟಿಂಗ್ ದಂಧೆ ಹಾಗೂ ಮಾದಕದ್ರವ್ಯಕ್ಕೆ ಕಡಿವಾಣ ಹಾಕಲು ವಿಶೇಷ ಪೊಲೀಸ್ ತಂಡ ರಚಿಸಿ ದಂಧೆಕೋರರ ವಿರುದ್ಧ ಗೂಂಡಾ ಕಾಯ್ದೆಯಲ್ಲಿ ಕೇಸು ದಾಖಲಿಸುವಂತೆ ಆಗ್ರಹಿಸಿ ರೈತಸಂಘದಿಂದ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ನೀಡಿ ಮಾತನಾಡಿದ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ, ಕ್ರೀಡೆ ಎಂಬುದು ಇಂದು ಜೂಜಾಟವಾಗಿ ಮಾರ್ಪಟ್ಟು ದುಡಿಮೆ ಇಲ್ಲದೆ, ಅತಿ ಬೇಗ ಶ್ರೀಮಂತರಾಗುವ ಅಡ್ಡದಾರಿಯಾಗಿ ಮಾರ್ಪಟ್ಟಿರುವುದು ದುರಾದೃಷ್ಟಕರ ಎಂದು ವಿಷಾದಿಸಿದರು.

ಬರ ಹಾಗೂ ಬೆಳೆ ನಷ್ಟದಿಂದ ರೈತರು ತತ್ತರಿಸಿ ಕೂಲಿ ಕಾರ್ಮಿಕರಿಗೆ ದುಡಿಯಲು ಕೆಲಸವಿಲ್ಲದೆ, ಯುವಕರು ವಿದ್ಯಾಭ್ಯಾಸ ಮಾಡಿ, ಉದ್ಯೋಗವಿಲ್ಲದೆ, ಪರಿತಪಿಸುತ್ತಿರುವ ಪರಿಸ್ಥಿತಿಯಲ್ಲಿ ಕ್ರಿಕೇಟ್ ಬೆಟ್ಟಿಂಗ್ ಎಂಬ ಭೂತಕ್ಕೆ ದಾಸರಾಗಿ ರೈತರು ತೋಟಗಳನ್ನೇ ಅಡಿಇಟ್ಟರೆ ಗತಿಯೇನು ಎಂದು ಪ್ರಶ್ನಿಸಿದರು.

ರಾಜ್ಯ ಮುಖಂಡ ಕಾಮನೂರು ಚಲಪತಿ ಮಾತನಾಡಿ, ಜಿಲ್ಲೆಯಲ್ಲಿ ಕ್ರಿಕೆಟ್ ಬೆಟ್ಟಿಂಗ್ ಕಿಂಗ್‌ಪಿನ್ ಯಾರು? ಯಾರ ಕೈ ಕೆಳಗೆ ದಂಧೆ ನಡೆಯತ್ತಿದೆ?. ಪ್ರತಿ ಐಪಿಎಲ್‌ನಲ್ಲೂ ಕೋಟಿ ಕೋಟಿ ಬೆಟ್ಟಿಂಗ್ ನಡೆಯುತ್ತಿದ್ದು, ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಸಮಸ್ಯೆಯನ್ನು ಗಂಭೀರವಾಗಿ ಏಕೆ ಸರ್ಕಾರ ಹಾಗೂ ಗೃಹ ಮಂತ್ರಿಗಳು ಪರಿಗಣಿಸುತ್ತಿಲ್ಲ, ಗಲ್ಲಿಗೆಂದು ನಕಲಿ ಆಪ್‌ಗಳ ಮುಖಾಂತರ ಅಕ್ರಮಗಳನ್ನು ಸಕ್ರಮ ಮಾಡಲು ಎಷ್ಟು ಸಾವಿರ ಕೋಟಿ ಸರ್ಕಾರಿ ದೇಣಿಗೆ ಪಡೆದು ಬಡವರ ಬದುಕನ್ನು ಬೆಟ್ಟಿಂಗ್‌ನಲ್ಲಿ ಹರಾಜು ಹಾಕುತ್ತಿದ್ದಾರೆಂದು ಸರ್ಕಾರದ ವಿರುದ್ಧ ಕಿಡಿಕಾರಿದರು.



ಸರ್ಕಾರದಿಂದ ಅನುಮತಿ: ದುರದೃಷ್ಟಕರ

ಕೂಲಿ ಕಾರ್ಮಿಕರು, ಜಾನುವಾರುಗಳನ್ನು ಯುವ ಪೀಳಿಗೆ ತಮ್ಮ ಭವಿಷ್ಯವನ್ನೇ ಕ್ರಿಕೆಟ್ ಬೆಟ್ಟಿಂಗ್‌ಗೆ ದಾಸರಾಗಿ ಆಟವಾಡಿ ಗೆಲ್ಲಲಾಗದೆ ಸಾಲ ತೀರಿಸಲಾಗದೆ, ಸಮಾಜದಲ್ಲಿ ಬದುಕಲು ಮುಖವಿಲ್ಲದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ, ಕ್ರಿಕೆಟ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಬೇಕಾದ ಸರ್ಕಾರವೇ ದಂಧೆಕೋರರಿಗೆ ಅನುಮತಿ ನೀಡಿರುವುದು ದುರದೃಷ್ಟಕರ.

ಜಿಲ್ಲೆಯಲ್ಲಿ ಪೊಲೀಸ್‌ಇಲಾಖೆಯ ಗುಪ್ತಾಚಾರ ವಿಭಾಗದ ಮಾಹಿತಿ ಪ್ರಕಾರ ಪ್ರತಿ ಹೋಟೆಲ್, ರೆಸಾರ್ಟ್, ಬಾರ್ ರೆಸ್ಟೋರೆಂಟ್ ಡಾಬಾ, ಗ್ರಾಮೀಣ ಪ್ರದೇಶದ ತೋಟಗಳಲ್ಲಿ ಈ ದಂಧೆ ನಿರಂತರವಾಗಿ ನಡೆಯುತ್ತಿದ್ದರೂ, ಪೊಲೀಸ್ ಇಲಾಖೆಗೆ ಮಾಹಿತಿ ಇಲ್ಲವಾಗಿದೆ, ಲಕ್ಷ ಲಕ್ಷ ಲಕ್ಷ ಬೆಟ್ಟಿಂಗ್ ಕಟ್ಟಿ ಪ್ರಾಣ ಕಳೆದುಕೊಳ್ಳುವ ಮೇಲೆ ಪಶ್ಚತ್ತಾಪ ಪಟ್ಟರೆ ಫಲವೇನು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಪೋಲೀಸ ವರಿಷ್ಠಾದಿಕಾರಿ ಕನ್ನಿಸಾ ಸಕ್ರಿವಾಲ್, ಐ.ಪಿ.ಎಲ್. ಹಾಗೂ ಮಾದಕ ದ್ರವ್ಯ ಮಾರಾಟ ದಂಧೆಗೆ ಕಡಿವಾಣ ಹಾಕುವ ಭರವಸೆ ನೀಡಿದರು. ಮನವಿ ನೀಡುವಾಗ ರೈತಸಂಘದ ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ, ಮಂಗಸಂದ್ರ ತಿಮ್ಮಣ್ಣ ಕಾಮನೂರು ಮಂಜುನಾಥ ಗೀರೀಶ ತಿಮ್ಮಣ್ಣ ಜನಾರ್ದನ ವಿಶ್ವ ಕುಮಾರ ಮುಂತಾದವರು ಇದ್ದರು.

ಚಿಕ್ಕಬಳ್ಳಾಪುರ ಬಂದ್ ಯಶಸ್ವಿ



ಚಿಕ್ಕಬಳ್ಳಾಪುರ: ಎಚ್.ಎನ್. ವ್ಯಾಲಿ ತ್ಯಾಜ್ಯ ನೀರನ್ನು ಮೂರನೇ ನೇ ಹಂತದ ಶುದ್ಧೀಕರಣಕ್ಕೆ ಆಗ್ರಹಿಸಿ ವಿವಿಧ ಸಂಘಟನೆಗಳು ಭಾನುವಾರ ಕರೆ ನೀಡಿದ್ದ ಚಿಕ್ಕಬಳ್ಳಾಪುರ ಬಂದ್ ಶಾಂತಿಯುತವಾಗಿ, ಯಶಸ್ವಿಯಾಗಿ ನೆರವೇರಿತು.

ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್, ಶಾಶ್ವತ ನೀರಾವರಿ ಹೋರಾಟ ಸಮಿತಿ, ರೈತ ಸಂಘಟನೆ, ಕನ್ನಡ ಪರ ಸಂಘಟನೆಗಳು, ದಲಿತ ಪರ ಸಂಘಟನೆಗಳು ಸೇರಿದಂತರ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಡೆದ ಚಿಕ್ಕಬಳ್ಳಾಪುರ ಬಂದ್ ಗೆ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿತ್ತು.

ಬೆಂಗಳೂರಿನ ಹೆಬ್ಬಾಳ, ನಾಗವಾರದ ತ್ಯಾಜ್ಯ ನೀರನ್ನು ಕೆ.ಸಿ, ಎಚ್.ಎನ್ ವ್ಯಾಲಿಯಾಗಿ ಎರಡು ಹಂತಗಳಲ್ಲಿ ಶುದ್ದೀಕರಿಸಿ ಕೋಲಾರ , ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಹಲವು ಕೆರೆಗಳಿಗೆ ನೀರನ್ನು ಹರಿಸಲಾಗುತ್ತಿದೆ. ಆದರೆ ತ್ಯಾಜ್ಯ ನೀರನ್ನು ಮೂರನೇ ಹಂತದಲ್ಲಿ ಶುದ್ದೀಕರಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಕೇಳಿ ಬರುತ್ತಿದೆ. ಇದರ ಭಾಗವಾಗ ಸರ್ಕಾರ ಕಳೆದ ಬಜೆಟ್ ನಲ್ಲಿ ಮೂರನೇ ಹಂತದ ಶುದ್ದೀಕರಣಕ್ಕೆ ಅಸ್ತು ನೀಡುತ್ತದೆ ಎಂಬ ನೀರಿಕ್ಷೆ ಇತ್ತು. ಆದರೆ ನೀರೀಕ್ಷೆ ಹುಸಿಯಾದ ಕಾರಣ ಜಿಲ್ಲೆಯ ಜನರ ಆಗ್ರಹಕ್ಕೆ ಕಾರಣವಾಗಿತ್ತು.

ಬಂದ್‌ಗೆ ಜನಬೆಂಬಲ

ಭಾನುವಾರ ನಡೆದ ಚಿಕ್ಕಬಳ್ಳಾಪುರ ಬಂದ್‌ಗೆ ಸಂಘಟನೆಗಳನ್ನು ಹೊರೆತುಪಡಿಸಿ ಜಿಲ್ಲೆಯ ವಿವಿಧ ಮೂಲಗಳಿಂದ ನೂರಾರು ಜನರು ಸ್ವಯಂ ಪ್ರೇರಿತರಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಆಟೋ, ಟ್ಯಾಕ್ಸಿ ಸಂಘಟನೆಗಳು ಬಂದ್ ಗೆ ಸ್ವಯಂ ಘೋಷತವಾಗಿ ಬೆಂಬಲ ಸೂಚಿಸಿದ್ದರಿಂದ ಪ್ರಯಾಣಿಕರು ಮಧ್ಯಾಹ್ನದ ವರೆಗೆ ಪರದಾಡುವಂತಾಯಿತು. ಮಧ್ಯಾಹ್ನ ನಂತರ ವಾಹನ ಚಲಾವನೆ ಸಹಜ ಸ್ಥಿತಿಗೆ ಮರಳಿತ್ತು. ವ್ಯಾಪಾರ ವ್ಯವಹಾರಗಳು ಸಹಜ ಸ್ಥಿತಿಗೆ ಮರಳಿತು. ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಸಂದೀಪ್ ರೆಡ್ಡಿ ಅವರೊಂದಿಗೆ ಪ್ರತಿಭಟನಾ ಮೆರವಣಿಗೆಗಳಲ್ಲಿ ಭಾಗವಹಿಸಿ ಬಂದ್‌ಗೆ ಸಾಥ್ ನೀಡಿದರು.

ಆರೋಪ, ಪ್ರತ್ಯಾರೋಪ ವಿವಾದಕ್ಕೆ ಒಳಗಾದ ಎಂ ಕೊತ್ತೂರು ಡೇರಿ

ಕೆಜಿಎಫ್: ತಾಲೂಕಿನ ಮಾರಿಕುಪ್ಪ ಗ್ರಾಮ ಪಂಚಾಯಿತಿಗೆ ಸೇರಿದ ಎಂ ಕೊತ್ತೂರು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ಕಾರ್ಯದರ್ಶಿ ರಾಧಾ ಹಾಗೂ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಭಾಗ್ಯಲಕ್ಷ್ಮಿ ಜಯರಾಮರೆಡ್ಡಿ ನಡುವಿನ ಆರೋಪ, ಪ್ರತ್ಯಾರೋಪಗಳಿಂದ ವಿವಾದ ಉಂಟಾಗಿದೆ.

ಹಾಲು ಹಾಕಲು ಸಹಕಾರ ಸಂಘದ ಕಚೇರಿಗೆ ಹೋದಾಗ ಹಾಲು ಹಾಕಿಸಿಕೊಳ್ಳಲು ಅವಕಾಶ ನೀಡದೇ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹೊರಗೆ ಕಳುಹಿಸಿದ್ದಾರೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ಭಾಗ್ಯಲಕ್ಷ್ಮಿ ಆರೋಪಿಸಿದರು. ಈ ಕುರಿತು ಎಂ ಕೊತ್ತೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಮುಂಭಾಗದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಐದು ವರ್ಷಗಳ ಹಿಂದೆ ಪ್ರಾರಂಭವಾದ ಈ ಸಂಘಕ್ಕೆ ತಾವೂ ಷೇರು ಪಡೆದು ಹಾಲು ಸರಬರಾಜು ಮಾಡುತ್ತಿದ್ದೆ. ಆದರೆ ಕಳೆದ ಒಂದು ಮತ್ತು ಅರ್ಧ ವರ್ಷದಿಂದ ಕೆಲವು ಕಾರಣಗಳಿಂದ ಹಾಲು ಸರಬರಾಜು ಮಾಡಲಾಗಿಲ್ಲ. ಇದೀಗ ಹಾಲು ಸರಬರಾಜು ಮಾಡಲು ಬಂದಾಗ ತಮ್ಮ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ ಎಂದು ನೋಟಿಸ್ ನೀಡಲಾಗಿದೆ ಎಂದು ಹೇಳಿದರು.

ಸಹಕಾರ ಸಂಘದಲ್ಲಿ ಸಾಮಾನ್ಯ ಸಭೆ ನಡೆಸುವುದು ಕಡ್ಡಾಯವಾಗಿದ್ದು, ಇಂದಿನವರೆಗೆ ಸರಿಯಾದ ರೀತಿಯಲ್ಲಿ ಸಭೆ ನಡೆಸಿಲ್ಲ ಎಂದು ಆರೋಪಿಸಿದ ಅವರು, ಪ್ರಸ್ತುತ ಸಂಘವನ್ನು ಖಾಸಗಿ ಕಟ್ಟಡದಲ್ಲಿ ನಡೆಸುತ್ತಿರುವುದರಿಂದ ಶೇರುದಾರರಿಗೆ ಸರಿಯಾದ ಮಾಹಿತಿ ನೀಡಲಾಗುತ್ತಿಲ್ಲ. ಆದ್ದರಿಂದ ಡೇರಿ ಕಟ್ಟಡವನ್ನು ಸರ್ಕಾರಿ ಜಾಗದಲ್ಲಿ ನಿರ್ಮಿಸಿ, ಎಲ್ಲಾ ಶೇರುದಾರರಿಗೆ ಕಾನೂನುಬದ್ಧವಾಗಿ ನೋಟಿಸ್ ನೀಡುತ್ತಾ ಸಭೆಗಳನ್ನು ನಡೆಸಬೇಕು ಎಂದು ಆಗ್ರಹಿಸಿದರು.



ಹಳೆ ಗೂಡು ಮಾರುಕಟ್ಟೆ ಎಪಿಎಂಸಿ ಆಗಲಿ

ಶಿಡ್ಲಘಟ್ಟ: ನಗರದ ಹನುಮಂತಪುರ ಗೇಟ್ ಬಳಿ ನಿರ್ಮಾಣವಾಗುತ್ತಿರುವ ಸುಮಾರು 200 ಕೋಟಿ ರೂಪಾಯಿ ವೆಚ್ಚದ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆ ಕಾಮಗಾರಿಯನ್ನು ರಾಜ್ಯ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತೆ ಹಾಗೂ ರೇಷ್ಮೆ ನಿರ್ದೇಶಕರಾದ ಸಿ.ಟಿ. ಶಿಲ್ಪಾ ನಾಗ್ ಅವರು ವೀಕ್ಷಿಸಿದ್ದಾರೆ.ಈ ಮಾರುಕಟ್ಟೆ ಮುಂದಿನ ಎರಡು ವರ್ಷಗಳಲ್ಲಿ ಹೊಸ ಜಾಗಕ್ಕೆ ಸ್ಥಳಾಂತರಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ನಗರದಲ್ಲಿರುವ ಹಳೆಯ ಗೂಡು ಮಾರುಕಟ್ಟೆ ಆವರಣವನ್ನು ಎಪಿಎಂಸಿ ಮಾರುಕಟ್ಟೆಯನ್ನಾಗಿ ಪರಿವರ್ತಿಸಬೇಕು ಎಂದು ರೈತ ಮುಖಂಡ ರವಿಪ್ರಕಾಶ್ ಒತ್ತಾಯಿಸಿದ್ದಾರೆ.

ಶಿಡ್ಲಘಟ್ಟ ತಾಲೂಕಿನ ರೈತರು ತಾವು ಬೆಳೆದ ಹಣ್ಣು, ಹೂವು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಚಿಕ್ಕಬಳ್ಳಾಪುರ, ಕೋಲಾರ ಅಥವಾ ಚಿಂತಾಮಣಿಯಂತಹ ದೂರದ ಮಾರುಕಟ್ಟೆಗಳಿಗೆ ಹೋಗಬೇಕಾದ ಅನಿವಾರ್ಯತೆ ಇದೆ.ಇದರಿಂದ ಸಾರಿಗೆ ವೆಚ್ಚ ಹೆಚ್ಚಾಗುತ್ತಿರುವುದಲ್ಲದೆ, ರೈತರಿಗೆ ಸಾಕಷ್ಟು ಸಮಯದ ವ್ಯರ್ಥ ಮತ್ತು ಅನಾನುಕೂಲವಾಗುತ್ತಿದೆ. ಒಂದು ವೇಳೆ ನಗರದ ಹಳೆಯ ಗೂಡು ಮಾರುಕಟ್ಟೆ ಆವರಣದಲ್ಲೇ ಎಪಿಎಂಸಿ ಆರಂಭವಾದರೆ ರೈತರಿಗೆ ತಮ್ಮ ಬೆಳೆಗಳನ್ನು ಸ್ಥಳೀಯವಾಗಿಯೇ ಮಾರಾಟ ಮಾಡಲು ದೊಡ್ಡ ಅನುಕೂಲವಾಗಲಿದೆ ಎಂದರು. ಮರಗೆಲಸ ಕಾರ್ಮಿಕರ ಸಂಘದ ಅಧ್ಯಕ್ಷರಾದ ಪ್ರದೀಪ್ ದೀಪು, ಸಾಮಾಜಿಕ ಹೋರಾಟಗಾರ್ತಿ ಮಧು ಲತಾ, ಬೀದಿ ಬದಿ ವ್ಯಾಪಾರಸ್ಥರ ಸಂಘದ ತಾಲೂಕು ಕಾರ್ಯದರ್ಶಿ ಸುರೇಶ್,ಇಂಥಿಯಸ್ ಪಾಷಾ ಸೇರಿದಂತೆ ಇನ್ನೂ ಮುಂತಾದವರು ಪಾಲ್ಗೊಂಡಿದ್ದರು.



ವಾತ್ಸಲ್ಯ ಮನೆ ಹಸ್ತಾಂತರ: ಗ್ರಾಮಾಭಿವೃದ್ಧಿಗೆ ಒತ್ತು

ಶಿಡ್ಲಘಟ್ಟ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ವಾತ್ಸಲ್ಯ' ಕಾರ್ಯಕ್ರಮದಲ್ಲಿ ನಿರ್ಮಿಸಲಾದ ಸುಸಜ್ಜಿತ ಮನೆಯನ್ನು ಶಿಡ್ಲಘಟ್ಟ ತಾಲೂಕಿನ ಹಂಡಿಗಿನಾಳ ಗ್ರಾಮದ ಫಲಾನುಭವಿ ಕೃಷ್ಣಮ್ಮ ಅವರಿಗೆ ಹಸ್ತಾಂತರಿಸಲಾಯಿತು. ಈ ಹೃದಯಸ್ಪರ್ಶಿ ಕಾರ್ಯಕ್ರಮವು ಗ್ರಾಮಸ್ಥರ ಸಮ್ಮುಖದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಜರುಗಿತು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ 'ವಾತ್ಸಲ್ಯ' ಯೋಜನೆಯಲ್ಲಿ, ಸುಮಾರು 1.35 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಮನೆ ನಿರ್ಮಾಣವಾಗಿದೆ. ಕೃಷ್ಣಮ್ಮ ಅವರ ಜೀವನ ಮಟ್ಟ ಸುಧಾರಿಸಲು ಈ ಯೋಜನೆ ದೊಡ್ಡ ಆಸರೆಯಾಗಿದೆ.ಈ ಸಂದರ್ಭದಲ್ಲಿ ಮಾತನಾಡಿದ ಶಿಡ್ಲಘಟ್ಟ ತಾಲೂಕಿನ ಮಾಜಿ ಶಾಸಕ ಎಂ. ರಾಜಣ್ಣ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕೇವಲ ಆರ್ಥಿಕ ಸಹಾಯವಷ್ಟೇ ಅಲ್ಲದೆ, ಕುಟುಂಬಗಳ ಅಭಿವೃದ್ಧಿಗಾಗಿ ಹತ್ತು ಹಲವು ಯೋಜನೆಗಳನ್ನು ರೂಪಿಸಿದೆ. ವಾತ್ಸಲ್ಯ ಮನೆ ನಿರ್ಮಾಣದಂತಹ ಕಾರ್ಯಗಳು ಸಮಾಜದಲ್ಲಿ ಬಡತನ ನಿರ್ಮೂಲನೆಗೆ ಮಾದರಿಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಯೋಜನಾಧಿಕಾರಿ ಪ್ರಸಾದ್, ವಲಯ ಮೇಲ್ವಿಚಾರಕ ನಾಗರಾಜು, ಜ್ಞಾನವಿಕಾಸ ಸಮನ್ವಯಾಧಿಕಾರಿ ಅರುಣಾ, ಒಕ್ಕೂಟದ ಅಧ್ಯಕ್ಷೆ ಲಕ್ಷ್ಮಿದೇವಮ್ಮ, ಸೇವಾ ಪ್ರತಿನಿಧಿ ಮಮತಾ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ತ್ಯಾಗರಾಜು ಮತ್ತು ಸುರೇಶ್, ಡೈರಿ ಸೆಕ್ರೆಟರಿ ಮುನಿರೆಡ್ಡಿ ಹಾಗೂ ಗ್ರಾಮದ ಗಣ್ಯರು, ಸ್ವಸಹಾಯ ಸಂಘದ ಸದಸ್ಯರು ಪಾಲ್ಗೊಂಡಿದ್ದರು.

ವಕ್ಕಲೇರಿ ಗ್ಯಾಲೆಕ್ಸಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸರಸ್ವತಿ ಪೂಜಾ ಕಾರ್ಯಕ್ರಮ

ಮಕ್ಕಳನ್ನು ಸುಸಂಸ್ಕೃತರನ್ನಾಗಿಸುವುದು ಕರ್ತವ್ಯ

ಕೋಲಾರ: ಮಕ್ಕಳನ್ನು ಸುಸಂಸ್ಕೃತರನ್ನಾಗಿಸುವುದು ಎಲ್ಲರ ಕರ್ತವ್ಯ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಆರೋಗ್ಯ ಶಿಕ್ಷಣಾಧಿಕಾರಿ ಹಾಗೂ ಸರ್ಕಾರಿ ನೌಕರರ ಸಂಘದ ನಿರ್ದೇಶಕಿ ಎಂ. ಪ್ರೇಮ ರಾಜಪ್ಪ ತಿಳಿಸಿದರು.

ಕೋಲಾರ ತಾಲ್ಲೂಕಿನ ವಕ್ಕಲೇರಿ ಗ್ರಾಮದಲ್ಲಿರುವ ನ್ಯೂ ಸಿದ್ಧಾರ್ಥ ಎಜುಕೇಷನಲ್ ಟ್ರಸ್ಟ್‌ಗೆ ಸೇರಿದ ಗ್ಯಾಲೆಕ್ಸಿ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಏರ್ಪಡಿಸಿದ್ದ ಸರಸ್ವತಿ ಪೂಜಾ ಕಾರ್ಯಕ್ರಮದಲ್ಲಿ ಆಶಯ ಭಾಷಣ ಮಾಡಿ ಮಾತನಾಡುತ್ತಿದ್ದರು.

ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಹೇಳಿಕೊಡುವುದು ಶಿಕ್ಷಕರ ಆದ್ಯ ಕರ್ತವ್ಯ. ಇದರ ಜೊತೆಗೆ ಮಕ್ಕಳನ್ನು ಸುಸಂಸ್ಕೃತ ಪ್ರಜೆಗಳನ್ನಾಗಿ ರೂಪಿಸಲು ಶಿಕ್ಷಕರ ಜೊತೆಗೆ ಪೋಷಕರು ಮತ್ತು ವಿವಿಧ ಸ್ತರಗಳ ಜನರು ಆಸಕ್ತಿ ವಹಿಸಬೇಕು, ಇದು ಎಲ್ಲರ ಕರ್ತವ್ಯ ಎಂದು ಪ್ರತಿಪಾದಿಸಿದರು.

ಗ್ಯಾಲೆಕ್ಸಿ ಶಾಲೆಯ ಮುಖ್ಯಸ್ಥ ರಾಜಪ್ಪನವರಿಗೆ ಬಡತನದ ಬಗ್ಗೆ ಅರಿವು ಇದೆ. ಬಡ ಗ್ರಾ,ಮೀಣ ಮಕ್ಕಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಮೌಲ್ಯಗಳನ್ನು



ಕಲಿಸಲು ಬಯಸಿ ಶಾಲೆಯನ್ನು ಸ್ಥಾಪಿಸಿದ್ದಾರೆ, ಪ್ರತಿದಿನ ಸವಾಲು ಸಮಸ್ಯೆಗಳ ನಡುವೆ ಬಡ ಮಕ್ಕಳಿಗೆ ಅನುಕೂಲವಾಗಬೇಕೆಂಬ ಅವರ ಕನಸು ಈಡೇರಿಸಲು ಪೋಷಕರು ಸಹಕಾರ ನೀಡಬೇಕು ಎಂದರು.

ಪ್ರೇಮ ರಾಜಪ್ಪ ಅವರು ಇದೇ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಹಿರಿಯ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹೃದಯ ಸ್ಪರ್ಶಿ ಸಮಾರಂಭದಲ್ಲಿ ಪ್ರಮಾಣ ಪತ್ರ ನೀಡಿ ಶುಭ ಕೋರಿದರು.

ವಕ್ಕಲೇರಿ ಗ್ರಾಮದ ವೈದ್ಯಾಧಿಕಾರಿ ಡಾ. ರಶ್ಮಿ ಮಾತನಾಡಿ, ಮಕ್ಕಳು ಮೊಬೈಲ್ ಫೋನ್‌ಗೆ ಮಾರು ಹೋಗುವುದನ್ನು ತಪ್ಪಿಸಲು ಪೋಷಕರು ವಿಶೇಷ ಗಮನ ನೀಡಬೇಕು, ಸರ್ಕಾರ ಮಕ್ಕಳನ್ನು ಮೊಬೈಲ್ ಗೀಳಿನಿಂದ ಪಾರು ಮಾಡಲು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಸರಿಯಿದೆ, ಇದಕ್ಕೆ ಪೋಷಕರು ಕೈಜೋಡಿಸಬೇಕು, ಮಕ್ಕಳ ಮಾನಸಿಕ ಹಾಗೂ ದೈಹಿಕ ಆರೋಗ್ಯದ ದೃಷ್ಟಿಯಿಂದ ಪೋಷಕರು ಮಕ್ಕಳಿಗೆ ಮೊಬೈಲ್ ಬಳಸದಂತೆ ಸೂಕ್ತ ಮಾರ್ಗದರ್ಶನ ನೀಡಬೇಕು ಹಾಗೆಯೇ ಶಾಲೆಗಳಲ್ಲೂ ಶಿಕ್ಷಕರು ಮಕ್ಕಳಿಗೆ ತಿಳುವಳಿಕೆ ನೀಡಬೇಕೆಂದರು.

ಶಾಲೆಯ ಪ್ರಿನ್ಸಿಪಾಲರಾದ ಧನಲಕ್ಷ್ಮೀ ಅತಿಥಿಗಳನ್ನು ಸ್ವಾಗತಿಸಿದರು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೊತೆಗೂಡಿ ನಡೆಸಿಕೊಟ್ಟ ಕಾರ್ಯಕ್ರಮ ಅರ್ಥಪೂರ್ಣವಾಗಿತ್ತು. ಪುಟಾಣಿ ಪೂರ್ವಿಕಾಶ್ರೀ, ನವಿತಾ ಅವರ ನಿರೂಪಣೆ, ಸ್ಮಿತಿಕಾ, ತೇಜಸ್ವಿನಿ ಮತ್ತು ಹಾಸ್ಮಿಕಾ ಅವರಿಂದ ಪ್ರಾರ್ಥನೆ, ಪ್ರಥಮ ತರಗತಿಯ ವಿದ್ಯಾರ್ಥಿನಿ ವನ್ಯಾ ಗೌಡ, 1ನೇ ತರಗತಿಯ ಸ್ಮಿತಿಕಾ, 2ನೇ ತರಗತಿಯ ಮೇಘನಾ, 3ನೇ ತರಗತಿಯ ಸಿರಿ, 5ನೇ ತರಗತಿಯ ಹಾಸ್ಮಿಕಾ ಅವರ ಮಾರ್ಗದರ್ಶನದಲ್ಲಿ ನಡೆದ ನೃತ್ಯ, ಮುಜಮಿಲ್ ವಿರ್ಶರತ್ ಮತ್ತು ಮನ್ವಿತ್ ಅವರಿಂದ ಸ್ಕೇಟಿಂಗ್ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕೋಲಾರ ಜಿಲ್ಲೆ ಯುಪಿಎಸ್ಸಿ ಸಾಧಕರಿಗೆ ಅಭಿನಂದನೆ

ಸಾಧಕರಿಗೆ ಸರ್ಕಾರದ ಸಹಕಾರ ಅಗತ್ಯ

ಕೋಲಾರ: ಯುಪಿಎಸ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳ ಸಂದರ್ಶನಕ್ಕೆ ತಮಿಳುನಾಡು ಸೇರಿದಂತೆ ವಿವಿಧ ರಾಜ್ಯ ಸರಕಾರಗಳಿಂದ ಬೆಂಬಲ, ಸಹಾಯ ನೀಡಲಾಗುವಂತೆ ನಮ್ಮ ರಾಜ್ಯ ಸರಕಾರದಿಂದಲೂ ಸಹಾಯ ಅಗತ್ಯವಿದ್ದು, ವ್ಯವಸ್ಥೆಗೆ ಮುಂದಾಗಲಿ ಎಂದು ಯುಪಿಎಸ್ಸಿ ಉತ್ತೀರ್ಣಗೊಂಡ ನೂತನ ಅಭ್ಯರ್ಥಿಗಳು ಬೇಡಿಕೆಯಿಟ್ಟರು. ನಗರ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಫರ್ಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಇರಗಸಂದ್ರ ಎ.ಮಧು, ಈ ಬಾರಿ ತಮಿಳುನಾಡಿನಿಂದ 57 ಮಂದಿ, ಮಹಾರಾಷ್ಟದಿಂದ 60ಕ್ಕೂ ಅಧಿಕ ಮಂದಿ ಉತ್ತೀರ್ಣರಾಗಿದ್ದಾರೆ.

ಆದರೆ ನಮ್ಮ ರಾಜ್ಯದಲ್ಲಿ 25 ಮಂದಿ ಮಾತ್ರ. ಏಕೆ ಕಡಿಮೆ ಎನ್ನುವ ಲೋಪ ಪತ್ತೆ ಹಚ್ಚಬೇಕು. ಸರಕಾರ ಈ ಬಗ್ಗೆ ಚಿಂತಿಸಬೇಕು. ಸಂದರ್ಶನ ಸಮಯದಲ್ಲಿ ಒಂದೂವರೆ ತಿಂಗಲು ಅಲ್ಲಿ ಇರಬೇಕಾಗುತ್ತದೆ. ಅದಕ್ಕೆ ತಮಿಳುನಾಡು ಸರಕಾರವು ಅವರ ರಾಜ್ಯದ ಅಭ್ಯರ್ಥಿಗಳಿಗೆ ಬೆಂಬಲ ನೀಡುತ್ತಿದೆ. ಹಾಗಾಗಿ ನಮ್ಮಲ್ಲಿಯೂ ಬೆಂಬಲ ಸಿಗಬೇಕಿದೆ ಎಂದು ಮನವಿ ಮಾಡಿದರು.

ಹಾಸ್ಟೆಲ್ ನಿರ್ಮಾಣ ಇಂದಿನ ಅಗತ್ಯ: ಉತ್ತೀರ್ಣಗೊಂಡ ಅಭ್ಯರ್ಥಿ ಸಾಗರ್ ಮಾತನಾಡಿ, ಯುಪಿಎಸ್ಸಿ ಅಭ್ಯರ್ಥಿಗಳಿಗೆ ತಮಿಳುನಾಡು ಸರಕಾರ ಸಹಾಯಾಡುತ್ತಿದೆ. ದೆಹಲಿಯಲ್ಲಿ ಉಳಿಯಲು ಖರ್ಚು ಹೆಚ್ಚು, ಹೀಗಾಗಿ ರಾಜ್ಯ ಸರ್ಕಾರ ಕೂಡ ಸಹಾಯ ಮಾಡಬೇಕು.



ಪೋಷಕರು ಹಾಗೂ ಸಮುದಾಯ ಸಹಾಯ ಮಾಡಿದ್ದು, ಒಕ್ಕಲಿಗ ಸಮುದಾಯದಿಂದ ಹಾಸ್ಟೆಲ್ ನಿರ್ಮಾಣವಾಗಬೇಕು ಎಂದರು.

ಮತ್ತೋರ್ವ ಅಭ್ಯರ್ಥಿ ವರುಣ್ ಮಾತನಾಡಿ, ಡಿ.ಕೆ.ರವಿ ಇದ್ದಾಗ ಪಿಯುಸಿ ಓದುತ್ತಿದ್ದೆ. ಅವರ ಕೆಲಸ ವೈಖರಿ ನನಗೆ ಸ್ಪೂರ್ತಿ. ನನ್ನ ತಾತ ಅವರ ಬಗ್ಗೆ ಹೇಳುತ್ತಿದ್ದರು. ಈಗ ಒಕ್ಕಲಿಗ ಸಮುದಾಯದವರು ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನವರು ಯುಪಿಎಸ್ಸಿ ಪಾಸ್ ಆಗಬೇಕು. ಅವರಿಗೆ ಸಮಾಜ ಸಹಾಯ ಮಾಡಬೇಕು ಎಂದರು.

ಫರ್ಸ್ಟ್ ಸರ್ಕಲ್ ರಾಜ್ಯ ಪ್ರಧಾನ ಕಾರ್ಯದರ್ಶಿ ಅಂಬರೀಷ್, ಫಸ್ಟ್ ಸರ್ಕಲ್ ಒಕ್ಕಲಿಗ ಉದ್ಯಮಿ ಜಿಲ್ಲಾ ಅಧ್ಯಕ್ಷ ಸಿಎಂಆರ್ ಶ್ರೀನಾಥ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಶಂಕರಪ್ಪ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಕೆ.ಚಂದ್ರಶೇಖರ್, ಕೋಮುಲ್ ನಿರ್ದೇಶಕ ಚಂಜಿಮಲೆ ರಮೇಶ್ ಮತ್ತಿತರರಿದ್ದರು.

ಕಿರುಸುದ್ದಿ

ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ: ಶಾಸಕ



ಬೇಲೂರು: ದೇಶದ ಬೆನ್ನೆಲುಬಾಗಿರುವ ರೈತರಂತೆ ಮಹಿಳೆಯರೂ ದೇಶದ ಸಮಗ್ರ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು. ತಾಲೂಕು ಆಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಸ್ತ್ರೀಶಕ್ತಿ ಒಕ್ಕೂಟ, ಶಿಲ್ಪಕಲಾ ಮಹಿಳಾ ಒಕ್ಕೂಟ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾ ಯಕಿಯರ ಸಂಘದ ವತಿಯಿಂದ ಪಟ್ಟಣದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯ ಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತಾಲೂಕಿನ ಹಗರೆಯಲ್ಲಿ ರುವ ಸ್ತ್ರೀಶಕ್ತಿ ಸಂಘದ ಭವನ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ನೀಡಲು ಪ್ರಯತ್ನಿಸುತ್ತೇನೆ. ಮಹಿಳೆ ಯರ ಸಬಲೀಕರಣಕ್ಕಾಗಿ ಸರ್ಕಾರ ಹಲವು ಯೋಜ ನೆಗಳನ್ನು ಜಾರಿಗೆ ತಂದಿದ್ದು, ಸರ್ಕಾರವೂ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಶೇ.33 ಮೀಸಲಾತಿ ನೀಡಲು ಮುಂದಾಗಿರು ವುದು ಮಹಿಳೆಯರ ಪಾತ್ರವನ್ನು ಇನ್ನಷ್ಟು ವಿಸ್ತರಿಸುವುದಕ್ಕೆ ಕಾರಣವಾಗಲಿದೆ ಎಂದು ತಿಳಿಸಿದರು. ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ತಾಲೂಕು ಸ್ತ್ರೀಶಕ್ತಿ ಒಕ್ಕೂ ಟದ ಅಧ್ಯಕ್ಷೆ ಭಾರತೀಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯೋಜನಾಧಿಕಾರಿ ಇಂಪಾ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಕಾಮಾಕ್ಷಿ ರಾಜು, ತಾಪಂ ಮಾಜಿ ಅಧ್ಯಕ್ಷೆ ಕಮಲಾ ಚನ್ನಪ್ಪ, ಚಿಕ್ಕಮಗಳೂರಿನ ಉಪನ್ಯಾಸಕಿ ನಾಗಶ್ರೀ, ನಾಗರತ್ನಾ ಉಪಸ್ಥಿತರಿದ್ದರು.

ಶ್ರೀರಂಗನಾಥಸ್ವಾಮಿ ರಥೋತ್ಸವ: ಧಾರ್ಮಿಕ ಸಭೆ

ಕೊಣನೂರು: ಲೌಕಿಕ ಬದುಕಿನಲ್ಲಿ ಕಣ್ಣಿನ ಆಕರ್ಷಣೆಗೆ ಹೆಚ್ಚಿನ ಒತ್ತು ನೀಡುವ ಬದಲು ಮಾನಸಿಕವಾಗಿ ನೆಮ್ಮದಿ ನೀಡುವ ಸಂಗತಿಗಳನ್ನು ಮನಗಂಡು ಮೈಗೂಡಿಸಿಕೊಳ್ಳದಿದ್ದಲ್ಲಿ ಅನರ್ಥಗಳು ಹೆಚ್ಚುತ್ತವೆ ಎಂದು ಶ್ರೀ ನಿರ್ಮಲನಂದನಾಥಸ್ವಾಮೀಜಿ ತಿಳಿಸಿದರು. ಹೋಬಳಿಯ ಚಿಕ್ಕಬೊಮ್ಮಹಳ್ಳಿಯ ಶ್ರೀ ರಂಗನಾಥಸ್ವಾಮಿ ರಥೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು ಬದುಕೆಂಬ ಜಾತ್ರೆಯಲ್ಲಿ ಅಗತ್ಯವಾದುದಕ್ಕಿಂತ ಅನವಶ್ಯಕತೆಗಳ ಬಗ್ಗೆ ಮನುಷ್ಯನು ಆಕರ್ಷಿತನಾಗುತ್ತಿದ್ದು ವಾಸ್ತವ ಅರ್ಥವಾಗುವವರೆಗೆ ಅವನಿಗೆ ಮೋಕ್ಷ ಸಿಗದು ಎಂದರು. 2025ನೇ ಸಾಲಿನ ಕೃಷಿ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಗತಿಪರ ಕೃಷಿಕ ಡಾ. ಎಂ.ಸಿ. ರಂಗಸ್ವಾಮಿ ಹಾಗೂ ಬಯಲಾಟ ಕ್ಷೇತ್ರದ ಗುಂಡೂರಾಜ್ ಅವರನ್ನು ಸನ್ಮಾನಿಸಲಾಯಿತು. ಹಾಸನ ಆದಿಚುಂಚನಗಿರಿ ಶಾಖಾಮಠದ ಶ್ರೀ ಶಂಭುನಾಥಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಗೂ ಮುಂಚೆ ಬೊಮ್ಮನಹಳ್ಳಿಗೆ ಆಗಮಿಸಿದ ನಿರ್ಮಲಾನಂದನಾಥಸ್ವಾಮೀಜಿಯವರನು ಮುತ್ತಿನ ಪಲ್ಲಕ್ಕಿಯಲ್ಲಿ ಕರೆತರಲಾಯಿತು. ಸಭೆಯಲ್ಲಿ ಪ್ರೊ.ಎಂ.ಕೃಷ್ಣಗೌಡ, ಕಬ್ಬಳಿ ಮಠದ ಶಿವಪುತ್ರನಾಥಸ್ವಾಮೀಜಿ, ಬಸವಲಿಂಗಸ್ವಾಮೀಜಿ, ಬಸವರಾಜೇಂದ್ರಸ್ವಾಮೀಜಿ, ತಾಲೂಕು ಜೆಡಿಎಸ್ ಅಧ್ಯಕ್ಷ ಹೊನ್ನವಳ್ಳಿ ಸತೀಶ್, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಬ್ಬಳಿಗೆರೆ ಸೋಮಶೇಖರ್, ಹಾರಂಗಿ ಮಹಾಮಂಡಳದ ಅಧ್ಯಕ್ಷ ಎಸ್.ಸಿ.ಚೌಡೇಗೌಡ, ಮುಖಂಡ ಜಿ.ಜೆ .ಅಪ್ಪಣ್ಣ, ಪ್ರಾಂಶುಪಾಲ ಮಹೇಶ್, ಕೋಡಿಗೌಡ, ಚನ್ನರಾಜೇಗೌಡ, ಮಾಧವ, ಅಣ್ಣೇಗೌಡ, ಕೇಶವೇಗೌಡ, ವಿವಿಧ ಗ್ರಾಮಗಳ ಮುಖಂಡರು, ಸುತ್ತಮುತ್ತಲ ಗ್ರಾಮಗಳ ಭಕ್ತರು ಇದ್ದರು.

ಜಯಶ್ರೀಗೆ ಪಿಎಚ್‌ಡಿ ಪ್ರದಾನ

ಮಧುಗಿರಿ: ತಾಲೂಕಿನ ಕಸಬಾ ಹೋಬಳಿಯ ಸಿದ್ದಾಪುರ ಗ್ರಾಮದ ಶ್ರೀ ಲಕ್ಷ್ಮೀನಾರಾಯಣ್ ಹಾಗೂ ಕಮಲಮ್ಮ ಅವರ ಪುತ್ರಿಯಾದ ಜಯಶ್ರೀ ಎಸ್.ಎಲ್ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಾಡರ್ನ್ ಇಂಡಿಯನ್ ಲಿಟರರಿ ಕ್ರಿಟಿಸಿಸಂ ಇನ್ ಇಂಗ್ಲಿಷ್, ಪ್ರಿನ್ಸಿಪಲ್ಸ್ ಅಂಡ್ ಪ್ರಾಕ್ಟೀಸಸ್ ಎಂಬ ಮಹಾಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಜಯಶ್ರೀ ಅವರು ರಾಜ್ಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇವರ ಅನೇಕ ಸಂಶೋಧನಾ ಲೇಖನಗಳು ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಸಾಹಿತ್ಯ ಸಂಶೋಧನಾ ಪತ್ರಿಕೆಗಳು ಮತ್ತು ಮಾಸಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರಿಗೆ ಕಾಲೇಜಿನ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗೂ ಕುಟುಂಬಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.





ವೈ.ಎನ್.ಹೊಸಕೋಟೆ ಹೋಬಳಿಯ ಲಿಂಗದಹಳ್ಳಿ ಗ್ರಾಮದಲ್ಲಿ ಶನಿವಾರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಎಚ್.ವಿ.ವೆಂಕಟೇಶ್ ರೈತರಿಗೆ ಕೃಷಿ ಸಾಮಗ್ರಿಗಳನ್ನು ವಿತರಿಸಿದರು.

ಫಲಾನುಭವಿಗಳಿಗೆ ಕೃಷಿ ಸಾಮಗ್ರಿ ವಿತರಣೆ

ವೈ.ಎನ್.ಹೊಸಕೋಟೆ: ಹೋಬಳಿಯ ಲಿಂಗದಹಳ್ಳಿ ಗ್ರಾಮದಲ್ಲಿ ಶನಿವಾರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಶಾಸಕ ಎಚ್.ವಿ.ವೆಂಕಟೇಶ್ ರೈತರಿಗೆ ಕೃಷಿ ಸಾಮಗ್ರಿಗಳನ್ನು ವಿತರಿಸಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಎಸ್‌ಸಿಪಿ ಹಾಗೂ ಟಿಎಸ್‌ಪಿ ಯೋಜನೆಯಡಿ ಕೊಳವೆಬಾವಿ ಸೌಲಭ್ಯ ಪಡೆದಿದ್ದ 14 ಅರ್ಹ ಫಲಾನುಭವಿಗಳಿಗೆ ಪಂಪ್‌ಸೆಟ್, ಮೋಟಾರ್, ಪೈಪ್ ಹಾಗೂ ಅಗತ್ಯ ವಿದ್ಯುತ್ ಸಾಮಗ್ರಿಗಳನ್ನು ಶಾಸಕರು ವಿತರಿಸಿದರು. ಲಿಂಗದಹಳ್ಳಿ-ಸಾಸಲಕುಂಟೆ ರಸ್ತೆಯಿಂದ ಜೆ. ಪಾಳ್ಯ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸುಮಾರು 50 ಲಕ್ಷ ರೂಪಾಯಿ ವೆಚ್ಚದ ಡಾಂಬರು ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ತುಮುಲ್ ನಿರ್ದೇಶಕ ಚಂದ್ರಶೇಖರ ರೆಡ್ಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಕೆ.ಎಸ್. ಪಾಪಣ್ಣ, ಮುಖಂಡರಾದ ನಾಗೇಂದ್ರ ರೆಡ್ಡಿ, ಸಣ್ಣ ರಾಮರೆಡ್ಡಿ, ಬೋರ್ವೆಲ್ ನಾಗೇಶ್, ಶ್ರೀರಾಮರೆಡ್ಡಿ, ಮದನ್ ರೆಡ್ಡಿ, ಹನುಮೇಶ್, ವೇಣುಗೋಪಾಲ್ ರೆಡ್ಡಿ, ಚಿಟ್ಟಿ, ನಾಗರಾಜಪ್ಪ, ಕರಿಯಣ್ಣ, ಧನುಂಜಯ್ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಕೊಣನೂರು ಹೋಬಳಿಯ ಚಿಕ್ಕಬೊಮ್ಮನಹಳ್ಳಿಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ಶ್ರೀನಿರ್ಮಲಾನಂದನಾಥ ಸ್ವಾಮೀಜಿ ರಾಜ್ಯೋತ್ಸವ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿದರು.

ಶಿವ ವಿವಿಧೋದ್ದೇಶ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನೆ

ಸ್ವಾರ್ಥ ಮನೋಭಾವ ಬಿಡಿ

ತಿಪಟೂರು: ಹಿಂದಿನ ಕಾಲದಲ್ಲಿ ಇನ್ನೊಬ್ಬರ ಋಣದಲ್ಲಿ ಸಾಯಬಾರದು ಎಂಬ ನೈತಿಕ ಮೌಲ್ಯಗಳನ್ನು ಜನರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇಂದಿನ ಕಾಲದಲ್ಲಿ ಧರ್ಮಪ್ರಜ್ಞೆಯನ್ನು ಮೀರಿಸುವ ರೀತಿಯಲ್ಲಿ ಸ್ವಾರ್ಥದ ಮನೋಭಾವ ಹೆಚ್ಚುತ್ತಿರುವುದು ವಿಷಾದಕರ ಸಂಗತಿ ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದದರು.

ನಗರದ ಕೆ.ಆರ್.ಬಡಾವಣೆ, ಗೋವಿನಪುರ ವೃತ್ತದಲ್ಲಿ ನಿರ್ಮಿಸಲಾದ ಶಿವ ವಿವಿಧೋದ್ದೇಶ ಸಹಕಾರ ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಮಾತನಾಡಿದರು. ಕಲಿಯುಗದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ ಸ್ವಾರ್ಥಕ್ಕೆ ಒಳಗಾದ ಮನುಷ್ಯ ಯಾವುದಕ್ಕೂ ಹಿಂದೆ ಮುಂದೆ ನೋಡದೆ ನಡೆದುಕೊಳ್ಳುವ ಪರಿಸ್ಥಿತಿ ಸಮಾಜದಲ್ಲಿ ಕಂಡುಬರುತ್ತಿದೆ. ಹಿಂದೆ ಆಸ್ತಿಗೆ ಒಬ್ಬ ಮಗ, ಆಸರೆಗೆ ಒಬ್ಬ ಮಗಳು ಎಂಬ ಮಾತು ಪ್ರಚಲಿತದಲ್ಲಿತ್ತು.

ಆದರೆ ಇತ್ತೀಚಿನ ದಿನಗಳಲ್ಲಿ ಕೆಲ ಹೆಣ್ಣುಮಕ್ಕಳು ತಂದೆಯ ಆಸ್ತಿಗಾಗಿ ನ್ಯಾಯಾಲಯದ ಮೊರೆಹೋಗುತ್ತಿರುವುದು ಸಂಬಂಧಗಳ ಮೌಲ್ಯಗಳನ್ನು ಕುಗ್ಗಿಸುವ ಕ್ರೌರ್ಯ ಹಾಗೂ ಅಮಾನವೀಯತೆ ಯಾಗಿದೆ ಇಂತಹ ಘಟನೆಗಳಿಂದ ಕುಟುಂಬ ಸಂಬಂಧಗಳಲ್ಲಿ ಬಿರುಕುಗಳು ಮೂಡಿ, ಬಂಧಗಳು ದೂರವಾಗುತ್ತಿರುವುದು ದುಃಖಕರ ಸಂಗತಿ ಎಂದು ಹೇಳಿದರು.

ಮನುಷ್ಯ ಜೀವನದಲ್ಲಿ ಮಾನವೀಯ ಸಂಬಂಧಗಳು ಅತ್ಯಂತ ಮುಖ್ಯವಾಗಿದ್ದು, ಮನುಷ್ಯ ಮನುಷ್ಯರ ನಡುವಿನ ಬಂಧಗಳು ಉಳಿದಾಗ ಮಾತ್ರ ಜೀವನಕ್ಕೆ ನಿಜವಾದ ಅರ್ಥ ಸಿಗುತ್ತದೆ. ಸಮಾಜದಲ್ಲಿ ಸಂಬಂಧಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದ



> ತಂದೆ ತಾಯಿ ಮತ್ತು ಮಕ್ಕಳ ನಡುವಿನ ಸಂಬಂಧವು ಬಹಳ ಅಮೂಲ್ಯವಾದದ್ದು. ಅಂತಹ ಸಂದರ್ಭಗಳಲ್ಲಿ ನ್ಯಾಯಾಲಯದ ಮೊರೆ ಹೋಗುವುದಕ್ಕಿಂತ ಪರಸ್ಪರ ಕುಳಿತು ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಉತ್ತಮ.
>
> ■ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ತರಳಬಾಳು ಜಗದ್ಗುರು ಬೃಹನ್ಮಠ

ಪರಸ್ಪರ ಗೌರವ, ಸಹಾನುಭೂತಿ ಮತ್ತು ವಿಶ್ವಾಸದಿಂದ ಸಂಬಂಧಗಳಿಗೆ ಬೆಲೆ ನೀಡಬೇಕು. ಕಾನೂನುಗಳನ್ನು ಉತ್ತಮ ಉದ್ದೇಶದಿಂದ ರೂಪಿಸಲಾಗಿದ್ದರೂ, ಅವುಗಳನ್ನು ತಪ್ಪಿಸುವ ಮಾರ್ಗ ಗಳನ್ನು ಹುಡುಕುವ ಮನೋಭಾವ ಕೆಲವರಲ್ಲಿ ಕಾಣಿಸು ತ್ತಿರುವುದು ದುಃಖಕರ ಸಂಗತಿಯಾಗಿದೆ ಎಂದರು.ಸಂಘದ ಅಧ್ಯಕ್ಷ ಆರ್.ಬಿ.ಆನಂದಮೂರ್ತಿ ಸಹಕಾರ ಸಂಘಗಳು ಸಮಾಜದ ಆರ್ಥಿಕ ಅಭಿವೃದ್ಧಿಗೆ ಪ್ರಮುಖ ಆಧಾರವಾಗಿವೆ. ಸಾಮಾನ್ಯ ಜನರು ಪರಸ್ಪರ ಸಹಕಾರದ ಮೂಲಕ ತಮ್ಮ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಹಕಾರ ಸಂಘಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು. ತಾಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಪಿ.ಬಿ.ನಂಜುಡಪ್ಪ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಜಗದೀಶ್, ನಿರ್ದೇಶಕರಾದ ಈಶ್ವರಪ್ಪ ಬೈರನಾಯಕನಹಳ್ಳಿ, ಗಿರೀಶ್ ಮತ್ತಿಹಳ್ಳಿ, ನವೀನ್ ಕುಮಾರ್ ಹಾಲ್ಕುರಿಕೆ, ಈಶ್ವರಪ್ಪ. ಎಮ್.ಸಿ ಮತ್ತಿಹಳ್ಳಿ, ಬಸವರಾಜು ಪತ್ರೇಹಳ್ಳಿ, ಭವ್ಯ ಸೂರಗೊಂಡನಹಳ್ಳಿ, ಲೋಲಾಕ್ಷಮ್ಮ,ಓಂಕಾರಮೂರ್ತಿ ಕರೀಕೆರೆ, ಕಾರ್ಯದರ್ಶಿ ದಿವಾಕರ್, ಸಿಬ್ಬಂದಿಗಳಾದ ಟಿ.ಆರ್.ರಮೇಶ್, ಪುಟ್ಟೇಗೌಡ, ಮಾಜಿ ಅಧ್ಯಕ್ಷರಾದ ರಾಜಶೇಖರ್, ಸೋಮಶೇಖರ್, ರೇಣುಕಮ್ಮ, ಲಿಂಗರಾಜು, ದಿನೇಶ್, ನಾಗರಾಜು, ಗಂಗಾಧರ್, ನಗರಸಭಾ ಮಾಜಿ ಸದಸ್ಯ ಪ್ರಸನ್ನಕುಮಾರ್, ಯೋಗೀಶ್, ಮನೋಹರ್, ವಿಜಯ್, ಹರೀಶ್, ನಂಜುಡಪ್ಪ, ಬಸವರಾಜು, ಚಂದ್ರಶೇಖರ್ ಭಾಗವಹಿಸಿದ್ದರು.

ಜಾತ್ರೆಗೆ 20 ವಾಣಿಜ್ಯ ಸಿಲಿಂಡರ್ ಸರಬರಾಜು

ಬೇಲೂರು: ವಿಶ್ವಪ್ರಸಿದ್ಧ ಶ್ರೀ ಚನ್ನಕೇಶವಸ್ವಾಮಿದೇವಸ್ಥಾನದ2026ನೇಸಾಲಿನ ರಥೋತ್ಸವದ ಹಿನ್ನೆಲೆ ಯಲ್ಲಿ ದಾಸೋಹ ಕಾರ್ಯಕ್ರಮ ನಡೆಸಲು ಉಂಟಾ ಗಿದ್ದ ಗ್ಯಾಸ್ ಕೊರತೆಯನ್ನು ನಿವಾರಿಸಲು ಜಿಲ್ಲಾಡಳಿತ ಹಾಗೂ ಎಚ್‌ಪಿಸಿಎಲ್ ಅಧಿಕಾರಿಗಳ ಸಹಕಾರದಿಂದ 20 ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳನ್ನು ದೇವಸ್ಥಾನಕ್ಕೆ ಸರಬರಾಜು ಮಾಡಲಾಗಿದೆ.

ರಥೋತ್ಸ ವದ ಸಿದ್ಧತೆಗಳು ಜೋರಾಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿಯಿಂದಾಗಿ ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು. ಇದರಿಂದ ದೇವಸ್ಥಾನದ ದಾಸೋಹ ಕಾರ್ಯಕ್ರ ಮಕ್ಕೆ ಗ್ಯಾಸ್ ಅಭಾವ ಎದುರಾಗಿತ್ತು. ಈ ಸಮಸ್ಯೆಯನ್ನು ಗಮನಿಸಿದ ದೇವಸ್ಥಾನದ ಕಾರ್ಯ ನಿರ್ವಾಹಕ ಅಧಿಕಾರಿ ಯೋಗೇಶ್ ಗ್ಯಾಸ್ ಏಜೆನ್ಸಿ ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸುವ ಪ್ರಯತ್ನ ಮಾಡಿದರು. ದೇವಸ್ಥಾನದ ಸಿಬ್ಬಂದಿ ಸುಧಾಕರ್ ರಥೋತ್ಸವದ ಅಂಗವಾಗಿ ಈಗಾಗಲೇ ದಾಸೋಹ ಕಾರ್ಯಕ್ರಮ ಆರಂಭ ವಾಗಿದ್ದು, ಮುಂದಿನ ತಿಂಗಳ 5ನೇ ತಾರೀಖಿನವರೆಗೆ ವಿವಿಧ ಉತ್ಸವಗಳು ನಡೆಯಲಿವೆ. ಈ ಹಿನ್ನೆಲೆಯಲ್ಲಿ ಗ್ಯಾಸ್ ಸಿಲಿಂಡರ್ ಗಳ ಕೊರತೆ ಉಂಟಾಗಿದ್ದರೂ ಗ್ಯಾಸ್ ಏಜೆನ್ಸಿ ಸಹಕಾರದಿಂದ ಇವತ್ತು 20 ಸಿಲಿಂಡರ್‌ಗಳನ್ನು ಒದಗಿಸಿರುವುದು ತುಂಬಾ ಸಹಾಯಕವಾಗಿದೆ ಎಂದು ಹೇಳಿದರು. ಜತೆಗೆ ಇನ್ನಷ್ಟು ಸಿಲಿಂಡರ ಗಳಿಗಾಗಿ ಸಹ ಮನವಿ ಮಾಡಲಾಗಿದ್ದು, ಶೀಘ್ರದಲ್ಲೇ ಅವು ದೊರೆಯುವ ನಿರೀಕ್ಷೆ ಯಿದೆ ಎಂದರು.



» ರಥೋತ್ಸವದ ಸಂದರ್ಭದಲ್ಲಿ ದಾಸೋಹಕ್ಕೆ ಗ್ಯಾಸ್ ಕೊರತೆ ನಿವಾರಣೆ

ಚನ್ನಕೇಶವ ಗ್ಯಾಸ್ ಏಜನ್ಸಿಯ ವ್ಯವಸ್ಥಾಪಕ ಕೃಷ್ಣಮೂರ್ತಿ, ಗ್ಯಾಸ್ ಏಜೆನ್ಸಿಯ, ಮಾಲೀಕ ದೇವಿಪ್ರಸಾದ್ ದಾಸೋಹಕ್ಕೆ ಎಷ್ಟು ಸಿಲಿಂಡರ್ ಅವಶ್ಯಕತೆ ಇದ್ದರೂ ಅವುಗಳನ್ನು ಪೂರೈಸುವ ಜವಾಬ್ದಾರಿ ನಮ್ಮದಾಗಿದ್ದು ನಾವು ನಿರ್ವಹಿಸುತ್ತೇವೆ ಎಂದರು. ದೇಶದ ವಿವಿಧ ಭಾಗಗಳಿಂದ ಹಾಗೂ ವಿದೇಶಗಳಿಂದ ಭಕ್ತರು ಆಗಮಿಸು ವುದರಿಂದ ಮಠಗಳು ಹಾಗೂ ಇತರ ಸಂಸ್ಥೆಗಳಿಗೆ ಸಹ ವಾಣಿಜ್ಯ ಸಿಲಿಂಡರ್‌ಗಳ ಅಗತ್ಯವಿದ್ದು, ಸಿಲಿಂಡರ್‌ಗಾಗಿ ಆಹಾರ ಇಲಾಖೆಯ ಡಿಡಿಗೆ ನಿವೇದನೆ ಸಲ್ಲಿಸಿ ಪಡೆಯಬಹುದು ಎಂದು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ತಾಂತ್ರಿಕ, ಕೌಶಲ್ಯ, ಜ್ಞಾನ ವೃದ್ಧಿಯಾಗಲಿ

ಅರಸೀಕೆರೆ: ವಿದ್ಯಾರ್ಥಿಗಳು ಈಗ ಇರುವ ತೊಂದರೆಗಳನ್ನು ಗುರುತಿಸಿ. ಇದಕ್ಕೆ ತಂತ್ರಜ್ಞಾನವನ್ನು ಬಳಸಿಕೊಂಡು ನವೀನ ಮತ್ತು ನವೀನ ಪರಿಹಾರಗಳನ್ನು ಪೋಸ್ಟರ್ ರೂಪದಲ್ಲಿ ಬಹಳ ಉತ್ತಮವಾಗಿ ಪ್ರದರ್ಶಿಸಿದ್ದೀರಿ ಎಂದು ಹಾಸನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಗಣಕಯಂತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕ ಟಿ.ಜಿ.ಬಸವರಾಜ್ ಹೇಳಿದರು.

ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾ.25ರವರೆಗೆ ಆಯೋಜಿಸಿರುವ ಇನ್ನೋವೇಶನ್ ಅಂಡ್ ಸ್ಕಿಲ್ ಡೆವಲಪ್ಮೆಂಟ್ ಪ್ರೋಗ್ರಾಮ್ ಪೋಸ್ಟರ್ ಪ್ರೆಸೆಂಟೇಷನ್‌ನ 1 ವಾರಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನೀವು ಪಡೆಯುವ ಶಿಕ್ಷಣದಲ್ಲಿ ಹೆಚ್ಚಿನ ಕೌಶಲ್ಯವನ್ನು ತೋರಬೇಕು. ಪ್ರತಿ ಹಂತದಲ್ಲಿಯೂ ಪ್ರಾಧ್ಯಾಪಕರ ಮಾರ್ಗದರ್ಶನವನ್ನು ನೀವು ಪಡೆಯುತ್ತಿರಿ. ತಾಂತ್ರಿಕ ಯುಗದಲ್ಲಿ ನೀವು ಕೌಶಲ್ಯ ಹಾಗೂ ಜ್ಞಾನವನ್ನು ಆಸಕ್ತಿಯಿಂದ ಇಲ್ಲಿ ಅಧ್ಯಯನ ಮಾಡಿದರೆ ಅದು ನಿಮ್ಮ ಭವಿಷ್ಯವನ್ನು ಸುಂದರಗೊಳಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತ ನಾಡಿದ ಕಾಲೇಜಿನ ಪ್ರಾಂಶುಪಾಲ ಕಂಚಿರಾಯ ನಮ್ಮ ಆಶಯಕ್ಕೆ ತಜ್ಞರುಗಳು ಸ್ಪಂದಿಸಿ ಒಂದು ವಾರದ ಕಾರ್ಯಕ್ರಮಗಳಲ್ಲಿ ವಿವಿಧ ವಿಷಯ ಕುರಿತಂತೆ ಹಾಸನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕರುಗಳಾದ ಟಿ.ಜಿ. ಬಸವ ರಾಜ್, ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನ ಡಾ. ಬಾಲಾಜಿ, ಅರಸೀಕೆರೆ ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕ ಮಹೇಶ್, ಅರಸೀಕೆರೆ ನಗರ ಪೊಲೀಸ್ ಇನ್‌ಸ್ಪೆಕ್ಟರ್ ಕೃಷ್ಣಕುಮಾರ್, ಮೊಸಳೆ ಹೊಸಹಳ್ಳಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ರವಿಶಂಕರ್, ಅರಸೀಕೆರೆ ಕಾಲೇಜಿನ ಡಾ.ದೇವಿಕಾ, ಮಂಜುಳ, ಹಾಸನದ ಮಮತಾ, ಡಾ.ನಾಗಭೂಷಣ್ ಅವರುಗಳು ಸಂಪನ್ಮೂಲ ವ್ಯಕ್ತಿಯಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ಮತ್ತು ಮಾರ್ಗದರ್ಶನವನ್ನು ನೀಡಲಿದ್ದಾರೆ. ಕಾಲೇಜಿನ ನಾಲ್ಕು ವಿಭಾಗಗಳಿಂದ ಒಟ್ಟು 40 ಬ್ಯಾಚ್‌ಗಳು ಭಾಗವಹಿಸಿದ್ದವು. ಸಹ ಪ್ರಾಧ್ಯಾಪಕ ಡಾ.ಪಲ್ಲವಿ ಎಚ್.ವಿ., ಡಾ.ನಂದೀಶ್ ಆರ್. ವಿದ್ಯಾರ್ಥಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಹಬ್ಬಗಳ ಸಂದರ್ಭದಲ್ಲಿ ವ್ಹೀಲಿಂಗ್ ಅಪಾಯಕಾರಿ

ಮಧುಗಿರಿ: ಹಬ್ಬಗಳ ಸಂದರ್ಭದಲ್ಲಿ ಕೆಲವರು ದ್ವಿಚಕ್ರವಾಹನ ಬಳಸಿಕೊಂಡು ಹೆಚ್ಚು ವ್ಹೀಲಿಂಗ್ ಮಾಡುತ್ತಿರುವುದು ಸರಿಯಲ್ಲ ಎಂದು ಸಿಪಿಐ ಹನುಮಂತರಾಯಪ್ಪ ತಿಳಿಸಿದರು. ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ರಂಜಾನ್ ಹಾಗೂ ಯುಗಾದಿ ಹಬ್ಬಗಳ ಪ್ರಯುಕ್ತ ಆಯೋಜಿಸಲಾಗಿದ್ದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು,

ಪ್ರತಿ ವರ್ಷವು ಹಬ್ಬಗಳು ಬರುತ್ತಿದ್ದು ಇಂತಹ ಸಂದರ್ಭದಲ್ಲಿ ಇಲಾಖೆಯು ನೀಡುವ ಕಾನೂನು ಕ್ರಮಗಳನ್ನು ಪಾಲಿಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಈಗಾಗಲೇ ವ್ಹೀಲಿಂಗ್ ಮಾಡುತ್ತಿರುವವರ ವಿರುದ್ಧ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಇಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದಂತೆ ಪೋಷಕರು ಎಚ್ಚರ ವಹಿಸಬೇಕು.

ಎಚ್ಚರವಹಿಸದೆ ಹೋದರೆ ಮಕ್ಕಳ ಜತೆಯಲ್ಲಿ ಪೋಷಕರಿಗೂ ಅನಾನುಕೂಲ ಉಂಟಾಗುತ್ತದೆ. ರಂಜಾನ್‌ಹಬ್ಬಮತ್ತುಯುಗಾದಿಹಬ್ಬಗಳಆಚರಣೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲಾಗುತ್ತಿದೆ ಎಂದರು.

ಪಿಎಸ್‌ಐ ಚಂದ್ರಶೇಖರ್ ಮಾತನಾಡಿ ಹಬ್ಬಗಳು ಶಾಂತಿ ಮತ್ತು ಸೌಹಾರ್ದತೆಯಿಂದ ಕೂಡಿದ್ದು ತಾಲೂಕಿನಲ್ಲಿ ಹಿಂದೂ ಮತ್ತು ಮುಸ್ಲಿಂ ಭಾಂಧವರು ಮೊದಲಿನಿಂದಲೂ ಭಾವೈಕ್ಯತೆಯಿಂದ ಆಚರಿಸುತ್ತಿದ್ದಾರೆ.

ನಮಗೆ ಅನುಮತಿ ನೀಡಿ ಎಂದು ಯಾರೂ ಸಹ ಠಾಣೆಯ ಬಳಿ ಬರಬೇಡಿ,ಯುಗಾದಿ ಹಬ್ಬದಲ್ಲಿ ಯಾವುದೇ ಕಾರಣಕ್ಕೂ ಇಸ್ಪೀಟ್ ಆಟ ಆಡುವಾಗಿಲ್ಲ. ಇಸ್ಪೀಟು ಆಟವು ಕಾನೂನು ಬಾಹಿರವಾಗಿದ್ದು ಅಂತಹ ಆಟಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.ರಂಜಾನ್, ಯುಗಾದಿ ಹಬ್ಬಗಳನ್ನು ತಮ್ಮ ತಮ್ಮ ಸಂಪ್ರದಾಯಗಳಂತೆ ಆಚರಿಸಿಕೊಳ್ಳಿ ಎಂದರು. ಮುಖಂಡರುಗಳಾದ ಬಾಬ ಫಕ್ರುದ್ದೀನ್, ಎಸ್‌ಬಿಟಿ ರಾಮು, ನಾರಾಯಣ ರಾಜು, ಕಿಶೋರ್ ಶೆಟ್ಟಿ, ಅನಂದಕೃಷ್ಣ, ತಿಮ್ಮರಾಜು, ಕೇಶವಮೂರ್ತಿ, ಷರೀಫ್, ಸಿಕಂದರ್, ಪೊಲೀಸ್ ಸಿಬ್ಬಂದಿ ಹಾಗೂ ಮತ್ತಿತರರು ಇದ್ದರು.



ಶಾಂತವೇರಿ ಗೋಪಾಲಗೌಡರ ಸಾಧನೆ ಅವಿಸ್ಮರಣೀಯ

ಕುಣಿಗಲ್: ಬಡ ಕುಟುಂಬದಲ್ಲಿ ಜನಿಸಿದ ಶಾಂತವೇರಿ ಗೋಪಾಲಗೌಡರು ಬಡತನ, ಜಮೀನ್ದಾರಿ ಶೋಷಣೆಯನ್ನು ಅನುಭವಿಸಿ, ಲೋಹಿಯಾ ರವರ ಆಶಯ ದಡಿಯಲ್ಲಿ ರೈತರ ಹಕ್ಕುಗಳಿಗಾಗಿ ಹೋರಾಡಿದರು. ಉಳುವವನೇ ಭೂಮಿಯ ಒಡೆಯ ಕಾಯ್ದೆ ಜಾರಿಗೆ ಪ್ರೇರಣೆಯಾದರು. ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಸಾಮಾಜಿಕ ಸಮಾನತೆ ತರಲು ಶ್ರಮಿಸಿದ್ದಾರೆ. ಶಾಂತವೇರಿ ಗೋಪಾಲಗೌಡರ ಸಾಧನೆ ಅವಿಸ್ಮರಣೀಯ ಎಂದು ಇತಿಹಾಸ ವಿಭಾಗದ ಮುಖ್ಯಸ್ಥರಾದ ಎಂ.ಟಿ.ಈಶ್ವರಪ್ಪ ತಿಳಿಸಿದರು.

ಪಟ್ಟಣದಸರ್ಕಾರಿಪ್ರಥಮದರ್ಜೆಕಾಲೇಜಿನಐಕ್ಯೂಎಸಿ, ಕನ್ನಡ, ಇತಿಹಾಸ ವಿಭಾಗದ ವತಿಯಿಂದ ಏರ್ಪಡಿಸಿದ್ದ ಶಾಂತವೇರಿ ಗೋಪಾಲ ಗೌಡರ ಜನ್ಮ ದಿನಾಚರಣೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ ಶಾಂತವೇರಿ ಗೋಪಾಲಗೌಡರು ಸಮಾಜವಾದಿ ಚಳುವಳಿಯ ಅಗ್ರ ನೇತಾರರಾಗಿದ್ದು, ಸಮಾಜ ಪರಿವರ್ತನೆಯ ಕನಸು ಕಂಡ ಮೇರು ವ್ಯಕ್ತಿ ಎಂದರು. ಐಕ್ಯೂಎಸಿ ಸಂಚಾಲಕರಾದ ಡಾ.ಟಿ.ಎನ್. ನರಸಿಂಹಮೂರ್ತಿ, ಅಧ್ಯಕ್ಷತೆ ವಹಿಸಿದ್ದ ಪ್ರಭಾರ ಪ್ರಾಂಶುಪಾಲ ಡಾ.ಎಂ.ಕೆ. ಮಂಜುಳಾ, ರಸಪ್ರಶ್ನೆ ಕಾರ್ಯಕ್ರಮದಲ್ಲಿ ವಿಜೇತ ವಿದ್ಯಾರ್ಥಿಗಳಾದ ಸೌಂದರ್ಯ, ಹರ್ಷಿತ, ನಯನ ರವರಿಗೆ ಕನ್ನಡ ವಿಭಾಗದ ವತಿಯಿಂದ ಪುಸ್ತಕ ಬಹುಮಾನ ನೀಡಲಾಯಿತು.

ಸಹ ಪ್ರಾಧ್ಯಾಪಕ ಡಾ.ಬಿ.ನಿರ್ಮಲ, ಬಿ.ಎಂ. ಗಂಗಾಧರ, ರೇವಣ್ಣಸಿದ್ದೇಶ್ವರ, ಡಾ.ರಾಧ ಪಿ, ಡಾ.ನಾಗಮ್ಮ ಎಚ್.ಎನ್, ವಿದ್ಯಾರ್ಥಿನಿ ರೋಹಿತ್, ರಮ್ಯ, ಸವಿತಾ, ಶೃತಿ ಇದ್ದರು.



ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ ವಿದ್ಯಾರ್ಥಿವೇತನ ವಿತರಣೆ

ಪುಸ್ತಕಗಳ ಜತೆ ತಪಸ್ಸು ಮಾಡಿ ಶ್ರೇಷ್ಠ ಸಾಧನೆ ಮಾಡಿ

ತುಮಕೂರು: ಪುಸ್ತಕಗಳ ಜೊತೆ ತಪಸ್ಸು ಮಾಡುವವರು ಶ್ರೇಷ್ಠ ಸಾಧಕರಾಗುತ್ತಾರೆ. ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳು ತಪಸ್ಸಿನಂತೆ ಅಧ್ಯಯನ ಮಾಡಬೇಕು. ಹೆಚ್ಚು ಓದಿ ತಮ್ಮ ಜ್ಞಾನ ಮತ್ತು ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಕುವೆಂಪು ನಗರದ ಕೃಷಿಕ್ ಸರ್ವೋದಯ ಫೌಂಡೇಷನ್ ಸಭಾಂಗಣದಲ್ಲಿ ಭಾನುವಾರ ನಿವೃತ್ತ ಐಎಎಸ್ ಅಧಿಕಾರಿ, ಫೌಂಡೇಷನ್ ಅಧ್ಯಕ್ಷರಾಗಿದ್ದ ಸಿ. ಚಿಕ್ಕಣ್ಣನವರಿಗೆ ನುಡಿನಮನ ಹಾಗೂ ಕೃಷಿಕ ಕುಟುಂಬದ 75 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೆ.ಎಸ್.ಎಫ್. ಎಂಡೋಮೆಂಟ್ ವಿದ್ಯಾರ್ಥಿವೇತನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಸರ್ಕಾರದ ಹುದ್ದೆಗಳಿಗೆ ಸರ್ಕಾರಿ ಮೀಸಲಾತಿ ನಂಬಿ ಕೂರಬಾರದು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಎಲ್ಲರನ್ನೂ ಮೀರಿ ಸಾಧಿಸುವ ಪ್ರತಿಭೆ, ಗುರಿ, ಛಲ ಹೊಂದಬೇಕು. ಆಗ ಮಾತ್ರ ಯಶಸ್ಸು ಪಡೆಯಲು ಸಾಧ್ಯ ಎಂದರು. ಬ್ಯಾಂಕ್, ರೈಲ್ವೆ, ಮಿಲಿಟರಿಗಳಲ್ಲಿ ವಿಫುಲವಾದ ಉದ್ಯೋಗಾವಕಾಶಗಳಿವೆ. ನಮ್ಮ ಬಹುತೇಕ ವಿದ್ಯಾರ್ಥಿಗಳ ಅಂತಹ ಪರೀಕ್ಷೆ ತೆಗೆದುಕೊಳ್ಳಲು ಹಿಂಜರಿಯುತ್ತಾರೆ ಎಂದು ಸ್ವಾಮೀಜಿ ವಿದ್ಯಾರ್ಥಿಗಳಿಗೆ ತಿಳಿಸಿದರು. ಬೆಂಗಳೂರಿನ ಕೃಷಿಕ್ ಸರ್ವೋದಯ ಫೌಂಡೇಷನ್ ಅಧ್ಯಕ್ಷ ಟಿ.ತಿಮ್ಮೇಗೌಡರು ಮಾತನಾಡಿ, ಇಂದು 75 ವಿದ್ಯಾರ್ಥಿಗಳಿಗೆ 11.90 ಲಕ್ಷ ರೂ.ಗಳ ಕೆ.ಎಸ್.ಎಫ್ ಎಂಡೋಮೆಂಟ್ ವಿದ್ಯಾರ್ಥಿ ವೇತನ ವಿತರಿಸಲಾಗಿದೆ. ನಮ್ಮ ಮಕ್ಕಳು ವಿದ್ಯಾವಂತರಾಗಿ ಸಮಾಜದ ಸತ್ಪ್ರಜೆಗಳಾಗಿ ಉನ್ನತ ಸ್ಥಾನಕ್ಕೆ ಹೋಗಬೇಕು ಎಂದರು. ಕೆ.ಎಸ್.ಎಫ್ ಟ್ರಸ್ಟಿ, ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿ ಡಾ. ಎಸ್.ಟಿ. ರಾಮಚಂದ್ರ, ತುಮಕೂರುಕೃಷಿಕ್‌ಸರ್ವೋದಯಫೌಂಡೇಷನ್ ಪ್ರಭಾರ ಅಧ್ಯಕ್ಷ ಆಡಿಟರ್ ನಾಗರಾಜ್ ಯಲಚವಾಡಿ, 75 ವಿದ್ಯಾರ್ಥಿಗಳಿಗೆ ಕೆ.ಎಸ್.ಎಫ್ ಎಂಡೋಮೆಂಟ್ ವಿದ್ಯಾರ್ಥಿ ವೇತನದ ಚೆಕ್ ವಿತರಿಸಲಾಯಿತು. ದಿ.ಸಿ. ಚಿಕ್ಕಣ್ಣನವರ ಪತ್ನಿ ಕಾಂತಮ್ಮ, ಫೌಂಡೇಷನ್ ಕಾರ್ಯದರ್ಶಿ ಹೆಚ್.ಎಸ್. ಹನುಮೇಗೌಡ, ಖಜಾಂಚಿ ಕೆ.ಜಿ. ರಾಜಣ್ಣ, ಶೈಕ್ಷಣಿಕ ಸಮಿತಿ ಅಧ್ಯಕ್ಷ ಪ್ರೊ. ಕೆ.ಚಂದ್ರಣ್ಣ, ಆಡಳಿತ ಮಂಡಳು ಸದಸ್ಯರಾದ ಜಿ. ಶಿವಾನಂದ್, ವೆಂಕಟಗಿರಿಯಪ್ಪ, ಡಾ. ಮುದ್ದುಕೃಷ್ಣ, ಎಲ್. ಸಿದ್ದೇಶ್, ಸಂಯೋಜಕ ಡಾ. ಗುರುರಾಜ್ ಮೊದಲಾದವರು ಭಾಗವಹಿಸಿದ್ದರು.



> **ಬಯಸಿದ ಉದ್ಯೋಗ ಭಾಗ್ಯ**
>
> ಸಾಮಾನ್ಯ ಪದವಿಗಳಲ್ಲಿ ಪಡೆಯುವ ಅಂಕಗಳು ಹುದ್ದೆ ಪಡೆಯಲು ಉಪಯೋಗಕ್ಕೆ ಬರುವುದಿಲ್ಲ, ಆ ಪದವಿಗಳು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆ ನೀಡುತ್ತವೆ. ತಾವು ತೆಗೆದುಕೊಳ್ಳುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇತರ ಪರೀಕ್ಷಾರ್ಥಿಗಳಿಗಿಂತಾ ಹೆಚ್ಚಿನ ರ್‍ಯಾಂಕ್ ಪಡೆದಾಗ ಮಾತ್ರ ನೀವು ಬಯಸಿದ ಉದ್ಯೋಗ ಪಡೆಯಬಹುದು.